ಕರ್ನಾಟಕ ಸರ್ಕಾರ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012

# ಸಮಗ್ರ ಅರ್ಥಶಾಸ್ತ್ರ ಪರಿಚಯ

ದ್ವಿತೀಯ ಪಿ.ಯು.ಸಿ. ಅರ್ಥಶಾಸ್ತ್ರ ಪಠ್ಯಪುಸ್ತಕ

# *Introductory Macroeconomics*

**Textbook in Economics for Second PUC**

NATIONAL COUNCIL OF EDUCATIONAL RESEARCH AND TRAINING

ISBN 81-7450-678-0

***First Edition***
February 2007 Phalguna 1928

***Reprinted***
December 2007 Agrahayana 1929
December 2008 Pausa 1930
January 2010 Magha 1931
March 2013 Phalguna 1934
November 2013 Kartik 1935
December 2014 Pausa 1936
December 2015 Pausa 1937
February 2017 Magha 1938

***PD 120T MJ***

© **National Council of Educational Research and Training, 2007**

Printed on 80 GSM paper with NCERT watermark

Published at the Publication Division by the Secretary, National Council of Educational Research and Training, Sri Aurobindo Marg, New Delhi 110 016 and printed at Swan Press, B-71, Naraina Industrial Area, Phase-II, New Delhi 110 028

**ALL RIGHTS RESERVED**

- No part of this publication may be reproduced, stored in a retrieval system or transmitted, in any form or by any means, electronic, mechanical, photocopying, recording or otherwise without the prior permission of the publisher.
- This book is sold subject to the condition that it shall not, by way of trade, be lent, re-sold, hired out or otherwise disposed of without the publisher's consent, in any form of binding or cover other than that in which it is published.
- The correct price of this publication is the price printed on this page, Any revised price indicated by a rubber stamp or by a sticker or by any other means is incorrect and should be unacceptable.

**OFFICES OF THE PUBLICATION DIVISION, NCERT**

NCERT Campus
Sri Aurobindo Marg
**New Delhi 110 016** **Phone : 011-26562708**

108, 100 Feet Road
Hosdakere Halli Extension
Banashankari III Stage
**Bengaluru 560 085** **Phone : 080-26725740**

Navjivan Trust Building
P.O.Navjivan
**Ahmedabad 380 014** **Phone : 079-27541446**

CWC Campus
Opp. Dhankal Bus Stop
Panihati
**Kolkata 700 114** **Phone : 033-25530454**

CWC Complex
Maligaon
**Guwahati 781 021** **Phone : 0361-2674869**

**Publication Team**

| | |
|---|---|
| Head, Publication Division | : *M. Siraj Anwar* |
| Chief Editor | : *Shveta Uppal* |
| Chief Business Manager | : *Gautam Ganguly* |
| Chief Production Officer (incharge) | : *Arun Chitkara* |
| Editor | : *R.N. Bharadwaj* |
| Production Assistant | : *Sunil Kumar* |

**Cover, Layout and Illustrations**
*Blue Fish*

**Cartoonist**
*Irfan*

# Foreword

THE National Curriculum Framework (NCF), 2005, recommends that children's life at school must be linked to their life outside the school. This principle marks a departure from the legacy of bookish learning which continues to shape our system and causes a gap between the school, home and community. The syllabi and textbooks developed on the basis of NCF signify an attempt to implement this basic idea. They also attempt to discourage rote learning and the maintenance of sharp boundaries between different subject areas. We hope these measures will take us significantly further in the direction of a childcentered system of education outlined in the National Policy of Education (1986).

The success of this effort depends on the steps that school principals and teachers will take to encourage children to reflect on their own learning and to pursue imaginative activities and questions. We must recognise that, given space, time and freedom, children generate new knowledge by engaging with the information passed on to them by adults. Treating the prescribed textbook as the sole basis of examination is one of the key reasons why other resources and sites of learning are ignored. Inculcating creativity and initiative is possible if we perceive and treat children as participants in learning, not as receivers of a fixed body of knowledge.

These aims imply considerable change in school routines and mode of functioning. Flexibility in the daily time-table is as necessary as rigour in implementing the annual calendar so that the required number of teaching days are actually devoted to teaching. The methods used for teaching and evaluation will also determine how effective this textbook proves for making children's life at school a happy experience, rather than a source of stress or boredom. Syllabus designers have tried to address the problem of curricular burden by restructuring and reorienting knowledge at different stages with greater consideration for child psychology and the time available for teaching. The textbook attempts to enhance this endeavour by giving higher priority and space to opportunities for contemplation and wondering, discussion in small groups, and activities requiring hands-on experience.

The National Council of Educational Research and Training (NCERT) appreciates the hard work done by the textbook development committee responsible for this book. We wish to thank the Chairperson of the advisory group in Social Sciences, at the higher secondary level, Professor Hari Vasudevan and the Chief Advisor for this book, Professor Tapas Majumdar, for guiding the work of this committee. Several teachers contributed to the development of this textbook; we are grateful to their principals for making this possible. We are indebted to the institutions and organisations which have generously permitted us to draw upon their resources,

materials and personnel. We are especially grateful to the members of the National Monitoring Committee, appointed by the Department of Secondary and Higher Education, Ministry of Human Resource Development under the Chairpersonship of Professor Mrinal Miri and Professor G.P. Deshpande for their valuable time and contribution. As an organisation committed to systemic reform and continuous improvement in the quality of its products, NCERT welcomes comments and suggestions which will enable us to undertake further revision and refinements.

**Director**

**National Council of Educational Research and Training**

**New Delhi**
***20 November 2006***

# Text book Development Committee

**CHAIRPERSON, ADVISORY COMMITTEE FOR SOCIAL SCIENCE TEXTBOOKS AT THE HIGHER SECONDARY LEVEL**

Hari Vasudevan, *Professor,* Department of History, University of Calcutta, Kolkata

**CHIEF ADVISOR**

Tapas Majumdar, *Professor Emeritus of Economics,* Jawaharlal Nehru University, New Delhi

**ADVISOR**

Satish Jain, *Professor,* Centre for Economics Studies and Planning, School of Social Sciences, Jawaharlal Nehru University, New Delhi

**MEMBERS**

Harish Dhawan, *Lecturer,* Ramlal Anand College (Evening) New Delhi

Papiya Ghosh, *Research Associate,* Delhi School of Economics, New Delhi

Rajendra Prasad Kundu, *Lecturer*, Economics Department, Jadavpur University, Kolkata

Sugato Das Gupta, *Associate Professor*, CESP, Jawaharlal Nehru, University, New Delhi

Tapasik Bannerjee, *Research Fellow*, Centre for Economics studies and Planning, Jawaharlal Nehru University, New Delhi

**MEMBER-COORDINATOR**

Jaya Singh, *Lecturer,* Economics, Department of Education in Social Sciences and Humanities, NCERT, New Delhi

# Acknowledgements

The National Council of Educational Research and Training (NCERT) acknowledges the invaluable contribution of academicians and practising school teachers for bringing out this textbook. We are grateful

to Anjan Mukherjee, *Professor*, JNU, for going through the manuscript and suggesting relevant changes. We thank Jhaljit Singh, *Reader*, Department of Economics, University of Manipur for his contribution. We also thank our colleagues Neeraja Rashmi, *Reader*, Curriculum Group; M.V. Srinivasan, Ashita Raveendran, *Lecturers*, Department of Education in Social Sciences and Humanities (DESSH) for their feedback and suggestions.

We would like to place on record the precious advise of (Late) Dipak Banerjee, *Professor* (Retd.), Presidency College, Kolkata. We could have benefited much more of his expertise, had his health permitted.

The practising school teachers have helped in many ways. The Council expresses its gratitude to A.K.Singh, *PGT* (Economics), Kendriya Vidyalaya, Varanasi, Uttar Pradesh; Ambika Gulati, *Head*, Department of Economics, Sanskriti School; B.C. Thakur, *PGT* (Economics), Government Pratibha Vikas Vidyalaya, Surajmal Vihar; Ritu Gupta, *Principal*, Sneh International School, Shoban Nair, *PGT* (Economics), Mother's International School, Rashmi Sharma, *PGT* (Economics), Kendriya Vidalaya, JNU Campus, New Delhi.

We thank Savita Sinha, *Professor and Head*, DESSH for her support.

Special thanks are due to Vandana R. Singh, *Consultant Editor*, NCERT for going through the manuscript.

The council also gratefully acknowledges the contributions of Dinesh Kumar, *Incharge,* Computer Station; Amar Kumar Prusty and NeenaChandra, *Copy Editors* in shaping this book. The contribution of the Publication Department in bringing out this book is duly acknowledged.

# ನಿರ್ದೇಶಕರ ಸಂದೇಶ

ಆತ್ಮೀಯ ವಿದ್ಯಾರ್ಥಿಗಳೇ,

ಪ್ರತಿ ವಿದ್ಯಾರ್ಥಿಯು ಮಹತ್ತರವಾದ ಕನಸು ಕಾಣಲು ಹಾಗೂ ಆ ಕನಸುಗಳನ್ನು ಸಾಕಾರಗೊಳಿಸಿಕೊಂಡು ಎತ್ತರದ ಸ್ಥಾನಕ್ಕೇರಲು ಮತ್ತು ಜೀವನದ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಮರ್ಥನಾಗುವಂತೆ ಮಾಡಲು ಅಗತ್ಯವಾದ ಎಲ್ಲಾ ಸಾಧನಗಳನ್ನು ಪೂರೈಸಲು ಕರ್ನಾಟಕದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ **"ವ್ಯಕ್ತಿ ತಾನು ಸ್ವಾವಲಂಬಿಯಾಗಲು ಸಮರ್ಥನಾಗುವಂತೆ ಮಾಡುವುದೇ ನಿಜವಾದ ಶಿಕ್ಷಣ"** ಎಂಬ ಸ್ವಾಮಿ ವಿವೇಕಾನಂದರ ಮಾತು ಸೂಕ್ತವಾಗಿದೆ.

ಈ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ವಿಷಯಗಳು ಮುಂದಿನ ಹಂತದ ಅಧ್ಯಯನಕ್ಕೆ ನಿಮ್ಮನ್ನು ಸಜ್ಜುಗೊಳಿಸುವ ಉದ್ದೇಶದಿಂದ ರಚಿಸಲಾಗಿದೆ.

ನಿಮ್ಮ ವಿದ್ಯಾಭ್ಯಾಸದ ಪಯಣವು ಸುಗುಮವಾಗಿ ಸಾಗಿ, ನೀವು ರಾಷ್ಟ್ರದ ಜವಾಬ್ದಾರಿಯುತ ಪ್ರಜೆಯಾಗಿ ಹೊರಹೊಮ್ಮಿ ಸಮಾಜದ ಏಳಿಗೆಗಾಗಿ ಕಾಣಿಕೆಯನ್ನು ಹಿಂತಿರುಗಿಸುವ ಸ್ಥಾನದಲ್ಲಿ ನಿಮ್ಮನ್ನು ನೋಡಲು ಇಚ್ಛಿಸುತ್ತೇನೆ.

ಶುಭಾಶಯಗಳೊಂದಿಗೆ,


ಶ್ರೀಮತಿ ಸಿ. ಶಿಖಾ ಭಾ.ಆ.ಸೇ.

ನಿರ್ದೇಶಕರು,

ಪದವಿ ಪೂರ್ವ ಶಿಕ್ಷಣ ಇಲಾಖೆ

ಬೆಂಗಳೂರು

# ಅರ್ಥಶಾಸ್ತ್ರ ಪಠ್ಯ ಪುಸ್ತಕ ಅನುವಾದ ಸಮಿತಿ

**ಗೌರವಾಧ್ಯಕ್ಷರು:**

**ಶ್ರೀಮತಿ ಸಿ. ಶಿಖಾ** ಬಾ.ಆ.ಸೇ., ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ನಂ. 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.

**ಅಧ್ಯಕ್ಷರು:**

**ಶ್ರೀಮತಿ ನಾಗರತ್ನಮ್ಮ ಜಿ.ಬಿ.** ಪ್ರಾಂಶುಪಾಲರು, ಸರ್ಕಾರಿ ಪದವಿಪೂರ್ವ ಕಾಲೇಜು, ಸಿರಿವರ, ತುಮಕೂರು ತಾಲ್ಲೂಕು.

**ಸಂಚಾಲಕರು:**

**ಶ್ರೀ ವೀರರಾಜು. ಎಂ.ವಿ.** ಉಪನ್ಯಾಸಕರು, ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಎಚ್.ಎಸ್.ಆರ್. ಬಡಾವಣೆ, ಅಗರ, ಬೆಂಗಳೂರು ದಕ್ಷಿಣ – 102.

**ಸದಸ್ಯರು:**

**ಶ್ರೀಮತಿ ಸಂಗೀತಾ ಎನ್. ಕಟ್ಟಿಮನಿ.** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, (MPHS) ಸೂಪರ್ ಮಾರ್ಕೆಟ್, ಕಲಬುರ್ಗಿ.

**ಶ್ರೀ ಶಿವೇಗೌಡ ಈ.** ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಜೋಡಿರಸ್ತೆ, ಮೈಸೂರು.

**ಶ್ರೀ ದಿನೇಶ್ ಕೆ.** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಹಲಗೇರಿ, ಸಿದ್ದಾಪುರ (ತಾ), ಉತ್ತರ ಕನ್ನಡ ಜಿಲ್ಲೆ.

**ಶ್ರೀ ಷಣ್ಮುಕ ಎಸ್.** ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ನ್ಯೂ ಟೌನ್, ಭದ್ರಾವತಿ.

**ಶ್ರೀ ರಾಜಗೋಪಾಲ್ ಆರ್.** ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಬಿ.ಪಿ. ವಾಡಿಯರ್ ರಸ್ತೆ, ಬಸವನಗುಡಿ, ಬೆಂಗಳೂರು.

**ಶ್ರೀ ದಿವಾಕರ್ ಕೆ.ಜೆ.** ಉಪನ್ಯಾಸಕರು, ಕಾವೇರಿ ಪದವಿ ಪೂರ್ವ ಕಾಲೇಜು, ಭಾಗಮಂಡಲ, ಕೊಡಗು ಜಿಲ್ಲೆ.

**ಶ್ರೀ ವಿರೂಪಾಕ್ಷಪ್ಪ ಎಸ್. ದಲಾಲಿ.** ಉಪನ್ಯಾಸಕರು, ಕೆ.ವಿ.ಎಸ್.ಆರ್. ಪದವಿ ಪೂರ್ವ ಕಾಲೇಜು, ಗದಗ, ಗದಗ ಜಿಲ್ಲೆ.

**ಡಾ॥ ಅಬ್ದುಲ್‌ರಜಾಕ್ ಕೆ.** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಕಾಟಿಪಳ್ಳ, ಕೃಷ್ಣಾಪುರ, ಮಂಗಳೂರು.

**ಶ್ರೀ ರವಿಕುಮಾರ ಅಂಬೋರೆ.** ಉಪನ್ಯಾಸಕರು, ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಹಾವೇರಿ.

**ಶ್ರೀ ಬಸವರಾಜ, ಎಸ್.ಡಿ.** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಡೊಡ್ಡೇರಿ, ಚಳ್ಳಕೆರೆ (ತಾ), ಚಿತ್ರದುರ್ಗ ಜಿಲ್ಲೆ.

**ಡಾ॥ ಸಾಧನ ಹೆಚ್.ವಿ** ಉಪನ್ಯಾಸಕರು, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಆರ್.ಸಿ.ರಸ್ತೆ, ಹಾಸನ.

# ಪರಿಶೀಲನಾ ಸಮಿತಿ

**ಡಾ. ಸಿ.ಕೆ. ರೇಣುಕಾರ್ಯ,** ಆರ್ಥಿಕ ತಜ್ಞರು,

ನಿವೃತ್ತ ಪ್ರೊಫೆಸರ್, ಮಾನಸ ಗಂಗೋತ್ರಿ, ಮೈಸೂರ ವಿಶ್ವವಿದ್ಯಾಲಯ, ಮೈಸೂರು.

**ಡಾ. ಪದ್ಮಿನಿ ರಾವ್,** ಸಂಚಾಲಕರು, ಅರ್ಥಶಾಸ್ತ್ರ ಸ್ನಾತಕೊತ್ತರ ವಿಭಾಗ, ನ್ಯಾಷನಲ್ ಕಾಲೇಜು ಬಸವನಗುಡಿ ಬೆಂಗಳೂರು.

**ಶ್ರೀ. ಎಂ.ಎಸ್. ಚಿದಾನಂದ,** ಪ್ರಾಂಶುಪಾಲರು, ಬಾಪೂಜಿ ಪದವಿಪೂರ್ವ ಕಾಲೇಜು, ಹೊರಪೇಟೆ, ತುಮಕೂರು.

# ಸಹಕಾರ

**ಶ್ರೀ. ದೊರೆಸ್ವಾಮಿ,** ಜಂಟಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

**ಶ್ರೀ. ಅಶೋಕ್ ಕುಮಾರ್,** ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

**ಶ್ರೀ ಮಹಮದ್ ಜಿಯವುಲ್ಲಾ ಖಾನ್,** ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

**ಡಾ. ಶ್ರೀನಾಥ್ ಕೆ.ಎಸ್.,** ಶಾಖಾಧಿಕಾರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

# ಪರಿವಿಡಿ *Contents*


| ಅಧ್ಯಾಯ | ಪಠ್ಯಾಂಶ | ಪುಟ ಸಂಖ್ಯೆ |
|---|---|---|
| **ಅಧ್ಯಾಯ –1 ಪೀಠಿಕೆ** | | **1 - 8** |
| | 1.1 ಸಮಗ್ರ ಅರ್ಥಶಾಸ್ತ್ರದ ಉದಯ | 4 |
| | 1.2 ಸಮಗ್ರ ಅರ್ಥಶಾಸ್ತ್ರ ಪುಸ್ತಕದ ಪ್ರಸಕ್ತ ಸನ್ನಿವೇಶ | 5 |
| **ಅಧ್ಯಾಯ –2 ರಾಷ್ಟ್ರೀಯ ವರಮಾನ ಲೆಕ್ಕಚಾರ** | | **9-39** |
| | 2.1 ಸಮಗ್ರ ಅರ್ಥಶಾಸ್ತ್ರದ ಕೆಲವು ಮೂಲಭೂತ ಪರಿಕಲ್ಪನೆಗಳು | 9 |
| | 2.2 ರಾಷ್ಟ್ರೀಯ ಆದಾಯದ ವೃತ್ತಾಕಾರದ ಚಲನೆ ಮತ್ತು ರಾಷ್ಟ್ರೀಯ ಆದಾಯವನ್ನು ಲೆಕ್ಕ ಹಾಕುವ ವಿಧಾನಗಳು | 17 |
| | 2.2.1 ಉತ್ಪನ್ನ ಅಥವಾ ಮೌಲ್ಯವರ್ಧಿತ ವಿಧಾನ | 20 |
| | 2.2.2 ವೆಚ್ಚದ ವಿಧಾನ | 25 |
| | 2.2.3 ವರಮಾನ ವಿಧಾನ | 26 |
| | 2.3 ಕೆಲವು ಸಮಗ್ರ ಆರ್ಥಿಕ ಅನನ್ಯತೆಗಳು | 28 |
| | 2.4 ಸರಕುಗಳು ಮತ್ತು ಬೆಲೆಗಳು | 31 |
| **ಅಧ್ಯಾಯ –3 ಹಣ ಮತ್ತು ಬ್ಯಾಂಕಿಂಗ್** | | **40-59** |
| | 3.1 ಹಣದ ಕಾರ್ಯಗಳು | 40 |
| | 3.2 ಹಣದ ಬೇಡಿಕೆ | 41 |
| | 3.2.1. ವ್ಯವಹಾರದ ಉದ್ದೇಶ | 41 |
| | 3.2.2. ಸಟ್ಟಾ ವ್ಯಾಪಾರದ ಉದ್ದೇಶ | 43 |
| | 3.3 ಹಣದ ಪೂರೈಕೆ | 46 |

3.3.1. ಶಾಸನಾತ್ಮಕ ವ್ಯಾಖ್ಯಾನಗಳು: ಸಂಕುಚಿತ ಹಣ ಮತ್ತು ವಿಶಾಲ ಹಣ 47

3.3.2. ಬ್ಯಾಂಕಿಂಗ್ ವ್ಯವಸ್ಥೆಯಿಂದ ಹಣದ ನಿರ್ಮಾಣ 47

3.3.3. ಹಣಕಾಸು ನೀತಿಯ ಸಾಧನಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ 52

**ಅಧ್ಯಾಯ –4 ವರಮಾನದ ನಿರ್ಧಾರ 60-73**

4.1 ಯೋಜಿತ ಮತ್ತು ಯೋಜನಾರಹಿತ 60

4.2 ರೇಖೆಯೊಂದಿಗಿನ ಚಲನೆ ಮತ್ತು ರೇಖೆಯ ಪಲ್ಲಟ 64

4.3 ಉತ್ಪನ್ನ ಮಾರುಕಟ್ಟೆಯ ಅಲ್ಪಾವಧಿ ಸ್ಥಿರ ಬೆಲೆ ವಿಶ್ಲೇಷಣೆ 65

4.3.1 ಸಮಗ್ರ ಬೇಡಿಕೆಯ ರೇಖೆಯ ಮೇಲಿನ ಒಂದು ಬಿಂದು 66

4.3.2 ಉತ್ಪನ್ನ ಮಾರುಕಟ್ಟೆಯಲ್ಲಿ ಸಮತೋಲನ ಬೇಡಿಕೆಯ ಮೇಲೆ ಸ್ವಾಯತ್ತ ಬದಲಾವಣೆಯ ಪರಿಣಾಮ 67

4.3.3 ಗುಣಕದ ಯಾಂತ್ರಿಕತೆ 68

**ಅಧ್ಯಾಯ –5 ಸರ್ಕಾರದ ಮುಂಗಡಪತ್ರ ಮತ್ತು ಆರ್ಥಿಕತೆ 74-93**

5.1 ಸರ್ಕಾರದ ಮುಂಗಡ ಪತ್ರದ ಭಾಗಗಳು 75

5.1.1 ಕಂದಾಯ ಖಾತೆ 76

5.1.2 ಬಂಡವಾಳ ಖಾತೆ 78

5.1.3 ಸರ್ಕಾರದ ಕೊರತೆಯ ಕ್ರಮಗಳು 80

5.2 ಕೋಶೀಯ ನೀತಿ 81

5.2.1 ಸರ್ಕಾರದ ವೆಚ್ಚದಲ್ಲಿನ ಬದಲಾವಣೆಗಳು 82

5.2.2 ತೆರಿಗೆಗಳಲ್ಲಿ ಬದಲಾವಣೆಗಳು 83

5.2.3 ಸಾಲ 87

**ಅಧ್ಯಾಯ –6 ಮುಕ್ತ ಆರ್ಥಿಕತೆ ಸಮಗ್ರ ಅರ್ಥಶಾಸ್ತ್ರ** **94-120**

6.1 ಸಂದಾಯ ಬಾಕಿ (ಪಾವತಿ ಬಾಕಿ) 95

6.1.1 *BOP*ಯ ಮಿಗುತೆ ಮತ್ತು ಕೊರತೆ *BOP* 96

6.2 ವಿದೇಶೀ ವಿನಿಮಯ ಮಾರುಕಟ್ಟೆ 97

6.2.1 ವಿನಿಮಯದರದ ನಿರ್ಧಾರ 97

6.2.2 ನಮ್ಯ (ಹೊಂದಾಣಿಕೆ) ವಿನಿಮಯದರ 99

6.2.3 ಸ್ಥಿರ ವಿನಿಮಯ ದರಗಳು 103

6.2.4 ನಿರ್ವಹಣಾ ಹೊಂದಾಣಿಕೆ 104

6.3 ಮುಕ್ತ ಆರ್ಥಿಕತೆಯಲ್ಲಿ ಆದಾಯದ ನಿರ್ಧಾರ 109

6.3.1 ಮುಕ್ತ ಆರ್ಥಿಕತೆಯೊಂದರ ರಾಷ್ಟ್ರೀಯ ಆದಾಯದ ಅನನ್ಯತೆ 109

6.3.2 ಸಮತೋಲನ ಉತ್ಪನ್ನ ಮತ್ತು ವ್ಯಾಪಾರ ಬಾಕಿ 111

6.4 ವ್ಯಾಪಾರದ ಕೊರತೆ, ಉಳಿತಾಯಗಳು ಮತ್ತು ಹೂಡಿಕೆ 115

**ಶಬ್ಧಕೋಶ** **121-128**

# ಅಧ್ಯಾಯ 1



## ಪೀಠಿಕೆ

## *Introduction*

ನೀವು ಈಗಾಗಲೇ ಸೂಕ್ಷ್ಮ ಅರ್ಥಶಾಸ್ತ್ರದ ಪ್ರಾಥಮಿಕ ಅಧ್ಯಯನಕ್ಕೆ ಪರಿಚಿತರಾಗಿರುವಿರಿ. ನೀವು ತಿಳಿದುಕೊಂಡಿರುವ ಸೂಕ್ಷ್ಮ ಅರ್ಥಶಾಸ್ತ್ರಕ್ಕಿಂತ ಸಮಗ್ರ ಅರ್ಥಶಾಸ್ತ್ರವು ಹೇಗೆ ಭಿನ್ನವಾಗಿದೆ ಎಂಬುದರ ಒಂದು ಸರಳೀಕೃತ ವಿವರಣೆಯೊಂದಿಗೆ ಈ ಅಧ್ಯಾಯವು ಪ್ರಾರಂಭವಾಗುತ್ತದೆ.

ಅರ್ಥಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಬಯಸುವವರು, ಸಮಗ್ರ ಅರ್ಥಶಾಸ್ತ್ರದ ಅಧ್ಯಯನಕ್ಕೆ ಇಂದು ಅರ್ಥಶಾಸ್ತ್ರಜ್ಞರು ಬಳಸುತ್ತಿರುವ ಹೆಚ್ಚು ಸಂಕೀರ್ಣವಾದ ವಿಶ್ಲೇಷಣೆಯ ಬಗ್ಗೆ ತಿಳಿಯುವರು. ಆದರೆ ಸಮಗ್ರ ಅರ್ಥಶಾಸ್ತ್ರದ ಅಧ್ಯಯನದ ಮೂಲ ಪ್ರಶ್ನೆಗಳು ಹಾಗೆಯೇ ಉಳಿಯಬಹುದು ಮತ್ತು ವಾಸ್ತವವಾಗಿ ಅದು ಎಲ್ಲಾ ನಾಗರೀಕರಿಗೆ ಸಂಬಂಧಪಟ್ಟ ವ್ಯಾಪಕವಾದ ಆರ್ಥಿಕ ಪ್ರಶ್ನೆಗಳು ಎನ್ನುವುದನ್ನು ಕಾಣುವಿರಿ. ಬೆಲೆಗಳು ಒಟ್ಟಾರೆಯಾಗಿ ಏರುತ್ತದೆಯೋ ಅಥವಾ ಇಳಿಯುತ್ತದೆಯೋ? ಸಮಗ್ರವಾಗಿ ದೇಶದ ಅಥವಾ ಆರ್ಥಿಕತೆಯ ಕೆಲವು ವಲಯಗಳಲ್ಲಿ ಉದ್ಯೋಗದ ಸ್ಥಿತಿಗಳು ಉತ್ತಮಗೊಳ್ಳುತ್ತಿದೆಯೇ ಅಥವಾ ಹದಗೆಡುತ್ತಿದೆಯೇ? ಅರ್ಥವ್ಯವಸ್ಥೆ ಉತ್ತಮವಾಗಿದೆ ಅಥವಾ ಹದಗೆಟ್ಟಿದೆ ಎಂಬುದನ್ನು ತೋರಿಸುವ ಸಮಂಜಸವಾದ ಸೂಚಕಗಳಾವುವು? ಆರ್ಥಿಕತೆಯ ಸ್ಥಿತಿಗತಿಗಳನ್ನು ಸುಧಾರಿಸಲು ರಾಜ್ಯವು ಕೈಗೊಳ್ಳಬಹುದಾದ ಅಥವಾ ಜನರು ಕೇಳಬಹುದಾದ ಕ್ರಮಗಳಾವುವು? ಇವುಗಳು ದೇಶದ ಸಮಗ್ರ ಆರ್ಥಿಕತೆಯ ಆರೋಗ್ಯದ ಕುರಿತು ನಾವು ಯೋಚಿಸುವಂತೆ ಮಾಡುವ ಪ್ರಶ್ನೆಗಳಾಗಿವೆ. ಈ ಪ್ರಶ್ನೆಗಳನ್ನು ಸಮಗ್ರ ಅರ್ಥಶಾಸ್ತ್ರದಲ್ಲಿ ಸಂಕೀರ್ಣತೆಯ ವಿವಿಧ ಸ್ತರಗಳಲ್ಲಿ ಪರಿಶೀಲಿಸಲಾಗುತ್ತದೆ.

ಈ ಪುಸ್ತಕದಲ್ಲಿ ಸಮಗ್ರ ಅರ್ಥಶಾಸ್ತ್ರದ ವಿಶ್ಲೇಷಣೆಯ ಕೆಲವು ಮೂಲಭೂತ ತತ್ವಗಳನ್ನು ಪರಿಚಯ ಮಾಡಿಕೊಳ್ಳುವಿರಿ. ಸಾದ್ಯವಾದಷ್ಟು ಸರಳ ಭಾಷೆಯಲ್ಲಿ ತತ್ವಗಳನ್ನು ವಿವರಿಸಲಾಗಿದೆ. ಕೆಲವೊಮ್ಮೆ ಓದುಗರಿಗೆ ಸ್ವಲ್ಪಮಟ್ಟಿನ ಕಠಿಣತೆಯನ್ನು ಪರಿಚಯಿಸಲು ಪ್ರಾಥಮಿಕ ಬೀಜಗಣಿತವನ್ನು ಬಳಸಲಾಗಿದೆ.

ಒಂದು ದೇಶದ ಅರ್ಥವ್ಯವಸ್ಥೆಯನ್ನು ನಾವು ಸಮಗ್ರವಾಗಿ ಗಮನಿಸಿದಾಗ ಆರ್ಥಿಕತೆಯಲ್ಲಿರುವ ಎಲ್ಲಾ ಸರಕು ಮತ್ತು ಸೇವೆಗಳ ಉತ್ಪಾದನಾ ಮಟ್ಟಗಳು ಒಟ್ಟಾಗಿ ಚಲಿಸುವ ಪವೃತ್ತಿ ಇದೆಯೆಂದು ಕಂಡುಬರುತ್ತದೆ. ಉದಾಹರಣೆಗೆ: ಆಹಾರ ಧಾನ್ಯಗಳ ಉತ್ಪಾದನಾ ಮಟ್ಟವು ಹೆಚ್ಚಳವನ್ನು ಅನುಭವಿಸಿದರೆ ಅದರ ಜೊತೆ ಸಾಮಾನ್ಯವಾಗಿ ಕೈಗಾರಿಕಾ ಸರಕುಗಳ ಉತ್ಪಾದನಾ ಮಟ್ಟದಲ್ಲೂ ಹೆಚ್ಚಳ ಕಂಡುಬರುತ್ತದೆ. ಕೈಗಾರಿಕಾ ಸರಕುಗಳ ವರ್ಗದಲ್ಲಿಯೂ ಕೂಡಾ ವಿವಿಧ ರೀತಿಯ ಸರಕುಗಳ ಉತ್ಪಾದನೆಯು ಏಕಕಾಲದಲ್ಲಿ ಹೆಚ್ಚಾಗುವ ಅಥವಾ ಕಡಿಮೆಯಾಗುವ ಪ್ರವೃತ್ತಿಯನ್ನು ಹೊಂದಿರುತ್ತದೆ. ಅದೇ ರೀತಿ ವಿವಿಧ ಸರಕು ಮತ್ತು ಸೇವೆಗಳ ಬೆಲೆಗಳು ಏಕಕಾಲದಲ್ಲಿ ಹೆಚ್ಚಾಗುವ ಅಥವಾ ಕಡಿಮೆಯಾಗುವ ಪ್ರವೃತ್ತಿಯನ್ನು ಹೊಂದಿರುತ್ತವೆ. ವಿವಿಧ ಉತ್ಪಾದನಾ ಘಟಕಗಳಲ್ಲಿನ ಉದ್ಯೋಗದ ಮಟ್ಟವು ಕೂಡಾ ಒಟ್ಟಾಗಿ ಏರುವುದನ್ನು ಅಥವಾ ಇಳಿಯುವುದನ್ನೂ ಕೂಡಾ ನಾವು ಗಮನಿಸಬಹುದು.

ಒಂದು ಅರ್ಥವ್ಯವಸ್ಥೆಯ ವಿವಿಧ ಉತ್ಪಾದನಾ ಘಟಕಗಳ ಸಮಗ್ರ ಉತ್ಪಾದನೆಯ ಮಟ್ಟ, ಬೆಲೆಯ ಮಟ್ಟ, ಅಥವಾ ಉದ್ಯೋಗದ ಮಟ್ಟ ಪರಸ್ಪರ ನಿಕಟ ಸಂಬಂಧವನ್ನು ಹೊಂದಿದ್ದರೆ, ಆಗ ಇಡೀ ಆರ್ಥಿಕತೆಯ ವಿಶ್ಲೇಷಣೆಯು ಸಾಪೇಕ್ಷವಾಗಿ ಸುಲಭವಾಗುತ್ತದೆ. ಮೇಲೆ ತಿಳಿಸಿರುವ ಚಲಕಗಳನ್ನು ವೈಯುಕ್ತಿಕ (ಬೇರ್ಪಡಿಸಿದ)ಮಟ್ಟದಲ್ಲಿ ಪರಿಗಣಿಸುವ ಬದಲಿಗೆ, ನಾವು ಒಂದು ಸರಕನ್ನು ಅರ್ಥವ್ಯವಸ್ಥೆಯೊಳಗೆ ಉತ್ಪಾದಿಸಲಾದ ಎಲ್ಲಾ ಸರಕುಗಳ ಪ್ರತಿನಿಧಿಯಾಗಿ ಪರಿಗಣಿಸಬಹುದು. ಎಲ್ಲಾ ಸರಕು ಮತ್ತು ಸೇವೆಗಳ ಸರಾಸರಿ ಉತ್ಪಾದನೆಗೆ ಸಂವಾದಿಯಾದ ಉತ್ಪಾದನಾ ಮಟ್ಟವನ್ನು

ಈ ಪ್ರಾತಿನಿಧಿಕ ಸರಕು ಹೊಂದಿರುತ್ತದೆ. ಅದೇ ರೀತಿ ಈ ಪ್ರಾತಿನಿಧಿಕ ಸರಕಿನ ಬೆಲೆ ಅಥವಾ ಉದ್ಯೋಗದ ಮಟ್ಟವು ಅರ್ಥವ್ಯವಸ್ಥೆಯ ಸಾರ್ವತ್ರಿಕ ಬೆಲೆ ಮತ್ತು ಉದ್ಯೋಗದ ಮಟ್ಟವನ್ನು ಬಿಂಬಿಸುತ್ತದೆ.

ದೇಶದ ಒಟ್ಟು ಉತ್ಪಾದನೆ ಮತ್ತು ಉದ್ಯೋಗಮಟ್ಟವು ಬೆಲೆಗಳು, ಬಡ್ಡಿದರ, ಕೂಲಿಯದರ, ಲಾಭಗಳು ಇತ್ಯಾದಿ ಲಕ್ಷಣಗಳೊಂದಿಗೆ (ಚಲಕಗಳೆಂದು ಕರೆಯಲಾಗುವ) ಯಾವ ಸಂಬಂಧವನ್ನು ಹೊಂದಿದೆ ಮತ್ತು ಅದಕ್ಕೆ ಏನಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳಲು, ಸಾಮಾನ್ಯವಾಗಿ ನಾವು ಒಂದು ಕಾಲ್ಪನಿಕ ಸರಕಿನ ಮೇಲೆ ಗಮನವನ್ನು ಕೇಂದ್ರೀಕರಿಸಿ, ಸಮಗ್ರ ಅರ್ಥಶಾಸ್ತ್ರದ ವಿಶ್ಲೇಷಣೆಯನ್ನು ಸರಳೀಕೃತಗೊಳಿಸುತ್ತೇವೆ. ಮಾರುಕಟ್ಟೆಯಲ್ಲಿ ಕೊಳ್ಳುವ ಮತ್ತು ಮಾರಾಟ ಮಾಡುವ ಅನೇಕ ವಾಸ್ತವಿಕ ಸರಕುಗಳಿಗೆ ಏನಾಗುತ್ತದೆಂಬುದನ್ನು ಅಧ್ಯಯನ ಮಾಡುವುದರಿಂದ ದೂರವಿದ್ದು, ಈ ಸರಳೀಕರಣವನ್ನು ಕೈಗೊಳ್ಳಲು ನಾವು ಶಕ್ತರಾಗಿದ್ದೇವೆ. ಏಕೆಂದರೆ ಸಾಮಾನ್ಯವಾಗಿ ಬೆಲೆಗಳು, ಬಡ್ಡಿಗಳು, ಕೂಲಿ ದರಗಳು ಮತ್ತು ಲಾಭಗಳು ಇತ್ಯಾದಿಗಳು ಒಂದು ಸರಕಿನ ಮೇಲೆ ಯಾವ ಪರಿಣಾಮ ಬೀರುತ್ತದೋ ಹೆಚ್ಚುಕಡಿಮೆ ಅದೇ ರೀತಿಯ ಪರಿಣಾಮ ಇತರೆ ಸರಕುಗಳ ಮೇಲೂ ಬೀರುತ್ತದೆಂದು ನಾವು ನೋಡಬಹುದಾಗಿದೆ. ವಿಶೇಷವಾಗಿ ಈ ಲಕ್ಷಣಗಳು (ಚಲಕಗಳು) ವೇಗವಾಗಿ ಬದಲಾಗಲು ಪ್ರಾರಂಭಿಸಿದಾಗ, ಉದಾಹರಣೆಗೆ ಬೆಲೆಗಳು ಏರಲಾರಂಭಿಸಿದಾಗ (ಹಣದುಬ್ಬರವೆಂದು ಕರೆಯುವ ಸನ್ನಿವೇಶ) ಅಥವಾ ಉದ್ಯೋಗ ಮತ್ತು ಉತ್ಪಾದನಾ ಮಟ್ಟಗಳು ಕೆಳಗಿಳಿಯಲು ಆರಂಭಿಸುವುವೋ (ಆರ್ಥಿಕ ಕುಸಿತದ ಸನ್ನಿವೇಶ), ಆಗ ಎಲ್ಲ ವೈಯಕ್ತಿಕ ಸರಕುಗಳಿಗೂ ಈ ಚಲಕಗಳ ಚಲನೆಯ ಸಾಮಾನ್ಯ ದಿಕ್ಕು ಇಡೀ ಆರ್ಥಿಕತೆಯ ಸಮಗ್ರತೆಗಳ ವಿಷಯದಲ್ಲಿ ಕಾಣುವಂತೆ ಒಂದೇ ತೆರನಾಗಿ ಇರುತ್ತದೆ.



ದೇಶದ ಸಮಗ್ರ ಆರ್ಥಿಕತೆಯು ವಿಶಿಷ್ಟ ವಲಯಗಳಿಂದ ಅತ್ಯುತ್ತಮವಾಗಿ ರಚಿತವಾಗಿರುವುದನ್ನು ಆರ್ಥೈಸಿಕೊಂಡಾಗ, ನಾವು ಕೆಲವೊಮ್ಮೆ ಏಕೆ ಈ ಉಪಯುಕ್ತ ಸರಳೀಕರಣದಿಂದ ದೂರವಿದ್ದೇವೆ ಎನ್ನುವುದನ್ನು ಈ ಕೆಳಗಿನಂತೆ ನೋಡಬಹುದಾಗಿದೆ. ಕೆಲವು ನಿರ್ದಿಷ್ಟ ಉದ್ದೇಶಗಳಿಗೆ, ಆರ್ಥಿಕತೆಯ ಎರಡು ವಲಯಗಳ (ಉದಾ: ಕೃಷಿ ಮತ್ತು ಕೈಗಾರಿಕೆ) ಆಂತರಿಕ ಅವಲಂಬನೆ (ಅಥವಾ ಪೈಪೋಟಿ ಕೂಡಾ) ಅಥವಾ ವಲಯಗಳ (ಕುಟುಂಬ ವಲಯ, ವ್ಯಾವಹಾರಿಕ ವಲಯ, ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಸರಕಾರ) ನಡುವಿನ ಸಂಬಂಧಗಳು, ದೇಶದ ಆರ್ಥಿಕತೆಯ ಕೆಲವು ವಿಷಯಗಳ ಬಗ್ಗೆ ಸಮಗ್ರ ಅರ್ಥವ್ಯವಸ್ಥೆಯನ್ನು ಮಾತ್ರ ನೋಡುವುದಕ್ಕಿಂತ ಉತ್ತಮವಾಗಿ ಅರ್ಥ ಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತವೆ

ವಿವಿಧ ಸರಕುಗಳಿಂದ ದೂರವಾಗಿ ಪ್ರಾತಿನಿಧಿಕ ಸರಕುಗಳ ಮೇಲೆ ಕೇಂದ್ರೀಕರಿಸುವುದು ಅನುಕೂಲವಾಗಬಹುದು, ಆದರೆ ಈ ಪ್ರಕ್ರಿಯೆಯಲ್ಲಿ ನಾವು ವೈಯುಕ್ತಿಕ ಸರಕುಗಳ ಮಹತ್ವದ ವೈಶಿಷ್ಟ್ಯಪೂರ್ಣ ಗುಣಲಕ್ಷಣಗಳನ್ನು ಉದಾಸೀನ ಮಾಡಬಹುದಾಗಿದೆ. ಉದಾಹರಣೆಗೆ ಕೃಷಿ ಮತ್ತು ಕೈಗಾರಿಕಾ ಸರಕುಗಳ ಉತ್ಪಾದನಾ ಸ್ಥಿತಿಗತಿಗಳು ವಿಭಿನ್ನ ಸ್ವರೂಪದ್ದಾಗಿವೆ. ಅಥವಾ ಎಲ್ಲಾ ವಿಧದ ಶ್ರಮಗಳ ಪ್ರತಿನಿಧಿಯಾಗಿ ಒಂದು ವರ್ಗದ ಶ್ರಮವನ್ನು ಪರಿಗಣಿಸಿದರೆ, ಒಂದು ಉದ್ಯಮದ ನಿರ್ವಾಹಕನ ಶ್ರಮ ಮತ್ತು ಉದ್ಯಮದ ಲೆಕ್ಕಿಗನ ಶ್ರಮವನ್ನು ಪ್ರತ್ಯೇಕಿಸಲು ನಾವು ಅಸಮರ್ಥರಾಗುತ್ತೇವೆ. ಆದ್ದರಿಂದ ಹಲವಾರು ಸಂದರ್ಭಗಳಲ್ಲಿ ಒಂದೇ ವರ್ಗದ ಪ್ರಾತಿನಿಧಿಕ ಸರಕಿನ (ಅಥವಾ ಶ್ರಮ, ಅಥವಾ ಉತ್ಪಾದನಾ ತಂತ್ರಜ್ಞಾನ) ಬದಲಿಗೆ ನಾವು ಒಂದು ಸಣ್ಣ ಸಂಖ್ಯೆಯಲ್ಲಿ ವಿವಿಧ ಪ್ರಕಾರದ ಸರಕುಗಳನ್ನು ತೆಗೆದುಕೊಳ್ಳಬಹುದು. ಉದಾಹರಣೆಗೆ ಒಂದು ಅರ್ಥವ್ಯವಸ್ಥೆಯೊಳಗೆ ಉತ್ಪಾದಿಸಲಾಗುತ್ತಿರುವ ಎಲ್ಲಾ ಸರಕುಗಳಲ್ಲಿ ಮೂರು ಸಾಮಾನ್ಯ ಪ್ರಕಾರದ ಸರಕುಗಳನ್ನು ಪ್ರತಿನಿಧಿಯಾಗಿ ತೆಗೆದುಕೊಳ್ಳಬಹುದು: ಕೃಷಿ ಸರಕುಗಳು, ಕೈಗಾರಿಕಾ ಸರಕುಗಳು ಮತ್ತು ಸೇವೆಗಳು. ಈ ಸರಕುಗಳು ವಿಭಿನ್ನವಾದ ಉತ್ಪಾದನಾ ತಂತ್ರಜ್ಞಾನ ಮತ್ತು ವಿಭಿನ್ನ ಬೆಲೆಗಳನ್ನು ಹೊಂದಿರುತ್ತವೆ. ಸಮಗ್ರ ಅರ್ಥಶಾಸ್ತ್ರವು ಈ ವಿಭಿನ್ನ ಸರಕುಗಳ ವೈಯುಕ್ತಿಕ ಉತ್ಪಾದನಾ ಮಟ್ಟಗಳು, ಬೆಲೆಗಳು ಮತ್ತು ಉದ್ಯೋಗದ ಮಟ್ಟಗಳು ಹೇಗೆ ನಿರ್ಧಾರಿತವಾಗುತ್ತದೆ ಎನ್ನುವುದನ್ನು ಕೂಡ ವಿಶ್ಲೇಷಿಸಲು ಪ್ರಯತ್ನಿಸುತ್ತದೆ.

ಇಲ್ಲಿನ ಈ ಚರ್ಚೆಯಿಂದ ಮತ್ತು ಸೂಕ್ಷ್ಮ ಅರ್ಥಶಾಸ್ತ್ರದ ನಿಮ್ಮ ಹಿಂದಿನ ಅಧ್ಯಯನದಿಂದ ನೀವು ಈಗಾಗಲೇ ಸಮಗ್ರ ಅರ್ಥಶಾಸ್ತ್ರವು ಸೂಕ್ಷ್ಮಅರ್ಥಶಾಸ್ತ್ರದಿಂದ ಯಾವ ರೀತಿಯಲ್ಲಿ ಭಿನ್ನವಾಗಿದೆ ಎನ್ನುವುದನ್ನು

ತಿಳಿಯಲಾರಂಭಿಸಿರುವಿರಿ. ಸಂಕ್ಷಿಪ್ತವಾಗಿ ಪುನರುಚ್ಚರಿಸುವುದಾದರೆ ಸೂಕ್ಷ್ಮ ಅರ್ಥಶಾಸ್ತ್ರದಲ್ಲಿ ವೈಯುಕ್ತಿಕ 'ಆರ್ಥಿಕ ಏಜೆಂಟ್'ಗಳು (ಬಾಕ್ಸ್ ನೋಡಿ) ಮತ್ತು ಅವುಗಳಿಗೆ ಚಾಲನೆ ನೀಡುವ ಉತ್ತೇಜಕಗಳ ಸ್ವಭಾವವನ್ನು ನೋಡಿರುತ್ತೀರಿ. ಅವುಗಳು ಸೂಕ್ಷ್ಮ (ಸಣ್ಣದು ಎನ್ನುವ ಅರ್ಥ) ಏಜೆಂಟ್‌ಗಳಾಗಿವೆ – ಅಭಿರುಚಿ ಮತ್ತು ಆದಾಯ ನೀಡಲ್ಪಟ್ಟಿರುವಾಗ ಖರೀದಿಸುವ ಸರಕುಗಳ ಆದರ್ಶ ಸಂಯೋಜನೆಗಳನ್ನು ಅನುಕ್ರಮವಾಗಿ ಆಯ್ಕೆ ಮಾಡಿಕೊಳ್ಳುವ ಅನುಭೋಗಿಗಳು ಮತ್ತು ಉತ್ಪಾದಕರು ತಾವು ಉತ್ಪಾದಿಸುವ ಸರಕುಗಳ ವೆಚ್ಚವನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ ಮತ್ತು ಮಾರುಕಟ್ಟೆಗಳಲ್ಲಿ ಅವರು ಪಡೆಯಬಹುದಾದ ಹೆಚ್ಚಿನ ಬೆಲೆಗೆ ಮಾರುವುದರ ಮೂಲಕ ಗರಿಷ್ಠ ಲಾಭ ಗಳಿಸಲು ಪ್ರಯತ್ನಿಸುತ್ತಿರುವ ಉತ್ಪಾದಕರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸೂಕ್ಷ್ಮ ಅರ್ಥಶಾಸ್ತ್ರವು ವೈಯಕ್ತಿಕ ಮಾರುಕಟ್ಟೆಯ ಬೇಡಿಕೆ ಮತ್ತು ಪೂರೈಕೆಗಳ ಅಧ್ಯಯನವಾಗಿದೆ ಮತ್ತು 'ಆಟಗಾರರು' ಅಥವಾ ನಿರ್ಣಯಗಳನ್ನು ಕೈಗೊಳ್ಳುವವರೂ ಕೂಡ ವ್ಯಕ್ತಿಗಳಾಗಿದ್ದು (ಕೊಳ್ಳುವವರು ಅಥವಾ ಮಾರುವವರು, ಕಂಪನಿಗಳೂ ಕೂಡ) ತಮ್ಮ ಲಾಭವನ್ನು (ಉತ್ಪಾದಕರು ಅಥವಾ ಮಾರಾಟಗಾರರಾಗಿ) ಮತ್ತು ತಮ್ಮ ವೈಯಕ್ತಿಕ ತೃಪ್ತಿ ಅಥವಾ ಯೋಗಕ್ಷೇಮದ ಮಟ್ಟವನ್ನು (ಅನುಭೋಗಿಗಳಾಗಿ) ಗರಿಷ್ಠಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಕಾಣುತ್ತೇವೆ. ಒಂದು ಬೃಹತ್ ಕಂಪನಿಯು ಸೂಕ್ಷ್ಮ ಅರ್ಥಶಾಸ್ತ್ರದ ವ್ಯಾಪ್ತಿಗೆ ಸೇರುತ್ತದೆ ಎನ್ನುವುದರ ಅರ್ಥವೇನೆಂದರೆ ಅದು ತನ್ನ ಷೇರುದಾರರ ಹಿತಾಸಕ್ತಿಗೆ ತಕ್ಕಂತೆ ವ್ಯವಹರಿಸಬೇಕಾಗುತ್ತದೆ ಮತ್ತು ಇದು ಒಟ್ಟಾರೆ ದೇಶದ ಹಿತಾಸಕ್ತಿಯಾಗಿರಲೇಬೇಕಾದ ಅವಶ್ಯಕತೆ ಇರುವುದಿಲ್ಲ. ಇಡೀ ಆರ್ಥಿಕತೆಯ ಮೇಲೆ ಪರಿಣಾಮ ಬೀರುವ 'ಸಮಗ್ರ' (ದೊಡ್ಡದು ಎಂಬರ್ಥದ) ವಿದ್ಯಮಾನಗಳಾದಂತಹ ಅತಿಪ್ರಸರಣ ಅಥವಾ ನಿರುದ್ಯೋಗಗಳನ್ನು ಸೂಕ್ಷ್ಮ ಅರ್ಥಶಾಸ್ತ್ರದಲ್ಲಿ ಪ್ರಸ್ತಾಪಿಸುವುದೂ ಇಲ್ಲ ಅಥವಾ ದತ್ತವಾದವುಗಳೆಂದೂ ಪರಿಗಣಿಸುವುದಿಲ್ಲ. ಆರ್ಥಿಕತೆಯಲ್ಲಿ ಪ್ರತಿಯೊಂದು ಮಾರುಕಟ್ಟೆಯ ಪೂರೈಕೆ ಮತ್ತು ಬೇಡಿಕೆಗಳ ಸಮತೋಲನವೇ ಸಾಮಾನ್ಯ ಸಮತೋಲನವೆಂದು ಅರ್ಥೈಸಿದಾಗ ಸೂಕ್ಷ್ಮ ಅರ್ಥಶಾಸ್ತ್ರವು ಸಮಗ್ರ ಅರ್ಥಶಾಸ್ತ್ರಕ್ಕೆ ಸಮೀಪವಾಗಿರುತ್ತದೆ.

**ಆರ್ಥಿಕ ಏಜೆಂಟ್‌ಗಳು**

ಆರ್ಥಿಕ ಏಜೆಂಟುಗಳೆಂದರೆ ಆರ್ಥಿಕ ನಿರ್ಣಯಗಳನ್ನು ತೆಗೆದುಕೊಳ್ಳುವ ವ್ಯಕ್ತಿಗಳು ಮತ್ತು ಸಂಸ್ಥೆಗಳು ಎಂದು ನಾವು ಅರ್ಥೈಸುತ್ತೇವೆ. ಅವರು, ಏನು ಮತ್ತು ಎಷ್ಟನ್ನು ಅನುಭೋಗಿಸಬೇಕು ಎನ್ನುವುದನ್ನು ನಿರ್ಧರಿಸುವ ಅನುಭೋಗಿಗಳಾಗಿರಬಹುದು. ಏನು ಮತ್ತು ಎಷ್ಟನ್ನು ಉತ್ಪಾದಿಸಬೇಕು ಎಂದು ನಿರ್ಧರಿಸುವ ಉತ್ಪಾದಕರೂ ಆಗಿರಬಹುದು. ಎಷ್ಟು ವೆಚ್ಚವನ್ನು ಮಾಡಬಹುದು, ಸಾಲಕ್ಕೆ ಎಷ್ಟು ಬಡ್ಡಿ ವಿಧಿಸಬೇಕು, ಎಷ್ಟು ತೆರಿಗೆ ವಿಧಿಸಬೇಕು ಎನ್ನುವ ತೀರ್ಮಾನಗಳನ್ನು ಕೈಕೊಳ್ಳುವ ಸರಕಾರ, ನಿಗಮಗಳು, ಬ್ಯಾಂಕುಗಳು ಮುಂತಾದ ಘಟಕಗಳೂ ಆಗಿರಬಹುದು.

ಸಮಗ್ರ ಅರ್ಥಶಾಸ್ತ್ರವು ಸಮಗ್ರ ಆರ್ಥಿಕತೆಯ ಸ್ಥಿತಿಗತಿಗಳನ್ನು ನಿಭಾಯಿಸಲು ಪ್ರಯತ್ನಿಸುತ್ತದೆ. ಪ್ರತಿ ಮಾರುಕಟ್ಟೆಯಲ್ಲಿ ಕೊಳ್ಳುವವರು ಮತ್ತು ಮಾರಾಟಗಾರರು ತಮ್ಮ ಸ್ವಂತ ಹಿತಾಸಕ್ತಿಗಳ ಅನುಸಾರ ನಿರ್ಣಯಗಳನ್ನು ತೆಗೆದುಕೊಂಡರೆ, ಅರ್ಥಶಾಸ್ತ್ರಜ್ಞರು ಸಮಗ್ರ ಆರ್ಥಿಕತೆಯ ಸಂಪತ್ತು ಮತ್ತು ಯೋಗಕ್ಷೇಮದ ಬಗ್ಗೆ ಪ್ರತ್ಯೇಕವಾಗಿ ವಿಚಾರ ಮಾಡುವ ಅಗತ್ಯವಿಲ್ಲವೆಂದು ಆಧುನಿಕ ಅರ್ಥಶಾಸ್ತ್ರದ ಸ್ಥಾಪಕ ಪಿತಾಮಹ ಆಡಂಸ್ಮಿತ್ ಸೂಚಿಸಿದ್ದಾರೆ. ಆದರೆ ಅರ್ಥಶಾಸ್ತ್ರಜ್ಞರು ಇದರಿಂದಾಚೆಗೆ ನೋಡಬೇಕಾಗುತ್ತದೆಂದು ಕ್ರಮೇಣ ಕಂಡುಕೊಂಡಿದ್ದಾರೆ.

ಅರ್ಥಶಾಸ್ತ್ರಜ್ಞರು ಕಂಡುಕೊಂಡಿರುವುದೇನೆಂದರೆ, ಮೊದಲನೆಯದಾಗಿ, ಕೆಲವು ಸಂದರ್ಭಗಳಲ್ಲಿ ಮಾರುಕಟ್ಟೆಗಳು ಇರಲಿಲ್ಲ ಅಥವಾ ಇರುವುದಕ್ಕೂ ಸಾಧ್ಯವಿರಲಿಲ್ಲ. ಎರಡನೆಯದಾಗಿ ಕೆಲವು ಸಂದರ್ಭಗಳಲ್ಲಿ ಮಾರುಕಟ್ಟೆಗಳು ಅಸ್ತಿತ್ವದಲ್ಲಿದ್ದವು ಆದರೆ ಬೇಡಿಕೆ ಮತ್ತು ಪೂರೈಕೆಯ ಸಮತೋಲವನ್ನು ತರುವಲ್ಲಿ ವಿಫಲಗೊಂಡಿದ್ದವು. ಮೂರನೆಯದಾಗಿ ಮತ್ತು ಅತ್ಯಂತ ಪ್ರಮುಖವಾಗಿ ಬಹುತೇಕ ಸಂದರ್ಭಗಳಲ್ಲಿ ಸಮಾಜವು (ಅಥವಾ ಸರ್ಕಾರ ಅಥವಾ ಇಡೀ ಜನತೆ) ಕೆಲವು ಪ್ರಮುಖ ಸಾಮಾಜಿಕ ಗುರಿಗಳನ್ನು (ಉದ್ಯೋಗ, ಆಡಳಿತ, ರಕ್ಷಣೆ, ಶಿಕ್ಷಣ ಮತ್ತು ಆರೋಗ್ಯಗಳಂತಹ ಕ್ಷೇತ್ರಗಳಲ್ಲಿ) ನಿಸ್ವಾರ್ಥವಾಗಿ ಸಾಧಿಸಬೇಕೆಂದು ನಿರ್ಣಯಿಸಲಾಗುತ್ತಿತ್ತು. ಇದಕ್ಕಾಗಿ ವೈಯಕ್ತಿಕ ಆರ್ಥಿಕ ಏಜೆಂಟ್‌ಗಳು ಸೂಕ್ಷ್ಮ ಆರ್ಥಿಕ ನಿರ್ಣಯಗಳ

ಸಮಗ್ರ ಪರಿಣಾಮಗಳನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಉಂಟಾಯಿತು. ಈ ಉದ್ದೇಶಗಳಿಗಾಗಿ ಸಮಗ್ರ ಅರ್ಥಶಾಸ್ತ್ರದ ವಿದ್ವಾಂಸರು ಹಣದ ಪೂರೈಕೆ, ಬಡ್ಡಿದರ, ಕೂಲಿ, ಉದ್ಯೋಗ ಮತ್ತು ಉತ್ಪನ್ನಗಳಲ್ಲಿ ಬದಲಾವಣೆಗಳನ್ನು ತರುವುದಕ್ಕಾಗಿ ಮಾರುಕಟ್ಟೆಯಲ್ಲಿ ತೆರಿಗೆ ನೀತಿ ಮತ್ತು ಇತರೆ ಮುಂಗಡ ಪತ್ರದ ನೀತಿಗಳ ಪರಿಣಾಮಗಳನ್ನು ಅಧ್ಯಯನ ಮಾಡಬೇಕಾಗಿತ್ತು. ಆದ್ದರಿಂದ ಸಮಗ್ರ ಅರ್ಥಶಾಸ್ತ್ರವು ಸೂಕ್ಷ್ಮ ಅರ್ಥಶಾಸ್ತ್ರದಲ್ಲಿ ಆಳವಾದ ಬೇರುಗಳನ್ನು ಹೊಂದಿದೆ. ಏಕೆಂದರೆ ಸಮಗ್ರ ಅರ್ಥಶಾಸ್ತ್ರವು ಮಾರುಕಟ್ಟೆಗಳಲ್ಲಿನ ಬೇಡಿಕೆ ಮತ್ತು ಪೂರೈಕೆ ಶಕ್ತಿಗಳ ಸಮಗ್ರ ಪರಿಣಾಮಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಆದಾಗ್ಯೂ ಇದರ ಜೊತೆಯಲ್ಲಿಯೇ ಅಗತ್ಯಬಿದ್ದರೆ ಈ ಶಕ್ತಿಗಳನ್ನು ಬದಲಾಯಿಸುವ ನೀತಿಗಳನ್ನು ಪ್ರಯೋಗಿಸಬೇಕಾಗುತ್ತದೆ ಮತ್ತು ಸಮಾಜವು ಮಾರುಕಟ್ಟೆಗಳ ಹೊರಗೆ ಮಾಡಿಕೊಳ್ಳುವ ಆಯ್ಕೆಗಳನ್ನು ಅನುಸರಿಸುವ ಬಗ್ಗೆ ಇದು ವಿಚಾರ ಮಾಡಬೇಕಾಗುತ್ತದೆ. ನಿರುದ್ಯೋಗವನ್ನು ನಿವಾರಿಸುವುದಕ್ಕಾಗಿ ಅಥವಾ ಕಡಿಮೆ ಮಾಡುವುದಕ್ಕಾಗಿ ಎಲ್ಲರಿಗೂ ಶಿಕ್ಷಣ ಮತ್ತು ಪ್ರಾಥಮಿಕ ಆರೋಗ್ಯ ಆರೈಕೆಗಳನ್ನು ಪಡೆಯುವ ಮಾರ್ಗದಲ್ಲಿನ ಸುಧಾರಣೆಗಾಗಿ, ಉತ್ತಮ ಆಡಳಿತವನ್ನು ಒದಗಿಸುವುದಕ್ಕಾಗಿ, ದೇಶಕ್ಕೆ ಸಾಕಷ್ಟು ರಕ್ಷಣೆಯನ್ನು ಒದಗಿಸುವುದು ಮುಂತಾದವುಗಳಿಗಾಗಿ ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಆಯ್ಕೆಗಳನ್ನು ಮಾಡಿಕೊಳ್ಳಬೇಕಾಗಿದೆ. ನಾವು ಈಗ ಮಾಡಿರುವ ಪಟ್ಟಿಯಲ್ಲಿನ ಸ್ಥಿತಿಗತಿಗಳನ್ನು ವ್ಯವಹರಿಸುವ ರೀತಿಯಿಂದ ಸಮಗ್ರ ಅರ್ಥಶಾಸ್ತ್ರವು ಎರಡು ಸರಳ ಲಕ್ಷಣಗಳನ್ನು ತೋರಿಸುತ್ತದೆ. ಅವುಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

ಮೊದಲನೆಯದಾಗಿ ಸಮಗ್ರ ಆರ್ಥಿಕ ನಿರ್ಣಯಗಳನ್ನು ಕೈಗೊಳ್ಳುವವರು (ಅಥವಾ ಆಟಗಾರರು) ಯಾರು? ಸಮಗ್ರ ಆರ್ಥಿಕ ನೀತಿಗಳನ್ನು ರಾಜ್ಯವು ಸ್ವಯಂ ಆಗಿ ಅಥವಾ ಶಾಸನಾತ್ಮಕ ಸಂಸ್ಥೆಗಳಾದ ಭಾರತೀಯ ರಿಸರ್ವ್ ಬ್ಯಾಂಕ್(RBI), ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (SEBI) ಮತ್ತು ಇದೇ ರೀತಿಯ ಸಂಸ್ಥೆಗಳಿಂದ ಜಾರಿಗೆ ತರಲಾಗುತ್ತದೆ. ವಿಶೇಷವಾಗಿ ಭಾರತದ ಸಂವಿಧಾನ ಅಥವಾ ಕಾನೂನು ವ್ಯಾಖ್ಯಾನಿಸಿದಂತೆ ಸಾಮಾನ್ಯವಾಗಿ ಇಂತಹ ಪ್ರತಿ ಸಂಸ್ಥೆಯೂ ಒಂದು ಅಥವಾ ಒಂದಕ್ಕಿಂತ ಹೆಚ್ಚು ಗುರಿಗಳನ್ನು ಸಾಧಿಸಬೇಕಾಗುತ್ತದೆ. ಈ ಗುರಿಗಳು ತಮ್ಮ ಲಾಭ ಅಥವಾ ಯೋಗಕ್ಷೇಮವನ್ನು ಗರಿಷ್ಠಗೊಳಿಸುವ ವೈಯುಕ್ತಿಕ ಆರ್ಥಿಕ ಘಟಕಗಳಂತಲ್ಲ. ಸಮಗ್ರ ಆರ್ಥಿಕ ಘಟಕಗಳು ಮೂಲಭೂತವಾಗಿ ವೈಯುಕ್ತಿಕ ನಿರ್ಣಯ ಕೈಗೊಳ್ಳುವವರಿಗಿಂತ ಬೇರೆಯೇ ಆಗಿದೆ.




ಎರಡನೆಯದಾಗಿ ಸಮಗ್ರ ಆರ್ಥಿಕ ನಿರ್ಣಯ ಕೈಗೊಳ್ಳುವವರು ಏನನ್ನು ಮಾಡಲು ಪ್ರಯತ್ನಿಸುತ್ತಾರೆ? ಅವರು ಸ್ಪಷ್ಟವಾಗಿ ಆಗಾಗ ಆರ್ಥಿಕ ಗುರಿಗಳಿಂದಾಚೆಗೆ ಹೋಗಬೇಕು ಮತ್ತು ನಾವು ಮೇಲೆ ಪಟ್ಟಿ ಮಾಡಿದಂತೆ ಅಂತಹ ಸಾರ್ವಜನಿಕ ಅವಶ್ಯಕತೆಗಳಿಗೆ ಆರ್ಥಿಕ ಸಂಪನ್ಮೂಗಳನ್ನು ನಿಯೋಜಿಸುವಂತೆ ನಿರ್ದೇಶಿಸಬೇಕು. ಅಂತಹ ಚಟುವಟಿಕೆಗಳು ವೈಯುಕ್ತಿಕ ಸ್ವ-ಹಿತಾಸಕ್ತಿಗಳನ್ನು ಈಡೇರಿಸುವ ಗುರಿಯನ್ನು ಹೊಂದಿರುವುದಿಲ್ಲ. ಅವುಗಳನ್ನು ಇಡೀ ದೇಶದ ಮತ್ತು ಅದರ ಜನತೆಯ ಯೋಗಕ್ಷೇಮದ ಸಾಧನೆಗಾಗಿ ಅನುಸರಿಸಲಾಗುತ್ತದೆ.

## 1.1 ಸಮಗ್ರ ಅರ್ಥಶಾಸ್ತ್ರದ ಉದಯ *Emergence Of Macroeconomics*

ಬ್ರಿಟಿಷ್ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೇನ್ಸ್ 1936 ರಲ್ಲಿ ತಮ್ಮ ಹೆಸರಾಂತ ಕೃತಿ 'ಉದ್ಯೋಗ, ಬಡ್ಡಿ ಮತ್ತು ಹಣದ ಸಾಮಾನ್ಯ ಸಿದ್ಧಾಂತ'ವನ್ನು ಪ್ರಕಟಿಸಿದ ನಂತರದಲ್ಲಿ ಸಮಗ್ರ ಅರ್ಥಶಾಸ್ತ್ರವು ಅರ್ಥಶಾಸ್ತ್ರದ ಪ್ರತ್ಯೇಕ ಶಾಖೆಯಾಗಿ ಉದಯವಾಯಿತು. ಕೇನ್ಸ್ ರವರಿಗಿಂತ ಮೊದಲು, ಕೆಲಸ ಮಾಡಲು ಸಿದ್ಧರಿರುವ ಎಲ್ಲಾ ಕಾರ್ಮಿಕರು ಪೂರ್ಣ ಉದ್ಯೋಗವನ್ನು ಕಂಡುಕೊಳ್ಳುತ್ತಿದ್ದರು ಮತ್ತು ಎಲ್ಲಾ ಕಾರ್ಖಾನೆಗಳು ತಮ್ಮ ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ ಎನ್ನುವುದು ಅರ್ಥಶಾಸ್ತ್ರದ ಪ್ರಬಲ ಚಿಂತನೆಯಾಗಿತ್ತು. ಇದನ್ನು **ಸಂಪ್ರದಾಯ ಪಂಥದ ಚಿಂತನೆ** ಎಂದು ಕರೆಯಲಾಗುತ್ತದೆ. ಆದಾಗ್ಯೂ 1929 ರ ಮಹಾ ಆರ್ಥಿಕ ಕುಸಿತ ಮತ್ತು ನಂತರದ ವರ್ಷಗಳು ಯೂರೋಪ್ ಮತ್ತು ಉತ್ತರ ಅಮೆರಿಕಾ ದೇಶಗಳಲ್ಲಿನ ಉತ್ಪಾದನೆ ಮತ್ತು ಉದ್ಯೋಗದ ಮಟ್ಟವು ಭಾರೀ ಪ್ರಮಾಣದಲ್ಲಿ ಕಡಿಮೆಯಾದುದ್ದನ್ನು ಕಂಡಿತು. ಇದು ಜಗತ್ತಿನ ಇತರ ದೇಶಗಳ ಮೇಲೂ ಪರಿಣಾಮ ಬೀರಿತು. ಮಾರುಕಟ್ಟೆಯಲ್ಲಿ ಸರಕುಗಳಿಗೆ ಬೇಡಿಕೆ ಕಡಿಮೆಯಿತ್ತು. ಹಲವು ಕಾರ್ಖಾನೆಗಳು ಕೆಲಸವಿಲ್ಲದೇ ಸ್ಥಗಿತವಾಗಿದ್ದವು. ಕಾರ್ಮಿಕರು ಕೆಲಸ ಕಳೆದುಕೊಂಡರು. ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ 1929 ರಿಂದ 1933 ರ ನಡುವೆ ನಿರುದ್ಯೋಗ ದರವು ಶೇ.3 ರಿಂದ ಶೇ.25ಕ್ಕೆ ಏರಿತು (ನಿರುದ್ಯೋಗ ದರವನ್ನು

ಹೀಗೆ ವ್ಯಾಖ್ಯಾನಿಸಬಹುದು, ಉದ್ಯೋಗ ರಹಿತ ಜನಸಂಖ್ಯೆ ಮತ್ತು ಕೆಲಸ ಹುಡುಕುತ್ತಿರುವವರ ಸಂಖ್ಯೆಯನ್ನು ದುಡಿಯುತ್ತಿರುವ ಜನಸಂಖ್ಯೆ ಅಥವಾ ಕೆಲಸ ಹುಡುಕುತ್ತಿರುವವರ ಸಂಖ್ಯೆಯಿಂದ ಭಾಗಿಸುವುದು). ಇದೇ ಅವಧಿಯಲ್ಲಿ USA ದ ಒಟ್ಟು ಉತ್ಪನ್ನವು ಶೇ.33ರಷ್ಟು ಕುಸಿಯಿತು. ಈ ಘಟನಾವಳಿಗಳು ಅರ್ಥವ್ಯವಸ್ಥೆಯ ಕಾರ್ಯವಿಧಾನದ ಕುರಿತು ಅರ್ಥಶಾಸ್ತ್ರಜ್ಞರನ್ನು ಹೊಸ ಮಾರ್ಗದಲ್ಲಿ ಯೋಚಿಸುವಂತೆ ಮಾಡಿತು. ಇದು ಅರ್ಥವ್ಯವಸ್ಥೆಯು ಹೊಂದಿರಬಹುದಾದ ದೀರ್ಘಕಾಲೀನ ನಿರುದ್ಯೋಗವನ್ನು ಸೈದ್ಧಾಂತೀಕರಿಸುವ ಮತ್ತು ವಿವರಿಸುವಂತೆ ಮಾಡಿತು. ಈ ದಿಶೆಯಲ್ಲಿ ಕೇನ್ಸ್‌ರವರ ಗ್ರಂಥವು ಒಂದು ಪ್ರಯತ್ನವಾಗಿದೆ. ಇವರ ಹಿಂದಿನವರಂತೆ ಅಲ್ಲದೆ, ಕೇನ್ಸ್‌ರವರ ವಿಧಾನವು ಅರ್ಥವ್ಯವಸ್ಥೆಯ ಕಾರ್ಯವಿಧಾನವನ್ನು ಅದರ ಸಮಗ್ರತೆಯಲ್ಲಿ ಪರೀಕ್ಷಿಸುವುದು ಮತ್ತು ವಿವಿಧ ವಲಯಗಳ ಪರಸ್ಪರಾವಲಂಬನೆಯನ್ನು ಪರೀಕ್ಷಿಸುವುದಾಗಿದೆ. ಹೀಗೆ ಸಮಗ್ರ ಅರ್ಥಶಾಸ್ತ್ರವು ಉದಯವಾಯಿತು.






## 1.2 ಸಮಗ್ರ ಅರ್ಥಶಾಸ್ತ್ರ ಪುಸ್ತಕದ ಪ್ರಸಕ್ತ ಸನ್ನಿವೇಶ
### *Context Of The Present Book Of Macroeconomics*

ಅಧ್ಯಯನ ಮಾಡುವ ಈ ವಿಷಯವು ನಿರ್ದಿಷ್ಟವಾದ ಐತಿಹಾಸಿಕ ಸನ್ನಿವೇಶವನ್ನು ಹೊಂದಿದೆ ಎನ್ನುವುದನ್ನು ನಾವು ನೆನಪಿಟ್ಟುಕೊಳ್ಳಲೇಬೇಕು. ಈ ಪುಸ್ತಕದಲ್ಲಿ ಒಂದು ಬಂಡವಾಳಶಾಹಿ ದೇಶದ ಆರ್ಥಿಕತೆಯನ್ನು ನಾವು ಪರೀಕ್ಷಿಸೋಣ. ಒಂದು ಬಂಡವಾಳಶಾಹಿ ದೇಶದಲ್ಲಿ ಆರ್ಥಿಕ ಚಟುವಟಿಕೆಗಳು ಮುಖ್ಯವಾಗಿ ಬಂಡವಾಳಶಾಹಿ ಉದ್ಯಮಗಳಿಂದ ನಡೆಸಲಾಗುತ್ತದೆ. ಒಂದು ವಿಶಿಷ್ಟವಾದ ಬಂಡವಾಳಶಾಹಿ ಉದ್ಯಮವು ಒಂದು ಅಥವಾ ಹಲವು ಉದ್ಯಮಿಗಳನ್ನು (ಪ್ರಮುಖ ನಿರ್ಣಯಗಳ ಮೇಲೆ ನಿಯಂತ್ರಣ ಹೊಂದಿರುವ ಜನರು ಮತ್ತು ಉದ್ಯಮ/ಸಂಘಟನೆ ಜೊತೆಗಿರುವ ತೊಂದರೆಗಳ ಬಹುಪಾಲನ್ನು ಸಹಿಸಿಕೊಳ್ಳುವವರು) ಹೊಂದಿರುತ್ತದೆ. ಅವರು ಉದ್ಯಮವನ್ನು ನಡೆಸಲು ಅಗತ್ಯವಿರುವ ಬಂಡವಾಳನ್ನು ತಾವಾಗಿಯೇ ಪೂರೈಸಿಕೊಳ್ಳಬಹುದು ಅಥವಾ ಅವರು ಬಂಡವಾಳವನ್ನು ಸಾಲವಾಗಿ ತರಬಹುದು. ಉತ್ಪಾದನೆಯನ್ನು ಕೈಗೊಳ್ಳಲು ಅವರಿಗೆ **ನೈಸರ್ಗಿಕ ಸಂಪನ್ಮೂಲ**ಗಳೂ ಕೂಡಾ ಅವಶ್ಯಕವಾಗುತ್ತದೆ – ಒಂದು ಭಾಗವನ್ನು ಉತ್ಪಾದನಾ ಪಕ್ರಿಯೆಯಲ್ಲಿ ಬಳಸಲಾಗುತ್ತದೆ (ಉದಾ: ಕಚ್ಚಾ ವಸ್ತುಗಳು) ಮತ್ತು ಒಂದು ಭಾಗ ಸ್ಥಿರವಾಗಿರುತ್ತದೆ (ಉದಾ: ಭೂಮಿ ನಿವೇಶನಗಳು). ಅವರಿಗೆ ಉತ್ಪಾದನೆಯನ್ನು ಕೈಗೊಳ್ಳಲು ಅತ್ಯಂತ ಮುಖ್ಯ ಅಂಶವಾದ ಮಾನವ ಶ್ರಮದ ಅವಶ್ಯಕತೆಯಿದೆ. ಇದನ್ನೇ ನಾವು **ಶ್ರಮ** ಎಂದು ಉಲ್ಲೇಖಿಸೋಣ. ಈ ಮೂರೂ ಉತ್ಪಾದನಾಂಗಗಳ ಅಂದರೆ ಬಂಡವಾಳ, ಭೂಮಿ ಮತ್ತು ಶ್ರಮದ ಸಹಾಯದಿಂದ ಉತ್ಪನ್ನವನ್ನು

ಉತ್ಪಾದಿಸಿದ ನಂತರ ಉದ್ಯಮಿಯು ಉತ್ಪನ್ನವನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾನೆ. ಹಾಗೆ ಮಾರಾಟಮಾಡಿ ಗಳಿಸಿದ ಹಣವನ್ನೇ **ಆದಾಯ** ಎಂದು ಕರೆಯುತ್ತಾರೆ. ಭೂಮಿಯು ಸಲ್ಲಿಸಿದ ಸೇವೆಗೆ ಆದಾಯದ ಒಂದು ಭಾಗವನ್ನು ಗೇಣಿಯ ರೂಪದಲ್ಲಿ ಪಾವತಿಸಲಾಗುತ್ತದೆ. ಅದರ ಒಂದು ಭಾಗವನ್ನು ಬಂಡವಾಳಕ್ಕೆ ಬಡ್ಡಿಯ ರೂಪದಲ್ಲಿ ಪಾವತಿಸಲಾಗುತ್ತದೆ ಮತ್ತು ಅದರ ಮತ್ತೊಂದು ಭಾಗವು ಶ್ರಮಕ್ಕೆ **ಕೂಲಿ**ಯ ರೂಪದಲ್ಲಿ ಹೋಗುತ್ತದೆ. ಆದಾಯದ ಉಳಿದ ಭಾಗವು ಉದ್ಯಮಿಗಳ ಗಳಿಕೆಯಾಗಿದೆ, ಅದನ್ನೇ **ಲಾಭ** ಎಂದು ಕರೆಯುತ್ತಾರೆ. ಮುಂದಿನ ಅವಧಿಗೆ ಹೊಸ ಯಂತ್ರಗಳು ಅಥವಾ ಹೊಸ ಕಾರ್ಖಾನೆಗಳನ್ನು ನಿರ್ಮಿಸಲು ಲಾಭವನ್ನು ಆಗಾಗ್ಗೆ ಉತ್ಪಾದಕರು ಬಳಸುತ್ತಾರೆ ಅದರಿಂದ ಉತ್ಪಾದನೆಯು ವಿಸ್ತಾರಗೊಳ್ಳುತ್ತದೆ. ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚುಸುವ ಈ ವೆಚ್ಚಗಳು **ಹೂಡಿಕೆ ವೆಚ್ಚ**ಕ್ಕೆ ಉದಾಹರಣೆಯಾಗಿದೆ.

ಸಂಕ್ಷಿಪ್ತವಾಗಿ, ಯಾವ ಆರ್ಥಿಕತೆಯಲ್ಲಿ ಬಹುತೇಕ ಆರ್ಥಿಕ ಚಟುವಟಿಕೆಗಳು ಈ ಕೆಳಗಿನ ಲಕ್ಷಣಗಳನ್ನು ಹೊಂದಿರುತ್ತದೆಯೋ ಅದನ್ನು ಒಂದು ಬಂಡವಾಳ ಆರ್ಥಿಕತೆಯೆಂದು ವ್ಯಾಖ್ಯಾನಿಸಬಹುದು. (ಎ) ಉತ್ಪಾದನಾ ಸಾಧನಗಳ ಖಾಸಗಿ ಒಡೆತನವಿರುತ್ತದೆ (ಬಿ) ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಮಾರುವ ಉದ್ದೇಶಕ್ಕಾಗಿ ಉತ್ಪಾದನೆಯಾಗುತ್ತದೆ (ಸಿ) ಯಾವ ಬೆಲೆಗೆ ಶ್ರಮದ ಮಾರಾಟ ಮತ್ತು ಖರೀದಿ ಆಗುತ್ತದೋ ಅದನ್ನೇ **ಕೂಲಿಯದರ** ಎಂದು ಕರೆಯಲಾಗುತ್ತದೆ. (ಶ್ರಮವನ್ನು ಕೂಲಿಗೆ ಪ್ರತಿಯಾಗಿ ಖರೀದಿಸುವುದಕ್ಕೆ ಮತ್ತು ಮಾರುವುದಕ್ಕೆ **ಕೂಲಿ ಶ್ರಮ** ಎನ್ನಲಾಗುತ್ತದೆ).

ನಾವು ಮೇಲೆ ತಿಳಿಸಿದ ಮೂರು ಮಾನದಂಡಗಳನ್ನು ಜಗತ್ತಿನ ರಾಷ್ಟ್ರಗಳಿಗೆ ಅನ್ವಯಿಸಿದರೆ ಕಳೆದ ಮೂರರಿಂದ ನಾಲ್ಕು ನೂರು ವರ್ಷಗಳಲ್ಲಿ ಬಂಡವಾಳಶಾಹಿ ದೇಶಗಳು ಅಸ್ತಿತ್ವಕ್ಕೆ ಬಂದಿರುವುದನ್ನು ನಾವು ಕಾಣಬಹುದಾಗಿದೆ. ಅದಕ್ಕಿಂತ ಕಟ್ಟುನಿಟ್ಟಾಗಿ ಹೇಳುವುದಾದರೆ, ವರ್ತಮಾನದಲ್ಲೂ ಕೂಡಾ ಉತ್ತರ ಅಮೆರಿಕಾ, ಯೂರೋಪ್ ಮತ್ತು ಏಷ್ಯಾದ ಕೆಲವು ದೇಶಗಳು ಬಂಡವಾಳಶಾಹಿ ದೇಶಗಳ ಅರ್ಹತೆಯನ್ನು ಪಡೆದಿವೆ. ಹಿಂದುಳಿದ ಹಲವು ರಾಷ್ಟ್ರಗಳಲ್ಲಿ ಉತ್ಪಾದನೆಯು (ವಿಶೇಷವಾಗಿ ಕೃಷಿಯಲ್ಲಿ) ರೈತ ಕಟುಂಬಗಳಿಂದಲೇ ನಿರ್ವಹಿಸಲ್ಪಡುತ್ತಿದೆ. ಕೂಲಿ ಕಾರ್ಮಿಕರನ್ನು ಅಪರೂಪಕ್ಕೆ ಬಳಸಿಕೊಳ್ಳಲಾಗುತ್ತದೆ ಮತ್ತು ಬಹುತೇಕ ಶ್ರಮವನ್ನು ಕುಟುಂಬದ ಸದಸ್ಯರು ಅವರಷ್ಟಕ್ಕೆ ಅವರೇ ನಿರ್ವಹಿಸುತ್ತಾರೆ. ಉತ್ಪಾದನೆಯೆಲ್ಲವೂ ಪೂರ್ಣವಾಗಿ ಮಾರುಕಟ್ಟೆಗಾಗಿ ಅಲ್ಲ; ಅದರ ದೊಡ್ಡ ಭಾಗವು ಕುಟುಂಬದವರೇ ಅನುಭೋಗಿಸುತ್ತಾರೆ. ಹಲವು ರೈತರು ಕಾಲಾವಧಿಯಲ್ಲಿ ಬಂಡವಾಳ ದಾಸ್ತಾನಿನ ಗಮನಾರ್ಹ ಏರಿಕೆಯನ್ನು ಅನುಭವಿಸಲಾಗಲಿಲ್ಲ. ಕೆಲವು ಬುಡಕಟ್ಟು ಸಮಾಜಗಳಲ್ಲಿ ಭೂಮಿಯ ಒಡೆತನ ಅಸ್ತಿತ್ವದಲ್ಲಿಲ್ಲ; ಭೂಮಿಯು ಇಡೀ ಬುಡಕಟ್ಟಿಗೆ ಸೇರಿರುತ್ತದೆ. ಅಂತಹ ಸಮಾಜಗಳಿಗೆ ಈ ಪುಸ್ತಕದಲ್ಲಿ ನಾವು ಪ್ರಸ್ತುತ ಪಡಿಸಿರುವುದು ಅನ್ವಯಿಸುವುದಿಲ್ಲ. ಇದು ಆದಾಗ್ಯೂ ಹಲವು ಅಭಿವೃದ್ಧಿಶೀಲ ರಾಷ್ಟ್ರಗಳು ಬಂಡವಾಳಶಾಹಿ ತತ್ವದ ಪ್ರಕಾರ ಸಂಘಟಿತವಾದ ಉತ್ಪಾದನಾ ಘಟಕಗಳ ಗಮನಾರ್ಹ ಅಸ್ತಿತ್ವವನ್ನು ಹೊಂದಿವೆ. ಈ ಪುಸ್ತಕದಲ್ಲಿ ಉತ್ಪಾದನಾ ಘಟಕಗಳನ್ನು ಉದ್ಯಮ ಘಟಕಗಳು ಎಂದು ಕರೆಯಲಾಗಿದೆ. ಉದ್ಯಮ ಘಟಕದಲ್ಲಿ ಉದ್ಯಮಿ (ಅಥವಾ ಉದ್ಯಮಿಗಳು) ವ್ಯವಹಾರದ ಕೇಂದ್ರ ಬಿಂದುವಾಗಿರುತ್ತಾರೆ. ಅವರು ಮಾರುಕಟ್ಟೆಯಿಂದ ಕಾರ್ಮಿಕರನ್ನು ಕೂಲಿಗಾಗಿ ತೆಗೆದುಕೊಳ್ಳುತ್ತಾರೆ, ಜೊತೆಗೆ ಬಂಡವಾಳ ಮತ್ತು ಭೂಮಿಯ ಸೇವೆಗಳನ್ನೂ ನೇಮಿಸಿಕೊಳ್ಳುತ್ತಾರೆ. ಈ ಹೂಡುವಳಿಗಳೆಲ್ಲವನ್ನೂ ಬಾಡಿಗೆಗೆ ಪಡೆದ ನಂತರ ಅವರು ಉತ್ಪಾದನೆಯ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಾರೆ. ಸರಕು ಸೇವೆಗಳನ್ನು (ಉತ್ಪಾದನೆ ಎಂದು ಉಲ್ಲೇಖಿಸಲಾಗಿದೆ) ಉತ್ಪಾದಿಸಲು ಅವರಿಗಿರುವ ಉತ್ತೇಜನವೆಂದರೆ ಅವುಗಳನ್ನು ಮಾರಾಟಮಾಡಿ ಲಾಭಗಳಿಸುವುದು. ಈ ಪಕ್ರಿಯೆಯಲ್ಲಿ ಅವರು ಗಂಡಾಂತರಗಳನ್ನು ಮತ್ತು ಅನಿಶ್ಚತೆಗಳನ್ನು ನಿಭಾಯಿಸುತ್ತಾರೆ. ಉದಹರಣೆಗೆ ಅವರು ಉತ್ಪಾದಿಸುತ್ತಿರುವ ಸರಕುಗಳಿಗೆ ಸಾಕಷ್ಟು ಹೆಚ್ಚಿನ ಬೆಲೆಯನ್ನು ಅವರು ಪಡೆಯುವುದಿಲ್ಲ; ಇದು ಅವರು ಗಳಿಸುವ ಲಾಭದ ಇಳಿಕೆಗೆ ಕಾರಣವಾಗುತ್ತದೆ. ಒಂದು ಬಂಡವಾಳಶಾಹಿ ದೇಶದಲ್ಲಿ ಉತ್ಪಾದನಾಂಗಗಳು ಮಾರುಕಟ್ಟೆಯಲ್ಲಿ ಉತ್ಪನ್ನಗಳ ಉತ್ಪಾದನೆ ಮತ್ತು ಮಾರಾಟದ ಪ್ರಕ್ರಿಯೆಯ ಮೂಲಕ ತಮ್ಮ ಲಾಭವನ್ನು ಗಳಿಸುತ್ತವೆ ಎನ್ನುವುದನ್ನು ಗಮನಿಸಲಾಗುತ್ತದೆ.

ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳೆರಡರಲ್ಲೂ, ಖಾಸಗಿ ಬಂಡವಾಳಶಾಹಿ ವಲಯದ ಹೊರತಾಗಿ, ರಾಜ್ಯವೆಂಬ ಸಂಸ್ಥೆಯು ಅಲ್ಲಿರುತ್ತದೆ. ರಾಜ್ಯದ ಪಾತ್ರವು ಶಾಸನಗಳನ್ನು ರೂಪಿಸುವುದು, ಅವುಗಳನ್ನು ಜಾರಿಗೆ ತರುವುದು ಮತ್ತು ನ್ಯಾಯದಾನ ಮಾಡುತ್ತಿರುವುದನ್ನು ಒಳಗೊಂಡಿರುತ್ತದೆ. ತೆರಿಗೆ

ವಿಧಿಸುವುದು ಮತ್ತು ಸಾರ್ವಜನಿಕ ಮೂಲಸೌಕರ್ಯಗಳ ನಿರ್ಮಾಣ, ಶಾಲಾ–ಕಾಲೇಜುಗಳನ್ನು ನಡೆಸುವುದು, ಆರೋಗ್ಯ ಸೇವೆಗಳನ್ನು ಒದಗಿಸುವುದು ಇತ್ಯಾದಿಗಳಿಗೆ ಹಣವನ್ನು ಖರ್ಚು ಮಾಡುವುದಲ್ಲದೆ **ರಾಜ್ಯವು** ಉತ್ಪಾದನೆಯನ್ನೂ ನಿರ್ವಹಿಸುವ ಹಲವು ನಿದರ್ಶನಗಳಿವೆ. ನಾವು ದೇಶದ ಅರ್ಥವ್ಯವಸ್ಥೆಯನ್ನು ವಿವರಿಸಲು ಬಯಸುವಾಗ ರಾಜ್ಯದ ಈ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ಅನುಕೂಲತೆಗಾಗಿ ರಾಜ್ಯವನ್ನು ಸೂಚಿಸಲು ಸರಕಾರ ಎನ್ನುವ ಪದವನ್ನು ಬಳಸೋಣ.

ಉದ್ಯಮಗಳು ಮತ್ತು ಸರಕಾರವಲ್ಲದೆ **ಕುಟುಂಬ ವಲಯ** ಎಂದು ಕರೆಯಲಾಗುವ ಇನ್ನೊಂದು ಪ್ರಮುಖ ವಲಯ ಅರ್ಥವ್ಯವಸ್ಥೆಯಲ್ಲಿದೆ. ಕುಟುಂಬ ಎಂದರೆ ಅವರ ಸ್ವಂತ ಅನುಭೋಗಕ್ಕೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳುವ ಒಬ್ಬ ವ್ಯಕ್ತಿ ಅಥವಾ ಅನುಭೋಗಕ್ಕೆ ಸಂಬಂಧಿಸಿದ ತೀರ್ಮಾನಗಳನ್ನು ಜಂಟಿಯಾಗಿ ನಿರ್ಧರಿಸುವ ವ್ಯಕ್ತಿಗಳ ಸಮೂಹ. ಕುಟುಂಬವೂ ಕೂಡಾ ಉಳಿಸುತ್ತದೆ ಮತ್ತು ತೆರಿಗೆಯನ್ನು ಪಾವತಿಸುತ್ತದೆ. ಈ ಎಲ್ಲಾ ಚಟುವಟಿಕೆಗಳಿಗೆ ಅವರು ಹಣವನ್ನು ಹೇಗೆ ಪಡೆಯುತ್ತಾರೆ? ಕುಟುಂಬವು ಜನರನ್ನು ಒಳಗೊಂಡಿದೆ ಎನ್ನುವುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಈ ಜನರು ಉದ್ಯಮಗಳಲ್ಲಿ ಕಾರ್ಮಿಕರಾಗಿ ಕೆಲಸ ಮಾಡಿ ಕೂಲಿಯನ್ನು ಸಂಪಾದಿಸುತ್ತಾರೆ. ಅವರು ಸರಕಾರದ ಇಲಾಖೆಗಳಲ್ಲಿ ಕೆಲಸ ಮಾಡಿ ವೇತನವನ್ನು ಗಳಿಸುತ್ತಾರೆ. ಅವರು ಉದ್ಯಮಗಳ ಮಾಲೀಕರಾಗಿರುತ್ತಾರೆ ಮತ್ತು ಲಾಭವನ್ನು ಗಳಿಸುತ್ತಾರೆ. ಕುಟುಂಬದವರಿಂದ ಬರುವ ಬೇಡಿಕೆ ಇಲ್ಲದೆ, ಉದ್ಯಮಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವಂತಹ ಮಾರುಕಟ್ಟೆ ನಿಜವಾಗಿಯೂ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ.

ನಾವು ಇಲ್ಲಿಯವರೆಗೆ ಆಂತರಿಕ ಅರ್ಥವ್ಯವಸ್ಥೆಯಲ್ಲಿನ ಪ್ರಮುಖ ಘಟಕಗಳ (ಆಟಗಾರರ) ಕುರಿತು ವಿವರಿಸಿದ್ದೇವೆ. ಆದರೆ ಜಗತ್ತಿನ ಎಲ್ಲಾ ರಾಷ್ಟ್ರಗಳೂ ಕೂಡಾ ವಿದೇಶಿ ವ್ಯಾಪಾರದಲ್ಲಿ ತೊಡಗಿವೆ. ಬಾಹ್ಯ ವಲಯವು ನಮ್ಮ ಅಧ್ಯಯನದಲ್ಲಿನ ನಾಲ್ಕನೇ ಪ್ರಮುಖ ವಲಯವಾಗಿದೆ. ಬಾಹ್ಯ ವಲಯದೊಂದಿಗಿನ ವ್ಯಾಪಾರವು ಎರಡು ವಿಧದಲ್ಲಿರುತ್ತದೆ.

1. ಸ್ವದೇಶವು ಜಗತ್ತಿನ ಇತರೆ ರಾಷ್ಟ್ರಗಳಿಗೆ ಸರಕುಗಳನ್ನು ಮಾರಬಹುದು. ಇವುಗಳನ್ನೇ **ರಫ್ತುಗಳು** ಎಂದು ಕರೆಯಲಾಗುತ್ತದೆ.
2. ಅರ್ಥವ್ಯವಸ್ಥೆಯು ಜಗತ್ತಿನ ಇತರ ದೇಶಗಳಿಂದ ಕೂಡಾ ಸರಕುಗಳನ್ನು ಖರೀದಿಸಬಹುದು. ಇವುಗಳನ್ನು **ಆಮದುಗಳು** ಎಂದು ಕರೆಯಲಾಗುತ್ತದೆ. ರಫ್ತು ಮತ್ತು ಆಮದುಗಳಲ್ಲದೆ, ಜಗತ್ತಿನ ಇತರ ದೇಶಗಳು ದೇಶೀಯ ಅರ್ಥವ್ಯವಸ್ಥೆಯ ಮೇಲೆ ಇತರ ರೀತಿಯಲ್ಲೂ ಪರಿಣಾಮ ಬೀರುತ್ತವೆ.
3. ಬಂಡವಾಳವು ವಿದೇಶಗಳಿಂದ ದೇಶೀಯ ಅರ್ಥವ್ಯವಸ್ಥೆಯೊಳಗೆ ಹರಿದು ಬರಬಹುದು. ಅಥವಾ ದೇಶೀಯ ಅರ್ಥವ್ಯವಸ್ಥೆಯು ವಿದೇಶಗಳಿಗೆ ಬಂಡವಾಳವನ್ನು ರಫ್ತು ಮಾಡಬಹುದು.


**ಸಾರಾಂಶ *Summary***

ಸಮಗ್ರ ಅರ್ಥಶಾಸ್ತ್ರವು ಒಂದು ಅರ್ಥವ್ಯವಸ್ಥೆಯ ಸಮಗ್ರ ಆರ್ಥಿಕ ಚಲಕಗಳ ಕುರಿತು ಅಧ್ಯಯನ ಮಾಡುತ್ತದೆ. ಒಂದು ಆರ್ಥಿಕತೆಯ ಬೇರೆ ಬೇರೆ ವಲಯಗಳ ನಡುವೆ ಇರಬಹುದಾದ ವಿವಿಧ ಆಂತರಿಕ ಜೋಡಣೆಗಳನ್ನೂ ಕೂಡಾ ಇದು ಪರಿಗಣಿಸುತ್ತದೆ. ಈ ಅಂಶವು, ಆರ್ಥಿಕತೆಯ ಇತರೆ ಎಲ್ಲವೂ ಯಥಾಸ್ಥಿತಿಯಲ್ಲಿದೆ ಎಂದು ಕಲ್ಪಿಸಿಕೊಳ್ಳುತ್ತಾ ಅರ್ಥವ್ಯವಸ್ಥೆಯ ನಿರ್ದಿಷ್ಟ ವಲಯಗಳ ಕಾರ್ಯವಿಧಾನವನ್ನು ಹೆಚ್ಚಾಗಿ ಪರೀಕ್ಷಿಸುವ ಸೂಕ್ಷ್ಮ ಅರ್ಥಶಾಸ್ತ್ರದಿಂದ, ಇದನ್ನು ಪ್ರತ್ಯೇಕಿಸುತ್ತದೆ. ಕೇನ್ಸ್‌ರವರಿಂದಾಗಿ ಸಮಗ್ರ ಅರ್ಥಶಾಸ್ತ್ರವು 1930 ರಲ್ಲಿ ಪ್ರತ್ಯೇಕ ವಿಷಯವಾಗಿ ಉದಯವಾಯಿತು. ಮುಂದುವರಿದ ದೇಶಗಳ ಆರ್ಥಿಕತೆಗಳಿಗೆ ಭಾರೀ ಹೊಡೆತ ನೀಡಿದ ಮಹಾ ಆರ್ಥಿಕ ಕುಸಿತವು ಕೇನ್ಸ್‌ರವರಿಗೆ, ಅವರ ಬರವಣಿಗೆಗಳಿಗೆ ಸ್ಫೂರ್ತಿಯನ್ನು ಒದಗಿಸಿದೆ. ಈ ಪುಸ್ತಕದಲ್ಲಿ ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯ ಕಾರ್ಯವೈಖರಿಯನ್ನು ನಾವು ಹೆಚ್ಚಾಗಿ ಅಧ್ಯಯನ ಮಾಡೋಣ. ಹೀಗಾಗಿ, ಇದು ಅಭಿವೃದ್ಧಿಶೀಲ ದೇಶಗಳ ಕಾರ್ಯ ವಿಧಾನವನ್ನು ಸಮಗ್ರವಾಗಿ ಹಿಡಿದುಕೊಡಲು ಸಮರ್ಥವಾಗುವುದಿಲ್ಲ. ಸಮಗ್ರ ಅರ್ಥಶಾಸ್ತ್ರವು ಒಂದು ಅರ್ಥವ್ಯವಸ್ಥೆಯನ್ನು ನಾಲ್ಕು ವಲಯಗಳ ಸಂಯೋಜನೆಯಾಗಿ ಕಾಣುತ್ತದೆ, ಅಂದರೆ ಕುಟುಂಬ, ಉದ್ಯಮಗಳು, ಸರಕಾರ ಮತ್ತು ಬಾಹ್ಯ ವಲಯ.

## ಪ್ರಮುಖ ಪರಿಭಾಷೆಗಳು *Key Concepts*

| | |
|---|---|
| ಬಡ್ಡಿಯ ದರ | ಕೂಲಿಯ ದರ |
| ಲಾಭಗಳು | ಆರ್ಥಿಕ ಏಜೆಂಟ್‌ಗಳು ಅಥವಾ ಘಟಕಗಳು |
| ಮಹಾ ಆರ್ಥಿಕ ಕುಸಿತ | ನಿರುದ್ಯೋಗ ದರ |
| ನಾಲ್ಕು ಉತ್ಪಾದನಾಂಗಗಳು | ಉತ್ಪಾದನಾ ಸಾಧನಗಳು |
| ಹೂಡುವಳಿಗಳು (ಆದಾನಗಳು) | ಭೂಮಿ |
| ಶ್ರಮ | ಬಂಡವಾಳ |
| ಉದ್ಯಮ ಶೀಲತೆ | ಹೂಡಿಕೆ ವೆಚ್ಚ |
| ಕೂಲಿಕಾರ್ಮಿಕ | ಬಂಡವಾಳಶಾಹಿ ದೇಶ ಅಥವಾ ಬಂಡವಾಳಶಾಹಿ ಅರ್ಥವ್ಯವಸ್ಥೆ |
| ಉದ್ಯಮಗಳು | ಬಂಡವಾಳಶಾಹಿ ಉದ್ಯಮಗಳು |
| ಉತ್ಪನ್ನ | ಕುಟುಂಬಗಳು |
| ಸರಕಾರ | ಬಾಹ್ಯ ವಲಯ |
| ರಫ್ತುಗಳು | ಆಮದುಗಳು |

## ಅಭ್ಯಾಸಗಳು *Exercises*

1. ಸೂಕ್ಷ್ಮ ಅರ್ಥಶಾಸ್ತ್ರ ಮತ್ತು ಸಮಗ್ರ ಅರ್ಥಶಾಸ್ತ್ರದ ನಡುವಿನ ವ್ಯತ್ಯಾಸವೇನು?
2. ಬಂಡವಾಳಶಾಹಿ ಅರ್ಥವ್ಯವಸ್ಥೆಯ ಪ್ರಮುಖ ಲಕ್ಷಣಗಳಾವುವು?
3. ಸಮಗ್ರ ಅರ್ಥಶಾಸ್ತ್ರದ ದೃಷ್ಟಿಕೋನದ ಪ್ರಕಾರ ಆರ್ಥಿಕತೆಯ ನಾಲ್ಕು ಪ್ರಮುಖ ವಲಯಗಳನ್ನು ವಿವರಿಸಿ.
4. 1929 ರ ಮಹಾ ಆರ್ಥಿಕ ಕುಸಿತವನ್ನು ವಿವರಿಸಿ

## ಸೂಚಿತ ಅಧ್ಯಯನಗಳು *Suggested Readings*


1. Bhaduri, A., 1990. Macroeconomics: The Dynamics of Commodity Production, pages 1 – 27, Macmillan India Limited, New Delhi.
2. Mankiw, N. G., 2000. Macroeconomics, pages 2 – 14, Macmillan Worth Publishers, New York.


❖ ❖ ❖ ❖

# ಅಧ್ಯಾಯ 2



# ರಾಷ್ಟ್ರೀಯ ವರಮಾನ ಲೆಕ್ಕಚಾರ

## *National Income Accounting*

ಈ ಅಧ್ಯಾಯದಲ್ಲಿ ನಾವು ಒಂದು ಸರಳ ಆರ್ಥಿಕತೆಯ ಮೂಲಭೂತ ಕಾರ್ಯನಿರ್ವಹಣೆಯನ್ನು ಪರಿಚಯಿಸುತ್ತೇವೆ. ವಿಭಾಗ 2.1 ರಲ್ಲಿ ನಾವು ಕಾರ್ಯನಿರ್ವಹಿಸುವ ಕೆಲವು ಪ್ರಾಥಮಿಕ ವಿಚಾರಗಳನ್ನು ವಿವರಿಸುತ್ತೇವೆ. ಇಡೀ ಆರ್ಥಿಕತೆಯ ಸಮಗ್ರ ಆದಾಯವು ಆರ್ಥಿಕತೆಯ ವಿವಿಧ ವಲಯಗಳ ಮೂಲಕ ಸಾಗುವುದನ್ನು ನೋಡುವುದು ಹೇಗೆಂದು ವಿಭಾಗ 2.2 ರಲ್ಲಿ ವಿವರಿಸುತ್ತೇವೆ. ರಾಷ್ಟ್ರೀಯ ಆದಾಯವನ್ನು ಲೆಕ್ಕಚಾರ ಮಾಡುವ ಮೂರು ವಿಧಾನಗಳನ್ನೂ ಸಹ ಇದೇ ವಿಭಾಗವು ವಿವರಿಸುತ್ತದೆ. ಅವುಗಳೆಂದರೆ ಉತ್ಪನ್ನದ ವಿಧಾನ, ವೆಚ್ಚದ ವಿಧಾನ ಮತ್ತು ಆದಾಯದ ವಿಧಾನ. ಕೊನೆಯ ವಿಭಾಗವಾದ 2.3, ರಾಷ್ಟ್ರೀಯ ಆದಾಯದ ವಿವಿಧ ಉಪವಿಭಾಗಗಳನ್ನು ವಿವರಿಸುತ್ತದೆ. ಇದು ವಿಭಿನ್ನ ಬೆಲೆಯ ಸೂಚ್ಯಂಕಗಳಾದ ಜಿ.ಡಿ.ಪಿ. ಅನಪ್ರಸರಣಕ, ಗ್ರಾಹಕ ಬೆಲೆ ಸೂಚ್ಯಂಕ, ಸಗಟು ಬೆಲೆಸೂಚ್ಯಂಕಗಳನ್ನು ಸಹ ವ್ಯಾಖ್ಯಾನಿಸುತ್ತದೆ ಮತ್ತು ರಾಷ್ಟ್ರದ ಜನರ ಸಮಗ್ರ ಕಲ್ಯಾಣದ ಸೂಚಕವಾಗಿ ರಾಷ್ಟ್ರದ ಜಿಡಿಪಿಯನ್ನು ಪರಿಗಣಿಸುವುದಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಚರ್ಚಿಸುತ್ತದೆ.

## 2.1 ಸಮಗ್ರ ಅರ್ಥಶಾಸ್ತ್ರದ ಕೆಲವು ಮೂಲಭೂತ ಪರಿಕಲ್ಪನೆಗಳು
### *Some Basic Concepts Of Macroeconomics*

ಅರ್ಥಶಾಸ್ತ್ರ ವಿಷಯದ ಪ್ರವರ್ತಕರಲ್ಲಿ ಒಬ್ಬರಾದ, ಆಡಂ ಸ್ಮಿತ್ ಅವರು ತಮ್ಮ ಅತ್ಯಂತ ಪ್ರಭಾವಶಾಲಿ ಕೃತಿಗೆ – 'ರಾಷ್ಟ್ರಗಳ ಸಂಪತ್ತಿನ ಸ್ವರೂಪ ಮತ್ತು ಕಾರಣಗಳ ಒಂದು ಪರಿಶೀಲನೆ' ಎಂದು ಹೆಸರಿಸಿದರು. ಯಾವುದು ಒಂದು ದೇಶದ ಆರ್ಥಿಕ ಸಂಪತ್ತನ್ನು ಸೃಷ್ಟಿಸುತ್ತದೆ? ಯಾವುದು ದೇಶಗಳನ್ನು ಶ್ರೀಮಂತ ಅಥವಾ ಬಡ ದೇಶಗಳನ್ನಾಗಿ ಮಾಡುತ್ತದೆ? ಇವು ಅರ್ಥಶಾಸ್ತ್ರದ ಕೆಲವು ಪ್ರಮುಖ ಪ್ರಶ್ನೆಗಳಾಗಿವೆ. ಹೇರಳವಾದ ನೈಸರ್ಗಿಕ ಸಂಪತ್ತು – ಖನಿಜಗಳು ಅಥವಾ ಅರಣ್ಯಗಳು ಅಥವಾ ಹೆಚ್ಚು ಫಲವತ್ತಾದ ಭೂಸಂಪತ್ತಿನಿಂದ ಕೂಡಿದ ರಾಷ್ಟ್ರಗಳು ಸ್ವಾಭಾವಿಕವಾಗಿ ಶ್ರೀಮಂತ ರಾಷ್ಟ್ರಗಳಾಗಿರುವುದಿಲ್ಲ. ವಾಸ್ತವವಾಗಿ ಸಂಪನ್ಮೂಲಗಳಲ್ಲಿ ಶ್ರೀಮಂತವಾಗಿರುವ ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಗಳು ಜಗತ್ತಿನ ಕೆಲವು ಅತ್ಯಂತ ಬಡ ರಾಷ್ಟ್ರಗಳನ್ನು ಹೊಂದಿವೆ. ಆದರೆ ಅನೇಕ ಶ್ರೀಮಂತ ದೇಶಗಳು ವಿರಳ ನೈಸರ್ಗಿಕ ಸಂಪತ್ತನ್ನು ಹೊಂದಿವೆ. ನೈಸರ್ಗಿಕ ಸಂಪನ್ಮೂಲಗಳ ಒಡೆತನವನ್ನು ಪ್ರಮುಖವಾಗಿ ಪರಿಗಣಿಸುವ ಕಾಲವೊಂದಿತ್ತು. ಆದರೆ ಆಗಲೂ ಸಹ ಸಂಪನ್ಮೂಲಗಳನ್ನು ಉತ್ಪಾದನಾ ಪ್ರಕ್ರಿಯೆಯ ಮೂಲಕ ರೂಪಾಂತರಿಸಬೇಕಾಗಿತ್ತು.

ಹೀಗೆ ಒಂದು ದೇಶದ ಆರ್ಥಿಕ ಸಂಪತ್ತು ಅಥವಾ ಯೋಗಕ್ಷೇಮ ಕೇವಲ ಸಂಪನ್ಮೂಲಗಳ ಒಡೆತನದ ಮೇಲೆ ಅವಲಂಬಿತವಾಗಿರಬೇಕೆಂದಿಲ್ಲ; ಉತ್ಪಾದನೆಯ ಹರಿವನ್ನು ಸೃಷ್ಟಿಸುವಲ್ಲಿ ಈ ಸಂಪನ್ಮೂಲಗಳು ಹೇಗೆ ಬಳಕೆಯಾಗುತ್ತಿವೆ ಮತ್ತು ಈ ಪ್ರಕ್ರಿಯೆಯ ಪರಿಣಾಮವಾಗಿ ಆದಾಯ ಮತ್ತು ಸಂಪತ್ತು ಹೇಗೆ ಉತ್ಪತ್ತಿಯಾಗುತ್ತದೆ ಎಂಬುದು ಮುಖ್ಯವಾದ ಅಂಶವಾಗಿದೆ.

ಈಗ ನಾವು ಈ ಉತ್ಪಾದನೆಯ ಹರಿವಿನ ಕುರಿತು ವಿಸ್ತಾರವಾಗಿ ಯೋಚಿಸೋಣ. ಈ ಉತ್ಪಾದನೆಯ ಹರಿವು ಹೇಗೆ ಉದ್ಭವಿಸುತ್ತದೆ? ನೈಸರ್ಗಿಕ ಮತ್ತು ಮಾನವ ನಿರ್ಮಿತ ಪರಿಸರದೊಂದಿಗೆ ಒಂದು ನಿರ್ದಿಷ್ಟ ಸಾಮಾಜಿಕ ಮತ್ತು ತಾಂತ್ರಿಕ ರಚನೆಯೊಳಗೆ ಉತ್ಪಾದನಾ ಹರಿವನ್ನು ನಿರ್ಮಿಸಲು ಜನರು ತಮ್ಮ ಶಕ್ತಿಗಳನ್ನು ಸಂಯೋಜಿಸುತ್ತಾರೆ.

ನಮ್ಮ ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಈ ಉತ್ಪಾದನಾ ಹರಿವು ಸರಕುಗಳ ಉತ್ಪಾದನೆಯಿಂದ – ಲಕ್ಷಾಂತರ ಸಣ್ಣ ಮತ್ತು ದೊಡ್ಡ ಉದ್ಯಮಗಳು ಉತ್ಪಾದಿಸುವ ಸರಕು ಮತ್ತು ಸೇವೆಗಳ ಉತ್ಪಾದನೆಯಿಂದ – ಉಂಟಾಗುತ್ತದೆ. ಈ ಉದ್ಯಮ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯ ಜನರನ್ನು ನೇಮಿಸಿಕೊಳ್ಳುವ ದೈತ್ಯ ನಿಗಮಗಳಿಂದ ಹಿಡಿದು ಒಬ್ಬನೇ ಉದ್ಯಮಿ ಇರುವ ಸಂಸ್ಥೆಗಳನ್ನೂ ಒಳಗೊಂಡಿವೆ. ಆದರೆ ಉತ್ಪಾದನೆಯಾದ ನಂತರ ಈ ಸರಕುಗಳು ಏನಾಗುತ್ತವೆ? ಸರಕುಗಳ ಪ್ರತಿಯೊಬ್ಬ ಉತ್ಪಾದಕರು ತಮ್ಮ ಉತ್ಪನ್ನವನ್ನು ಮಾರಾಟ ಮಾಡಲು ಬಯಸುತ್ತಾರೆ. ಆದ್ದರಿಂದ ಗುಂಡುಸೂಜಿಯಂತಹ ಅತ್ಯಂತ ಚಿಕ್ಕ ವಸ್ತುಗಳಿಂದ ಆರಂಭಿಸಿ ದೊಡ್ಡ ಸರಕುಗಳಾದ ವಿಮಾನಗಳು, ಆಟೋಮೊಬೈಲ್‌ಗಳು ದೈತ್ಯ ಯಂತ್ರೋಪಕರಣಗಳು ಅಥವಾ ಮಾರಾಟ ಯೋಗ್ಯ ಸೇವೆಗಳಾದ ವೈದ್ಯರು, ವಕೀಲರು ಅಥವಾ ಹಣಕಾಸಿನ ಸಲಹೆಗಾರರು – ಉತ್ಪಾದಿಸಿದ ಯಾವುದೇ ಸರಕು ಮತ್ತು ಸೇವೆಗಳನ್ನು ಅನುಭೋಗಿಗಳಿಗೆ ಮಾರಾಟ ಮಾಡಬೇಕಾಗುತ್ತದೆ. ಅನುಭೋಗಿ, ಒಬ್ಬ ವ್ಯಕ್ತಿ ಅಥವಾ ಒಂದು ಉದ್ಯಮ ಸಂಸ್ಥೆಯಾಗಿರಬಹುದು ಮತ್ತು ಖರೀದಿಸಿದ ಸರಕು ಅಥವಾ ಸೇವೆ ಅಂತಿಮ ಬಳಕೆಗಾಗಿರಬಹುದು ಅಥವಾ ಮುಂದಿನ ಉತ್ಪಾದನೆಗಾಗಿರಬಹುದು. ಅದನ್ನು ಮುಂದಿನ ಉತ್ಪಾದನೆಯಲ್ಲಿ ಬಳಸಿದಾಗ ಅದು ತನ್ನ ನಿರ್ಧಿಷ್ಟ ಸರಕಿನ ಗುಣ ಲಕ್ಷಣಗಳನ್ನು ಕಳೆದುಕೊಳ್ಳುತ್ತದೆ ಮತ್ತು ಉತ್ಪಾದನಾ ಪ್ರಕ್ರಿಯೆ ಮೂಲಕ ಮತ್ತೊಂದು ಸರಕಾಗಿ ರೂಪಾಂತರಗೊಳ್ಳುತ್ತದೆ. ಹೀಗೆ ಹತ್ತಿ ಉತ್ಪಾದಿಸುವ ರೈತರು ಹತ್ತಿಯನ್ನು ನೂಲುವ ಗಿರಣಿಗೆ ಮಾರಾಟ ಮಾಡುತ್ತಾರೆ, ಅಲ್ಲಿ ಕಚ್ಚಾ ಹತ್ತಿಯು ನೂಲಿನ ರೂಪಾಂತರಕ್ಕೆ ಒಳಗಾಗುತ್ತದೆ; ಪ್ರತಿಯಾಗಿ ನೂಲು, ಜವಳಿ ಗಿರಣಿಗೆ ಮಾರಾಟವಾದಾಗ, ಅಲ್ಲಿ ಉತ್ಪಾದನಾ ಪ್ರಕ್ರಿಯೆಯ ಮೂಲಕ ಅದನ್ನು ಬಟ್ಟೆಯಾಗಿ ಮಾರ್ಪಡಿಸಲಾಗುತ್ತದೆ; ಪ್ರತಿಯಾಗಿ ಈ ಬಟ್ಟೆ ಮತ್ತೊಂದು ಉತ್ಪಾದನಾ ಪ್ರಕ್ರಿಯೆಯ ಮೂಲಕ ಸರಕಾಗಿ ರೂಪಾಂತರಗೊಳ್ಳುತ್ತದೆ, ತದನಂತರ ಅಂತಿಮವಾಗಿ ಅನುಭೋಗಿಗಳಿಗೆ ಅಂತಿಮ ಬಳಕೆಗಾಗಿ ಮಾರಾಟ ಮಾಡಲು ಸಿದ್ಧವಾಗುತ್ತದೆ. ಅಂತಿಮ ಬಳಕೆಯ ಉದ್ದೇಶವನ್ನೊಳಗೊಂಡಿರುವ ಯಾವುದೇ ರೂಪಾಂತರ ಅಥವಾ ಉತ್ಪಾದನೆಯ ಇತರ ಹಂತಗಳ ಮೂಲಕ ಹಾದುಹೋಗದೇ ಇರುವ ಒಂದು ಸರಕನ್ನು **ಅಂತಿಮ ಸರಕೆಂದು** ಕರೆಯಲಾಗುತ್ತದೆ.





ನಾವು ಇದನ್ನು ಅಂತಿಮ ಸರಕು ಎಂದು ಏಕೆ ಕರೆಯುತ್ತೇವೆ? ಏಕೆಂದರೆ ಒಮ್ಮೆ ಇದು ಮಾರಾಟವಾದ ಮೇಲೆ ಇದು ಕ್ರಿಯಾಶೀಲ ಆರ್ಥಿಕ ಹರಿವನ್ನು ದಾಟಿ ಹೋಗುತ್ತದೆ. ಇದು ಯಾವುದೇ ಉತ್ಪಾದಕನ ಕೈಯಲ್ಲಿ ಮುಂದಿನ ರೂಪಾಂತರಕ್ಕೆ ಒಳಗಾಗುವುದಿಲ್ಲ. ಆದಾಗ್ಯೂ, ಅಂತಿಮ ಖರೀದಿದಾರನ ಕ್ರಿಯೆಯಿಂದ ರೂಪಾಂತರಕ್ಕೆ ಒಳಗಾಗಬಹುದು. ವಾಸ್ತವವಾಗಿ ಇಂತಹ ಹಲವಾರು ಅಂತಿಮ ಸರಕುಗಳು ಅವುಗಳ ಅನುಭೋಗದ ಸಂದರ್ಭದಲ್ಲಿ ರೂಪಾಂತರಗೊಳ್ಳುತ್ತವೆ. ಹೀಗಾಗಿ, ಅನುಭೋಗಿಗಳು ಖರೀದಿಸಿದ ಚಹಾದ ಎಲೆಗಳು ಅದೇ ರೂಪದಲ್ಲಿ ಬಳಸಲ್ಪಡುವುದಿಲ್ಲ – ಸೇವಿಸಬಹುದಾದ ಚಹಾವನ್ನು ತಯಾರಿಸಲು ಅವುಗಳನ್ನು ಬಳಸಲಾಗುತ್ತದೆ, ಇದೇ ತರಹ ನಮ್ಮ ಅಡುಗೆ ಮನೆ ಪ್ರವೇಶಿಸುವ ಹೆಚ್ಚಿನ ವಸ್ತುಗಳು ಪಾಕ ಪ್ರಕ್ರಿಯೆ ಮೂಲಕ ರೂಪಾಂತರಗೊಳ್ಳುತ್ತವೆ. ಆದರೆ ಉತ್ಪನ್ನ ರೂಪಾಂತರಕ್ಕೆ ಒಳಗಾದರೂ ಸಹ ಮನೆಯಲ್ಲಿ ಅಡುಗೆ ಮಾಡುವುದು ಆರ್ಥಿಕ ಚಟುವಟಿಕೆಯಲ್ಲ. ಮನೆಯಲ್ಲಿ ಬೇಯಿಸಿದ ಆಹಾರವನ್ನು ಮಾರುಕಟ್ಟೆಯಲ್ಲಿ ಮಾರಲಾಗುವುದಿಲ್ಲ. ಆದಾಗ್ಯೂ, ಬೇಯಿಸಿದ ಉತ್ಪನ್ನವನ್ನು ಗ್ರಾಹಕರಿಗೆ ಮಾರಲಾಗುವ ಹೋಟೆಲ್‌ನಲ್ಲಿ ಅದೇ ಅಡುಗೆ ಅಥವಾ ಚಹಾ ತಯಾರಿಸುವುದಾದರೆ, ಚಹಾ ಎಲೆಗಳಂತಹ ಅದೇ ವಸ್ತುಗಳು ಅಂತಿಮ ಸರಕುಗಳಾಗಿ ಉಳಿಯುವುದಿಲ್ಲ ಮತ್ತು ಇವುಗಳನ್ನು ಆರ್ಥಿಕ ಮೌಲ್ಯ ಸೇರ್ಪಡೆಯಾಗುವ (ಮೌಲ್ಯವರ್ಧಿತಗೊಳ್ಳುವ) ಅದಾನಗಳೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ, ಒಂದು ಸರಕು ಅಂತಿಮ ಸರಕಾಗುವುದು ಆ ಸರಕಿನ ಸ್ವರೂಪದಲ್ಲಿ ಇರುವುದಿಲ್ಲ ಬದಲಾಗಿ ಅದರ ಉಪಯೋಗದ ಆರ್ಥಿಕ ಸ್ವರೂಪದಲ್ಲಿರುತ್ತದೆ.

ಅಂತಿಮ ಸರಕುಗಳಲ್ಲಿ, ನಾವು **ಅನುಭೋಗಿ ಸರಕುಗಳು** ಹಾಗೂ **ಬಂಡವಾಳ ಸರಕುಗಳ** ನಡುವೆ ವ್ಯತ್ಯಾಸವನ್ನು ಗುರುತಿಸಬಹುದು. ಅನುಭೋಗಿಸಲಾಗುವ ಆಹಾರ ಮತ್ತು ಬಟ್ಟೆಯಂತಹ ಹಾಗೂ ಮನರಂಜನೆಯಂತಹ ಸೇವೆಗಳನ್ನು ಅವುಗಳ ಅಂತಿಮ ಅನುಭೋಗಿಗಳು ಖರೀದಿಸಿದಾಗ ಅವುಗಳನ್ನು ಅನುಭೋಗಿ ಸರಕುಗಳು ಅಥವಾ ಗ್ರಾಹಕ ಸರಕುಗಳು ಎಂದು ಕರೆಯುತ್ತಾರೆ (ಇದು ಅನುಭೋಗಿಸಲಾಗುವ

ಸೇವೆಗಳನ್ನು ಒಳಗೊಂಡಿದೆ. ಆದರೆ ಅನುಕೂಲಕ್ಕಾಗಿ ನಾವು ಅವುಗಳನ್ನು ಗ್ರಾಹಕ ಸರಕುಗಳೆಂದು ಉಲ್ಲೇಖಿಸಬಹುದು).

ನಂತರ ಉತ್ಪಾದನಾ ಪ್ರಕ್ರಿಯೆಯಲ್ಲಿ ಬಳಸಲಾಗುವ ಬಾಳಿಕೆ ಬರುವ ಗುಣವುಳ್ಳ ಇತರ ಸರಕುಗಳಿವೆ. ಇವುಗಳೆಂದರೆ ಉಪಕರಣಗಳು, ಸಲಕರಣೆಗಳು ಮತ್ತು ಯಂತ್ರಗಳು ಇವು ಇತರ ಸರಕುಗಳ ಉತ್ಪಾದನೆಯನ್ನು ಸಾಧ್ಯಗೊಳಿಸಿದರೂ ಉತ್ಪಾದನಾ ಪ್ರಕ್ರಿಯೆ ಸಂದರ್ಭದಲ್ಲಿ ಸ್ವತ: ರೂಪಾಂತರಗೊಳ್ಳುವುದಿಲ್ಲ. ಇವು ಅಂತಿಮ ಅನುಭೋಗದ ಸರಕುಗಳಾಗಿದ್ದರೂ ಸಹ ಅಂತಿಮವಾಗಿ ಬಳಸುವ ಸರಕುಗಳಲ್ಲ. ನಾವು ಮೇಲೆ ಪರಿಗಣಿಸಿದ ಅಂತಿಮ ಸರಕುಗಳಂತಲ್ಲದೇ, ಇವು ಉತ್ಪಾದನೆಗೆ ನೆರವಾಗುವ ಮತ್ತು ಸಕ್ರಿಯಗೊಳಿಸುವ ಯಾವುದೇ ಉತ್ಪಾದನಾ ಪ್ರಕ್ರಿಯೆಯಲ್ಲಿ ನಿರ್ಣಾಯಕ ಬೆನ್ನೆಲುಬಾಗಿರುತ್ತವೆ. ಈ ಸರಕುಗಳು ಒಂದು ಉತ್ಪಾದನಾ ಉದ್ಯಮ ಸಂಸ್ಥೆಯು ಹೂಡಿಕೆ ಮಾಡಿದ ನಿರ್ಣಾಯಕ ಉತ್ಪಾದನಾಂಗಗಳಲ್ಲಿ ಒಂದಾಗಿದ್ದು, ಬಂಡವಾಳದ ಒಂದು ಭಾಗವಾಗುತ್ತವೆ ಮತ್ತು ಉತ್ಪಾದನೆಯ ನಿರಂತರ ಸುತ್ತುಗಳನ್ನು ಸಾಧ್ಯವಾಗಿಸುತ್ತಾ ಉತ್ಪಾದನೆಯ ಪ್ರಕ್ರಿಯೆಯನ್ನು ಮುಂದುವರೆಸಿಕೊಂಡು ಹೋಗುವುದನ್ನು ಸಾಧ್ಯಗೊಳಿಸುತ್ತದೆ. ಇವು ಬಂಡವಾಳ ಸರಕುಗಳಾಗಿವೆ ಮತ್ತು ಅವು ಕ್ರಮೇಣ ಸವಕಳಿಗೆ ಒಳಗಾಗುವುದರಿಂದ ಕಾಲಾನಂತರದಲ್ಲಿ ದುರಸ್ತಿಗೊಳಪಡುತ್ತವೆ ಅಥವಾ ನಿಧಾನವಾಗಿ ಬದಲಿಸಬೇಕಾಗುತ್ತದೆ. ಹೀಗೆ ಕಾಲಾಂತರದಲ್ಲಿ ಒಂದು ಅರ್ಥವ್ಯವಸ್ಥೆ ಹೊಂದಿರುವ ಬಂಡವಾಳದ ದಾಸ್ತಾನನ್ನು ಸಂರಕ್ಷಿಸಿ ನಿರ್ವಹಿಸಲಾಗುತ್ತದೆ ಮತ್ತು ಭಾಗಶಃ ಅಥವಾ ಪೂರ್ಣವಾಗಿ ನವೀಕರಿಸಲಾಗುತ್ತದೆ. ಇದು ನಮ್ಮ ಮುಂದಿನ ಚರ್ಚೆಯಲ್ಲಿ ಮಹತ್ವದ್ದಾಗಿದೆ.

ಗಮನಿಸಬೇಕಾದ ಒಂದು ಅಂಶವೆಂದರೆ, ಟೆಲಿವಿಷಟನ್ ಸೆಟ್‌ಗಳು, ವಾಹನಗಳು (ಆಟೋಮೊಬೈಲ್) ಅಥವಾ ಕಂಪ್ಯೂಟರ್‌ಗಳಂತಹ ಕೆಲವು ಸರಕುಗಳು ಅಂತಿಮ ಬಳಕೆಗಾಗಿದ್ದರೂ ಅವುಗಳು ಬಂಡವಾಳ ಸರಕುಗಳೊಡನೆ ಒಂದು ಸಾಮಾನ್ಯ ಲಕ್ಷಣವನ್ನು ಹೊಂದಿವೆ. ಅದೆಂದರೆ ಅವು ಕೂಡ ಬಾಳಿಕೆ ಬರುವ ಸರಕುಗಳಾಗಿವೆ. ಅಂದರೆ ಅವು ತಕ್ಷಣದ ಅಥವಾ ಅಲ್ಪಾವಧಿಯ ಬಳಕೆಯಿಂದ ನಾಶವಾಗುವುದಿಲ್ಲವೆಂದು ಆಹಾರ ಅಥವಾ ಉಡುಪುಗಳಂತಹ ಸಾಮಗ್ರಿಗಳಿಗೆ ಹೋಲಿಸಿದರೆ ಅವು ಸಾಪೇಕ್ಷವಾಗಿ ದೀರ್ಘಾ ಬಾಳಿಕೆಯನ್ನು ಹೊಂದಿರುತ್ತವೆ. ಕ್ರಮೇಣ ಬಳಕೆ ಮಾಡುವಾಗ ಸವಕಳಿಯುಂಟಾಗಿ ಆಗಾಗ್ಗೆ ರಿಪೇರಿ ಮತ್ತು ಭಾಗಗಳ ಬದಲಿಕೆಯ ಅಗತ್ಯ ಉಂಟಾಗುತ್ತದೆ. ಅಂದರೆ, ಯಂತ್ರಗಳಂತೆ ಅವುಗಳನ್ನು ಸಂರಕ್ಷಣೆ, ನಿರ್ವಹಣೆ ಮತ್ತು ನವೀಕರಿಸಬೇಕಾಗುತ್ತದೆ. ಆದ್ದರಿಂದಲೇ ನಾವು ಇವುಗಳನ್ನು ಅನುಭೋಗಿ ಬಾಳಿಕೆಯ ಸರಕುಗಳೆಂದು ಕರೆಯುತ್ತೇವೆ.

ಹೀಗೆ ಒಂದು ನಿರ್ಧಿಷ್ಟ ಅವಧಿಯಲ್ಲಿ ಆರ್ಥಿಕತೆಯಲ್ಲಿ ಉತ್ಪಾದಿಸಿದ ಎಲ್ಲಾ ಅಂತಿಮ ಸರಕುಗಳು ಮತ್ತು ಸೇವೆಗಳು, ಅನುಭೋಗಿ ಸರಕುಗಳು (ಬಾಳಿಕೆ ಬರುವ ಮತ್ತು ಬಾಳಿಕೆ ಬಾರದ ಸರಕುಗಳೆರಡು) ಅಥವಾ ಬಂಡವಾಳ ಸರಕುಗಳ ರೂಪದಲ್ಲಿರುತ್ತವೆ. ಇವು ಅಂತಿಮ ಸರಕುಗಳಾಗಿರುವುದರಿಂದ ಮುಂದೆ ಆರ್ಥಿಕ ಪ್ರಕ್ರಿಯೆಯಲ್ಲಿ ಯಾವುದೇ ರೂಪಾಂತರಕ್ಕೆ ಒಳಗಾಗುವುದಿಲ್ಲ.

ಆರ್ಥಿಕತೆಯಲ್ಲಿ ಉತ್ಪಾದನೆಯಾದ ಒಟ್ಟು ಉತ್ಪನ್ನದಲ್ಲಿನ ದೊಡ್ಡ ಪ್ರಮಾಣದ ಉತ್ಪನ್ನಗಳು ಅಂತಿಮ ಅನುಭೋಗದಲ್ಲಿ ಅಂತ್ಯಗೊಳ್ಳುವುದಿಲ್ಲ ಮತ್ತು ಅವು ಬಂಡವಾಳ ಸರಕುಗಳೂ ಅಲ್ಲ. ಇಂತಹ ಸರಕಗಳನ್ನು ಇತರ ಉತ್ಪಾದಕರು ಆದಾನ ಸಾಮಗ್ರಿಗಳಾಗಿ ಬಳಸಬಹುದಾಗಿದೆ. ಉದಾಹರಣೆ, ವಾಹನಗಳ (ಆಟೋಮೊಬೈಲ್) ತಯಾರಿಕೆಯಲ್ಲಿ ಬಳಸಲಾಗುವ ಉಕ್ಕಿನ ಹಾಳೆಗಳು ಮತ್ತು ಪಾತ್ರೆಗಳನ್ನು ಉತ್ಪಾದಿಸಲು ಬಳಸಲಾಗುವ ತಾಮ್ರ. ಇವು **ಮಧ್ಯಂತರ ಸರಕುಗಳಾಗಿವೆ.** ಇವುಗಳನ್ನು ಹೆಚ್ಚಾಗಿ ಇತರ ಸರಕುಗಳ ಉತ್ಪಾದನೆಗೆ ಕಚ್ಚಾ ಸಾಮಗ್ರಿಗಳನ್ನಾಗಿ ಅಥವಾ ಆದಾನಗಳಾಗಿ ಬಳಸಲಾಗುತ್ತದೆ. ಹೀಗಾಗಿ ಇವು ಅಂತಿಮ ಸರಕುಗಳಲ್ಲ.

ಈಗ, ಆರ್ಥಿಕತೆಯಲ್ಲಿ ಉತ್ಪಾದನೆಯ ಒಟ್ಟು ಹರಿವಿನ ವಿಸ್ತಾರವಾದ ಕಲ್ಪನೆಯನ್ನು ಪಡೆದುಕೊಳ್ಳಲು ಅರ್ಥವ್ಯವಸ್ಥೆಯಲ್ಲಿ ಉತ್ಪತ್ತಿಯಾದ ಅಂತಿಮ ಸರಕುಗಳ ಸಮಗ್ರ ಮಟ್ಟದ ಪರಿಮಾಣಾತ್ಮಕ ಮಾಪನವನ್ನು

ಹೊಂದುವ ಅಗತ್ಯವಿದೆ. ಆದಾಗ್ಯೂ, ಒಂದು ಪರಿಮಾಣಾತ್ಮಕ ಮೌಲ್ಯಮಾಪನ ಪಡೆಯಲು ಒಂದು ಆರ್ಥಿಕತೆಯಲ್ಲಿ ಉತ್ಪಾದನೆಯಾದ ಒಟ್ಟು ಅಂತಿಮ ಸರಕುಗಳು ಮತ್ತು ಸೇವೆಗಳ ಮಾಪನ ಮಾಡಲು ನಾವು ಸಾಮಾನ್ಯ ಅಳತೆಗೋಲನ್ನು ಹೊಂದಿರಬೇಕು ಎಂಬುದು ಸ್ಪಷ್ಟವಾಗಿದೆ. ಟನ್‌ಗಳಷ್ಟು ಅಕ್ಕಿ ಅಥವಾ ವಾಹನಗಳು ಅಥವಾ ಯಂತ್ರಗಳ ಸಂಖ್ಯೆಗೆ ನಾವು ತಯಾರಿಸಿದ ಮೀಟರ್‌ಗಳಷ್ಟು ಬಟ್ಟೆಯನ್ನು ಸೇರಿಸಲು ಸಾಧ್ಯವಿಲ್ಲ ಹಣ ನಮ್ಮ ಸಾಮಾನ್ಯ ಅಳತೆಗೋಲಾಗಿದೆ. ಇಲ್ಲಿ ಪ್ರತಿಯೊಂದೂ ಸರಕುಗಳು ಮಾರಾಟಕ್ಕಾಗಿ ಉತ್ಪಾದಿಸಲಾಗುವುದರಿಂದ ಈ ವೈವಿಧ್ಯಮಯ ಸರಕುಗಳ ಹಣದ ಒಟ್ಟು ಮೌಲ್ಯದ ಮೊತ್ತವು ನಮಗೆ ಅಂತಿಮ ಉತ್ಪನ್ನದ ಅಳತೆಯನ್ನು ನೀಡುತ್ತದೆ. ಆದರೆ, ನಾವು ಅಂತಿಮ ಸರಕುಗಳನ್ನಷ್ಟೇ ಏಕೆ ಅಳೆಯಬೇಕು? ಖಂಡಿತವಾಗಿ ಮಧ್ಯಂತರ ಸರಕುಗಳು ಯಾವುದೇ ಉತ್ಪಾದನಾ ಪ್ರಕ್ರಿಯೆಗೆ ನಿರ್ಣಾಯಕ ಆದಾನಗಳಾಗಿವೆ ಮತ್ತು ನಮ್ಮ ಮಾನವಶಕ್ತಿ ಮತ್ತು ಬಂಡವಾಳದ ಸಂಗ್ರಹದ ಒಂದು ಮಹತ್ವದ ಭಾಗವು ಈ ಸರಕುಗಳ ಉತ್ಪಾದನೆಯಲ್ಲಿ ತೊಡಗಿಕೊಂಡಿವೆ. ಆದಾಗ್ಯೂ ನಾವು, ಉತ್ಪನ್ನದ ಮೌಲ್ಯದೊಂದಿಗೆ ವ್ಯವಹರಿಸುತ್ತಿರುವುದರಿಂದ, ಅಂತಿಮ ಸರಕುಗಳ ಮೌಲ್ಯವು, ಈಗಾಗಲೇ ಆದಾನಗಳಾಗಿ ಉತ್ಪಾದನೆಯಲ್ಲಿ ಸೇರಿ ಹೋಗಿರುವ ಮಧ್ಯಂತರ ಸರಕುಗಳ ಮೌಲ್ಯವನ್ನು ಒಳಗೊಂಡಿರುತ್ತದೆಂದು ಅರಿತುಕೊಳ್ಳಬೇಕು. ಇವುಗಳನ್ನು ಪ್ರತ್ಯೇಕವಾಗಿ ಲೆಕ್ಕಕ್ಕೆ ತೆಗೆದುಕೊಳ್ಳುವುದರಿಂದ ದ್ವಿಗಣನೆಯ ದೋಷಕ್ಕೆ ಕಾರಣವಾಗುತ್ತದೆ. ಮಧ್ಯಂತರ ಸರಕುಗಳನ್ನು ಪರಿಗಣಿಸುವುದರಿಂದ ಸಮಗ್ರ ಆರ್ಥಿಕ ಚಟುವಟಿಕೆಯ ಸಂಪೂರ್ಣವಾದ ವಿವರಣೆಯನ್ನು ನೀಡಬಹುದು. ಆದರೆ ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ನಮ್ಮ ಆರ್ಥಿಕ ಚಟುವಟಿಕೆಯ ಅಂತಿಮ ಮೌಲ್ಯವನ್ನು ಅದು ಅತಿಯಾಗಿ ಉತ್ಪ್ರೇಕ್ಷಿಸುತ್ತದೆ.





ಈ ಹಂತದಲ್ಲಿ ದಾಸ್ತಾನು ಮತ್ತು ಹರಿವಿನ ಪರಿಕಲ್ಪನೆಗಳನ್ನು ಪರಿಚಯಿಸುವುದು ಮುಖ್ಯವಾಗಿದೆ. ಸಾಮಾನ್ಯವಾಗಿ ನಾವು ಒಬ್ಬರ ಸರಾಸರಿ ವೇತನ ರೂ 10,000 ಆಗಿದೆ ಅಥವಾ ಉಕ್ಕಿನ ಉದ್ಯಮದ ಉತ್ಪಾದನೆಯು ಹಲವು ಟನ್‌ಗಳಷ್ಟು ಅಥವಾ ಹಲವು ರೂಪಾಯಿಗಳಷ್ಟು ಮೌಲ್ಯವುಳದ್ದು ಎಂಬ ಹೇಳಿಕೆಗಳನ್ನು ಕೇಳುತ್ತೇವೆ. ಆದರೆ, ಇವು ಅಪೂರ್ಣವಾದ ಹೇಳಿಕೆಗಳಾಗಿವೆ, ಏಕೆಂದರೆ ಇಲ್ಲಿ ಉಲ್ಲೇಖಿಸಲಾಗಿರುವ ಆದಾಯವು ವಾರ್ಷಿಕವೇ ಅಥವಾ ಮಾಸಿಕವೇ ಅಥವಾ ದೈನಂದಿನ ಆದಾಯವೇ ಎಂಬುದು ಸ್ಪಷ್ಟವಾಗಿಲ್ಲ ಮತ್ತು ಇದು ಖಂಡಿತವಾಗಿಯೂ ಅಗಾಧ ವ್ಯತ್ಯಾಸವನ್ನು ಉಂಟು ಮಾಡುತ್ತದೆ. ಕೆಲವೊಂದು ಗೊತ್ತಿರುವ ಸನ್ನಿವೇಶದಲ್ಲಿ, ಸಮಯದ ಅವಧಿ ಗೊತ್ತಿದೆ ಎಂದು ಊಹಿಸಿಕೊಳ್ಳುತ್ತೇವೆ. ಆದ್ದರಿಂದ ನಾವು ಅದನ್ನು ಉಲ್ಲೇಖಿಸುವುದಿಲ್ಲ. ಅಂದರೆ ಒಂದು ನಿರ್ದಿಷ್ಟ ಸಮಯ ಅಥವಾ ಅವಧಿ ಇವುಗಳು ಎಲ್ಲಾ ಹೇಳಿಕೆಗಳಲ್ಲಿ ಅಂತರ್ಗತವಾಗಿರುತ್ತವೆ. ಇಲ್ಲದಿದ್ದರೆ ಇಂತಹ ಹೇಳಿಕೆಗಳು ಅರ್ಥಹೀನವಾಗುತ್ತವೆ. ಆದ್ದರಿಂದ ಪರಿಕಲ್ಪನೆಗಳಾದ ಆದಾಯ, ಉತ್ಪನ್ನ ಅಥವಾ ಲಾಭಗಳು ಸಮಯವನ್ನು ಸೂಚಿಸಿದಾಗ ಮಾತ್ರ ಅರ್ಥಪೂರ್ಣವಾಗುತ್ತವೆ. ಇವುಗಳನ್ನು ಹರಿವುಗಳು ಎಂದು ಕರೆಯುತ್ತೇವೆ. ಏಕೆಂದರೆ ಇವು ಒಂದು (ನಿರ್ಧಿಷ್ಟ) ಸಮಯದ ಅವಧಿಯಲ್ಲಿ ಸಂಭವಿಸುತ್ತವೆ. ಆದ್ದರಿಂದ ನಾವು ಇವುಗಳ ಪರಿಮಾಣಾತ್ಮಕ ಅಳತೆ ಪಡೆಯಲು ಸಮಯವನ್ನು ರೂಪಿಸಬೇಕಾಗುತ್ತದೆ. ಒಂದು ಆರ್ಥಿಕತೆಯಲ್ಲಿ ಲೆಕ್ಕಪರಿಶೋಧನೆಯು ವಾರ್ಷಿಕವಾಗಿ ನಡೆಯುವುದರಿಂದ ಇವುಗಳಲ್ಲಿ ಬಹುತ್ತೇಕವಾದವು ಗಳನ್ನು ವಾರ್ಷಿಕ ಲಾಭ ಅಥವಾ ಉತ್ಪಾದನೆಯಂತೆ ವ್ಯಕ್ತ ಪಡಿಸಲಾಗುತ್ತದೆ. **ಹರಿವುಗಳನ್ನು ಒಂದು ಸಮಯದ ಅವಧಿಯಲ್ಲಿ ವ್ಯಾಖ್ಯಾನಿಸಲಾಗಿದೆ.**

ಇದಕ್ಕೆ ಪ್ರತಿಯಾಗಿ ಒಮ್ಮೆ ಉತ್ಪಾದಿಸಿದ ಬಂಡವಾಳ ಸರಕುಗಳು ಅಥವಾ ದೀರ್ಘ ಬಾಳಿಕೆಯ ಅನುಭೋಗಿ ಸರಕುಗಳು ನಿರ್ಧಿಷ್ಟ ಅವಧಿಯಲ್ಲಿ ಸವಕಳಿಯಾಗುವುದಿಲ್ಲ. ವಾಸ್ತವವಾಗಿ. ಬಂಡವಾಳದ ಸರಕುಗಳು ಉತ್ಪಾದನೆಯ ವಿವಿಧ ಸುತ್ತುಗಳ ಮೂಲಕ ನಮಗೆ ಸೇವೆಯನ್ನು ಒದಗಿಸುತ್ತವೆ. ಒಂದು ಕಾರ್ಖಾನೆಯಲ್ಲಿನ ಕಟ್ಟಡಗಳು ಅಥವಾ ಯಂತ್ರಗಳು ನಿರ್ದಿಷ್ಟ ಸಮಯದ ಗಣನೆ ಇಲ್ಲದೆ ಅಸ್ತಿತ್ವದಲ್ಲಿರುತ್ತವೆ. ಇವುಗಳಿಗೆ ಒಂದು ಹೊಸ ಯಂತ್ರವನ್ನು ಸೇರಿಸಿದರೆ, ಹೊಸಯಂತ್ರ ಸೇರ್ಪಡೆಯಾಗುತ್ತದೆ, ಅಥವಾ ಒಂದು ಯಂತ್ರ ಅನುಪಯುಕ್ತವಾದರೆ ಮತ್ತು ಅದನ್ನು ಬದಲಾಯಿಸದಿದ್ದರೆ, ಒಂದು ಯಂತ್ರ ಕಡಿಮೆ ಆಗುತ್ತದೆ. ಇವುಗಳನ್ನು ದಾಸ್ತಾನು ಎಂದು ಕರೆಯಲಾಗುತ್ತದೆ. **ದಾಸ್ತಾನುಗಳನ್ನು ನಿರ್ದಿಷ್ಟ ಕಾಲಘಟ್ಟದಲ್ಲಿ**

**ವ್ಯಾಖ್ಯಾನಿಸಲಾಗಿದೆ**. ಆದಾಗ್ಯೂ, ಈ ವರ್ಷ ಎಷ್ಟು ಯಂತ್ರಗಳು ಸೇರ್ಪಡೆಯಾಗಿವೆ ಎಂದು ನಿರ್ದಿಷ್ಟ ಸಮಯದ ಅವಧಿಯಲ್ಲಿ ನಾವು ದಾಸ್ತಾನಿನಲ್ಲಿನ ಬದಲಾವಣೆಗಳನ್ನು ಅಳೆಯಬಹುದು. ದಾಸ್ತಾನಿನಲ್ಲಿನ ಇಂತಹ ಬದಲಾವಣೆಗಳನ್ನು ಹರಿವುಗಳೆಂದು ಕರೆಯುತ್ತಾರೆ, ಇವುಗಳನ್ನು ನಿರ್ಧಿಷ್ಟ ಕಾಲಾವಧಿಯಲ್ಲಿ ಮಾಪನ ಮಾಡಬಹುವಾಗಿದೆ. ದಾಸ್ತಾನಿನ ಒಂದು ನಿರ್ಧಿಷ್ಟ ಯಂತ್ರವು ಅನೇಕ ವರ್ಷಗಳವರೆಗೆ ಬಂಡವಾಳ ದಾಸ್ತಾನಿನ ಭಾಗವಾಗಿರಬಹುದು. (ಅದು ಸವಕಳಿಯಾಗದ ಹೊರತು); ಆದರೆ, ಆ ಯಂತ್ರವನ್ನು ಸ್ಥಾಪಿಸಿದ ಹೊಸದರಲ್ಲಿ ಒಂದು ವರ್ಷದವರೆಗೆ ಮಾತ್ರ ಬಂಡವಾಳ ದಾಸ್ತಾನಿಗೆ ಸೇರ್ಪಡೆಗೊಂಡ ಹೊಸ ಯಂತ್ರಗಳ ಹರಿವಿನ ಒಂದು ಭಾಗವಾಗಿರಬಹುದು.

ದಾಸ್ತಾನು ಚಲಕಗಳ ಮತ್ತು ಹರಿವಿನ ಚಲಕಗಳ ನಡುವಿನ ವ್ಯತ್ಯಾಸವನ್ನು ಇನ್ನಷ್ಟು ಅರ್ಥ ಮಾಡಿಕೊಳ್ಳಲು ನಾವು ಈ ಕೆಳಗಿನ ಉದಾಹರಣೆಯನ್ನು ತೆಗೆದುಕೊಳ್ಳೋಣ. ಒಂದು ತೊಟ್ಟಿಯನ್ನು ನಲ್ಲಿಯಿಂದ ಬರುವ ನೀರಿನಿಂದ ತುಂಬಿಸಲಾಗಿದೆ ಎಂದುಕೊಳ್ಳೋಣ. ಒಂದು ನಿಮಿಷಕ್ಕೆ ನಲ್ಲಿಯಿಂದ ತೊಟ್ಟಿಗೆ ಹರಿಯುವ ನೀರಿನ ಪ್ರಮಾಣವು ಹರಿವು ಎನಿಸಿಕೊಳ್ಳುತ್ತದೆ. ಆದರೆ ನಿರ್ದಿಷ್ಟ ಸಮಯದಲ್ಲಿ ತೊಟ್ಟಿಯಲ್ಲಿ ಎಷ್ಟು ನೀರು ಇದೆ ಎಂಬುದು ದಾಸ್ತಾನಿನ ಪರಿಕಲ್ಪನೆಯಾಗಿದೆ.

ಅಂತಿಮ ಉತ್ಪನ್ನದ ಮಾಪನದ ಕುರಿತ ನಮ್ಮ ಚರ್ಚೆಗೆ ಹಿಂದಿರುಗಿ ಬರೋಣ, ಬಂಡವಾಳ ಸರಕುಗಳನ್ನು ಒಳಗೊಂಡಿರುವ ನಮ್ಮ ಅಂತಿಮ ಉತ್ಪನ್ನದ ಭಾಗವು ಆರ್ಥಿಕತೆಯ **ಒಟ್ಟು ಹೂಡಿಕೆ**ಯನ್ನು[1] ನಿರ್ಮಿಸುತ್ತದೆ. ಅವುಗಳು ಯಂತ್ರಗಳು, ಉಪಕರಣಗಳು ಮತ್ತು ಸಲಕರಣೆಗಳು, ಕಟ್ಟಡಗಳು, ಕಛೇರಿ ಸ್ಥಳಗಳು, ದಾಸ್ತಾನು ಮಳಿಗೆಗಳು ಅಥವಾ ರಸ್ತೆಗಳು, ಸೇತುವೆಗಳು, ವಿಮಾನ ನಿಲ್ದಾಣಗಳು ಅಥವಾ ಬಂದರುಗಳಂತಹ ಮೂಲ ಸೌಕರ್ಯಗಳಾಗಿರಬಹುದು. ಆದರೆ ಒಂದು ವರ್ಷದಲ್ಲಿ ಉತ್ಪಾದಿಸಲಾದ ಎಲ್ಲಾ ಬಂಡವಾಳ ಸರಕುಗಳು ಈಗಾಗಲೇ ಅಸ್ತಿತ್ವದಲ್ಲಿರುವ ಬಂಡವಾಳದ ದಾಸ್ತಾನಿಗೆ ಸೇರ್ಪಡೆಯಾಗುವುದಿಲ್ಲ. ಬಂಡವಾಳ ಸರಕುಗಳ ಪ್ರಸ್ತುತ ಉತ್ಪಾದನೆಯ ಒಂದು ಭಾಗವು ಅಸ್ತಿತ್ವದಲ್ಲಿರುವ ಬಂಡವಾಳದ ಸರಕುಗಳ ನಿರ್ವಹಣೆಗೆ ಅಥವಾ ಅವುಗಳನ್ನು ಬದಲಾಯಿಸಲು ಉಪಯೋಗವಾಗುತ್ತವೆ. ಏಕೆಂದರೆ ಈಗಾಗಲೇ ಅಸ್ತಿತ್ವದಲ್ಲಿರುವ ಬಂಡವಾಳ ಸಂಗ್ರಹವು ಸವಕಲು–ಹರಕಲಾಗಿರುತ್ತದೆ. ಹೀಗಾಗಿ ಅವುಗಳ ನಿರ್ವಹಣೆ ಮತ್ತು ಬದಲಿಕೆಯ ಅಗತ್ಯವಿರುತ್ತದೆ, ಈ ವರ್ಷದ ಬಂಡವಾಳ ಸರಕುಗಳ ನಿರ್ಮಾಣದ ಒಂದು ಭಾಗವು ಅಸ್ತಿತ್ವದಲ್ಲಿರುವ ಬಂಡವಾಳ ಸರಕುಗಳ ಬದಲಿಗಾಗಿ ಹೋಗುತ್ತದೆ. ಮತ್ತು ಈಗಾಗಲೇ ಅಸ್ಥಿತ್ವದಲ್ಲಿರುವ ಬಂಡವಾಳ ಸರಕುಗಳ ದಾಸ್ತಾನಿಗೆ ಸೇರ್ಪಡೆಯಾಗುವುದಿಲ್ಲ ಮತ್ತು ನಿವ್ವಳ ಉಳಿಕೆಯ ಪ್ರಮಾಣವನ್ನು ತಲುಪಲು ಅದರ ಮೌಲ್ಯವನ್ನು ಸಮಗ್ರ ಹೂಡಿಕೆಯಿಂದ ಕಳೆಯಬೇಕಾಗುತ್ತದೆ. ಈ ರೀತಿ ಬಂಡವಾಳದ ನಿಯಮಿತ ಸವಕಲು–ಹರಕಲಿಗೆ ಅವಕಾಶ ಮಾಡಿಕೊಡುವುದಕ್ಕಾಗಿ ಒಟ್ಟು ಹೂಡಿಕೆಯ ಮೌಲ್ಯದಿಂದ ಕಳೆದುದನ್ನು **ಸವಕಳಿ** ಎನ್ನುತ್ತೇವೆ.

ಆದ್ದರಿಂದ, ಆರ್ಥಿಕತೆಯಲ್ಲಿ ಬಂಡವಾಳದ ದಾಸ್ತಾನಿಗೆ ಹೊಸ ಸೇರ್ಪಡೆಯನ್ನು ನಿವ್ವಳ ಹೂಡಿಕೆ ಅಥವಾ ಹೊಸ ಬಂಡವಾಳ ರಚನೆಯಿಂದ ಮಾಪನ ಮಾಡಲಾಗುತ್ತದೆ. ಇದನ್ನು ಹೀಗೆ ವ್ಯಕ್ತ ಪಡಿಸಲಾಗುತ್ತದೆ.

ನಿವ್ವಳ ಹೂಡಿಕೆ = ಒಟ್ಟು ಹೂಡಿಕೆ – ಸವಕಳಿ

ನಾವು ಸವಕಳಿ ಎಂಬ ಈ ಪರಿಕಲ್ಪನೆಯನ್ನು ಇನ್ನೂ ಸ್ವಲ್ಪ ಹೆಚ್ಚು ವಿವರವಾಗಿ ಪರಿಶೀಲಿಸೋಣ. ಒಂದು ಉದ್ಯಮ ಘಟಕವು ಹೂಡಿಕೆ ಮಾಡುವ ಹೊಸ ಯಂತ್ರವನ್ನು ಪರಿಗಣಿಸೋಣ. ಮುಂದೆ ಈ ಯಂತ್ರವು ಮುಂದಿನ ಇಪ್ಪತ್ತು ವರ್ಷಗಳವರೆಗೆ ಸೇವೆಯಲ್ಲಿರಬಹುದು, ನಂತರ ಅದು ದುರಸ್ತಿಗೆ ಬೀಳಬಹುದು ಮತ್ತು ಅದನ್ನು ಬದಲಾಯಿಸಬೇಕಾದ ಅಗತ್ಯ ಬೀಳಬಹುದು. ಪ್ರತಿ ವರ್ಷದ ಉತ್ಪಾದನಾ ಪ್ರಕ್ರಿಯೆಯಲ್ಲಿ

---

[1] ಆರ್ಥಿಕತಜ್ಞರು ಬಂಡವಾಳ ಹೂಡಿಕೆಯನ್ನು ಹೀಗೆ ವ್ಯಾಖಾನಿಸುತ್ತಾರೆ. ಇದನ್ನು ಭೌತಿಕ ಅಥವಾ ಹಣಕಾಸಿನ ಆಸ್ತಿಗಳನ್ನು ಖರೀದಿಸಲು ಬಳಸುವ ಹಣ ಎಂಬ ಅರ್ಥ ಕೊಡುವ ಹೂಡಿಕೆಯ ಸಾಮಾನ್ಯ ಕಲ್ಪನೆಯೊಂದಿಗೆ ಗೊಂದಲಮಾಡಿಕೊಳ್ಳಬಾರದು ಹೀಗಾಗಿ ಹೂಡಿಕೆ ಎಂಬ ಪದದ ಬಳಕೆಯು ಷೇರುಗಳ ಅಥವಾ ಆಸ್ತಿಗಳ ಖರೀದಿ ಅಥವಾ ವಿಮಾಪಾಲಿಸಿಗಳನ್ನು ಹೊಂದುವುದು ಎಂದು ಸೂಚಿಸುವ ಅರ್ಥದಲ್ಲಿ ಅರ್ಥಶಾಸ್ತ್ರಜ್ಞರ ವ್ಯಾಖ್ಯಾನದೊಂದಿಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ. ನಮಗೆ ಹೂಡಿಕೆಯು ಯಾವಾಗಲು ಬಂಡವಾಳ ರಚನೆಯಾಗಿದೆ, ಬಂಡವಾಳ ದಾಸ್ತನಿಗೆ ಒಟ್ಟು ಅಥವಾ ನಿವ್ವಳ ಸೇರ್ಪಡೆಯಾಗಿದೆ.

ಈ ಯಂತ್ರವು ಕ್ರಮೇಣ ಬಳಕೆಯಾಗುತ್ತದೆ ಮತ್ತು ಪ್ರತಿವರ್ಷ $\frac{1}{20}$ ಭಾಗದಷ್ಟು ಅದರ ಮೂಲ ಮೌಲ್ಯದಲ್ಲಿ ಸವಕಳಿ ಉಂಟಾಗುತ್ತದೆಂದು ನಾವೀಗ ಕಲ್ಪಿಸಿಕೊಳ್ಳೋಣ, ಆದ್ದರಿಂದ ಇಪ್ಪತ್ತು ವರ್ಷಗಳ ನಂತರ ಈ ಯಂತ್ರವನ್ನು ಬದಲಾಯಿಸಲು ಬೃಹತ್ ಬಂಡವಾಳವನ್ನು ಪರಿಗಣಿಸುವ ಬದಲು, ನಾವು ಪ್ರತಿವರ್ಷ ವಾರ್ಷಿಕ ಸವಕಳಿ ವೆಚ್ಚವನ್ನು ಪರಿಗಣಿಸುತ್ತೇವೆ. ಸಾಮಾನ್ಯವಾಗಿ, ಸವಕಳಿ ಎಂಬ ಪದವನ್ನು ಬಳಸುವ ಮತ್ತು ಆ ಪರಿಕಲ್ಪನೆಯಲ್ಲಿ ಅಂತರ್ಗತವಾಗಿರುವ ಅರ್ಥವೆಂದರೆ, ಒಂದು ನಿರ್ದಿಷ್ಟ ಬಂಡವಾಳ ಸರಕಿನ ನಿರೀಕ್ಷಿತ ಬಾಳಿಕೆಯ ಅವಧಿ ನಮ್ಮ ಉದಾಹರಣೆಯಲ್ಲಿನ ಯಂತ್ರಕ್ಕೆ 20 ವರ್ಷಗಳಿದ್ದಂತೆ, ಆದ್ದರಿಂದ, ಸವಕಳಿ ಎನ್ನುವುದು ಒಂದು ಬಂಡವಾಳ ಸರಕಿನ[2] ಸವಕಲು–ಹರಕಲಿನ ಭತ್ಯೆಯಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸರಕಿನ ವೆಚ್ಚವನ್ನು ಅದರ ಬಾಳಿಕೆ ವರ್ಷಗಳಿಂದ ಭಾಗಿಸಿದಾಗ ಬರುವುದೇ ಸವಕಳಿ.[3]

ಸವಕಳಿಯು ಒಂದು ಲೆಕ್ಕಾಚಾರದ ಪರಿಕಲ್ಪನೆಯಾಗಿದೆ ಎಂಬುದನ್ನು ಇಲ್ಲಿ ಗಮನಿಸಿ. ಪ್ರತಿ ವರ್ಷವೂ ನೈಜ ವೆಚ್ಚ ತಗಲದಿರಬಹುದು ಆದರೂ ಸವಕಳಿಯನ್ನು ವಾರ್ಷಿಕವಾಗಿ ಲೆಕ್ಕಹಾಕಲಾಗುತ್ತದೆ. ಯಾವುದೇ ಆರ್ಥಿಕತೆಯಲ್ಲಿ ವ್ಯಾಪಕವಾದ ವಿವಿಧ ಅವಧಿಯ ಬಾಳಿಕೆ ಇರುವ ಸಾಧನ ಸಾಮಾಗ್ರಿಗಳನ್ನು ಹೊಂದಿರುವ ಸಾವಿರಾರು ಉದ್ಯಮಸಂಸ್ಥೆಗಳಿರುತ್ತವೆ. ಯಾವುದೇ ನಿರ್ದಿಷ್ಟ ವರ್ಷದಲ್ಲಿ ಕೆಲವು ಉದ್ಯಮಸಂಸ್ಥೆಗಳಾದರೂ ದೊಡ್ಡ ಪ್ರಮಾಣದ ಬದಲಿಕೆ ವೆಚ್ಚವನ್ನು ವಾಸ್ತವಾಗಿ ಭರಿಸುತ್ತಿರುತ್ತವೆ. ಹೀಗಾಗಿ ಬದಲಿಕೆ ವೆಚ್ಚದ ಹರಿವು ನಿರಂತರವಾಗಿ ಇರುತ್ತದೆಂದು ಮತ್ತು ಇದು ಆ ಆರ್ಥಿಕತೆಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾದ ವಾರ್ಷಿಕ ಸವಕಳಿ ವೆಚ್ಚದ ಮೊತ್ತಕ್ಕೆ ಹೆಚ್ಚು ಕಡಿಮೆ ಹೊಂದಿಕೆಯಾಗುತ್ತದೆ ಎಂದು ನಾವು ವಾಸ್ತವಾಗಿ ಊಹಿಸಿಕೊಳ್ಳಬಹುದು.



ಅರ್ಥವ್ಯವಸ್ಥೆಯಲ್ಲಿ ಉತ್ಪತ್ತಿಯಾದ ಒಟ್ಟು ಅಂತಿಮ ಉತ್ಪನ್ನಕ್ಕೆ ಸಂಬಂಧಿಸಿದ ನಮ್ಮ ಚರ್ಚೆಗೆ ಹಿಂತಿರುಗಿದರೆ, ಒಟ್ಟು ಉತ್ಪನ್ನದಲ್ಲಿ ಅನುಭೋಗಿ ಸರಕುಗಳು ಮತ್ತು ಸೇವೆಗಳು ಹಾಗೂ ಬಂಡವಾಳ ಸರಕುಗಳು ಇರುವುದನ್ನು ನೋಡುತ್ತೇವೆ. ಆರ್ಥಿಕತೆಯ ಇಡೀ ಜನಸಂಖ್ಯೆಯ ಅನುಭೋಗವನ್ನು ಅನುಭೋಗಿ ಸರಕುಗಳು ಪೋಷಿಸುತ್ತವೆ. ಅನುಭೋಗಿ ಸರಕುಗಳ ಕೊಳ್ಳುವಿಕೆಯು, ಈ ಸರಕುಗಳ ಮೇಲೆ ವೆಚ್ಚ ಮಾಡುವ ಜನರ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಇದು ಪ್ರತಿಯಾಗಿ, ಅವರುಗಳ ಆದಾಯವನ್ನು ಅವಲಂಬಿಸಿರುತ್ತವೆ. ಅಂತಿಮ ಸರಕುಗಳ ಇನ್ನೊಂದು ಭಾಗವಾದ ಬಂಡವಾಳ ಸರಕುಗಳನ್ನು ವ್ಯವಹಾರಿ ಉದ್ಯಮ ಸಂಸ್ಥೆಗಳು ಕೊಳ್ಳುತ್ತವೆ. ಅವುಗಳನ್ನು ಬಂಡವಾಳ ದಾಸ್ತಾನಿನ ನಿರ್ವಹಣೆಗಾಗಿ ಬಳಸಬಹುದು ಏಕೆಂದರೆ ಅವುಗಳ ಸವಕಲು–ಹರಕಲು ಇದ್ದೇ ಇರುತ್ತದೆ ಅಥವಾ ಬಂಡವಾಳ ದಾಸ್ತಾನಿಗೆ ಸೇರ್ಪಡಿಸಿಕೊಳ್ಳಲು ಬಳಸಬಹುದು. ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಉದಾಹರಣೆಗೆ, ಒಂದು ವರ್ಷದಲ್ಲಿ ಅಂತಿಮ ಸರಕುಗಳ ಉತ್ಪಾದನೆಯು ಅನುಭೋಗ ಅಥವಾ ಹೂಡಿಕೆ ರೂಪದಲ್ಲಿ ಇರಬಹುದು. ಇದು ಟ್ರೇಡ್–ಆಫ್‌ನ್ನು (*Trade-off*) ಸೂಚಿಸುತ್ತದೆ. (ಟ್ರೇಡ್–ಆಫ್: ಒಂದು ಅಂಶದಲ್ಲಿ ಏರಿಕೆಯಾಗುವುದರಿಂದ ಇನ್ನೊಂದು ಅಂಶದಲ್ಲಿ ಆಗುವ ಗುಣಾತ್ಮಕ ಅಥವಾ ಪರಿಮಾಣಾತ್ಮಕ ಇಳಿಕೆಯಾಗುವ ಸನ್ನಿವೇಶ.) ಒಂದು ಆರ್ಥಿಕತೆ ಅನುಭೋಗಿ ಸರಕುಗಳನ್ನು ಹೆಚ್ಚು ಉತ್ಪಾದಿಸಿದರೆ ಬಂಡವಾಳ ಸರಕುಗಳನ್ನು ಕಡಿಮೆ ಉತ್ಪಾದಿಸುತ್ತದೆ ಮತ್ತು ತದ್ವಿರುದ್ಧವಾಗಿರುತ್ತದೆ. (*vice-versa*).

ಹೆಚ್ಚು ಅತ್ಯಾಧುನಿಕ ಮತ್ತು ಭಾರಿ ಬಂಡವಾಳದ ಸರಕುಗಳು, ಕಾರ್ಮಿಕರ ಸರಕಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಎಂಬುದನ್ನು ಸಾಮಾನ್ಯವಾಗಿ ಗಮನಿಸಲಾಗಿದೆ. ಸಾಂಪ್ರದಾಯಿಕ ನೇಯ್ಗೆಯವನು ಒಂದು ಸೀರೆಯನ್ನು ನೇಯ್ಗೆ ಮಾಡಲು ತಿಂಗಳುಗಳನ್ನು ತೆಗೆದುಕೊಳ್ಳುತ್ತಾನೆ. ಆದರೆ ಆಧುನಿಕ ಯಂತ್ರಗಳಿಂದ ಸಾವಿರಾರು ಮಾದರಿಯ ಬಟ್ಟೆಗಳನ್ನು ಒಂದು ದಿನದಲ್ಲಿ ತಯಾರಿಸಲಾಗುತ್ತದೆ. ಮಹಾನ್ ಐತಿಹಾಸಿಕ ಸ್ಮಾರಕಗಳಾದ ಪಿರಮಿಡ್ಡುಗಳನ್ನು ಅಥವಾ ತಾಜ್ ಮಹಲ್ ಅನ್ನು ಕಟ್ಟಲು ದಶಕಗಳನ್ನು ತೆಗೆದುಕೊಳ್ಳಲಾಯಿತು. ಆದರೆ ಆಧುನಿಕ ನಿರ್ಮಾಣ ಯಂತ್ರಗಳಿಂದ ಒಂದು ಗಗನಚುಂಬಿ ಕಟ್ಟಡವನ್ನು ಕೆಲವೇ ವರ್ಷಗಳಲ್ಲಿ ಕಟ್ಟಬಹುದು. ಆದ್ದರಿಂದ ಹೊಸ ರೀತಿಯ ಬಂಡವಾಳ ಸರಕುಗಳ ಅಧಿಕ ಉತ್ಪಾದನೆಯು ಅನುಭೋಗಿ ಸರಕುಗಳ ಅತ್ಯಧಿಕ ಉತ್ಪಾದನೆಗೆ ಸಹಾಯ ಮಾಡುತ್ತದೆ.

---

[2] ಬಂಡವಾಳದ ಬಳಕೆಗೆ ಅಪಘಾತಗಳು, ನೈಸರ್ಗಿಕ ವಿಕೋಪಗಳು, ಅಥವಾ ಅಂತಹ ಬಾಹ್ಯ ಸಂದರ್ಭಗಳಲ್ಲಿ ಸಂಭವಿಸಬಹುದಾದಂತಹ ಅನಿರೀಕ್ಷಿತ ಅಥವಾ ಹಠಾತ್ ವಿನಾಶದಂತಹವುಗಳನ್ನು ಸವಕಳಿ ತೆಗೆದುಕೊಳ್ಳುವುದಿಲ್ಲ.

[3] ನಾವು ಆಸ್ತಿ ಮೌಲ್ಯದ ಆಧಾರದ ಮೇಲೆ ಸವಕಳಿ ಸ್ಥಿರ ದರದಲ್ಲಿದೆಯೆಂದು ಇಲ್ಲಿ ಸರಳವಾದ ಊಹೆಯನ್ನು ಮಾಡುತ್ತಿದ್ದೇವೆ. ಪ್ರಸ್ತುತ ಆಚರಣೆಯಲ್ಲಿ ಸವಕಳಿಯನ್ನು ಲೆಕ್ಕಚಾರ ಮಾಡಲು ಇತರ ವಿಧಾನಗಳಿವೆ.

ಆದರೆ ನಮ್ಮನ್ನು ನಾವೇ ಸ್ವತಃ ಅಲ್ಲಗೆಳೆಯುತ್ತಿಲ್ಲವೇ? ಈ ಮೊದಲು ನೋಡಿರುವುದೇನೆಂದರೆ ಒಂದು ಆರ್ಥಿಕತೆಯಲ್ಲಿ ಅಂತಿಮ ಸರಕುಗಳ ಒಟ್ಟು ಉತ್ಪನ್ನದಲ್ಲಿ ಒಂದು ದೊಡ್ಡ ಪಾಲು ಬಂಡವಾಳ ಸರಕುಗಳ ಉತ್ಪಾದನೆಗೆ ಹೋದರೆ, ಗ್ರಾಹಕ ಸರಕುಗಳ ಉತ್ಪಾದನೆಗೆ ಸಣ್ಣ ಪಾಲು ಲಭ್ಯವಿರುತ್ತದೆ ಮತ್ತು ಈಗ ನಾವು ಹೆಚ್ಚಿನ ಬಂಡವಾಳ ಸರಕುಗಳನ್ನು ಕೂಡಿಡುತ್ತಿದ್ದೇವೆ ಎಂದರೆ ಮುಂದೆ ಹೆಚ್ಚು ಗ್ರಾಹಕ ಸರಕುಗಳ ಉತ್ಪಾದನೆಯಾಗುತ್ತದೆ ಎಂದು ಅರ್ಥಮಾಡಿಕೊಳ್ಳಬಹುದು. ಆದರೂ ಇಲ್ಲಿ ಯಾವುದೇ ವಿರೋಧಾಭಾಸವಿಲ್ಲ ಇಲ್ಲಿ ಮಹತ್ವವಾಗಿರುವುದೇನೆಂದರೆ ಸಮಯದ ಅಂಶ. ಅರ್ಥವ್ಯವಸ್ಥೆಯ ಒಂದು ನಿರ್ದಿಷ್ಟ ಅವಧಿಯಲ್ಲಿ, ಕೊಟ್ಟಿರುವ ಒಟ್ಟು ಉತ್ಪಾದನೆ ಮಟ್ಟದಲ್ಲಿ, ಹೆಚ್ಚು ಬಂಡವಾಳ ಸರಕುಗಳನ್ನು ಉತ್ಪಾದಿಸಿದರೆ ಕಡಿಮೆ ಗ್ರಾಹಕ ಸರಕುಗಳನ್ನು ಉತ್ಪಾದಿಸಲಾಗುತ್ತದೆ ಎಂಬುದು ನಿಜವಾಗಿದೆ. ಆದರೆ ಹೆಚ್ಚಿನ ಬಂಡವಾಳ ಸರಕುಗಳ ಉತ್ಪಾದನೆಯ ಅರ್ಥವೇನೆಂದರೆ ಭವಿಷ್ಯದಲ್ಲಿ ಕಾರ್ಮಿಕರಿಗೆ ಕೆಲಸ ಮಾಡಲು ಅಧಿಕ ಬಂಡವಾಳ ಸಾಮಗ್ರಿಗಳು ಇರುತ್ತವೆ ಎಂಬುದಾಗಿದೆ. ಅಷ್ಟೇ ಕಾರ್ಮಿಕರ ಸಂಖ್ಯೆಯಲ್ಲಿ ಆರ್ಥಿಕತೆಯ ಉತ್ಪಾದನಾ ಸಾಮರ್ಥ್ಯದ ಹೆಚ್ಚಳಕ್ಕೆ ಇದು ದಾರಿ ಮಾಡಿಕೊಡುತ್ತದೆಂದು ನಾವು ನೋಡಿದ್ದೇವೆ. ಹೀಗೆ ಬಂಡವಾಳ ಸರಕುಗಳನ್ನು ಕಡಿಮೆ ಉತ್ಪಾದಿಸಿದ ಸಂದರ್ಭಕ್ಕೆ ಹೋಲಿಸಿದರೆ ಒಟ್ಟು ಆದಾನವೇ ಹೆಚ್ಚಾಗಿರುತ್ತದೆ. ಒಂದು ವೇಳೆ ಒಟ್ಟು ಉತ್ಪನ್ನವು ಹೆಚ್ಚಾದರೆ ಉತ್ಪಾದಿಸಬಹುದಾದ ಗ್ರಾಹಕ ಸರಕುಗಳ ಪ್ರಮಾಣವು ನಿಶ್ಚಿತವಾಗಿ ಹೆಚ್ಚಾಗುತ್ತದೆ.

ಹೀಗೆ ಆರ್ಥಿಕ ಚಕ್ರವು ಉರುಳುವುದಲ್ಲದೆ ಅಧಿಕ ಬಂಡವಾಳದ ಸರಕುಗಳ ಉತ್ಪಾದನೆಯ ಆರ್ಥಿಕತೆಯ ವಿಸ್ತರಣೆಯನ್ನು ಸಾಧ್ಯವಾಗಿಸುತ್ತದೆ. ಇದುವರೆಗೆ ನಾವು ಮಾಡಿದ ಚರ್ಚೆಯಿಂದ ವೃತ್ತಾಕಾರದ ಹರಿವನ್ನು ಮತ್ತೊಂದು ರೀತಿಯಲ್ಲಿ ಅವಲೋಕಿಸಲು ಸಾಧ್ಯವಿದೆ.



**ಆಡಂ ಸ್ಮಿತ್**

ಆಡಮ್ ಸ್ಮಿತ್ ಅವರನ್ನು ಆಧುನಿಕ ಅರ್ಥಶಾಸ್ತ್ರದ ಸಂಸ್ಥಾಪಕ ಪಿತನೆಂದು ಎಂದು ಪರಿಗಣಿಸಲಾಗಿದೆ. (ಆ ಸಮಯದಲ್ಲಿ ಇದು ರಾಜಕೀಯ ಅರ್ಥಶಾಸ್ತ್ರ ಎಂದು ಕರೆಯಲಾಗುತ್ತಿತ್ತು.) ಅವರು ಸ್ಕಾಟ್ಲೆಂಡಿನ ನಿವಾಸಿ ಆಗಿದ್ದರು ಮತ್ತು ಗ್ಲ್ಯಾಸ್ಗೋ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದರು. ತರಬೇತಿಯಿಂದ ತತ್ವಜ್ಞಾನಿ ಆಗಿದ್ದು, ಅವರ ಪ್ರಸಿದ್ಧ ಕೃತಿಯಾದ (*An Enquiry into the nature and couse of the wealth of Nations*) – 1776 ('ರಾಷ್ಟ್ರಗಳ ಸಂಪತ್ತಿನ ಸ್ವರೂಪ ಮತ್ತು ಕಾರಣಗಳ ಒಂದು ಪರಿಶೀಲನೆ')ಅನ್ನು ಅರ್ಥಶಾಸ್ತ್ರ ವಿಷಯದ ಮೊದಲ ಪ್ರಮುಖ ಸಮಗ್ರ ಪುಸ್ತಕ ಎಂದು ಪರಿಗಣಿಸಲಾಗಿದೆ. ಪುಸ್ತಕದ ಒಂದು ವಾಕ್ಯವೃಂದ ಹೀಗಿದೆ. 'ನಾವು ನಮ್ಮ ಭೋಜನವನ್ನು ಕಟುಕನ, ಮದ್ಯತಯಾರಕನ, ಬೇಯಿಸುವವನ (ಬೇಕರಿ) ಉದಾರತೆಯಿಂದ ನಿರೀಕ್ಷಿಸುವುದಿಲ್ಲ ಬದಲಾಗಿ ಅವರಿಗೆ ಅವರ ಸಂತ್ವ ಹಿತಾಸಕ್ತಿಯ ಬಗೆಗಿರುವ ಅಭಿಮಾನದಿಂದ. ನಾವು ಅವರ ಮೌನವೀಯತೆಯನ್ನು ಉದ್ದೇಶಿಸಿ ಮಾತನಾಡದೆ, ಅವರ ಸ್ವಪ್ರೇಮದ ಬಗ್ಗೆ ಮಾತನಾಡುತ್ತೇವೆ, ಅವರಲ್ಲಿ ನಮ್ಮ ಸ್ವಂತ ಅಗತ್ಯತೆಗಳ ಬಗ್ಗೆ ಮಾತನಾಡದೆ ಅವರಿಗಾಗುವ ಪ್ರಯೋಜನಗಳ ಬಗ್ಗೆ ಮಾತನಾಡುತ್ತೇವೆ'. ಇದನ್ನು ಮುಕ್ತ ಮಾರುಕಟ್ಟೆಯ ಪರದ ವಕಾಲತ್ತಿಗಾಗಿ ಉದಾಹರಿಸುತ್ತೇವೆ. ಸ್ಮಿತ್ ರವರಗಿಂತ ಮುಂಚೆ ಫ್ರಾನ್ಸಿನ ಫಿಜಿಯೋಕ್ರಾಟ್ಸ್‌ಗಳು ರಾಜಕೀಯ ಅರ್ಥಶಾಸ್ತ್ರದ ಮಹಾನ್ ಚಿಂತಕಾರಾಗಿದ್ದರು.



**ಜಾನ್ ಮೇನಾರ್ಡ್ ಕೀನ್ಸ್**

ಜಾನ್ ಮೇನಾರ್ಡ್ ಕೀನ್ಸ್, ಬ್ರಿಟಿಷ್ ಅರ್ಥಶಾಸ್ತ್ರಜ್ಞ, 1883 ರಲ್ಲಿ ಜನಿಸಿದರು. ಅವರು ಯುನೈಟೆಡ್‌ಕಿಂಗ್‌ಡಂ, ಕೇಂಬ್ರಿಡ್ಜ್‌ನ ಕಿಂಗ್ಸ್ನ ಕಾಲೇಜಿನಲ್ಲಿ ಶಿಕ್ಷಣ ಪಡೆದರು ನಂತರ ಅದರ ಮುಖ್ಯಸ್ಥರಾಗಿ ನೇಮಕಗೊಂಡರು. ಅವರ ತೀಕ್ಷ್ಣ ಬುದ್ಧಿಜಿವಿಯಾಗಿದ್ದರಲ್ಲದೇ ಮೊದಲ ಜಾಗತಿಕ ಯುದ್ಧದ ನಂತರದ ವರ್ಷಗಳಲ್ಲಿ ಅಂತರರಾಷ್ಟ್ರೀಯ ರಾಜತಂತ್ರದಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಂಡಿದ್ದರು. 'ಶಾಂತಿಯ ಆರ್ಥಿಕ ಪರಿಣಾಮಗಳು' (*The economic consequences of peace - 1990*) ಎಂಬ ತಮ್ಮ ಕೃತಿಯಲ್ಲಿ ಯುದ್ಧ ಶಾಂತಿ ಒಪ್ಪಂದದ ಪಥನದ ಬಗ್ಗೆ ಭವಿಷ್ಯ ನುಡಿದಿದ್ದರು. ಅವರ ಕೃತಿಯಾದ ಉದ್ಯೋಗ, ಬಡ್ಡಿ, ಮತ್ತು ಹಣದ ಸಾರ್ವತ್ರಿಕ ಸಿದ್ಧಾಂತವು (1936) ಇಪ್ಪತ್ತನೇ ಶತಮಾನದ ಅತ್ಯಂತ ಪ್ರಭಾವಶಾಲಿ ಆರ್ಥಿಕ ಪುಸ್ತಕಗಳಲ್ಲಿ ಒಂದಾಗಿದೆ. ಅವರು ಪ್ರಬಲವಾದ ವಿದೇಶಿ ಕರೆನ್ಸಿಯ ಸಟ್ಟಾವ್ಯಾಪಾರಿಗಳಾಗಿದ್ದರು.

**ನಾವು** ಮಾರುಕಟ್ಟೆಗಾಗಿ ತಯಾರಿಸಲಾದ ಎಲ್ಲಾ ಸರಕು ಮತ್ತು ಸೇವೆಗಳ ಬಗ್ಗೆ ಅಭ್ಯಾಸ ಮಾಡುತ್ತಿರುವುದರಿಂದ ಅಂತಹ ಮಾರಾಟವನ್ನು ಸಕ್ರಿಯಗೊಳಿಸುವ ಪ್ರಮುಖ ಅಂಶವೆಂದರೆ ಅಂತಹ ಉತ್ಪನ್ನಗಳಿಗೆ ಇರುವ ಕೊಳ್ಳುವ ಶಕ್ತಿಯಿಂದ ಕೂಡಿದ ಬೇಡಿಕೆಯಾಗಿದೆ. ಒಬ್ಬ ವ್ಯಕ್ತಿಯು ಸರಕುಗಳನ್ನು ಕೊಳ್ಳಲು ಅಗತ್ಯವಾದ ಸಾಮರ್ಥ್ಯವನ್ನು ಹೊಂದಿರಬೇಕು, ಇಲ್ಲವಾದಲ್ಲಿ ಮಾರುಕಟ್ಟೆಯು ಆ ವ್ಯಕ್ತಿಯ ಸರಕುಗಳ ಅವಶ್ಯಕತೆಯನ್ನು ಗುರುತಿಸುವುದಿಲ್ಲ.

ಬಂಡವಾಳದ ಮಾಲೀಕರಾಗಿ (ಬಡ್ಡಿಯನ್ನು ಸಂಪಾದಿಸುವುದು), ಕಾರ್ಮಿಕನಾಗಿ (ಕೂಲಿಯನ್ನು ಸಂಪಾದಿಸುವುದು) ಅಥವಾ ಉದ್ಯಮಶೀಲನಾಗಿ ಅಥವಾ ಭೂಮಾಲೀಕರಾಗಿ (ಗೇಣಿಯನ್ನು ಗಳಿಸುವುದು) ಪಡೆಯುವ ಆದಾಯದಿಂದ ಒಬ್ಬ ವ್ಯಕ್ತಿಯ ಸರಕುಗಳನ್ನು ಕೊಳ್ಳುವ ಸಾಮರ್ಥ್ಯವು ಬರುತ್ತದೆಂದು ನಾವು ಈಗಾಗಲೇ ಚರ್ಚಿಸಿದ್ದೇವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಜನರು ಉತ್ಪಾದನಾಂಗಗಳ ಮಾಲೀಕರಾಗಿ ಗಳಿಸುವ ಆದಾಯವನ್ನು ತಮ್ಮ ಸರಕು ಮತ್ತು ಸೇವೆಗಳ ಬೇಡಿಕೆಯನ್ನು ಈಡೆರಿಸಿಕೊಳ್ಳಲು ಬಳಸಿಕೊಳ್ಳುತ್ತಾರೆ.

ನಾವು ಇಲ್ಲಿ ಮಾರುಕಟ್ಟೆಯ ಮೂಲಕ ಸುಗಮಗೊಳಿಸಲಾಗಿರುವ ವೃತ್ತಾಕಾರದ ಹರಿವನ್ನು ನೋಡಬಹುದು. ಸರಳವಾಗಿ ಹೇಳುವುದಾದರೆ, ಉತ್ಪಾದನಾಂಗಗಳ ಬೇಡಿಕೆಯು ಸಾರ್ವಜನಿಕರಿಗೆ ಆದಾಯವನ್ನು ಸೃಷ್ಟಿಸುತ್ತದೆ, ಪ್ರತಿಯಾಗಿ, ಸಾರ್ವಜನಿಕರ ಸರಕು ಮತ್ತು ಸೇವೆಗಳ ಬೇಡಿಕೆಯು ಉದ್ಯಮ ಘಟಕಗಳಿಗೆ ಆದಾಯವನ್ನು ಸೃಷ್ಟಿಸುತ್ತದೆ ಮತ್ತು ಅವರು ಉತ್ಪಾದಿಸುವ ಉತ್ಪನ್ನಗಳ ಮಾರಾಟವನ್ನು ಸಾಧ್ಯವಾಗಿಸುತ್ತದೆ.

ಆದ್ದರಿಂದ,ಅನುಭೋಗ ಮತ್ತು ಉತ್ಪಾದನೆಯ ಸಾಮಾಜಿಕ ಕಾರ್ಯವು ಗಹನವಾದ ಸಂಬಂಧವನ್ನು ಹೊಂದಿವೆ ಮತ್ತು ವಾಸ್ತವವಾಗಿ ಇಲ್ಲಿ ವೃತ್ತಾಕಾರ ಫಲೋತ್ಪಾದನೆ ಇರುತ್ತದೆ. ಒಂದು ಆರ್ಥಿಕತೆಯಲ್ಲಿನ ಪ್ರಕ್ರಿಯೆಯು ಉತ್ಪಾದನೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವವರಿಗಾಗಿ ಆದಾಯಗಳನ್ನು (ಪಾವತಿಯನ್ನು) ಉತ್ಪಾದಿಸುತ್ತದೆ ಮತ್ತು ಉತ್ಪಾದನಾ ಪ್ರಕ್ರಿಯೆಯ ಫಲಿತಾಂಶವಾಗಿ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುತ್ತದೆ. ಹೀಗೆ ಉತ್ಪಾದಿಸಿದ ಆದಾಯವು ಅಂತಿಮ ಅನುಭೋಗಿ ಸರಕುಗಳನ್ನು ಖರೀದಿಸುವ ಸಾಮರ್ಥ್ಯವನ್ನು ಸೃಷ್ಟಿಸುತ್ತದೆ ಮತ್ತು ಆ ಮೂಲಕ ಉದ್ಯಮಗಳ ಉದ್ದೇಶವಾದ ಅವುಗಳ ಮಾರಾಟವನ್ನು ಸಕ್ರಿಯಗೊಳಿಸುತ್ತದೆ.

ಅದೇ ರೀತಿ, ಉತ್ಪಾದನಾ ಪ್ರಕ್ರಿಯೆಯಲ್ಲಿ ಉತ್ಪತ್ತಿಯಾಗುವ ಬಂಡವಾಳ ಸರಕುಗಳೂ ಸಹ ತಮ್ಮ ಉತ್ಪಾದಕರು ಆದಾಯ – ವೇತನ, ಲಾಭ ಇತ್ಯಾದಿಗಳನ್ನು – ಗಳಿಸುವುದನ್ನು ಸಾಧ್ಯವಾಗಿಸುತ್ತವೆ. ಬಂಡವಾಳ ಸರಕುಗಳು ಆರ್ಥಿಕತೆಯ ಬಂಡವಾಳ ದಾಸ್ತಾನಿಗೆ ಸೇರುತ್ತವೆ ಅಥವಾ ನಿರ್ವಹಿಸುತ್ತವೆ ಮತ್ತು ಹೀಗೆ ಇತರ ಸರಕುಗಳ ಉತ್ಪಾದನೆಯನ್ನು ಸಾಧ್ಯಗೊಳಿಸುತ್ತದೆ.

## 2.2 ರಾಷ್ಟ್ರೀಯ ಆದಾಯದ ವೃತ್ತಾಕಾರದ ಚಲನೆ ಮತ್ತು ರಾಷ್ಟ್ರೀಯ ಆದಾಯವನ್ನು ಲೆಕ್ಕಾಚಾರ ಮಾಡುವ ವಿಧಾನಗಳು: *Circlar Flow Of Income And Methods Of Calculating National Income*

ಹಿಂದಿನ ವಿಭಾಗದಲ್ಲಿನ ಆರ್ಥಿಕತೆಯ ವಿವರಣೆ ನಮಗೆ ಒಂದು ಸರಳ ಆರ್ಥಿಕತೆಯು ಸರಕಾರವಿಲ್ಲದೆ, ಬಾಹ್ಯ ವ್ಯಾಪಾರ ಅಥವಾ ಯಾವುದೇ ಉಳಿತಾಯವಿಲ್ಲದೆ, ಹೇಗೆ ಕಾರ್ಯನಿರ್ವಹಿಸಬಹುದು ಎಂಬ ಬಗ್ಗೆ ಒಂದು ಒರಟಾದ ಕಲ್ಪನೆ ಹೊಂದಲು ನೆರವಾಗುತ್ತದೆ. ಉದ್ಯಮ ಘಟಕಗಳಿಗಾಗಿ ಉತ್ಪಾದನಾ ಚಟುವಟಿಕೆಯನ್ನು ನಿರ್ವಹಿಸಿದ್ದಕ್ಕಾಗಿ ಕುಟುಂಬಗಳು ಉದ್ಯಮ ಘಟಕಗಳಿಂದ ಪಾವತಿಯನ್ನು ಪಡೆಯುತ್ತವೆ. ನಾವು ಮೊದಲೇ ಹೇಳಿದಂತೆ, ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವ ಸಮಯದಲ್ಲಿ ಮೂಲಭೂತವಾಗಿ ಮಾಡಬಹುದಾದ ನಾಲ್ಕು ವಿಧದ ಕೊಡುಗೆಗಳು ಇರಬಹುದು (ಎ) ಮಾನವ ಶ್ರಮದಿಂದ ನೀಡಲಾದ ಕೊಡುಗೆ, ಇದಕ್ಕೆ ನೀಡಿದ ಸಂಭಾವನೆಯನ್ನು ಕೂಲಿ ಎನ್ನುತ್ತೇವೆ. (ಬಿ) ಬಂಡವಾದಿಂದ ನೀಡಿದ ಕೊಡುಗೆ, ಇದಕ್ಕೆ ನೀಡಿದ ಸಂಭಾವನೆಯನ್ನು ಬಡ್ಡಿ ಎಂದು ಕರೆಯುತ್ತೇವೆ (ಸಿ) ಉದ್ಯಮಶೀಲರು ನೀಡಿದ ಕೊಡುಗೆ, ಇದಕ್ಕೆ ನೀಡಿದ ಸಂಭಾನೆಯನ್ನು ಲಾಭ ಎನ್ನುತ್ತೇವೆ (ಡಿ) ಸ್ಥಿರ ನೈಸರ್ಗಿಕ ಸಂಪನ್ಮೂಲಗಳು (ಭೂಮಿ) ನೀಡಿದ ಕೊಡುಗೆ, ಇದಕ್ಕೆ ನೀಡಿದ ಸಂಭಾವನೆಯನ್ನು ಗೇಣಿ ಎಂದು ಕರೆಯುತ್ತೇವೆ.

ಸರಳೀಕೃತ ಆರ್ಥಿಕತೆಯಲ್ಲಿ, ಕುಟುಂಬಗಳು ತಮ್ಮ ಗಳಿಕೆಯನ್ನು ವಿಲೇವಾರಿ ಮಾಡುವ ಏಕೈಕ ಮಾರ್ಗವೆಂದರೆ ತಮ್ಮ ಸಂಪೂರ್ಣ ಅದಾಯವನ್ನು ದೇಶೀಯ ಉದ್ಯಮ ಘಟಕಗಳಿಂದ ಉತ್ಪಾದಿಸಲಾದ ಸರಕು ಮತ್ತು ಸೇವೆಗಳ ಮೇಲೆ ವ್ಯಯ ಮಾಡುವುದು. ತಮ್ಮ ಆದಾಯವನ್ನು ಹೊರಹಾಕುವ ಇತರ ದಾರಿಗಳನ್ನು (ವಾಹಿನಿ) ಮುಚ್ಚಲಾಗಿರುತ್ತದೆ. ನಾವು ಕುಟುಂಬಗಳು ಉಳಿತಾಯ ಮಾಡುವುದಿಲ್ಲವೆಂದು ಊಹಿಸಿದ್ದೇವೆ, ಸರ್ಕಾರವಿಲ್ಲದ ಕಾರಣ, ಅವರು ಸರ್ಕಾರಕ್ಕೆ ತೆರಿಗೆಯನ್ನು ಪಾವತಿಸುವುದಿಲ್ಲ – ಆಮದು ಮಾಡಿಕೊಳ್ಳುವ ಸರಕುಗಳನ್ನು ಖರೀದಿಸುವುದಿಲ್ಲ ಏಕೆಂದರೆ ಸರಳ ಆರ್ಥಿಕತೆಯಲ್ಲಿ ಬಾಹ್ಯ ವ್ಯಾಪಾರ ಇರುವುದಿಲ್ಲ. ಇದರರ್ಥವೆಂದರೆ ಉತ್ಪಾದನಾಂಗಗಳು ತಾವು ಉತ್ಪಾದಿಸಲು ಸಹಾಯ ಮಾಡಿದಂತಹ ಸರಕು ಸೇವೆಗಳುನ್ನು ಕೊಳ್ಳಲು ತಮ್ಮ ಸಂಭಾವನೆಗಳನ್ನು ಬಳಸುತ್ತವೆ. ಆರ್ಥಿಕತೆಯ ಕುಟುಂಬಗಳ ಸಮಗ್ರ ಅನುಭೋಗವು ಆರ್ಥಿಕತೆಯ ಉದ್ಯಮ ಘಟಕಗಳು ಸರಕು ಮತ್ತು ಸೇವೆಗಳ ಮೇಲೆ ಮಾಡಿದ ಒಟ್ಟು ವೆಚ್ಚಕ್ಕೆ ಸಮವಾಗಿರುತ್ತದೆ. ಆದ್ದರಿಂದ ಆರ್ಥಿಕತೆಯ ಸಂಪೂರ್ಣ ಆದಾಯ, ಮಾರಾಟದ ಆದಾಯದ ರೂಪದಲ್ಲಿ ಉತ್ಪಾದಕರಿಗೆ ಹಿಂತಿರುಗಿ ಬರುತ್ತದೆ. ವ್ಯವಸ್ಥೆಯಿಂದ ಯಾವುದೇ ಸೋರಿಕೆ ಇರುವುದಿಲ್ಲ – ಉತ್ಪಾದನಾ ಘಟಕಗಳು ಉತ್ಪಾದನಾಂಗಗಳಿಗೆ ಪಾವತಿಗಳ ರೂಪದಲ್ಲಿ ವಿತರಿಸಿದ ಮೊತ್ತ (ನಾಲ್ಕು ಉತ್ಪಾದನಾಂಗಗಳು ಗಳಿಸಿದ ಸಂಭಾವನೆಗಳ ಮೊತ್ತದ ಒಟ್ಟು ಮೊತ್ತ) ಮತ್ತು ಮಾರಾಟದ ಆದಾಯವಾಗಿ ಗಳಿಸಿದ ಸಮಗ್ರ ಅನುಭೋಗದ ವೆಚ್ಚಗಳ ನಡುವೆ ವ್ಯತ್ಯಾಸವಿರುವುದಿಲ್ಲ.

ಮುಂದಿನ ಅವಧಿಯಲ್ಲಿ ಉದ್ಯಮ ಘಟಕಗಳು ಮತ್ತೊಮ್ಮೆ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುತ್ತವೆ ಮತ್ತು ಉತ್ಪಾದನಾಂಗಗಳಿಗೆ ಸಂಭಾವನೆಗಳನ್ನು ಪಾವತಿ ಮಾಡುತ್ತವೆ. ಸರಕು ಮತ್ತು ಸೇವೆಗಳನ್ನು ಖರೀದಿಸಲು ಈ ಸಂಭಾವನೆಗಳನ್ನು ಮತ್ತೊಮ್ಮೆ ಬಳಸಲಾಗುತ್ತದೆ. ಆದ್ದರಿಂದ ವರ್ಷ ಉರುಳಿದಂತೆ ಒಂದು ದೇಶದ ಒಟ್ಟು ಆದಾಯವು, ಎರಡು ವಲಯಗಳ ಮೂಲಕ, ಉದ್ಯಮ ಘಟಕ ಮತ್ತು ಕುಟುಂಬಗಳ ಮೂಲಕ ವೃತ್ತಾಕಾರದ ರೀತಿಯಲ್ಲಿ ಹಾದುಹೋಗುತ್ತದೆ ಎಂದು ಊಹಿಸಬಹುದು. ಇದನ್ನು ರೇಖಾಚಿತ್ರ 2.1 ರಲ್ಲಿ ಪ್ರತಿನಿಧಿಸಲಾಗಿದೆ. ಉದ್ಯಮ ಘಟಕಗಳಿಂದ ಉತ್ಪಾದಿಸಲಾದ ಸರಕು ಮತ್ತು ಸೇವೆಗಳ ಮೇಲೆ ಆದಾಯವನ್ನು ವೆಚ್ಚ ಮಾಡಿದಾಗ ಅದು ಉದ್ಯಮ ಘಟಕಗಳಿಂದ ಸ್ವೀಕರಿಸಿದ ಸಮಗ್ರ ವೆಚ್ಚದ ರೂಪವನ್ನು ಪಡೆಯುತ್ತದೆ. ವೆಚ್ಚದ ಮೌಲ್ಯವು ಸರಕು ಮತ್ತು ಸೇವೆಗಳ ಮೌಲ್ಯಕ್ಕೆ ಸಮನಾಗಿರಬೇಕಾಗಿರುವುದರಿಂದ



ಸಮಗ್ರ ಆದಾಯವನ್ನು ಉದ್ಯಮ ಘಟಕಗಳು ಉತ್ಪಾದಿಸಿದ ಸರಕು ಮತ್ತು ಸೇವೆಗಳ ಸಮಗ್ರ ಮೌಲ್ಯವನ್ನು ಲೆಕ್ಕಾಚಾರ ಮಾಡುವುದರಿಂದ ಮಾಪನ ಮಾಡಬಹುದಾಗಿದೆ. ಉದ್ಯಮ ಘಟಕಗಳು ಪಡೆಯುವ ಸಮಗ್ರ ಆದಾಯವನ್ನು ಉತ್ಪಾದನಾಂಗಗಳಿಗೆ ಪಾವತಿಸಿದಾಗ ಅದು ಸಮಗ್ರ ಆದಾಯದ ರೂಪವನ್ನು ಪಡೆಯುತ್ತದೆ.

ಚಿತ್ರ 2.1 ರಲ್ಲಿ, ಕುಟುಂಬಗಳಿಂದ ಉದ್ಯಮ ಘಟಕಗಳಿಗೆ ಹೋಗುವ, ಮೇಲ್ಭಾಗದ ಬಾಣದ ಗುರುತು, ಕುಟುಂಬಗಳು ಉದ್ಯಮ ಘಟಕಗಳು ಉತ್ಪಾದಿಸಿದ ಸರಕು ಮತ್ತು ಸೇವೆಗಳನ್ನು ಖರೀದಿಸಲು ವೆಚ್ಚ ಮಾಡುತ್ತವೆ ಎಂಬುದನ್ನು ಪ್ರತಿನಿಧಿಸುತ್ತದೆ. ಉದ್ಯಮಗಳಿಂದ ಕುಟುಂಬಗಳಿಗೆ ಹೋಗುವ ಎರಡನೇ ಬಾಣವು ಮೇಲಿನ ಬಾಣದ ಪ್ರತಿರೂಪವಾಗಿದೆ. ಇದು ಉದ್ಯಮ ಘಟಕಗಳಿಂದ ಕುಟುಂಬಗಳಿಗೆ ಹರಿಯುವ ಸರಕು ಮತ್ತು ಸೇವೆಗಳನ್ನು ಪ್ರತಿನಿಧಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಈ ಹರಿವುಗಳನ್ನು ಕುಟುಂಬಗಳು ಉದ್ಯಮ ಘಟಕಗಳಿಂದ ಪಡೆದಿರುತ್ತವೆ. ಇದಕ್ಕಾಗಿ ಅವರು ವೆಚ್ಚ ಮಾಡುತ್ತಾರೆ. ಸಂಕ್ಷಿಪ್ತವಾಗಿ ಮೇಲಿನ ಎರಡೂ ಬಾಣದ ಗುರುತುಗಳು ಸರಕು ಮತ್ತು ಸೇವೆಗಳ ಮಾರುಕಟ್ಟೆಯನ್ನು ಪ್ರತಿನಿಧಿಸುತ್ತವೆ. ಮೇಲಿನ ಬಾಣವು ಸರಕು ಮತ್ತು ಸೇವೆಗಳ ಪಾವತಿಗಳ ಹರಿವನ್ನು ಪ್ರತಿನಿಧಿಸುತ್ತದೆ, ಕೆಳಗಿನ ಬಾಣವು ಸರಕು ಮತ್ತು ಸೇವೆಗಳ ಹರಿವನ್ನು ಪ್ರತಿನಿಧಿಸುತ್ತದೆ. ಅದೇ ರೀತಿ ರೇಖಾ ಚಿತ್ರದ ಕೆಳಭಾಗದಲ್ಲಿರುವ ಎರಡು ಬಾಣಗಳು ಉತ್ಪಾದನಾಂಗಗಳ ಮಾರುಕಟ್ಟೆಯನ್ನು ಪ್ರತಿನಿಧಿಸುತ್ತವೆ. ಕುಟುಂಬಗಳಿಂದ ಉದ್ಯಮ ಘಟಕಗಳಿಗೆ ಹೋಗುವ ಅತ್ಯಂತ ಕೆಳಗಿನ ಬಾಣವು, ಉದ್ಯಮ ಘಟಕಗಳಿಗೆ ಕುಟುಂಬಗಳು ಸಲ್ಲಿಸುವ ಸೇವೆಗಳನ್ನು ಸಂಕೇತಿಸುತ್ತದೆ. ಈ ಸೇವೆಗಳನ್ನು ಬಳಸಿಕೊಂಡು ಉದ್ಯಮ ಘಟಕಗಳು ಉತ್ಪನ್ನಗಳನ್ನು ಉತ್ಪಾದಿಸುತ್ತವೆ. ಇದರ ಮೇಲಿರುವ ಉದ್ಯಮಘಟಕಗಳಿಂದ ಕುಟುಂಬಗಳಿಗೆ ಹೋಗುವ ಬಾಣವು, ಕುಟುಂಬಗಳು ಒದಗಿಸಿದ ಸೇವೆಗಳಿಗಾಗಿ ಉದ್ಯಮ ಘಟಕಗಳು ಮಾಡಿದ ಪಾವತಿಗಳನ್ನು ಪ್ರತಿನಿಧಿಸುತ್ತದೆ.




**ರೇಖಾಚಿತ್ರ 2.1:** ಸರಳ ಆರ್ಥಿಕತೆಯಲ್ಲಿ ಆದಾಯದ ವೃತ್ತಕಾರದ ಹರಿವು



ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಪ್ರತಿನಿಧಿಸುವ ಅಷ್ಟೇ ಪ್ರಮಾಣದ ಹಣವು ವೃತ್ತಾಕಾರದ ರೀತಿಯಲ್ಲಿ ಚಲಿಸುತ್ತದೆ. ಒಂದು ವರ್ಷದಲ್ಲಿ ಉತ್ಪತ್ತಿಯಾದ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಅಂದಾಜು ಮಾಡಲು ಬಯಸಿದರೆ, ರೇಖಾಚಿತ್ರದಲ್ಲಿನ ಯಾವುದೇ ಚುಕ್ಕಿಗಳ ಸಾಲುಗಳಲ್ಲಿ ಹರಿವಿನ ವಾರ್ಷಿಕ ಮೌಲ್ಯಗಳನ್ನು ಅಳೆಯಬಹುದು. ಉದ್ಯಮ ಘಟಕಗಳು ತಾವು ಉತ್ಪಾದಿಸುವ ಅಂತಿಮ ಸರಕು ಮತ್ತು ಸೇವೆಗಳಿಗಾಗಿ ಪಡೆಯುವ ಸಮಗ್ರ ವೆಚ್ಚದ ಮೌಲ್ಯವನ್ನು ಅಳತೆ ಮಾಡುವುದರಿಂದ ಮೇಲಿನ ಹರಿವಿನ (*A* ಬಿಂದುವಿನಲ್ಲಿ) ಅಳತೆ ಮಾಡಬಹುದಾಗಿದೆ. ಈ ವಿಧಾನವನ್ನು **ವೆಚ್ಚದ ವಿಧಾನ**ವೆಂದು ಕರೆಯಲಾಗುವುದು. ಎಲ್ಲಾ ಉದ್ಯಮಗಳಿಂದ ಉತ್ಪತ್ತಿಯಾದ ಅಂತಿಮ ಸರಕು ಮತ್ತು ಸೇವೆಗಳ ಸಮಗ್ರ ಮೌಲ್ಯವನ್ನು ಅಳೆಯುವ ಮೂಲಕ ನಾವು '*B* ನಲ್ಲಿ ಹರಿವನ್ನು ಅಳತೆ ಮಾಡಿದರೆ ಅದನ್ನು **ಉತ್ಪನ್ನದ ವಿಧಾನ** ಎಂದು ಕರೆಯಲಾಗುತ್ತದೆ. *C* ನಲ್ಲಿ ಎಲ್ಲಾ ಉತ್ಪಾದನಾಂಗಗಳ ಪಾವತಿಗಳ ಮೊತ್ತವನ್ನು ಅಳೆಯುವುದನ್ನು **ಆದಾಯದ ವಿಧಾನ** ಎಂದು ಕರೆಯಲಾಗುತ್ತದೆ.

ಆರ್ಥಿಕತೆಯ ಸಮಗ್ರ ವೆಚ್ಚವು ಉತ್ಪಾದನಾಂಗಗಳು ಗಳಿಸುವ ಸಮಗ್ರ ಆದಾಯಕ್ಕೆ ಸಮನಾಗಿರಬೇಕು ಎಂಬುದನ್ನು ಗಮನಿಸಿ (*A* ಮತ್ತು '*C*' ಬಿಂದುವಿನಲ್ಲಿ ಹರಿವು ಸಮನಾಗಿದೆ) ನಿರ್ದಿಷ್ಟ ಸಮಯದ ಅವಧಿಯಲ್ಲಿ ಕುಟುಂಬಗಳು ಸರಕುಗಳು ಮತ್ತು ಸೇವೆಗಳ ಮೇಲೆ ಹೆಚ್ಚು ಖರ್ಚು ಮಾಡಲು ನಿರ್ಧರಿಸುತ್ತವೆ ಎಂದು ಈಗ ಭಾವಿಸೋಣ. ಆ ಸಮಯದಲ್ಲಿ ಅವರು ಹೆಚ್ಚುವರಿ ಹಣವನ್ನು ವೆಚ್ಚ ಮಾಡಲು ಹಣವನ್ನು ಎಲ್ಲಿಂದ ಪಡೆಯುತ್ತಾರೆ ಎಂಬ ಪ್ರಶ್ನೆಯನ್ನು ನಾವು ನಿರ್ಲಕ್ಷಿಸೋಣ. ಏಕೆಂದರೆ ಅವರು ಈಗಾಗಲೇ ತಮ್ಮ ಎಲ್ಲಾ ಆದಾಯವನ್ನು ವ್ಯಯ ಮಾಡಿದ್ದಾರೆ. (ಹೆಚ್ಚುವರಿಯಾಗಿ ವ್ಯಯ ಮಾಡಲು ಹಣವನ್ನು ಅವರು ಎರವಲು

ಪಡೆದಿರಬಹುದು). ಅವರು ಈಗ ಸರಕು ಮತ್ತು ಸೇವೆಗಳ ಮೇಲೆ ಅಧಿಕ ವೆಚ್ಚ ಮಾಡಿದರೆ ಈ ಹೆಚ್ಚುವರಿ ಬೇಡಿಕೆಯನ್ನು ಪೂರೈಸಲು ಉದ್ಯಮ ಘಟಕಗಳು ಅಧಿಕ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುತ್ತವೆ. ಉತ್ಪಾದನೆ ಹೆಚ್ಚಿಸುವುದರಿಂದ ಉದ್ಯಮ ಘಟಕಗಳು ಸಹ ಹೆಚ್ಚುವರಿ ಉತ್ಪಾದನಾಂಗಗಳಿಗೆ ಹೆಚ್ಚಿನ ಸಂಭಾವನೆ ನೀಡಬೇಕಾಗುತ್ತದೆ. ಉದ್ಯಮ ಘಟಕಗಳು ಹೆಚ್ಚುವರಿಯಾಗಿ ಎಷ್ಟು ಹಣವನ್ನು ಪಾವತಿಸುತ್ತವೆ? ಹೆಚ್ಚುವರಿ ಪಾವತಿಗಳು, ಉತ್ಪಾದಿಸಿದ ಹೆಚ್ಚುವರಿ ಸರಕುಗಳು ಮತ್ತು ಸೇವೆಗಳ ಮೌಲ್ಯಗಳಿಗೆ ಸಮಾನವಾಗಿರಬೇಕು. ಆದ್ದರಿಂದ ಕುಟುಂಬಗಳು ಅಂತಿಮವಾಗಿ ಅವರು ಕೈಗೊಂಡ ಹೆಚ್ಚುವರಿ ಆರಂಭಿಕ ವೆಚ್ಚಕ್ಕೆ ಬೆಂಬಲ ನೀಡುವ ಹೆಚ್ಚುವರಿ ಆದಾಯವನ್ನು ಪಡೆಯುತ್ತವೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಕುಟುಂಬಗಳು ತಮ್ಮ ಸಾಧನಗಳನ್ನು ಮೀರಿ ಹೆಚ್ಚು ವ್ಯಯ ಮಾಡಲು ನಿರ್ಧರಿಸಬಹುದು. ಮತ್ತು ಕೊನೆಯಲ್ಲಿ ಅದರ ಹೆಚ್ಚುವರಿ ವೆಚ್ಚವನ್ನು ಕೈಗೊಳ್ಳಲು ನಿಖರವಾಗಿ ಅಗತ್ಯವಾದ ಮೊತ್ತದಷ್ಟು ಆದಾಯ ಹೆಚ್ಚುತ್ತದೆ. ವಿಭಿನ್ನವಾಗಿ ಹೇಳುವುದಾದರೆ, ಆರ್ಥಿಕತೆಯು ಪ್ರಸ್ತುತ ಮಟ್ಟದ ಆದಾಯಕ್ಕಿಂತ ಹೆಚ್ಚು ವೆಚ್ಚ ಮಾಡಲು ನಿರ್ಧರಿಸಬಹುದು. ಆದರೆ ಹೀಗೆ ಮಾಡುವುದರಿಂದ, ಅದರ ಆದಾಯವು ಅಂತಿಮವಾಗಿ, ಹೆಚ್ಚಿನ ಮಟ್ಟದ ವೆಚ್ಚದೊಂದಿಗೆ, ಉನ್ನತ ಮಟ್ಟದ ಸ್ಥಿರತೆಗೆ ಹೆಚ್ಚುತ್ತದೆ. ಮೊದಲಿಗೆ ಇದು ಸ್ವಲ್ಪ ವಿರೋಧಾಭಾಸವಾಗಿ ಕಾಣಬಹುದು. ಆದರೆ ಆದಾಯವು ವೃತ್ತಾಕಾರದ ರೀತಿಯಲ್ಲಿ ಚಲಿಸುತ್ತಿರುವ ಕಾರಣ, ಒಂದು ಹಂತದ ಹರಿವಿನ ಹೆಚ್ಚಳವು, ಅಂತಿಮವಾಗಿ ಎಲ್ಲಾ ಹಂತಗಳ ಹರಿವಿನ ಹೆಚ್ಚಳಕ್ಕೆ ಕಾರಣವಾಗಬೇಕು ಎಂದು ಲೆಕ್ಕಚಾರ ಮಾಡುವುದು ಕಷ್ಟಕರವಲ್ಲ. ಒಬ್ಬ ಆರ್ಥಿಕ ಏಜೆಂಟ್‌ನ ಕಾರ್ಯಕ್ಕೂ, ಇಡೀ ಆರ್ಥಿಕತೆಯ ಕಾರ್ಯ ನಿರ್ವಹಣೆಗೂ ವ್ಯತ್ಯಾಸವಿರುತ್ತದೆ ಎಂಬುದನ್ನು ತೋರಿಸಲು ಇದು ಒಂದು ಉದಾಹರಣೆಯಾಗಿದೆ. ಮೊದಲನೆಯದರಲ್ಲಿ ಒಂದು ಕುಟುಂಬದ ವೆಚ್ಚವು ಆ ಕುಟುಂಬದ ಆದಾಯಕ್ಕೆ ನಿರ್ಬಂಧಿತವಾಗುತ್ತದೆ. ಒಬ್ಬ ಏಕೈಕ ಕೆಲಸಗಾರ (ಕಾರ್ಮಿಕ) ಹೆಚ್ಚು ವೆಚ್ಚವನ್ನು ಕೈಗೊಳ್ಳಲು ನಿರ್ಧರಿಸುತ್ತಾನೆ ಮತ್ತು ಇದು ಅದಕ್ಕೆ ಸಮನಾದ ಆದಾಯದ ಹೆಚ್ಚಳ ಉಂಟು ಮಾಡುತ್ತದೆಂದು ಹೇಳಲು ಸಾಧ್ಯವಿಲ್ಲ. ಸಮಗ್ರ ವೆಚ್ಚವು ಹೇಗೆ ಸಮಗ್ರ ಆದಾಯದಲ್ಲಿ ವ್ಯತ್ಯಾಸವನ್ನುಂಟು ಮಾಡುತ್ತದೆಂದು ಮುಂದಿನ ಅಧ್ಯಾಯಗಳಲ್ಲಿ ತಿಳಿಯೋಣ.

ಮೇಲೆ ನಮೂದಿಸಿರುವ ಚಿತ್ರರೂಪದ ವಿವರಣೆಯು ಸರಳವಾದುದುದಾಗಿದೆ. ಇಂತಹ ಕಾಲ್ಪನಿಕ ಆರ್ಥಿಕತೆಯ ವೃತ್ತಾಂತದ ವಿವರಣೆಯನ್ನು **'ಸಮಗ್ರ ಆರ್ಥಿಕ ಮಾದರಿ'** ಎನ್ನುತ್ತೇವೆ. ಒಂದು ಮಾದರಿಯು ವಾಸ್ತವಿಕ ಆರ್ಥಿಕತೆಯನ್ನು ವಿವರವಾಗಿ ವಿವರಿಸುವುದಿಲ್ಲವೆಂದು ಸ್ಪಷ್ಟವಾಗುತ್ತದೆ. ಉದಾಹರಣೆಗೆ, ನಮ್ಮ ಮಾದರಿಯು ಕುಟುಂಬಗಳು ಉಳಿತಾಯ ಮಾಡುವುದಿಲ್ಲವೆಂದು, ಸರ್ಕಾರ ಅಸ್ಥಿತ್ವವಿರುವುದಿಲ್ಲವೆಂದು, ಇತರ ರಾಷ್ಟ್ರಗಳೊಂದಿಗೆ ವ್ಯಾಪಾರವಿರುವುದಿಲ್ಲವೆಂದು ಊಹಿಸುತ್ತದೆ. ಆದಾಗ್ಯೂ ಪ್ರತಿ ನಿಮಿಷದ ವಿವರಗಳಲ್ಲಿ ಆರ್ಥಿಕತೆಯನ್ನು ಹಿಡಿದಿಟ್ಟುಕೊಳ್ಳಲು ಮಾದರಿಗಳು ಬಯಸುವುದಿಲ್ಲ, ಆರ್ಥಿಕ ವ್ಯವಸ್ಥೆಯ ಕಾರ್ಯಚಟುವಟಿಕೆಯ ಕೆಲವು ಅಗತ್ಯ ಲಕ್ಷಣಗಳನ್ನು ಎತ್ತಿತೋರಿಸುವುದು ಅವುಗಳ ಪ್ರಮುಖ ಉದ್ದೇಶವಾಗಿದೆ. ಆದರೆ ಆರ್ಥಿಕತೆಯ ಅಗತ್ಯ ಲಕ್ಷಣಗಳನ್ನು ತಪ್ಪಾಗಿ ನಿರೂಪಿಸುವಷ್ಟು ಸರಳಗೊಳಿಸದಂತೆ ಎಚ್ಚರಿಕೆ ವಹಿಸಬೇಕು. ಅರ್ಥಶಾಸ್ತ್ರದ ವಿಷಯವು ಮಾದರಿಗಳಿಂದ ತುಂಬಿದ್ದು, ಅವುಗಳಲ್ಲಿ ಅನೇಕ ಮಾದರಿಗಳನ್ನು ಈ ಪುಸ್ತಕದಲ್ಲಿ ಪ್ರಸ್ತುತಪಡಿಸಲಾಗಿದೆ. ಯಾವ ವಾಸ್ತವಿಕ ಬದುಕಿನ ಸನ್ನಿವೇಶಕ್ಕೆ ಯಾವ ಮಾದರಿಯು ಅನ್ವಯಿಸುತ್ತದೆ ಎಂಬುದನ್ನು ಲೆಕ್ಕಚಾರ ಮಾಡುವುದು ಅರ್ಥಶಾಸ್ತ್ರಜ್ಞರ ಕೆಲಸವಾಗಿದೆ.

ಮೇಲೆ ವಿವರಿಸಿರುವ ನಮ್ಮ ಸರಳ ಮಾದರಿಯನ್ನು ನಾವು ಬದಲಾಯಿಸಿ, ಉಳಿತಾಯವನ್ನು ಪರಿಚಯಿಸಿದರೆ *A* ಅಥವಾ *B* ಅಥವಾ *C* ಬಿಂದುಗಳಲ್ಲಿ ಯಾವುದೇ ಬಿಂದುವಿನಲ್ಲಿ ಲೆಕ್ಕಾಚಾರ ಮಾಡಿದರೂ ಆರ್ಥಿಕತೆಯ ಸಮಗ್ರ ಆದಾಯದ ಅಂದಾಜು ಒಂದೇ ಆಗಿರುತ್ತದೆ ಎಂಬ ಪ್ರಮುಖ ತೀರ್ಮಾನವನ್ನು ಅದು ಬದಲಾಯಿಸುತ್ತದೆಯೇ? ಈ ತೀರ್ಮಾನವು ಮೂಲಭೂತ ರೀತಿಯಲ್ಲಿ ಬದಲಾಗುವುದಿಲ್ಲ ಎಂದು ಹೇಳುತ್ತದೆ. ಆರ್ಥಿಕ ವ್ಯವಸ್ಥೆಯು ಎಷ್ಟೇ ಸಂಕೀರ್ಣವಾಗಿದ್ದರೂ ಸರಕು ಮತ್ತು ಸೇವೆಗಳ ವಾರ್ಷಿಕ ಉತ್ಪಾದನೆಯ ಅಂದಾಜು ಎಲ್ಲಾ ಮೂರು ವಿಧಾನಗಳಲ್ಲೂ ಒಂದೇ ಆಗಿರುತ್ತದೆ.

ಒಂದು ಆರ್ಥಿಕತೆಯಲ್ಲಿ ಸರಕು ಮತ್ತು ಸೇವೆಗಳ ಒಟ್ಟು ಉತ್ಪಾದನಾ ಮೌಲ್ಯಗಳನ್ನು ಮೂರು ವಿಧಾನಗಳ ಮೂಲಕ ಲೆಕ್ಕಾಚಾರ ಮಾಡಬಹುದೆಂಬುದನ್ನು ನೋಡಿದ್ದೇವೆ. ಈಗ ನಾವು ಈ ಲೆಕ್ಕಾಚಾರಗಳ ವಿವಿಧ ಹಂತಗಳನ್ನು ವಿವರವಾಗಿ ಚರ್ಚಿಸುತ್ತೇವೆ.

### 2.2.1. ಉತ್ಪನ್ನ ಅಥವಾ ಮೌಲ್ಯವರ್ಧಿತ ವಿಧಾನ *The Product or Value Added Method*

ಉತ್ಪನ್ನ ವಿಧಾನದಲ್ಲಿ ನಾವು ಉತ್ಪಾದಿಸಿದ ಸರಕು ಮತ್ತು ಸೇವೆಗಳ ಸಮಗ್ರ ಮೌಲ್ಯವನ್ನು ಲೆಕ್ಕಾಚಾರ ಮಾಡುತ್ತೇವೆ. (ವರ್ಷವು ಸಮಯದ ಒಂದು ಘಟಕವಾಗಿದ್ದರೆ). ಇದನ್ನು ಮಾಡುವುದು ಹೇಗೆ? ಆರ್ಥಿಕತೆಯಲ್ಲಿ ಉತ್ಪಾದಿಸಿದ ಎಲ್ಲಾ ಸರಕು ಮತ್ತು ಸೇವೆಗಳ ಮೌಲ್ಯಗಳನ್ನು ಸೇರಿಸುತ್ತೇವೆಯೇ? ಇದನ್ನು ಅರ್ಥಮಾಡಿಕೊಳ್ಳಲು ಈ ಕೆಳಗಿನ ಉದಾಹರಣೆ ನಮಗೆ ಸಹಾಯ ಮಾಡುತ್ತದೆ.

ಆರ್ಥಿಕತೆಯಲ್ಲಿ ಎರಡೇ ವಿಧದ ಉತ್ಪಾದಕರು ಇರುತ್ತಾರೆ ಎಂದು ನಾವು ಭಾವಿಸೋಣ. ಅವರು ಗೋಧಿ ಉತ್ಪಾದಕರು (ಅಥವಾ ರೈತರು) ಮತ್ತು ಬ್ರೆಡ್ ತಯಾರಕರು (ರೊಟ್ಟಿ ಮಾಡುವವರು). ಗೋಧಿ ಉತ್ಪಾದಕರು ಗೋಧಿ ಬೆಳೆಯುತ್ತಾರೆ ಮತ್ತು ಅವರಿಗೆ ಮಾನವ ಕಾರ್ಮಿಕರ (ಶ್ರಮದ) ಹೊರತಾಗಿ ಬೇರೆ ಯಾವುದೇ ಆದಾನ ಬೇಕಾಗಿಲ್ಲ. ಅವರು ಬೇಕರಿಯವರಿಗೆ ಗೋಧಿಯ ಒಂದು ಭಾಗವನ್ನು ಮಾರಾಟ ಮಾಡುತ್ತಾರೆ. ಬೇಕರಿಯವರಿಗೆ ಬ್ರೆಡ್ ತಯಾರಿಸಲು ಗೋಧಿ ಹೊರತುಪಡಿಸಿ ಬೇರಾವುದೇ ಕಚ್ಚಾ ವಸ್ತುಗಳ ಅಗತ್ಯವಿಲ್ಲ. ಒಂದು ವರ್ಷದಲ್ಲಿ ರೈತರು ಉತ್ಪಾದಿಸಿದ ಗೋಧಿಯ ಒಟ್ಟು ಮೌಲ್ಯವು ₹ 100 ಆಗಿದೆ ಎಂದು ಭಾವಿಸೋಣ. ಇದರಿಂದ ಅವರು 50 ರೂಪಾಯಿ ಗೋಧಿಯನ್ನು ಬೇಕರಿಯವರಿಗೆ ಮಾರಾಟ ಮಾಡಿದ್ದಾರೆ. ಬೇಕರಿಯವರು ವರ್ಷವಿಡೀ ಈ ಗೋಧಿಯನ್ನು ಬಳಸುತ್ತಾರೆ ಮತ್ತು 200 ₹ ಮೌಲ್ಯದ ಬ್ರೆಡ್ ಅನ್ನು ತಯಾರಿಸುತ್ತಾರೆ. ಆರ್ಥಿಕತೆಯಲ್ಲಿ ಒಟ್ಟು ಉತ್ಪಾದನೆಯ ಮೌಲ್ಯವು ಎಷ್ಟು? ನಾವು ವಿವಿಧ ವಲಯಗಳ ಉತ್ಪಾದನೆಯ ಮೌಲ್ಯಗಳನ್ನು ಒಟ್ಟುಗೂಡಿಸುವ ಸರಳ ಮಾರ್ಗವನ್ನು ಅನುಸರಿಸಿದರೆ ನಾವು ₹ 200 ಗಳನ್ನು (ಬೇಕರಿಯವರ ಉತ್ಪಾದನೆಯ ಮೌಲ್ಯ) ₹ 100 (ರೈತರ ಉತ್ಪಾದನೆಯ ಮೌಲ್ಯ) ಕ್ಕೆ ಸೇರಿಸುತ್ತೇವೆ. ಇದರ ಫಲಿತಾಂಶವು ₹. 300 ಆಗಿರುತ್ತದೆ.

ಸ್ವಲ್ಪ ಚಿಂತನೆ ನಡೆಸಿದರೆ, ಒಟ್ಟಾರೆ ಉತ್ಪಾದನೆಯ ಮೌಲ್ಯ ₹ 300 ರಷ್ಟಲ್ಲ ಎಂದು ನಮಗೆ ತಿಳಿಯುತ್ತದೆ. ಯಾವುದೇ ಆದಾನಗಳ ಅಗತ್ಯವಿಲ್ಲದೇ 100 ರೂಪಾಯಿಗಳಷ್ಟು ಗೋಧಿಯನ್ನು ರೈತರು ಉತ್ಪಾದಿಸಿದ್ದಾರೆ. ಆದ್ದರಿಂದ ಸಂಪೂರ್ಣವಾಗಿ ₹ 100 ರೈತರ ಸೂಕ್ತ ಕೊಡುಗೆಯಾಗಿದೆ. ಆದರೆ ಬೇಕರಿಯವರ ವಿಷಯದಲ್ಲಿ ಇದು ನಿಜವಲ್ಲ. ಬೇಕರಿಯವರು ತಮ್ಮ ಬ್ರೆಡ್‌ನ್ನು ತಯಾರಿಸಲು ₹. 50 ಮೌಲ್ಯದ ಗೋಧಿಯನ್ನು ಖರೀದಿಸ –ಬೇಕಾಯಿತು. ಅವರು ಒದಗಿಸಿದ ₹ 200 ಮೌಲ್ಯದ ಬ್ರೆಡ್ ಸಂಪೂರ್ಣವಾಗಿ ಅವರ ಕೊಡುಗೆಯಾಗಿಲ್ಲ. ಬೇಕರಿಯವರ ಕೊಡುಗೆಯ ಲೆಕ್ಕಾಚಾರವನ್ನು ಮಾಡಲು ಅವರು ರೈತರಿಂದ ಖರೀದಿಸಿದ ಮೌಲ್ಯವನ್ನು ನಾವು ಕಳೆಯಬೇಕಾದ ಅಗತ್ಯವಿದೆ. ನಾವು ಇದನ್ನು ಮಾಡದಿದ್ದರೆ ದ್ವಿ ಎಣಿಕೆಯ' ತಪ್ಪನ್ನು ಮಾಡುತ್ತೇವೆ. ಏಕೆಂದರೆ ₹ 50 ಮೌಲ್ಯದ ಗೋಧಿಯನ್ನು ಎರಡು ಬಾರಿ ಎಣಿಕೆ ಮಾಡಲಾಗುತ್ತದೆ. ಮೊದಲನೇ ಬಾರಿಗೆ ಇದು ರೈತರ ಉತ್ಪಾದನೆಯ ಭಾಗವಾಗಿ ಪರಿಗಣಿಸಲಾಗಿದೆ. ಎರಡನೆಯ ಬಾರಿಗೆ ಬೇಕರಿಯವನಿಂದ ತಯಾರಿಸಿದ ಬ್ರೆಡ್ ನಲ್ಲಿ ಗೋಧಿಯ ಆದಾನದ ಮೌಲ್ಯವಾಗಿ ಇದನ್ನು ಪರಿಗಣಿಸಲಾಗುತ್ತದೆ.

ಆದ್ದರಿಂದ, ಬೇಕರಿಯವರು ಮಾಡಿದ ನಿವ್ವಳ ಕೊಡುಗೆ, ₹ 200 – ₹ 50 = ₹ 150. ಹೀಗಾಗಿ ಈ ಸರಳ ಆರ್ಥಿಕತೆಯಿಂದ ಉತ್ಪತ್ತಿಯಾಗುವ ಸರಕುಗಳ ಒಟ್ಟಾರೆ ಮೌಲ್ಯ ₹ 100 (ರೈತರ ನಿವ್ವಳ ಕೊಡುಗೆ) + ₹ 150 (ಬೇಕರಿಯವರ ನಿವ್ವಳ ಕೊಡುಗೆ) = ₹ 250.

ಒಂದು ಉದ್ಯಮ ಘಟಕವು ಮಾಡಿದ ನಿವ್ವಳ ಕೊಡುಗೆಯನ್ನು ಸೂಚಿಸಲು ಬಳಸುವ ಪದವನ್ನು ಅದರ **ಮೌಲ್ಯವರ್ಧನೆ** ಎಂದು ಕರೆಯಲಾಗುತ್ತದೆ. ಉದ್ಯಮ ಘಟಕವು ಉತ್ಪಾದನಾ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಬಳಸಲಾಗುವ ಕಚ್ಚಾಸರಕುಗಳನ್ನು ಮತ್ತೊಂದು ಉದ್ಯಮದಿಂದ ಖರೀದಿಸಿದರೆ ಅಂತಹ ಕಚ್ಚಾಸರಕುಗಳನ್ನು **'ಮಧ್ಯಂತರ ಸರಕುಗಳು'** ಎಂದು ಕರೆಯುವುದನ್ನು ನಾವು ನೋಡಿದ್ದೇವೆ. ಆದ್ದರಿಂದ, ಉದ್ಯಮ ಘಟಕದ ಉತ್ಪಾದನೆಯ ಮೌಲ್ಯ – ಉದ್ಯಮ ಘಟಕವು ಬಳಸಿದ ಮಧ್ಯಂತರ ಸರಕುಗಳ ಮೌಲ್ಯ = ಒಂದು ಉದ್ಯಮ ಘಟಕದಿಂದ ಆದ ಮೌಲ್ಯ ವರ್ಧನೆ. ಒಂದು ಉದ್ಯಮ ಘಟಕವು ಸೇರಿಸಿದ (ಮೌಲ್ಯವರ್ಧನೆ ಮಾಡಿದ) ಮೌಲ್ಯವನ್ನು ಶ್ರಮ, ಬಂಡವಾಳ, ಸಂಘಟನೆ ಮತ್ತು ಭೂಮಿ ಎಂಬ ನಾಲ್ಕು ಉತ್ಪಾದನಾಂಗಗಳ ನಡುವೆ ವಿತರಿಸಲಾಗುತ್ತದೆ. ಹಾಗಾಗಿ ಉದ್ಯಮ ಘಟಕವು ಪಾವತಿಸಿದ ಕೂಲಿ, ಬಡ್ಡಿ, ಲಾಭಗಳು ಮತ್ತು ಗೇಣಿಗಳನ್ನು

ಉದ್ಯಮ ಘಟಕಗಳು ಸೇರಿಸಿದ ಮೌಲ್ಯಕ್ಕೆ ಸೇರಿಸಲಾಗಿದೆ. ಸೇರಿಸಲಾದ ಮೌಲ್ಯವು **ಹರಿವಿನ ಚಲಕ**ವಾಗಿದೆ. ನಾವು ಮೇಲೆ ನೀಡಲಾದ ಉದಾಹರಣೆಯನ್ನು ಕೋಷ್ಟಕ 2.1ರ ಮೂಲಕ ಪ್ರತಿನಿಧಿಸಬಹುದು.

**ಕೋಷ್ಟಕ 2.1: ಉತ್ಪಾದನೆ, ಮಧ್ಯಂತರ ಸರಕುಗಳು ಮತ್ತು ಮೌಲ್ಯ ವರ್ಧನೆ.**

| | ರೈತ | ಬೇಕರಿಯವನು |
|---|---|---|
| ಒಟ್ಟು ಉತ್ಪಾದನೆ | 100 | 200 |
| ಬಳಸಲ್ಪಟ್ಟ ಮಧ್ಯಂತರ ಸರಕುಗಳು | 0 | 50 |
| ಮೌಲ್ಯ ಸೇರಿಸಲಾಗಿದೆ | 100 | 200 – 50 =150 |

ಇಲ್ಲಿ ಎಲ್ಲಾ ಚಲಕಗಳನ್ನು ಹಣದ ರೂಪದಲ್ಲಿ ವ್ಯಕ್ತಪಡಿಸಲಾಗಿದೆ. ಇಲ್ಲಿ ಪಟ್ಟಿ ಮಾಡಿದ ವಿವಿಧ ಚಲಕಗಳನ್ನು ಮೌಲ್ಯಮಾಪನ ಮಾಡಲು ಸರಕುಗಳ ಮಾರುಕಟ್ಟೆಯ ಬೆಲೆಗಳ ಬಗ್ಗೆ ನಾವು ಯೋಚಿಸಬಹುದು. ಮತ್ತು ನಾವು ಉತ್ಪಾದನಾ ಸರಪಳಿಯಲ್ಲಿ ಹೆಚ್ಚಿನ ಆಟಗಾರರನ್ನು (ಉತ್ಪಾದನಾಕಾರರನ್ನು) ಪರಿಚಯಿಸಬಹುದು ಮತ್ತು ಅದನ್ನು ಇನ್ನಷ್ಟು ವಾಸ್ತವಿಕವಾಗಿ ಸಂಕೀರ್ಣಗೊಳಿಸಬಹುದು. ಉದಾಹರಣೆಗೆ, ರೈತರು ಗೋಧಿಯನ್ನು ಉತ್ಪಾದಿಸಲು ರಸಗೊಬ್ಬರಗಳು ಅಥವಾ ಕೀಟನಾಶಕಗಳನ್ನು ಬಳಸಿಕೊಳ್ಳಬಹುದು. ಗೋಧಿಯ ಉತ್ಪಾದನೆಯ ಮೌಲ್ಯದಿಂದ ಈ ಆದಾನಗಳ ಮೌಲ್ಯವನ್ನು ಕಡಿತಗೊಳಿಸಬೇಕು. ಅಥವಾ ಬೇಕರಿಯವನು ಬಹುಶ: ಬ್ರೆಡ್ ಅನ್ನು ಹೋಟೆಲ್ ಗಳಿಗೆ ಮಾರಬಹುದು, ಮಧ್ಯಂತರ ಸರಕುಗಳ ಮೌಲ್ಯ ಕಳೆಯುವುದರ ಮೂಲಕ ಇದರ ಮೌಲ್ಯವರ್ಧನೆಯನ್ನು ಲೆಕ್ಕಚಾರ ಮಾಡಬೇಕಾಗುತ್ತದೆ. (ಈ ಸಂದರ್ಭದಲ್ಲಿ ಬ್ರೆಡ್).

ನಾವು ಈಗಾಗಲೇ ಸವಕಳಿ ಪರಿಕಲ್ಪನೆಯನ್ನು ಪರಿಚಯಿಸಿದ್ದೇವೆ, ಇದನ್ನು ಸ್ಥಿರ ಬಂಡವಾಳದ ಬಳಕೆ ಎಂದು ಕರೆಯಲಾಗುತ್ತದೆ. ಉತ್ಪಾದನೆಯನ್ನು ಕೈಗೊಳ್ಳಲು ಬಳಸುವ ಬಂಡವಾಳವು ಸವಕಳಿಗೆ ಒಳಗಾಗುವುದರಿಂದ ಉತ್ಪಾದಕರು ಬಂಡವಾಳ ಮೌಲ್ಯವನ್ನು ಸ್ಥಿರವಾಗಿಟ್ಟುಕೊಳ್ಳಲು ಬದಲಿಕೆಯ ಹೂಡಿಕೆಯನ್ನು ಕೈಗೊಳ್ಳಬೇಕು. ಬದಲಿಕೆಯ ಹೂಡಿಕೆಯು ಹೂಡಿಕೆದಾರರ ಬಂಡವಾಳದ ಸವಕಳಿಯಾಗಿರುತ್ತದೆ. ನಾವು ಮೌಲ್ಯವರ್ಧನೆಗೆ ಸವಕಳಿಯನ್ನು ಸೇರಿಸಿದರೆ ಲೆಕ್ಕಾಚಾರದ ನಂತರ ಪಡೆದಿರುವ ಮೌಲ್ಯ ವರ್ಧನೆಯನ್ನು ಒಟ್ಟು ಮೌಲ್ಯವರ್ಧಿನೆ ಎಂದು ಕರೆಯಲಾಗುತ್ತದೆ. ಒಟ್ಟು ಮೌಲ್ಯ ವರ್ಧನೆಯಲ್ಲಿ, ಸವಕಳಿ ವೆಚ್ಚವನ್ನು ಕಳೆದರೆ **ನಿವ್ವಳ ಮೌಲ್ಯವರ್ಧನೆ**ಯನ್ನು ಪಡೆಯುತ್ತೇವೆ. ಒಟ್ಟು ಮೌಲ್ಯ ವರ್ಧನೆಯಂತಲ್ಲದೆ, ನಿವ್ವಳ ಮೌಲ್ಯ ವರ್ಧನೆಯು ಬಂಡವಾಳ ಅನುಭವಿಸುವ ಸವಕಳಿಯನ್ನು ಒಳಗೊಂಡಿರುವುದಿಲ್ಲ. ಉದಾಹರಣೆಗೆ, ಉದ್ಯಮ ಘಟಕವೊಂದು ವರ್ಷಕ್ಕೆ ₹ 100 ಮೌಲ್ಯದ ಸರಕುಗಳನ್ನು ಉತ್ಪಾದಿಸುತ್ತದೆ ಎಂದು ಕೊಳ್ಳೋಣ. ಅದು ಬಳಸುವ ಮಧ್ಯಂತರ ಸರಕುಗಳ ಮೌಲ್ಯವು ₹. 20 ಮತ್ತು ಬಂಡವಾಳ ಬಳಕೆಯ ಮೌಲ್ಯವು ₹ 10 ಆಗಿದ್ದಾಗ ಉದ್ಯಮದ ಒಟ್ಟು ವಾರ್ಷಿಕ ಮೌಲ್ಯ ವರ್ಧಿತವು ₹ *100* – ₹ 20 = ವರ್ಷಕ್ಕೆ ₹ 80 ಆಗಿರುತ್ತದೆ. ವಾರ್ಷಿಕ ನಿವ್ವಳ ಮೌಲ್ಯ ವರ್ಧಿತವು ₹ *100* – ₹ *20* – ₹ 10 = ವರ್ಷಕ್ಕೆ ₹ 70 ಆಗಿರುತ್ತದೆ.

ನಾವು ಮೌಲ್ಯವರ್ಧನೆಯನ್ನು ಲೆಕ್ಕಾಚಾರ ಮಾಡುವಾಗ ಉದ್ಯಮ ಘಟಕದ ಉತ್ಪಾದನಾ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ, ಆದರೆ ಉದ್ಯಮ ಘಟಕಕ್ಕೆ ತನ್ನೆಲ್ಲಾ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಧ್ಯವಾಗದಿರಬಹುದು. ಇಂತಹ ಒಂದು ಸಂದರ್ಭದಲ್ಲಿ ಅದು ವರ್ಷದ ಕೊನೆಯಲ್ಲಿ ಕೆಲವು ದಾಸ್ತಾನನ್ನು ಹೊಂದಿರುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಉದ್ಯಮ ಘಟಕವು ಪ್ರಾರಂಭದಲ್ಲಿಯೇ ಕೆಲವು ಮಾರಾಟವಾಗದ ಸಂಗ್ರಹವನ್ನು ಹೊಂದಿರಬಹುದು. ಮುಂದಿನ ವರ್ಷದಲ್ಲಿ ಅದು ಕಡಿಮೆ ಉತ್ಪಾದನೆ ಮಾಡಿರುತ್ತದೆ. ಆದರೆ ಅದು ವರ್ಷದ ಪ್ರಾರಂಭದಲ್ಲಿದ್ದ ದಾಸ್ತಾನನ್ನು ಮಾರಾಟ ಮಾಡುವ ಮೂಲಕ ಮಾರುಕಟ್ಟೆಯಲ್ಲಿನ ಬೇಡಿಕೆಯನ್ನು ಪೂರೈಸಿರುತ್ತದೆ. ಒಂದು ಉದ್ಯಮ ಘಟಕವು ಉದ್ದೇಶಪೂರ್ವಕವಾಗಿ ಅಥವಾ ಉದ್ದೇಶರಹಿತವಾಗಿ ಹೊಂದಿರುವ ಈ ದಾಸ್ತಾನನ್ನು ನಾವು ಹೇಗೆ ಪರಿಗಣಿಸಬೇಕು? ಅಲ್ಲದೇ ಉದ್ಯಮ ಘಟಕವು ಇತರ ಉದ್ಯಮ ಘಟಕಗಳಿಂದ ಕಚ್ಚಾ ಸರಕುಗಳನ್ನು ಖರೀದಿಸುತ್ತದೆ ಎಂದು ನೆನಪಿನಲ್ಲಿಡಿ.

ಬಳಸಲಾಗುವ ಕಚ್ಚಾ ಸರಕುಗಳ ಭಾಗವನ್ನು ಮಧ್ಯವರ್ತಿ ಸರಕುಗಳಾಗಿ ವರ್ಗೀಕರಿಸಲಾಗಿದೆ, ಬಳಸಲಾಗದ ಭಾಗಕ್ಕೆ ಏನಾಗುತ್ತದೆ ?

ಅರ್ಥಶಾಸ್ತ್ರದಲ್ಲಿ, ಒಂದು ಉದ್ಯಮ ಘಟಕದ ಮಾರಾಟವಾಗದ ಸಿದ್ಧ ಪಡಿಸಿದ ಸರಕುಗಳನ್ನು ಅಥವಾ ಅರೆ–ಸಿದ್ಧಪಡಿಸಿದ ಸರಕುಗಳು ಅಥವಾ ಒಂದು ವರ್ಷದಿಂದ ಮುಂದಿನ ವರ್ಷಕ್ಕೆ ನಿರ್ವಹಣೆ ಮಾಡುವ ಕಚ್ಚಾ ವಸ್ತುಗಳನ್ನು ತಪಶೀಲುಪಟ್ಟಿ (ಸರಕು ಸಾಮಗ್ರಿಗಳ ಉಳಿಕೆ – *Inventory*) ಎಂದು ಕರೆಯಲಾಗುತ್ತದೆ. ತಪಶೀಲುಪಟ್ಟಿಯು ದಾಸ್ತಾನಿನ ಚಲಕವಾಗಿದೆ. ಇದು ವರ್ಷದ ಆರಂಭದಲ್ಲಿ ಮೌಲ್ಯವನ್ನು ಹೊಂದಿರಬಹುದು; ಅದಕ್ಕಿನ್ನ ಹೆಚ್ಚಿನ ಮೌಲ್ಯವನ್ನು ಒಂದು ವರ್ಷದ ಕೊನೆಯಲ್ಲಿ ಹೊಂದಿರಬಹುದು. ಅಂತಹ ಸಂದರ್ಭದಲ್ಲಿ ತಪಶೀಲುಪಟ್ಟಿಯು ಹೆಚ್ಚಾಗುತ್ತವೆ (ಅಥವಾ ಶೇಖರಣೆಯಾಗುತ್ತವೆ). ವರ್ಷಾಂತ್ಯದಲ್ಲಿ ಹೋಲಿಸಿದರೆ ವರ್ಷದ ಆರಂಭಕ್ಕಿಂತ ತಪಶೀಲುಪಟ್ಟಿಯ ಮೌಲ್ಯವು ಕಡಿಮೆ ಇದ್ದರೆ ತಪಶೀಲುಪಟ್ಟಿಯು ಕಡಿಮೆಯಾಗುತ್ತದೆ (ಕುಸಿದಿದೆ ಎಂದರ್ಥವಾಗುತ್ತದೆ). ಆದ್ದರಿಂದ ನಾವು ಈ ತೀರ್ಮಾನಕ್ಕೆ ಬರಬಹುದು **ಒಂದು ವರ್ಷದ ಒಂದು ಉದ್ಯಮ ಘಟಕದ ತಪಶೀಲುಪಟ್ಟಿಯ ವ್ಯತ್ಯಾಸ ≡ ಆ ವರ್ಷದ ಉದ್ಯಮ ಘಟಕದ ಉತ್ಪಾದನೆ – ಉದ್ಯಮ ಘಟಕದ ಆ ವರ್ಷದ ಮಾರಾಟ.**

ಅನನ್ಯತೆ '≡' ಸಮಾನತೆಯನ್ನು ಸೂಚಿಸುತ್ತದೆ. ಸಮತೆ ('=') ಯಂತಲ್ಲದೇ ಅನನ್ಯತೆಯು ಎಡಭಾಗ ಅಥವಾ ಬಲಭಾಗ ಅಥವಾ ಬಲಭಾಗಗಲ್ಲಿ ಯಾವ ಚಲಕಗಳು ಇರುತ್ತವೆಂಬುದನ್ನು ಪರಿಗಣಿಸದೆ ಯಾವಾಗಲೂ ಸಿಂಧುವಾಗುತ್ತದೆ. ಉದಾಹರಣೆಗೆ, $2 + 2 \equiv 4$ ಎಂದು ಬರೆಯಬಹುದು, ಏಕೆಂದರೆ ಇದು ಯಾವಾಗಲೂ ಸತ್ಯವಾಗಿದೆ. ಆದರೆ ನಾವು $2 \times x = 4$ ಎಂದೇ ಬರೆಯಬೇಕು. ಏಕೆಂದರೆ ಇದು $x$ ನ ನಿರ್ದಿಷ್ಟ ಮೌಲ್ಯ ಎರಡು ಬಾರಿ 4 ಕ್ಕೆ ಸಮನಾಗಿರುತ್ತದೆ (ಅಂದರೆ $x = 2$ ಇದ್ದಾಗ ) ಮತ್ತು ಯಾವಾಗಲೂ ಅಲ್ಲ. ನಾವು $2 \times x \equiv 4$ ಎಂದು ಬರೆಯುವುದಿಲ್ಲ.





ಉದ್ಯಮ ಘಟಕದ ಉತ್ಪಾದನೆಯು ≡ ವರ್ಧಿತವಾದ ಮೌಲ್ಯ + ಉದ್ಯಮ ಘಟಕವು ಬಳಸಿದ ಮಧ್ಯವರ್ತಿ ಸರಕುಗಳು ಎಂಬುದನ್ನು ಗಮನಿಸಿ, ಇದರಿಂದ ನಾವು ಪಡೆಯುವುದೇನೆಂದರೆ ಉದ್ಯಮ ಘಟಕದ ಒಂದು ವರ್ಷದಲ್ಲಿನ ತಪಶೀಲುಪಟ್ಟಿಯ ಬದಲಾವಣೆ ≡ ವರ್ಧಿತವಾದ ಮೌಲ್ಯ + ಉದ್ಯಮ ಘಟಕವು ಬಳಸಿದ ಮಧ್ಯಂತರ ಸರಕುಗಳು – ಒಂದು ವರ್ಷದಲ್ಲಿನ ಉದ್ಯಮ ಘಟಕದ ಮಾರಾಟ.

ಉದಾಹರಣೆಗೆ ಒಂದು ಉದ್ಯಮ ಘಟಕವು ವರ್ಷದ ಪ್ರಾರಂಭದಲ್ಲಿ ₹ 100 ಮೌಲ್ಯದ ಮಾರಾಟವಾಗದ ದಾಸ್ತಾನನ್ನು ಹೊಂದಿದೆ ಎಂದುಕೊಳ್ಳೋಣ. ಈ ವರ್ಷದಲ್ಲಿ ಉದ್ಯಮ ಘಟಕವು ₹ 1000 ಮೌಲ್ಯದ ಸರಕುಗಳನ್ನು ಉತ್ಪಾದಿಸುತ್ತದೆ ಮತ್ತು ಅದರಲ್ಲಿ ₹ 800 ಮೌಲ್ಯಗಳಷ್ಟು ಸರಕುಗಳನ್ನು ಮಾರಾಟ ಮಾಡುತ್ತದೆ. ಹೀಗಾಗಿ ಇಲ್ಲಿ ಉತ್ಪಾದನೆ ಮತ್ತು ಮಾರಾಟದ ನಡುವಿನ ವ್ಯತ್ಯಾಸವು ₹ 200 ಆಗುತ್ತದೆ. ಈ ₹ 200 ಮೌಲ್ಯವು ತಪಶೀಲುಪಟ್ಟಿಯ ಬದಲಾವಣೆಯಾಗಿದೆ. ಆದ್ದರಿಂದ ವರ್ಷದ ಕೊನೆಯಲ್ಲಿ ತಪಶೀಲುಪಟ್ಟಿಯು ₹ 100 + ₹ 200 = ₹ 300 ಆಗುತ್ತದೆ. ಇಲ್ಲಿ ತಪಶೀಲುಪಟ್ಟಿಯ ಬದಲಾವಣೆಯು ಒಂದು ಸಮಯದ ಅವಧಿಯಲ್ಲಿ ಆಗುತ್ತದೆ ಎಂಬುದನ್ನು ಗಮನಿಸಿ ಆದ್ದರಿಂದ ಇದು **ಹರಿವಿನ ಚಲಕ**ವಾಗಿದೆ.

ತಪಶೀಲುಪಟ್ಟಿಗಳನ್ನು ಬಂಡವಾಳವೆಂದು ಪರಿಗಣಿಸಲಾಗಿದೆ. ಒಂದು ಉದ್ದಿಮೆ ಘಟಕದ ದಾಸ್ತಾನಿಗೆ ಸೇರ್ಪಡೆಯಾಗುವ ಬಂಡವಾಳವನ್ನು **ಹೂಡಿಕೆ**ಯೆಂದು ಕರೆಯಲಾಗುತ್ತದೆ. ಆದ್ದರಿಂದ ಉದ್ದಿಮೆಯ ತಪಶೀಲುಪಟ್ಟಿಯಲ್ಲಿನ ಬದಲಾವಣೆಯನ್ನು ಹೂಡಿಕೆಯೆಂದು ಪರಿಗಣಿಸಲಾಗುತ್ತದೆ. ಹೂಡಿಕೆಯಲ್ಲಿ ಮೂರು ಪ್ರಮುಖ ವರ್ಗಗಳಿವೆ. ಮೊದಲನೆಯದು – ಒಂದು ವರ್ಷದಲ್ಲಿ ಒಂದು ಉದ್ಯಮ ಘಟಕದ ತಪಶೀಲುಪಟ್ಟಿಯ ಮೌಲ್ಯದಲ್ಲಿನ ಹೆಚ್ಚಳ. ಇದನ್ನು ಉದ್ಯಮ ಘಟಕ ಕೈಗೊಂಡಿರುವ ಹೂಡಿಕೆ ವೆಚ್ಚ ಎಂದು ಪರಿಗಣಿಸಲಾಗುತ್ತದೆ. ಎರಡನೇ ವರ್ಗದ ಹೂಡಿಕೆಯು ಸ್ಥಿರ ವ್ಯಾಪಾರ ಹೂಡಿಕೆಯಾಗಿದೆ, ಇದನ್ನು ಉದ್ಯಮ ಘಟಕವು ನಿಯೋಜಿಸಿಕೊಳ್ಳುವ ಯಂತ್ರೋಪಕರಣ, ಕಾರ್ಖಾನೆಯ ಕಟ್ಟಡಗಳು, ಮತ್ತು ಸಲಕರಣೆಗಳು ಎಂದು ವ್ಯಾಖ್ಯಾನಿಸಲಾಗುತ್ತದೆ. ಹೂಡಿಕೆಯ ಕೊನೆಯ ವರ್ಗ ವಸತಿ ಹೂಡಿಕೆಯಾಗಿದೆ, ಇದು ವಸತಿ ಸೌಕರ್ಯಗಳನ್ನು ಉಲ್ಲೇಖಿಸುತ್ತದೆ.



ತಪಶೀಲುಪಟ್ಟಿಯಲ್ಲಿನ ಬದಲಾವಣೆಗಳು ಯೋಜಿತ ಆಗಿರಬಹುದು ಅಥವಾ ಯೋಜಿತವಲ್ಲದಿರಬಹುದು. ಮಾರಾಟದಲ್ಲಿ ಅನಿರೀಕ್ಷಿತ ಇಳಿಕೆ ಸಂಭವಿಸಿದರೆ ಉದ್ಯಮ ಘಟಕದಲ್ಲಿ ಮಾರಾಟ ಮಾಡದೆ ಉಳಿದ ದಾಸ್ತಾನು ಇರುತ್ತದೆ. ಇದನ್ನು ಉದ್ಯಮ ಘಟಕವು ನಿರೀಕ್ಷಿಸಿರುವುದಿಲ್ಲ ಹಾಗಾಗಿ **ಯೋಜಿತವಲ್ಲದ ತಪಶೀಲುಪಟ್ಟಿಗಳ** ಶೇಖರಣೆಯಾಗುತ್ತದೆ. ಇದಕ್ಕೆ ವಿರುದ್ಧದ ಸನ್ನಿವೇಶದಲ್ಲಿ ಮಾರಾಟದಲ್ಲಿ ಅನಿರೀಕ್ಷಿತ ಏರಿಕೆ ಎದುರಾದ ಸಂದರ್ಭದಲ್ಲಿ **ಯೋಜಿತವಲ್ಲದ ತಪಶೀಲುಪಟ್ಟಿಯ ಕುಸಿತ** ಕಂಡುಬರುತ್ತದೆ.

ಈ ಕೆಳಗಿನ ಉದಾಹರಣೆಯ ಸಹಾಯದಿಂದ ಇದನ್ನು ವಿವರಿಸಬಹುದು. ಉದ್ಯಮಘಟಕವೊಂದು ಶರ್ಟ್‌ಗಳನ್ನು ತಯಾರಿಸುತ್ತದೆ ಎಂದು ಊಹಿಸಿಕೊಳ್ಳಿ. ಅದು ವರ್ಷಾರಂಭದಲ್ಲಿ 100 ಶರ್ಟ್‌ಗಳ ತಪಶೀಲುಪಟ್ಟಿಯನ್ನು ಹೊಂದಿರುತ್ತದೆ. ಮುಂಬರುವ ವರ್ಷದಲ್ಲಿ ಇದು 1,000 ಶರ್ಟ್‌ಗಳ ಮಾರಾಟವನ್ನು ನಿರೀಕ್ಷಿಸುತ್ತದೆ. ಆದ್ದರಿಂದ ಅದು 1,000 ಶರ್ಟ್‌ಗಳನ್ನು ಉತ್ಪಾದಿಸುತ್ತದೆ, ವರ್ಷಾಂತ್ಯದಲ್ಲಿ ತಪಶೀಲುಪಟ್ಟಿಯಲ್ಲಿ 100 ಶರ್ಟ್‌ಗಳನ್ನು ಉಳಿಸಿಟ್ಟುಕೊಳ್ಳುವ ನಿರೀಕ್ಷೆ ಇಟ್ಟುಕೊಂಡಿರುತ್ತದೆ. ಆದರೆ ಅದೇ ವರ್ಷದಲ್ಲಿ ಶರ್ಟ್‌ಗಳ ಮಾರಾಟವು ಅನಿರೀಕ್ಷಿತವಾಗಿ ಕಡಿಮೆಯಾಗುತ್ತದೆ. ಉದ್ಯಮ ಘಟಕವು 600 ಶರ್ಟ್‌ಗಳನ್ನು ಮಾತ್ರ ಮಾರಾಟ ಮಾಡಲು ಸಮರ್ಥವಾಗುತ್ತದೆ. ಇದರ ಅರ್ಥ ಉದ್ಯಮ ಘಟಕವು 400 ಮಾರಾಟವಾಗದ ಶರ್ಟ್‌ಗಳನ್ನು ಹೊಂದಿರುತ್ತದೆ. ವರ್ಷದಲ್ಲಿ ಉದ್ಯಮ ಘಟಕವು 400 + 100 = 500 ಅಂಗಿಗಳೊಂದಿಗೆ ಕೊನೆಗೊಳ್ಳುತ್ತದೆ. ತಪಶೀಲುಪಟ್ಟಿಯಲ್ಲಿ 400 ಶರ್ಟ್‌ಗಳ ಅನಿರೀಕ್ಷಿತ ಹೆಚ್ಚಳವು ಯೋಜಿತವಲ್ಲದ ತಪಶೀಲುಪಟ್ಟಿಯ ಶೇಖರಣೆಗೆ ಉದಾಹರಣೆಯಾಗಿದೆ. ಹಾಗಲ್ಲದೆ ಮಾರಾಟವು 1,000 ಶರ್ಟ್‌ಗಳಿಗಿಂತ ಹೆಚ್ಚಾದರೆ ನಾವು ತಪಶೀಲುಪಟ್ಟಿಯ ಯೋಜಿತವಲ್ಲದ ಕುಸಿತವನ್ನು ಹೊಂದುತ್ತೇವೆ. ಉದಾಹರಣೆಗೆ, ಒಂದುವೇಳೆ ಮಾರಾಟವು 1,050 ಆದರೆ, ಆಗ 1,000 ಶರ್ಟ್‌ಗಳನ್ನು ಮಾತ್ರವಲ್ಲದೆ ಉದ್ಯಮ ಘಟಕವು 50 ಶರ್ಟ್‌ಗಳನ್ನು ತಪಶೀಲುಪಟ್ಟಿಯಿಂದ ಮಾರಾಟ ಮಾಡಬೇಕಾಗುತ್ತದೆ. ತಪಶೀಲುಪಟ್ಟಿಯಲ್ಲಿನ 50 ಶರ್ಟ್‌ಗಳಷ್ಟು ಅನಿರೀಕ್ಷಿತ ಇಳಿಕೆ ತಪಶೀಲುಪಟ್ಟಿಯಲ್ಲಿನ ಕುಸಿತಕ್ಕೆ ಉದಾಹರಣೆಯಾಗಿದೆ.

**ತಪಶೀಲುಪಟ್ಟಿಯ ಯೋಜಿತ ಸಂಗ್ರಹಣೆ ಅಥವಾ ಕುಸಿತಕ್ಕೆ** ಯಾವುದು ಉದಾಹರಣೆಯಾಗಿರ–ಬಹುದು? ಉದ್ಯಮ ಘಟಕವು ವರ್ಷದಲ್ಲಿ 100 ಶರ್ಟ್‌ಗಳಿಂದ 200 ಶರ್ಟ್‌ಗಳಿಗೆ ತಪಶೀಲುಪಟ್ಟಿಯನ್ನು ಹೆಚ್ಚಿಸಲು ಬಯಸಿದೆ ಎಂದು ಭಾವಿಸೋಣ. ವರ್ಷದಲ್ಲಿ 1,000 ಶರ್ಟ್‌ಗಳ ಮಾರಾಟವನ್ನು (ಮೊದಲಿನಂತೆ) ನಿರೀಕ್ಷಿಸುತ್ತಾ ಉದ್ಯಮ ಘಟಕವು 1000 + 100 = 1,100 ಶರ್ಟ್‌ಗಳನ್ನು ಉತ್ಪಾದಿಸುತ್ತದೆ. ವಾಸ್ತವವಾಗಿ ಮಾರಾಟವು 1,000 ಶರ್ಟ್‌ಗಳಾಗಿದ್ದರೆ, ಆ ಉದ್ಯಮ ಘಟಕವು ತಪಶೀಲುಪಟ್ಟಿಯ ಹೆಚ್ಚಳವನ್ನು ಹೊಂದುತ್ತದೆ. ಉದ್ಯಮ ಘಟಕವು ಯೋಚಿಸಿದಂತೆ ತಪಶೀಲುಪಟ್ಟಿ 200 ಶರ್ಟ್‌ಗಳಾಗುತ್ತದೆ. ಈ ಏರಿಕೆಯು ತಪಶೀಲುಪಟ್ಟಿಯ ಯೋಜಿತ ಶೇಖರಣೆಯ ಒಂದು ಉದಾಹರಣೆಯಾಗಿದೆ. ಮತ್ತೊಂದೆಡೆ ಉದ್ಯಮವು 100 ರಿಂದ 25 ರವರೆಗೆ ತಪಶೀಲುಪಟ್ಟಿಯನ್ನು ಕಡಿಮೆ ಮಾಡಲು ಬಯಸಿದರೆ, ಆಗ ಅದು 1000 – 75 = 925 ಶರ್ಟ್‌ಗಳನ್ನು ಉತ್ಪಾದಿಸುತ್ತದೆ. ಏಕೆಂದರೆ ಇದು ಆರಂಭದ ತಪಶೀಲುಪಟ್ಟಿಯಲ್ಲಿನ 100 ಶರ್ಟ್‌ಗಳಲ್ಲಿ 75 ಅನ್ನು ಮಾರಾಟ ಮಾಡಲು ಯೋಜಿಸಿದೆ. (ಇದರಿಂದ ಈ ಉದ್ಯಮ ಘಟಕವು ವರ್ಷಾಂತ್ಯದ ಕೊನೆಯಲ್ಲಿ 100 – 75 = 25 ಶರ್ಟಗಳ ತಪಶೀಲುಪಟ್ಟಿಯನ್ನು ಹೊಂದಲು ಬಯಸುತ್ತದೆ.) ಒಂದು ವೇಳೆ ಉದ್ಯಮ ಘಟಕವು ನಿರೀಕ್ಷಿಸಿದಂತೆ ಮಾರಾಟವು ವಾಸ್ತವವಾಗಿ 1000 ಶರ್ಟ್‌ಗಳಾದರೆ ಉದ್ಯಮ ಘಟಕವು ಯೋಜಿತ ತಪಶೀಲುಪಟ್ಟಿಯಲ್ಲಿ 25 ಶರ್ಟ್‌ಗಳನ್ನು ಹೊಂದುತ್ತದೆ.

ಮುಂದಿನ ಅಧ್ಯಾಯಗಳಲ್ಲಿ ಯೋಜಿತವಲ್ಲದ ಮತ್ತು ಯೋಜಿತ ತಪಶೀಲುಪಟ್ಟಿಯಲ್ಲಿನ ಬದಲಾವಣೆಗಳ ನಡುವಿನ ವ್ಯತ್ಯಾಸದ ಬಗ್ಗೆ ಹೆಚ್ಚಿನ ಅರಿವನ್ನು ಪಡೆಯೋಣ.

ತಪಶೀಲುಪಟ್ಟಿಯ ಬದಲಾವಣೆಯ ಗ್ರಹಿಕೆಯಿಂದ ಈ ಕೆಳಗಿನ ಸಮೀಕರಣವನ್ನು ಬರೆಯಬಹುದು. ಉದ್ಯಮ ಘಟಕದ ಒಟ್ಟು ಮೌಲ್ಯವು *i(GVAi)* ≡ ಉದ್ಯಮ ಘಟಕದಲ್ಲಿ ಉತ್ಪಾದನೆಯಾಗುವ ಉತ್ಪನ್ನದ ಸಮಗ್ರ ಮೌಲ್ಯ *i (Qi)* – ಉದ್ಯಮ ಘಟಕವು ಬಳಸಿದ ಮಧ್ಯಂತರ ಸರಕುಗಳ ಮೌಲ್ಯ *(Zi)*.

*(GVAi)* ≡ ಉದ್ಯಮ ಘಟಕದ ಮಾರಾಟದ ಮೌಲ್ಯ *(Vi)* + ದಾಸ್ತಾನುಗಳಲ್ಲಿನ ಬದಲಾವಣೆಯ ಮೌಲ್ಯ (A*i*) – ಉದ್ಯಮ ಘಟಕವು ಬಳಸುವ ಮಧ್ಯಂತರ ಸರಕುಗಳ ಮೌಲ್ಯ *(Zi)* (2.1)

ಕೆಳಗಿನವುಗಳ ಬಳಕೆಯಿಂದ ಸಮೀಕರಣ (2.1) ನ್ನು ಪಡೆಯಲಾಗಿದೆ.

ಒಂದು ವರ್ಷದಲ್ಲಿನ ಉದ್ಯಮ ಘಟಕದ ತಪಶೀಲುಪಟ್ಟಿಯಲ್ಲಿನ ಬದಲಾವಣೆ ≡ ಆ ವರ್ಷದ ಉದ್ಯಮ ಘಟಕದ ಉತ್ಪಾದನೆ – ಉದ್ಯಮ ಘಟಕದ ಆ ವರ್ಷದ ಮಾರಾಟ:

ಉದ್ಯಮ ಘಟಕದ ಮಾರಾಟವು ಕೇವಲ ದೇಶೀಯ ಖರೀದಿದಾರರಿಗಷ್ಟೇ ಅಲ್ಲದೆ ವಿದೇಶೀಯ ಖರೀದಿದಾರರನ್ನೂ (ಎರಡನೆಯದನ್ನು ರಫ್ತು ಎಂದು ಕರೆಯಲಾಗುತ್ತದೆ) ಒಳಗೊಂಡಿರುತ್ತದೆಂಬುದನ್ನು ಗಮನಿಸಬೇಕಾಗುತ್ತದೆ. ಮೇಲೆ ತಿಳಿಸಿದ ಚಲಕಗಳೆಲ್ಲವೂ, ಹರಿವಿನ ಚಲಕಗಳೆಂಬುದನ್ನೂ ಸಹ ಗಮನಿಸಬೇಕು. ಸಾಮಾನ್ಯವಾಗಿ ಇದನ್ನು ವಾರ್ಷಿಕ ಆಧಾರದ ಮೇಲೆ ಮಾಪನ ಮಾಡಲಾಗುತ್ತದೆ. ಆದ್ದರಿಂದ ಅವು ವರ್ಷವಾರು ಹರಿವುಗಳ ಮೌಲ್ಯಗಳನ್ನು ಅಳೆಯುತ್ತವೆ.

ಉದ್ಯಮ ಘಟಕ್ಕೆ ಸೇರಿಸಲಾದ ನಿವ್ವಳ ಮೌಲ್ಯ $i \equiv GVAi$ - ಉದ್ಯಮ ಘಟಕದ ಸವಕಳಿ $i(Di)$

ಒಂದು ವರ್ಷದಲ್ಲಿ ಆರ್ಥಿಕತೆಯ ಎಲ್ಲಾ ಉದ್ಯಮ ಘಟಕಗಳ ಒಟ್ಟು ಮೌಲ್ಯ ವರ್ಧನೆಯನ್ನು ಸೇರಿಸಿದರೆ ಆ ಆರ್ಥಿಕತೆಯು ಒಂದು ವರ್ಷದಲ್ಲಿ ಉತ್ಪಾದಿಸಿದ ಸರಕು ಮತ್ತು ಸೇವೆಗಳ ಸಮಗ್ರ ಮೊತ್ತದ ಮೌಲ್ಯದ ಮಾಪನವನ್ನು ಪಡೆಯುತ್ತೇವೆ (ನಾವು ಗೋಧಿ – ಬ್ರೆಡ್ ಉದಾಹರಣೆಯಲ್ಲಿ ಮಾಡಿದಂತೆ).

ಇಂತಹ ಅಂದಾಜುಗಳನ್ನು **ಒಟ್ಟು ದೇಶೀಯ ಉತ್ಪನ್ನ** ಎಂದು ಕರೆಯುತ್ತೇವೆ (*GDP*). ಆದ್ದರಿಂದ

$GDP \equiv$ ಆರ್ಥಿಕತೆಯಲ್ಲಿನ ಎಲ್ಲಾ ಉದ್ಯಮ ಘಟಕಗಳು ಸೇರಿಸಿದ ಒಟ್ಟು ಮೌಲ್ಯದ ಮೊತ್ತವಾಗಿದೆ.

ಆರ್ಥಿಕತೆಯಲ್ಲಿ, ಪ್ರತಿಯೊಂದಕ್ಕೂ 1 ರಿಂದ $N$ ಸಂಖ್ಯೆಯವರೆಗೆ ನೀಡಿದ ಸಂಖ್ಯೆಯಷ್ಟು ಉದ್ಯಮ ಘಟಕಗಳಿದ್ದರೆ ಆಗ $GDP \equiv$ ಆರ್ಥಿಕತೆಯಲ್ಲಿನ ಎಲ್ಲಾ ಉದ್ಯಮ ಘಟಕಗಳು ಸೇರಿಸಿದ ಒಟ್ಟು ಮೌಲ್ಯದ ಒಟ್ಟು ಮೊತ್ತವಾಗಿದೆ.

$\equiv GVA_1 + GVA_2 + . . . + GVA_N$

ಆದ್ದರಿಂದ

$$GDP \equiv \sum_{i=1}^{N} GVA_i \qquad (2.2)$$

$\Sigma$ ಸಂಕೇತವು ಸಂಕ್ಷಿಪ್ತ ರೂಪವಾಗಿದ್ದು ಇದನ್ನು ಸಂಕಲನವನ್ನು ಸೂಚಿಸಲು ಬಳಸಲಾಗುತ್ತದೆ.

ಉದಾಹರಣೆಗೆ,

$\sum_{i=1}^{N} X_i$, $X_1 + X_2 + ... + X_N$ ಗೆ ಸಮವಾಗಿರುತ್ತದೆ.

ಈ ವಿಷಯದಲ್ಲಿ $\sum_{i=1}^{N} GVA_i$ ಎಲ್ಲಾ $N$ ಉದ್ಯಮ ಘಟಕಗಳಿಂದ ಸೇರಿಸದ ಸಮಗ್ರ ಮೌಲ್ಯದ ಒಟ್ಟು ಮೊತ್ತವನ್ನು ಪ್ರತಿನಿಧಿಸುತ್ತದೆ. 1ನೇ ಉದ್ಯಮ ಘಟಕವು ಸೇರಿಸಿದ ಒಟ್ಟು ಮೌಲ್ಯದಲ್ಲಿ ಅದು ಬಳಸಿಕೊಂಡ ಬಂಡವಾಳದ ಮೇಲಿನ ಸವಕಳಿಯನ್ನು ಕಳೆದರೆ ಆ ಉದ್ಯಮ ಘಟಕ ಸೇರಿಸಿದ ನಿವ್ವಳ ಮೌಲ್ಯ (*NVAi*) ಲಭಿಸುತ್ತದೆ.

ಹೀಗಾಗಿ $NVAi \equiv GVAi - Di$

ಆದ್ದರಿಂದ $GVAi \equiv NVAi + Di$

ಇದು $i$ ನ ಉದ್ಯಮ ಘಟಕಕ್ಕೆ ಮಾತ್ರ. ಇಂತಹ $N$ ಸಂಖ್ಯೆಯಷ್ಟು ಉದ್ಯಮ ಘಟಕಗಳಿರುತ್ತವೆ. ಆದ್ದರಿಂದ ಇಡೀ ಆರ್ಥಿಕತೆಯ *GDP*ಯು $N$ ಸಂಖ್ಯೆಯ ಎಲ್ಲಾ ಉದ್ಯಮ ಘಟಕಗಳು ಸೇರಿಸಿದ ಮೌಲ್ಯದ ಒಟ್ಟು ಮೊತ್ತವಾಗಿದೆ. ಎಲ್ಲಾ ಉದ್ಯಮ ಘಟಕಗಳು ಸೇರಿಸಿದ ಮೌಲ್ಯದ ನಿವ್ವಳ ಮೊತ್ತ ಮತ್ತು ಅವುಗಳ ಸವಕಳಿಯನ್ನು ಕೂಡಿಸುವುದರಿಂದ *GDP* ಯನ್ನು ಪಡೆಯಬಹುದು. ಅಂದರೆ,

$$GDP \equiv \sum_{i=1}^{N} NVA_i + \sum_{i=1}^{N} D_i$$

ಅರ್ಥವ್ಯವಸ್ಥೆಯ ಸಮಗ್ರ ದೇಶೀಯ ಉತ್ಪನ್ನವು ಒಟ್ಟಾರೆ ಸೇರಿಸಿದ ನಿವ್ವಳ ಮೌಲ್ಯದ ಮೊತ್ತ ಮತ್ತು ಆರ್ಥಿಕತೆಯ ಎಲ್ಲ ಉದ್ಯಮ ಘಟಕಗಳ ಸವಕಳಿಯಾಗಿದೆ ಎಂದು ಇದು ಸೂಚಿಸುತ್ತದೆ. ಎಲ್ಲಾ ಸಂಸ್ಥೆಗಳಿಂದ ಸೇರಿಸಲಾದ ನಿವ್ವಳ ಮೌಲ್ಯದ ಮೊತ್ತವನ್ನು ನಿವ್ವಳ ದೇಶೀಯ ಉತ್ಪನ್ನವೆಂದು ಕರೆಯಲಾಗುವುದು.

ಸಾಂಕೇತಿಕವಾಗಿ, $NDP \equiv \sum_{i=1}^{N} NVA_i$

### 2.2.2. ವೆಚ್ಚದ ವಿಧಾನ *Expenditure Method*

*GDP*ಯನ್ನು ಲೆಕ್ಕಹಾಕಲು ಒಂದು ಪರ್ಯಾಯ ಮಾರ್ಗವೆಂದರೆ ಉತ್ಪನ್ನಗಳ ಬೇಡಿಕೆಯ ಪರಿಗಣನೆ. ಈ ವಿಧಾನವನ್ನು ವೆಚ್ಚದ ವಿಧಾನವೆಂದು ಕರೆಯಲಾಗುತ್ತದೆ. ಈ ಮೊದಲು ವಿವರಿಸಿದ ರೈತ, ಬೇಕರಿಯವನ ಉದಾಹರಣೆಯಲ್ಲಿ ವೆಚ್ಚದ ವಿಧಾನದಿಂದ ಆರ್ಥಿಕತೆಯಲ್ಲಿ ಉತ್ಪನ್ನದ ಸಮಗ್ರ ಮೌಲ್ಯವನ್ನು ಈ ಕೆಳಗಿನ ರೀತಿಯಲ್ಲಿ ಲೆಕ್ಕಚಾರ ಮಾಡಲಾಗುತ್ತದೆ. ಈ ವಿಧಾನದಲ್ಲಿ ನಾವು ಪ್ರತಿ ಉದ್ಯಮ ಘಟಕವು ಕೈಗೊಳ್ಳುವ ಅಂತಿಮ ವೆಚ್ಚವನ್ನು ಸೇರಿಸುತ್ತೇವೆ. ಅಂತಿಮ ವೆಚ್ಚವೆಂದರೆ, ಮಧ್ಯಂತರ ಉದ್ದೇಶಗಳಿಗಾಗಿ ಮಾಡದಿರುವ ವೆಚ್ಚದ ಭಾಗವಾಗಿದೆ. ಬೇಕರಿಯವರು ರೈತರಿಂದ ಖರೀದಿಸುವ ₹50 ಮೌಲ್ಯದ ಗೋಧಿಯನ್ನು ಮಧ್ಯವರ್ತಿ ಸರಕುಗಳೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ ಅಂತಿಮ ವಿಭಾಗದ ವೆಚ್ಚದ ಅಡಿಯಲ್ಲಿ ಇದು ಬರುವುದಿಲ್ಲ. ಆದ್ದರಿಂದ ಆರ್ಥಿಕತೆಯ ಉತ್ಪನ್ನದ ಮೌಲ್ಯವು ₹200 ಆಗಿದೆ. (ಬೇಕರಿಯವನು ಸ್ವೀಕರಿಸಿದ ಅಂತಿಮ ವೆಚ್ಚ) + ₹50 (ರೈತರು ಪಡೆದ ಅಂತಿಮ ವೆಚ್ಚ) = ವರ್ಷಕ್ಕೆ ₹250.

ಉದ್ಯಮ ಘಟಕ *i*, ಈ ಕೆಳಗಿನ ಖಾತೆಗಳಲ್ಲಿ ಅಂತಿಮ ವೆಚ್ಚವನ್ನು ಮಾಡಬಹುದು. (*a*) ಉದ್ಯಮ ಘಟಕವು ಉತ್ಪಾದಿಸಿದ ಸರಕು ಸೇವೆಗಳ ಮೇಲೆ ಮಾಡಿದ ಅಂತಿಮ ಅನುಭೋಗದ ವೆಚ್ಚ ಇದನ್ನು, ನಾವು *Ci* ಯಿಂದ ಸೂಚಿಸುತ್ತೇವೆ. ಅನುಭೋಗದ ವೆಚ್ಚವನ್ನು ಕೈಗೊಳ್ಳುವವರು ಹೆಚ್ಚಾಗಿ ಕುಟುಂಬಗಳೇ ಆಗಿವೆಯೆಂದು ನಾವು ಗಮನಿಸಬಹುದು. ಕೆಲವೊಮ್ಮೆ ಉದ್ಯಮಘಟಕಗಳು, ತಮ್ಮ ಅತಿಥಿಗಳು ಅಥವಾ ನೌಕರರನ್ನು ಸತ್ಕರಿಸಲು ಉಪಭೋಗ್ಯಗಳನ್ನು ಖರೀದಿಸುವಂತಹ ಸನ್ನಿವೇಶವು ಇದಕ್ಕೆ ಅಪವಾದವಾಗಬಹುದು. (ಬಿ) ಉದ್ಯಮ ಘಟಕ *i* ಯು ಉತ್ಪಾದಿಸಿದ ಬಂಡವಾಳ ಸರಕುಗಳ ಮೇಲೆ ಉಂಟಾಗುವ ಇತರ ಉದ್ಯಮಘಟಕಗಳ ಅಂತಿಮ ಹೂಡಿಕೆಯ ವೆಚ್ಚ *Ii* ಆಗಿದೆ. *GDP* ಯ ಲೆಕ್ಕಚಾರದಲ್ಲಿ ಮಧ್ಯಂತರ ಸರಕುಗಳ ಮೇಲಿನ ವೆಚ್ಚವನ್ನು ಸೇರಿಸುವುದಿಲ್ಲ ಎಂಬುದನ್ನು ಗಮನಿಸಿ. ಆದರೆ ಹೂಡಿಕೆಯ ಮೇಲಿನ ವೆಚ್ಚವನ್ನು ಸೇರಿಸಲಾಗಿದೆ. ಕಾರಣವೇನೆಂದರೆ ಹೂಡಿಕೆಯ ಸರಕುಗಳು ಉದ್ಯಮ ಘಟಕದೊಂದಿಗೆ ಉಳಿಯುತ್ತವೆ, ಆದರೆ ಮಧ್ಯಂತರ ಸರಕುಗಳನ್ನು ಉತ್ಪಾದನಾ ಪ್ರಕ್ರಿಯೆಯಲ್ಲಿ ಉಪಯೋಗಿಸಲಾಗುತ್ತದೆ. (ಸಿ) ಉದ್ಯಮ ಘಟಕವು ಉತ್ಪಾದಿಸಿದ ಅಂತಿಮ ಸರಕು ಮತ್ತು ಸೇವೆಗಳ ಮೇಲೆ ಸರ್ಕಾರವು ಮಾಡುವ ವೆಚ್ಚ *i*, ನಾವು ಅದನ್ನು *Gi* ನಿಂದ ಸೂಚಿಸೋಣ. ಸರ್ಕಾರದ ಅಂತಿಮ ವೆಚ್ಚವು ಅನುಭೋಗದ ಮತ್ತು ಹೂಡಿಕೆಯ ವೆಚ್ಚಗಳೆರಡನ್ನೂ ಒಳಗೊಂಡಿದೆ ಎಂಬುದನ್ನು ಗಮನಿಸಿ (ಡಿ) ವಿದೇಶದಲ್ಲಿ ತನ್ನ ಸರಕು ಮತ್ತು ಸೇವೆಗಳನ್ನು ಮಾರಾಟ ಮಾಡುವ ಮೂಲಕ ಉದ್ಯಮ ಘಟಕವು ರಫ್ತು ಆದಾಯವನ್ನು ಗಳಿಸುತ್ತದೆ. ಇದನ್ನು $X_i$ ನಿಂದ ಸೂಚಿಸಲಾಗುತ್ತದೆ.

ಆದ್ದರಿಂದ ಉದ್ಯಮ ಘಟಕ *i* ಗಳಿಸುವ ಆದಾಯದ ಒಟ್ಟು ಮೊತ್ತವನ್ನು

$RV_i \equiv i$ ಉದ್ಯಮ ಘಟಕ ಪಡೆದ ಅಂತಿಮ ಅನುಭೋಗ ವೆಚ್ಚ, ಹೂಡಿಕೆ ವೆಚ್ಚ, ಸರ್ಕಾರದ ವೆಚ್ಚ ಮತ್ತು ರಫ್ತು ವೆಚ್ಚಗಳ ಒಟ್ಟು ಮೊತ್ತ .

$$RV_i \equiv C_i + I_i + G_i + X_i$$

*N* ಉದ್ಯಮಗಳಿದ್ದರೆ, ಅವುಗಳನ್ನು ಒಟ್ಟು ಗೂಡಿಸಿದರೆ

$\sum_{i=1}^{N} RV_i \equiv$ ಆರ್ಥಿಕತೆಯಲ್ಲಿನ ಎಲ್ಲ ಉದ್ಯಮ ಘಟಕಗಳು ಪಡೆದ ಅಂತಿಮ, ಅನುಭೋಗ ವೆಚ್ಚ, ಹೂಡಿಕೆ ವೆಚ್ಚ ಸರ್ಕಾರದ ವೆಚ್ಚ ಮತ್ತು ರಫ್ತು ವೆಚ್ಚಗಳ ಒಟ್ಟು ಮೊತ್ತ

$$\equiv \sum_{i=1}^{N} C_i + \sum_{i=1}^{N} I_i + \sum_{i=1}^{N} G_i + \sum_{i=1}^{N} X_i \quad \text{-------} \qquad (2.3)$$

C ಯು ಇಡೀ ಆರ್ಥಿಕತೆಯ ಅಂತಿಮ ಅನುಭೋಗದ ಒಟ್ಟು ವೆಚ್ಚವಾಗಿರಲಿ. $C$ ನ ಒಂದು ಭಾಗವನ್ನು ಅನುಭೋಗಿ ಸರಕುಗಳ ಆಮದುಗಳ ಮೇಲೆ ವೆಚ್ಚ ಮಾಡಲಾಗಿದೆ ಎಂಬುದನ್ನು ಗಮನಿಸಿ. $C = \sum_{i=1}^{N} C_i + C_m$. ಅನುಭೋಗಿ ಸರಕುಗಳನ್ನು ಆಮದು ಮಾಡಿಕೊಳ್ಳುವ ವೆಚ್ಚವನ್ನು $C_m$ ಸೂಚಿಸುತ್ತದೆ. ಆದ್ದರಿಂದ $C - C_m$ ದೇಶೀಯ ಉದ್ಯಮ ಘಟಕಗಳ ಮೇಲೆ ಮಾಡಿದ ಸಮಗ್ರ ಅಂತಿಮ ಅನುಭೋಗ ವೆಚ್ಚದ ಭಾಗವನ್ನು ಸೂಚಿಸುತ್ತದೆ. ಅಂತೆಯೇ $I - I_m$ ದೇಶೀಯ ಉದ್ಯಮ ಘಟಕದಲ್ಲಿ ವೆಚ್ಚ ಮಾಡಲಾಗಿರುವ ಅಂತಿಮ ಹೂಡಿಕೆಯ ಸಮಗ್ರ ವೆಚ್ಚದ ಭಾಗವನ್ನು ಪ್ರತಿನಿಧಿಸಲಿ, '$I$' ಆರ್ಥಿಕತೆಯ ಸಮಗ್ರ ಅಂತಿಮ ಹೂಡಿಕೆಯ ವೆಚ್ಚದ ಮೌಲ್ಯ ಮತ್ತು ಇದರಲ್ಲಿ $I_m$ ವಿದೇಶಿ ಬಂಡವಾಳ ಹೂಡಿಕೆ ಸರಕುಗಳಿಗೆ ಮಾಡಿದೆ ವೆಚ್ಚವಾಗಿದೆ. ಅಂತೆಯೇ ದೇಶೀಯ ಉದ್ಯಮ ಘಟಕಗಳಿಗೆ ವೆಚ್ಚ ಮಾಡಲಾದ ಸಮಗ್ರ ಅಂತಿಮ ಸರಕಾರೀ ವೆಚ್ಚದ ಭಾಗವನ್ನು $G - G_m$ ಪ್ರತಿನಿಧಿಸುತ್ತದೆ. ಇಲ್ಲಿ $G$ ಎಂಬುದು ಆರ್ಥಿಕತೆಯ ಸರ್ಕಾರದ ಸಮಗ್ರ ವೆಚ್ಚವಾಗಿದೆ ಮತ್ತು $Gm$ ಆಮದುಗಳ ಮೇಲೆ ಮಾಡುವ $G$ ನ ಭಾಗವಾಗಿದೆ.

ಆದ್ದರಿಂದ $\sum_{i=1}^{N} C_i \equiv$ ಆರ್ಥಿಕತೆಯಲ್ಲಿನ ಎಲ್ಲಾ ಉದ್ಯಮ ಘಟಕಗಳು ಸ್ವೀಕರಿಸಿದ ಅಂತಿಮ ಅನುಭೋಗ ವೆಚ್ಚದ ಒಟ್ಟು ಮೊತ್ತ $\equiv C - C_m$; $\sum_{i=1}^{N} I_i \equiv$ ಆರ್ಥಿಕತೆಯಲ್ಲಿ ಎಲ್ಲಾ ಉದ್ಯಮ ಘಟಕಗಳಿಂದ ಪಡೆದ ಅಂತಿಮ ಬಂಡವಾಳ ವೆಚ್ಚಗಳ ಒಟ್ಟು ಮೊತ್ತ $\equiv I - I_m$; $\sum_{i=1}^{N} G_i$ ಆರ್ಥಿಕತೆಯ ಎಲ್ಲ ಉದ್ಯಮ ಘಟಕಗಳಿಂದ ಸ್ವೀಕರಿಸಿದ ಸರಕಾರದ ಅಂತಿಮ ವೆಚ್ಚದ ಒಟ್ಟು ಮೊತ್ತ $\equiv G - G_m$.

ಸಮೀಕರಣ 2.3ಗೆ ಆದೇಶಿಸಿದಾಗ ನಾವು

$$\sum_{i=1}^{N} RV_i \equiv C - C_m + I - I_m + G - G_m + \Sigma^{N}_{i=1} X_i$$
$$\equiv C + I + G + \sum_{i=1}^{N} X_i - (C_m + I_m + G_m)$$
$$\equiv C + I + G + X - M \text{ ಪಡೆಯುತ್ತೇವೆ.}$$

ಇಲ್ಲಿ $X$ $\sum_{i=1}^{N}$ $X_i$ ಎಂಬುದು, ಒಂದು ಆರ್ಥಿಕತೆಯ ರಫ್ತುಗಳ ಮೇಲೆ ವಿದೇಶಿಯರ ಸಮಗ್ರ ವೆಚ್ಚವನ್ನು ಸೂಚಿಸುತ್ತದೆ. $M \equiv C_m + I_m + G_m$ ಎಂಬುದು ಆರ್ಥಿಕತೆಯಿಂದ ಉಂಟಾಗುವ ಸಮಗ್ರ ಆಮದು ವೆಚ್ಚವಾಗಿದೆ.

$GDP$ $\equiv$ ಆರ್ಥಿಕತೆಯಲ್ಲಿ ಉದ್ಯಮ ಘಟಕಗಳಿಂದ ಪಡೆದ ಎಲ್ಲಾ ವೆಚ್ಚಗಳ ಒಟ್ಟು ಮೊತ್ತವಾಗಿದೆ ಎಂಬುದು ನಮಗೆ ತಿಳಿದಿದೆ.

ಬೇರೆ ಪದಗಳಲ್ಲಿ ಹೇಳುವುದಾದರೆ

$$GDP \equiv \sum_{i=1}^{N} RV_i \equiv C + I + G + X - M \quad (2.4)$$

$GDP$ ಯನ್ನು ವೆಚ್ಚದ ವಿಧಾನದ ಪ್ರಕಾರ ಸಮೀಕರಣ (2.4) ವ್ಯಕ್ತ ಪಡಿಸುತ್ತದೆ. ಬಲಗಡೆಯಿರುವ ಐದು ಚಲಕಗಳಲ್ಲಿ, ಬಂಡವಾಳ ಹೂಡಿಕೆಯ ವೆಚ್ಚ, I ಹೆಚ್ಚು ಅಸ್ಥಿರವಾಗಿದೆ ಎಂಬುದನ್ನು ಗಮನಿಸಬಹುದು.

### 2.2.3 ವರಮಾನ ವಿಧಾನ *Income Method*

ನಾವು ಆರಂಭದಲ್ಲಿ ತಿಳಿಸಿದಂತೆ, ಆರ್ಥಿಕತೆಯಲ್ಲಿ ಸಮಗ್ರವಾಗಿ ಪಡೆದುಕೊಳ್ಳುವ ಎಲ್ಲಾ ಅಂತಿಮ ವೆಚ್ಚಗಳ ಮೊತ್ತವು ಎಲ್ಲಾ ಉತ್ಪಾದನಾಂಗಗಳಿಂದ ಪಡೆದ ವರಮಾನಗಳಿಗೆ ಸಮನಾಗಿರಬೇಕು (ಅಂತಿಮ ವೆಚ್ಚವೆಂದರೆ ಅಂತಿಮ ಸರಕುಗಳ ಮೇಲಿನ ವೆಚ್ಚ. ಇದು ಮಧ್ಯವರ್ತಿ ಸರಕುಗಳ ಮೇಲಿನ ವೆಚ್ಚಗಳನ್ನು ಒಳಗೊಂಡಿರುವುದಿಲ್ಲ). ಎಲ್ಲಾ ಉದ್ಯಮ ಘಟಕಗಳಿಂದ ಗಳಿಸಿದ ವರಮಾನವನ್ನು ಉತ್ಪಾದನಾಂಗಗಳ ನಡುವೆ ವೇತನಗಳ, ಕೂಲಿಗಳ, ಲಾಭಗಳ, ಬಡ್ಡಿಗಳಿಕೆ ಮತ್ತು ಗೇಣಿಗಳ ರೂಪದಲ್ಲಿ ವಿತರಿಸಬೇಕೆಂಬ ಸರಳ ಕಲ್ಪನೆಯನ್ನು ಅನುಸರಿಸುತ್ತದೆ. ಆರ್ಥಿಕತೆಯಲ್ಲಿ $M$ ಸಂಖ್ಯೆಯಷ್ಟು ಕುಟುಂಬಗಳಿವೆ. ಒಂದು ನಿರ್ದಿಷ್ಟ ವರ್ಷದಲ್ಲಿ $i$ ಕುಟುಂಬವು ಪಡೆದ ಕೂಲಿ ಮತ್ತು ವೇತನವು $W_i$ ನಷ್ಟು ಆಗಿದೆ. ಅಂತೆಯೇ ಒಟ್ಟು ಲಾಭಗಳು, ಬಡ್ಡಿಯ ಪಾವತಿಗಳು ಮತ್ತು ಬಾಡಿಗೆಗಳಾಗಿ $P_i$, $In_i$, $R_i$ ಗಳಾಗಿರಲಿ.

ಆದ್ದರಿಂದ GDP ಯನ್ನು ಹೀಗೆ ನೀಡಲಾಗಿದೆ

$$GDP \equiv \sum_{i=1}^{M} W_i + \sum_{i=1}^{M} P_i + \sum_{i=1}^{M} =In_i + \sum_{i=1}^{M} =R_i \equiv W + P + In + R \qquad (2.5)$$

ಇಲ್ಲಿ, $\sum_{i=1}^{M} W_i \equiv W$, $\sum_{i=1}^{M} P_i \equiv P$, $\sum_{i=1}^{M} In_i \equiv In$, $\sum_{i=1}^{M} R_i \equiv R$

ಸಮೀಕರಣಗಳಾದ (2.2). (2.4) ಮತ್ತು (2.5) ಒಟ್ಟಾಗಿ ತೆಗೆದುಕೊಂಡಾಗ ನಾವು ಪಡೆಯುತ್ತೇವೆ

$$GDP \equiv \sum_{i=1}^{N} GVA_i \equiv C + I + G + X - M \equiv W + P + In + R \qquad (2.6)$$

ಉದ್ಯಮ ಘಟಕಗಳ ಯೋಜಿತ ಮತ್ತು ಯೋಜನಾ ರಹಿತ ಹೂಡಿಕೆಯ ಒಟ್ಟು ಮೊತ್ತವನ್ನು $I$ ಅನನ್ಯತೆಯಲ್ಲಿ (2.6) ಪ್ರತಿನಿಧಿಸುತ್ತದೆ ಎಂಬುದನ್ನು ಗಮನಿಸಬೇಕಾಗಿದೆ.

ಹೀಗಾಗಿ (2.2), (2.4) ಮತ್ತು (2.6) ಅನನ್ಯತೆಗಳು ಒಂದೇ ಚಲಕದ ಅಂದರೆ *GDP*ಯ ವಿಬಿನ್ನ ಅಭಿವ್ಯಕ್ತಿಗಳಾಗಿರುವುದರಿಂದ GDP, ನಾವು ಚಿತ್ರ (2.2)ರ ಮೂಲಕ ಸಮಾನತೆಯನ್ನು ಪ್ರತಿನಿಧಿಸಬಹುದು.




**ರೇಖಾಚಿತ್ರ. 2.2:** ಮೂರು ವಿಧಾನಗಳಿಂದ GDP ಯನ್ನು ರೇಖಾಚಿತ್ರದಿಂದ ಪ್ರತಿನಿಧಿಸುವುದು

ಕುಟುಂಬಗಳು ಹೇಗೆ ಅವರ ಆದಾಯವನ್ನು ವಿಲೇವಾರಿ ಮಾಡುತ್ತವೆಂಬುದನ್ನು ಪರಿಶೀಲಿಸುವ ಅಗತ್ಯವಿದೆ. ಅವರು ವಿಲೇವಾರಿ ಮಾಡಬಹುದಾದ ಮೂರು ಪ್ರಮುಖ ಮಾರ್ಗಗಳಿವೆ. ಒಂದೋ ಅವರು ಅದನ್ನು ಅನುಭೋಗಿಸುತ್ತಾರೆ, ಅಥವಾ ಉಳಿತಾಯ ಮಾಡಿರುತ್ತಾರೆ ಅಥವಾ ತೆರಿಗೆಗಳನ್ನು ಪಾವತಿಸಿರುತ್ತಾರೆ. (ಯಾವುದೇ ನೆರವು ಅಥವಾ ಕೊಡುಗೆ, ವರ್ಗಾವಣೆ ಪಾವತಿಗಳನ್ನು ಸಾಮಾನ್ಯವಾಗಿ ವಿದೇಶಗಳಿಗೆ ಕಳುಹಿಸಲಾಗಿಲ್ಲ ಎಂದು ಭಾವಿಸಲಾಗಿದೆ. ಇದು ಅವರ ಆದಾಯವನ್ನು ವೆಚ್ಚ ಮಾಡಲು ಇರುವ ಮತ್ತೊಂದು ಮಾರ್ಗವಾಗಿದೆ). $S$ ಅವರ ಸಮಗ್ರ ಉಳಿತಾಯವನ್ನು ಮತ್ತು $T$ ಅವರು ಪಾವತಿಸಿದ ಒಟ್ಟು ತೆರಿಗೆಗಳ ಮೊತ್ತವನ್ನು ಪ್ರತಿನಿಧಿಸುತ್ತದೆ ಎಂದುಕೊಳ್ಳೋಣ ಆದ್ದರಿಂದ

$$GDP \equiv C + I + T \qquad (2.7)$$

(2.4) ಅನ್ನು (2.7) ರ ಜೊತೆ ಹೋಲಿಸಿದರೆ

$$C + I + G + X - M \equiv C + S + T$$ ಆಗುತ್ತದೆ

ಎರಡೂ ಕಡೆಗಳಲ್ಲಿ ಅಂತಿಮ ಅನುಭೋಗದ ವೆಚ್ಚ '$C$' ಅನ್ನು ತೆಗೆದು ಹಾಕಿದರೆ

$$I + G + X - M \equiv S + T$$

ಯನ್ನು ಪಡೆಯುತ್ತೇವೆ ಇನ್ನೊಂದು ರೀತಿಯಲ್ಲಿ

$$(I - S) + (G - T) \equiv M - X \qquad (2.8)$$

ಸಮೀಕರಣ 2.8ರಲ್ಲಿ ಸರ್ಕಾರ ಗಳಿಸಿದ ತೆರಿಗೆ ಆದಾಯಕ್ಕಿಂತ ಅದರ ವೆಚ್ಚವು ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ ಎಂಬುದನ್ನು $G - T$ ಮಾಪನ ಮಾಡುತ್ತದೆ. ಇದನ್ನು **ಮುಂಗಡ ಪತ್ರದ ಕೊರತೆಯೆಂದು** ಉಲ್ಲೇಖಿಸಲಾಗುತ್ತದೆ. $M–X$ ಯನ್ನು **ವ್ಯಾಪಾರ ಕೊರತೆಯೆಂದು** ಕರೆಯಲಾಗುತ್ತದೆ. ಇದು ಆರ್ಥಿಕತೆಯೊಂದು ಗಳಿಸಿದ ರಫ್ತು ಆದಾಯಕ್ಕಿಂತ ಆಮದು ವೆಚ್ಚವು ಹೆಚ್ಚಾಗಿರುವುದನ್ನು ಮಾಪನ ಮಾಡುತ್ತದೆ. $M$ ದೇಶದ ಹೊರಹರಿವಾಗಿದೆ, $X$ ದೇಶದ ಒಳಹರಿವಾಗಿದೆ)

ಸರಕಾರ ಇಲ್ಲದಿದ್ದರೆ, ವಿದೇಶಿ ವ್ಯಾಪಾರವಿಲ್ಲದಿದ್ದರೆ ಆಗ

$G = T = M = X = 0$. ಹೀಗಾಗಿ (2.8)

$I = S$ ಅನ್ನು ನೀಡುತ್ತದೆ. (2.9)

(2.9) ಒಂದು ಲೆಕ್ಕಚಾರದ ಅನನ್ಯತೆಯಾಗಿದೆ. *GDP* ಯಲ್ಲಿನ, ಒಂದು ಭಾಗವನ್ನು ಅನುಭೋಗಿಸಲಾಗುತ್ತದೆ ಇನ್ನೊಂದು ಭಾಗವನ್ನು ಉಳಿತಾಯ ಮಾಡಲಾಗುತ್ತದೆ. (ಆದಾಯಗಳನ್ನು ಸ್ವೀಕರಿಸುವವರ ಕಡೆಯಿಂದ). ಮತ್ತೊಂದೆಡೆ. ಉದ್ಯಮ ಘಟಕಗಳ ಕಡೆಯಿಂದ, ಅವರು ಪಡೆದ ಸಮಗ್ರ ಅಂತಿಮ ವೆಚ್ಚವು ($\equiv$ *GDP*) ಅವುಗಳ ಅನುಭೋಗದ ವೆಚ್ಚ ಮತ್ತು ಹೂಡಿಕೆಯ ವೆಚ್ಚಕ್ಕೆ ಸಮಾನವಾಗಿರಲೇಬೇಕು. ಕುಟುಂಬಗಳು ಪಡೆದ ಸಮಗ್ರ ಆದಾಯವು ಉದ್ಯಮ ಘಟಕಗಳು ಮಾಡಿದ ವೆಚ್ಚಕ್ಕೆ ಸಮಾನವಾಗಿರುತ್ತದೆ. ಏಕೆಂದರೆ ಆದಾಯದ ವಿಧಾನ ಮತ್ತು ವೆಚ್ಚದ ವಿಧಾನವು ಒಂದೇ ರೀತಿಯ *GDP* ಅಂಕಿ ಅಂಶವನ್ನು ನೀಡುತ್ತದೆ. ಅನುಭೋಗದ ವೆಚ್ಚವನ್ನು ಎರಡೂ ಕಡೆಗಳಿಂದ ರದ್ದುಗೊಳಿಸಿವುದರಿಂದ ಸಮಗ್ರ ಹೂಡಿಕೆ ವೆಚ್ಚಕ್ಕೆ ಸಮನಾದ ಸಮಗ್ರ ಉಳಿತಾಯ ಲಭಿಸುತ್ತದೆ.

## 2.3 ಕೆಲವು ಸಮಗ್ರ ಆರ್ಥಿಕ ಅನನ್ಯತೆಗಳು *Some Macroeconomic Identities*

ಒಂದು ದೇಶದಲ್ಲಿ ಒಂದು ವರ್ಷದಲ್ಲಿ ಉತ್ಪಾದಿಸಿದ ಅಂತಿಮ ಸರಕು ಸೇವೆಗಳ ಸಮಗ್ರ ಉತ್ಪನ್ನವನ್ನು ಒಟ್ಟು ದೇಶೀಯ ಉತ್ಪನ್ನವು ಮಾಪನ ಮಾಡುತ್ತದೆ. ಆದರೆ ಇದರ ಪೂರ್ಣಭಾಗವು ದೇಶದ ಪ್ರಜೆಗಳಿಗೆ ದೊರಕದಿರಬಹುದು. ಉದಾಹರಣೆಗೆ, ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುವ ಭಾರತದ ನಾಗರೀಕ ತನ್ನ ವೇತನವನ್ನು ಗಳಿಸಬಹುದು ಮತ್ತು ಸೌದಿ ಅರೇಬಿಯಾದ *GDP* ಯಲ್ಲಿ ಅದನ್ನು ಸೇರಿಸಿಕೊಳ್ಳುತ್ತದೆ. ಆದರೆ ಅದು ಕಾನೂನುಬದ್ಧವಾಗಿ ಹೇಳುವುದಾದರೆ, ಅವರು ಭಾರತೀಯರಾಗಿದ್ದಾರೆ. ವಿದೇಶದಲ್ಲಿ ಭಾರತೀಯರ ಗಳಿಕೆಯನ್ನು ಅಥವಾ ಭಾರತೀಯರ ಒಡೆತನದ ಉತ್ಪಾದನಾಂಗಗಳನ್ನು ಗಣನೆಗೆ ತೆಗೆದುಕೊಳ್ಳಲು ಯಾವುದಾದರೊಂದು ಮಾರ್ಗ ಇದೆಯೇ? ಈ ಪ್ರಯತ್ನದಲ್ಲಿ ಸಮರೂಪತೆಯನ್ನು ಕಾಪಾಡಿಕೊಳ್ಳಲು, ದೇಶೀಯ ಆರ್ಥಿಕತೆಯೊಳಗೆ ಕೆಲಸ ಮಾಡುವ ವಿದೇಶಿಗರ ಆದಾಯವನ್ನು ಅಥವಾ ವಿದೇಶಗಳ ಒಡೆತನದ ಉತ್ಪಾದನಾಂಗಗಳ ಪಾವತಿಗಳನ್ನು




ನಾವು ಕಡಿತಗೊಳಿಸಬೇಕು. ಉದಾಹರಣೆಗೆ, ಕೊರಿಯಾದ ಮಾಲೀಕತ್ವದ ಹುಂಡೈ ಕಾರು ಕಾರ್ಖಾನೆಯಿಂದ ಪಡೆದ ಲಾಭಗಳನ್ನು ಭಾರತದ *GDP*ಯಿಂದ ಕಳೆಯಬೇಕಾಗಿದೆ. ಅಂತಹ ಸೇರ್ಪಡೆಗಳು ಹಾಗೂ ಕಳೆಯುವಿಕೆಗಳನ್ನು ಗಣನೆಗೆ ತೆಗೆದುಕೊಳ್ಳುವ ಸಮಗ್ರ ಆರ್ಥಿಕ ಚಲಕಗಳನ್ನು ಒಟ್ಟು **ದೇಶೀಯ ಉತ್ಪನ್ನ**ವೆಂದು (GNP) ಕರೆಯುತ್ತಾರೆ. ಆದ್ದರಿಂದ GNP ಯನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ.

GNP $\equiv$ GDP + ವಿಶ್ವದ ಉಳಿದ ಭಾಗಗಳಲ್ಲಿ ಬಳಸಿದ ದೇಶೀಯ ಉತ್ಪಾದನಾಂಗಗಳು ಗಳಿಸಿದ ಆದಾಯ –ದೇಶೀಯ ಆರ್ಥಿಕತೆಯಲ್ಲಿ ಬಳಸಿದ ವಿಶ್ವದ ಉಳಿದ ಉತ್ಪಾದನಾಂಗಗಳು ಗಳಿಸಿದ ಆದಾಯ. ಆದ್ದರಿಂದ

GNP $\equiv$ GDP + ವಿದೇಶಗಳಿಂದ ಬಂದ ಉತ್ಪಾದನಾಂಗಗಳ ನಿವ್ವಳ ಆದಾಯ.

(ವಿದೇಶಗಳಿಂದ ಬಂದ ಉತ್ಪಾದನಾಂಗದ ನಿವ್ವಳ ಆದಾಯ = ವಿಶ್ವದ ಇತರ ಭಾಗಗಳಲ್ಲಿ ಬಳಸಲಾಗುವ ದೇಶೀಯ ಉತ್ಪಾದನಾಂಗಗಳು ಗಳಿಸಿದ ಆದಾಯ – ದೇಶೀಯ ಆರ್ಥಿಕತೆಯಲ್ಲಿ ಬಳಸಿದ ವಿಶ್ವದ ಉಳಿದ ಉತ್ಪಾದನಾಂಗಗಳು ಗಳಿಸಿದ ಆದಾಯ.)

ಒಂದು ವರ್ಷದಲ್ಲಿ ಬಂಡವಾಳದ ಒಂದು ಭಾಗವು ಸವಕಲು ಹರಕಲು *(Wear and Tear)* ಕಾರಣಗಳಿಂದಾಗಿ ಪೋಲಾಗುತ್ತದೆ (ಅನುಭೋಗಕ್ಕೆ ಒಳಗಾಗುತ್ತದೆ). ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಇದನ್ನೇ **ಸವಕಳಿ** ಎಂದು ಕರೆಯುತ್ತಾರೆ. ಸಹಜವಾಗಿ ಸವಕಳಿ ಯಾರೊಬ್ಬರ ಆದಾಯದ ಭಾಗವಾಗಿ ಇರುವುದಿಲ್ಲ. ನಾವು *GNP* ಯಿಂದ ಸವಕಳಿಯನ್ನು ಕಳೆದರೆ **ನಿವ್ವಳ ರಾಷ್ಟ್ರೀಯ ಉತ್ಪನ್ನ (*NNP*)** ದೊರಕುತ್ತದೆ. ಹೀಗಾಗಿ

$$NNP \equiv GNP - \text{ಸವಕಳಿ}$$

ಈ ಎಲ್ಲ ಚಲಕಗಳು ಮಾರುಕಟ್ಟೆ ಬೆಲೆಗಳಲ್ಲಿ ಮೌಲ್ಯಮಾಪನಗೊಳ್ಳುತ್ತವೆ ಎಂಬದನ್ನು ಗಮನಿಸಬೇಕಾಗಿದೆ. ಮೇಲೆ ನೀಡಿದ ಅಭಿವ್ಯಕ್ತಿಯ ಮೂಲಕ, ಮಾರುಕಟ್ಟೆಯ ಬೆಲೆಗಳಲ್ಲಿ *NNP* ಯನ್ನು ಪಡೆಯಲಾಗುತ್ತದೆ ಆದರೆ ಮಾರುಕಟ್ಟೆ ಬೆಲೆಯು **ಪರೋಕ್ಷ ತೆರಿಗೆಗಳ**ನ್ನು ಒಳಗೊಂಡಿದೆ. ಆದರೆ ಸರಕುಗಳು ಮತ್ತು ಸೇವೆಗಳ ಮೇಲೆ ಪರೋಕ್ಷ ತೆರಿಗೆಗಳನ್ನು ವಿಧಿಸಿದಾಗ ಅವುಗಳ ಬೆಲೆಗಳು ಹೆಚ್ಚಾಗುತ್ತುವೆ. ಪರೋಕ್ಷ ತೆರಿಗೆಗಳು ಸರ್ಕಾರಕ್ಕೆ ಸೇರುತ್ತವೆ. ಉತ್ಪಾದನಾಂಗಗಳಿಗೆ ಸೇರುವ *NNP* ಯ ಭಾಗವನ್ನು ಲೆಕ್ಕಚಾರ ಮಾಡಲು ನಾವು ಮಾರುಕಟ್ಟೆಯ ಬೆಲೆಗಳಲ್ಲಿ ಪಡೆದ *NNP* ಯಿಂದ ಪರೋಕ್ಷ ತೆರಿಗೆಗಳನ್ನು ಕಳೆಯಬೇಕು. ಅದೇ ರೀತಿ ಸರ್ಕಾರವು ಕೆಲವು ಸರಕುಗಳ ಬೆಲೆಗಳ ಮೇಲೆ ಸಹಾಯಧನವನ್ನು ನೀಡಬಹುದು. (ಭಾರತದಲ್ಲಿ ಸರ್ಕಾರವು ಪೆಟ್ರೋಲ್ ಮೇಲೆ ಅಧಿಕ ತೆರಿಗೆ ವಿಧಿಸುತ್ತದೆ. ಆದರೆ ಅಡುಗೆ ಅನಿಲಕ್ಕೆ ಸಹಾಯಧನವನ್ನು ನೀಡಿದೆ.) ಹಾಗಾಗಿ ನಾವು ಮಾರುಕಟ್ಟೆ ಬೆಲೆಯಲ್ಲಿ  ಮೌಲ್ಯಮಾಪನ ಮಾಡಿದ (ಪಡೆದ) *NNP* ಗೆ ಸಹಾಯಧನವನ್ನು ಸೇರಿಸಬೇಕಾಗಿದೆ. ಹಾಗೆ ಮಾಡುವ ಮೂಲಕ ನಾವು ಪಡೆಯುವ ಮಾಪನವನ್ನು **ಉತ್ಪಾದನಾಂಗದ ವೆಚ್ಚದಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನ** ಎಂದು ಕರೆಯಲಾಗುತ್ತದೆ ಅಥವಾ ರಾಷ್ಟ್ರೀಯ ಆದಾಯ ಎಂದು ಕರೆಯಲಾಗುತ್ತದೆ.

ಹೀಗೆ, ಉತ್ಪಾದನಾಂಗಗಳ ವೆಚ್ಚದಲ್ಲಿ *NNP* ≡ ರಾಷ್ಟ್ರೀಯ ಆದಾಯ (*NI*) ≡ ಮಾರುಕಟ್ಟೆ ಬೆಲೆಯಲ್ಲಿ *NNP* – (ಪರೋಕ್ಷ ತೆರಿಗೆಗಳು  ಸಹಾಯ ಧನಗಳು) ≡ ಮಾರುಕಟ್ಟೆ ಬೆಲೆಯಲ್ಲಿ *NNP* – ನಿವ್ವಳ ಪರೋಕ್ಷ ತೆರಿಗೆಗಳು (ನಿವ್ವಳ ಪರೋಕ್ಷ ತೆರಿಗೆ ≡ ಪರೋಕ್ಷ ತೆರಿಗೆಗಳು – ಸಹಾಯ ಧನಗಳು)

ರಾಷ್ಟ್ರೀಯ ಆದಾಯವನ್ನು ನಾವು ಸಣ್ಣ ಸಣ್ಣ ವರ್ಗಗಳಾಗಿ ವಿಂಗಡಿಸಬಹುದು. ಕುಟುಂಬಗಳಿಂದ ಸ್ವೀಕರಿಸಲಾಗುವ *NI* ಭಾಗಕ್ಕೆ ಅಭಿವ್ಯಕ್ತಿಯನ್ನು ಹುಡುಕಲು ನಾವು ಪ್ರಯತ್ನಿಸೋಣ. ಇದನ್ನು ನಾವು ವೈಯಕ್ತಿಕ ಆದಾಯ ಎಂದು(*PI*) ಕರೆಯೋಣ. ಮೊದಲನೆಯದಾಗಿ ನಾವು ಉದ್ಯಮ ಘಟಕಗಳು ಮತ್ತು ಸರ್ಕಾರಿ ಉದ್ಯಮ ಸಂಸ್ಥೆಗಳು ಗಳಿಸಿದ *NI* ನ ಲಾಭದ ಒಂದು ಭಾಗವು ಉತ್ಪಾದನಾಂಗಗಳ ನಡುವೆ ವಿತರಣೆಯಾಗುವುದಿಲ್ಲ ಎಂಬುದನ್ನು ಗಮನಿಸೋಣ. ಇದನ್ನು **ವಿತರಣೆಯಾಗದ ಲಾಭ**ಗಳೆಂದು (*UP*) ಕರೆಯುತ್ತಾರೆ. ನಾವು *PI* ಗೆ ತಲುಪಬೇಕಾದರೆ *NI* ನಿಂದ *UP* ಅನ್ನು ಕಳೆಯಬೇಕಾಗಿದೆ. ಏಕೆಂದರೆ *UP* ಯು ಕುಟುಂಬಗಳಿಗೆ ಸೇರಿದುದಾಗಿಲ್ಲ. ಅದೇ ರೀತಿ ಉದ್ಯಮ ಘಟಕಗಳು ಗಳಿಸಿದ ಆದಾಯದ ಮೇಲೆ ವಿಧಿಸಲಾಗುವ ಕಾರ್ಪೋರೇಟ್ ತೆರಿಗೆಗಳನ್ನು *NI* ಯಿಂದ ಕಳೆಯಬೇಕಾಗುತ್ತದೆ. ಏಕೆಂದರೆ ಇದು ಕುಟುಂಬಗಳಿಗೆ ಸೇರುವುದಿಲ್ಲ. ಮತ್ತೊಂದೆಡೆ, ಕುಟುಂಬಗಳು ಖಾಸಗಿ ಉದ್ಯಮ ಘಟಕಗಳಿಗೆ ಅಥವಾ ಸರ್ಕಾರಕ್ಕೆ ಹಿಂದೆ ನೀಡಿದ ಸಾಲದ ಮೇಲಿನ ಬಡ್ಡಿ ಪಾವತಿಯನ್ನು ಸ್ವೀಕರಿಸುತ್ತವೆ ಹಾಗೆಯೇ ಒಂದು ವೇಳೆ ಕುಟುಂಬಗಳು ಉದ್ಯಮ ಘಟಕಗಳು ಮತ್ತು ಸರ್ಕಾರದಿಂದ ಸಾಲ ಪಡೆದಿದ್ದರೆ, ಅದಕ್ಕೆ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ಆದ್ದರಿಂದ ಉದ್ಯಮ ಘಟಕಗಳಿಗೆ ಮತ್ತು ಸರ್ಕಾರಕ್ಕೆ ಕುಟುಂಬಗಳು ಪಾವತಿಸಿದ ನಿವ್ವಳ ಬಡ್ಡಿಗಳನ್ನು ಕಳೆಯಬೇಕಾಗುತ್ತದೆ. ಕುಟುಂಬಗಳು ಸರ್ಕಾರ ಮತ್ತು ಉದ್ಯಮಗಳಿಂದ ವರ್ಗಾವಣೆ ಪಾವತಿಗಳನ್ನು ಪಡೆಯುತ್ತವೆ (ಉದಾಹರಣೆಗೆ ಪಿಂಚಣಿಗಳು, ವಿದ್ಯಾರ್ಥಿವೇತನಗಳು, ಬಹುಮಾನಗಳು,) ಇವುಗಳನ್ನು ಕುಟುಂಬಗಳ ವೈಯಕ್ತಿಕ ಆದಾಯವನ್ನು ಲೆಕ್ಕಹಾಕಲು ಸೇರಿಸಬೇಕಾಗುತ್ತದೆ.

ಆದ್ದರಿಂದ, ವೈಯಕ್ತಿಕ ವರಮಾನ (*PI*) ≡ *NI* – ವಿತರಣೆಯಾಗದ ಲಾಭಗಳು – ಕುಟುಂಬಗಳು ಮಾಡಿದ ನಿವ್ವಳ ಬಡ್ಡಿಯ ಪಾವತಿಗಳು – ಕಾರ್ಪೊರೇಟ್ ತೆರಿಗೆ + ಸರ್ಕಾರ ಮತ್ತು ಉದ್ಯಮ ಘಟಕಗಳಿಂದ ಕುಟುಂಬಗಳಿಗೆ ಪಾವತಿಯಾದ ವರ್ಗಾವಣೆ ಪಾವತಿಗಳು.

ಆದಾಗ್ಯೂ ವೈಯಕ್ತಿಕ ಆದಾಯವು *(PI)* ಕುಟುಂಬಗಳಿಗೆ ಪೂರ್ಣ ಅಧಿಕಾರ ಇರುವ ಆದಾಯವಲ್ಲ ಅವರು *PI* ನಿಂದ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ನಾವು ವೈಯಕ್ತಿಕ ತೆರಿಗೆ ಪಾವತಿಗಳು ಮತ್ತು ತೆರಿಗೆಯೇತರ ಪಾವತಿಗಳನ್ನು *PI* ನಲ್ಲಿ ಕಳೆದರೆ ವೈಯಕ್ತಿಕ ವೆಚ್ಚ ಮಾಡಬಹುದಾದ ಆದಾಯವನ್ನು ಪಡೆಯುತ್ತೇವೆ. ಆದ್ದರಿಂದ ವೈಯಕ್ತಿಕ ವೆಚ್ಚಮಾಡಬಹುದಾದ ಆದಾಯ $(PDI) \equiv PI$ – ವೈಯಕ್ತಿಕ ತೆರಿಗೆ ಪಾವತಿಗಳು – ತೆರಿಗೆಯೇತರ ಪಾವತಿಗಳು.

ವೈಯಕ್ತಿಕ ವೆಚ್ಚ ಮಾಡಬಹುದಾದ ಆದಾಯವು ಕುಟುಂಬಗಳಿಗೆ ಸೇರಿದ ಸಮಗ್ರ ಆದಾಯದ ಭಾಗವಾಗಿದೆ ಅವರು ಅದರ ಒಂದು ಭಾಗವನ್ನು ಅನುಭೋಗಿಸಲು ಮತ್ತು ಇನ್ನೊಂದು ಭಾಗವನ್ನು ಉಳಿತಾಯ ಮಾಡಲು ನಿರ್ಧರಿಸಬಹುದು. ಪ್ರಮುಖ ಸಮಗ್ರ ಆರ್ಥಿಕ ಚಲಕಗಳ ನಡುವಿನ ಸಂಬಂಧಗಳನ್ನು ರೇಖಾಚಿತ್ರ 2.3ರಲ್ಲಿ ಪ್ರತಿನಿಧಿಸಲಾಗಿದೆ.

ಈ ಅಧ್ಯಾಯದ ಕೊನೆಯಲ್ಲಿ ಓದುಗರಿಗೆ ಭಾರತದ ಕೆಲವು ಪ್ರಮುಖ ಸಮಗ್ರ ಆರ್ಥಿಕ ಚಲಕಗಳನ್ನು ಒಂದು ಕೋಷ್ಟಕದ ಮೂಲಕ ನೀಡಲಾಗಿದೆ. ಪ್ರಸ್ತುತ ಬೆಲೆಯಲ್ಲಿ 1990–91 ರಿಂದ 2004–2005 ಈ ಕೋಷ್ಟಕವು ಅವುಗಳ ವಾಸ್ತವ ಮೌಲ್ಯಗಳ ಅಂದಾಜು ಕಲ್ಪನೆಯನ್ನು ನೀಡುತ್ತದೆ.




**ರೇಖಾಚಿತ್ರ 2.3:** ಸಮಗ್ರ ಆದಾಯದ ಉಪವರ್ಗಗಳ ರೇಖಾತ್ಮಕ ನಿರೂಪಣೆ. *NFIA* ವಿದೇಶದಲ್ಲಿನ ನಿವ್ವಳಉತ್ಪಾದನಾಂಗದ ಆದಾಯ, *D*; ಸವಕಳಿ. *ID*; ಪರೋಕ್ಷ ತೆರಿಗೆ, *SUB* ಸಹಾಯಧನಗಳು, *UP*; ವಿತರಣೆಯಾಗದ ಲಾಭಗಳು *NIH;* ಕುಟುಂಬಗಳ ನಿವ್ವಳ ಬಡ್ಡಿ ಪಾವತಿ, *CT*; ಕಾರ್ಪೊರೇಟ್ ತೆರಿಗೆ, *TrH;* ಕುಟುಂಬಗಳು ಸ್ವೀಕರಿಸಿದ ವರ್ಗಾವಣೆಗಳು, *PTP*; ವೈಯಕ್ತಿಕ ತೆರಿಗೆ ಪಾವತಿಗಳು, *NP;* ತೆರಿಗೆಯೇತರ ಪಾವತಿಗಳು.



**ವೆಚ್ಚ ಮಾಡಬಹುದಾದ ರಾಷ್ಟ್ರೀಯ ಆದಾಯ ಮತ್ತು ಖಾಸಗಿ ಆದಾಯ**

ಈ ವರ್ಗಗಳ ಸಮಗ್ರ ಆರ್ಥಿಕ ಚಲಕಗಳಲ್ಲದೆ ಭಾರತದಲ್ಲಿ, ಕೆಲವು ಇತರ ಸಮಗ್ರ ಆದಾಯದ ವರ್ಗಗಳನ್ನು ರಾಷ್ಟ್ರೀಯ ಆದಾಯದ ಲೆಕ್ಕಾಚಾರದಲ್ಲಿ ಬಳಸಲಾಗುತ್ತದೆ.

- **ವೆಚ್ಚ ಮಾಡಬಹುದಾದ ರಾಷ್ಟ್ರೀಯ ಆದಾಯ** = ಮಾರುಕಟ್ಟೆ ಬೆಲೆಗಳಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನ + ವಿಶ್ವದ ಉಳಿದ ಭಾಗಗಳ ಇತರ ಪ್ರಸ್ತುತ ವರ್ಗಾವಣೆಗಳು

  ದೇಶೀಯ ಆರ್ಥಿಕತೆಯು ವಿಲೇವಾರಿ ಮಾಡಬಹುದಾದ ಸರಕು ಮತ್ತು ಸೇವೆಗಳ ಗರಿಷ್ಠ ಪ್ರಮಾಣ ಎಷ್ಟೆಂಬುದರ ಬಗ್ಗೆ ಒಂದು ಕಲ್ಪನೆಯನ್ನು ವೆಚ್ಚ ಮಾಡಬಹುದಾದ ರಾಷ್ಟ್ರೀಯವು ನೀಡುತ್ತದೆ. ವಿಶ್ವದ ಇತರ ಭಾಗಗಳಿಂದಾದ ಪ್ರಸ್ತುತ ವರ್ಗಾವಣೆಗಳು ಒಳಗೊಂಡಿರುವ ಅಂಶಗಳೆಂದರೆ ಉಡುಗೊರೆಗಳು, ಅನುದಾನಗಳು ಇತ್ಯಾದಿ.

- **ಖಾಸಗಿ ಆದಾಯ** = ಖಾಸಗಿ ವಲಯಯಕ್ಕೆ ನಿವ್ವಳ ದೇಶೀಯ ಉತ್ಪನ್ನಗಳಿಂದ ಸೇರುವ ಉತ್ಪಾದನಾಂಗದ ಆದಾಯ + ರಾಷ್ಟ್ರೀಯ ಸಾಲದ ಬಡ್ಡಿ + ವಿದೇಶಗಳ ಉತ್ಪಾದನಾಂಗದ ನಿವ್ವಳ ಆದಾಯ + ಸರ್ಕಾರದ ಪ್ರಸ್ತುತ ವರ್ಗಾವಣೆಗಳು + ವಿಶ್ವದ ಉಳಿದ ಭಾಗಗಳ ಇತರ ನಿವ್ವಳ ವರ್ಗಾವಣೆಗಳು

## 2.4. ಸರಕುಗಳು ಮತ್ತು ಬೆಲೆಗಳು *Goods And Prices*

ಸರಕು ಮತ್ತು ಸೇವೆಗಳಲ್ಲಿನ ಬೆಲೆಗಳು ನಮ್ಮ ಅಧ್ಯಯನದ ಸಮಯದಲ್ಲಿ ಬದಲಾಗುವುದಿಲ್ಲ ಎಂಬುದು ಈ ಎಲ್ಲಾ ಚರ್ಚೆಯಲ್ಲಿನ ಒಂದು ಸೂಚ್ಯ ಊಹೆಯಾಗಿದೆ. ಬೆಲೆಗಳಲ್ಲಿ ಬದಲಾವಣೆಯಾದರೆ *GDP* ಗಳನ್ನು ಹೋಲಿಸುವಲ್ಲಿ ತೊಂದರೆಗಳುಂಟಾಗಬಹುದು. ಎರಡು ಸತತ ವರ್ಷಗಳಲ್ಲಿ ದೇಶದ *GDP* ಯನ್ನು ಅಳೆದರೆ ಎರಡನೇ ವರ್ಷದ *GDP* ಯ ಅಂಕಿ ಅಂಶವು ಮೊದಲನೇ ವರ್ಷಕ್ಕಿಂತ ಎರಡು ಪಟ್ಟು ಹೆಚ್ಚಿರುವುದನ್ನು ನೋಡುತ್ತೇವೆ. ದೇಶದ ಉತ್ಪಾದನೆಯ ಪ್ರಮಾಣವು ದ್ವಿಗುಣವಾಗಿದೆ ಎಂದು ನಾವು ತೀರ್ಮಾನಿಸಬಹುದು. ಆದರೆ ಎರಡು ವರ್ಷಗಳ ನಡುವೆ ಕೇವಲ ಎಲ್ಲಾ ಸರಕುಗಳು ಮತ್ತು ಸೇವೆಗಳ ಬೆಲೆಗಳು ಮಾತ್ರ ದ್ವಿಗುಣಗೊಂಡಿದ್ದು ಉತ್ಪಾದನೆಯು ಸ್ಥಿರವಾಗಿ ಉಳಿಯುವ ಸಾಧ್ಯತೆ ಇರುತ್ತದೆ.

ಆದ್ದರಿಂದ ವಿಭಿನ್ನ ದೇಶಗಳ *GDP* ಯ ಅಂಕಿ ಅಂಶಗಳನ್ನು (ಸಮಗ್ರ ಆರ್ಥಿಕ ಚಲಕಗಳು) ಹೋಲಿಸಲು ಅಥವಾ ಒಂದೇ ದೇಶದ ವಿವಿಧ ಸಮಯದ ಹಂತಗಳಲ್ಲಿ *GDP* ಯ ಅಂಕಿ ಅಂಶಗಳನ್ನು ಹೋಲಿಸಲು, ನಾವು ಪ್ರಸ್ತುತ ಮಾರುಕಟ್ಟೆ ಬೆಲೆಯಲ್ಲಿ ಮೌಲ್ಯ ಮಾಪನ ಮಾಡಿದ *GDP* ಯನ್ನು ಅವಲಂಬಿಸಿಲು ಸಾಧ್ಯವಿಲ್ಲ. ನಾವು ಹೋಲಿಕೆ ಮಾಡುವುದಕ್ಕೆ ನೈಜ *GDP* ಯ ಸಹಾಯವನ್ನು ತೆಗೆದುಕೊಳ್ಳುತ್ತೇವೆ. ಸ್ಥಿರ ಬೆಲೆಗಳ ಗಣದಲ್ಲಿ (ಸ್ಥಿರಬೆಲೆಗಳಲ್ಲಿ) ಸರಕು ಮತ್ತು ಸೇವೆಗಳನ್ನು ಮೌಲ್ಯ ಮಾಪನ ಮಾಡಿ ನೈಜ *GDP*ಯನ್ನು ಲೆಕ್ಕಚಾರ ಮಾಡಲಾಗುತ್ತದೆ. ಈ ಬೆಲೆಗಳು ಸ್ಥಿರವಾಗಿರುವುದರಿಂದ ನೈಜ *GDP*ಯು ಬದಲಾವಣೆಯಾದರೆ ಉತ್ಪನ್ನದ ಪ್ರಮಾಣವು ಬದಲಾಗುತ್ತದೆ ಎಂಬುದು ನಮಗೆ ಖಚಿತವಾಗುತ್ತದೆ. ಮತ್ತೊಂದು ರೀತಿಯಲ್ಲಿ ನಾಮಮಾತ್ರ *GDP* ಯು, ಪ್ರಸಕ್ತ ಚಾಲ್ತಿಯಲ್ಲಿರುವ ಬೆಲೆಯಲ್ಲಿ *GDP*ಯ ಮೌಲ್ಯವಾಗಿದೆ. ಉದಾಹರಣೆಗೆ, ಒಂದು ದೇಶವು ಕೇವಲ ಬ್ರೆಡ್‌ನ್ನು (ರೊಟ್ಟಿ) ಮಾತ್ರ ಉತ್ಪಾದಿಸುತ್ತದೆ ಎಂದುಕೊಳ್ಳೋಣ. 2000 ಇಸವಿಯಲ್ಲಿ 100 ಘಟಕಗಳಷ್ಟು ಬ್ರೆಡ್‌ನ್ನು (ರೊಟ್ಟಿಯನ್ನು) ₹10 ದರದಲ್ಲಿ ಉತ್ಪಾದಿಸಿತು. ಪ್ರಸ್ತುತ ಬೆಲೆಯಲ್ಲಿ *GDP* ಯು ₹ 1,000 ಆಗಿದೆ. ಅದೇ ದೇಶ 2001 ರಲ್ಲಿ 110 ಘಟಕಗಳಷ್ಟು ಬ್ರೆಡ್ ಅನ್ನು ₹.15 ಬೆಲೆಗೆ ಉತ್ಪಾದಿಸುತ್ತದೆ. ಆದ್ದರಿಂದ 2001 ರಲ್ಲಿ ನಾಮಮಾತ್ರ *GDP* ಯು ₹1,650. ಆಗಿರುತ್ತದೆ. (= ₹110 × ₹15). 2001 ರಲ್ಲಿ ನೈಜ *GDP* ಯು ವರ್ಷ 2000 ದ ಬೆಲೆಯಲ್ಲಿ (2000 ನೇ ವರ್ಷವನ್ನು ಆಧಾರ ವರ್ಷ ಎಂದು ಕರೆಯಲಾಗುತ್ತದೆ) ₹110 × ₹10 = ₹1,100.

ನೈಜ *GDP*ಗೆ ನಾಮಮಾತ್ರದ *GDP*ಯ ಅನುಪಾತವು ಆಧಾರ ವರ್ಷದಿಂದ (ನೈಜ *GDP* ಯನ್ನು ಲೆಕ್ಕಚಾರ ಮಾಡಲು ಬಳಸಲಾಗುವ ವರ್ಷ) ಈ ಪ್ರಸಕ್ತ ವರ್ಷಕ್ಕೆ ಬೆಲೆಗಳು ಹೇಗೆ ಬದಲಾಗಿವೆ ಎಂಬುದರ ಬಗ್ಗೆ ಒಂದು ಕಲ್ಪನೆಯನ್ನು ನೀಡುತ್ತದೆ ಎಂಬುದನ್ನು ಗಮನಿಸಬೇಕಾಗಿದೆ. ಪ್ರಸಕ್ತ ವರ್ಷದ ನೈಜ ಮತ್ತು ನಾಮಮಾತ್ರ *GDP*ಯ ಲೆಕ್ಕಾಚಾರದಲ್ಲಿ ಉತ್ಪಾದನೆಯ ಪ್ರಮಾಣವನ್ನು ಸ್ಥಿರಗೊಳಿಸಲಾಗಿದೆ. ಆದ್ದರಿಂದ, ಈ ಮಾಪನಗಳು ವ್ಯತ್ಯಾಸಗೊಂಡರೆ ಇದು ಆಧಾರ ವರ್ಷ ಮತ್ತು ಪ್ರಸಕ್ತ ವರ್ಷದ ನಡುವಿನ ಬೆಲೆಯ ಮಟ್ಟದ ನಡುವಿನ ಬದಲಾವಣೆಯ ಕಾರಣದಿಂದಾಗಿದೆ. ನೈಜ *GDP* ಮತ್ತು ನಾಮಮಾತ್ರದ *GDP*ಯ ಅನುಪಾತವು ಒಂದು ಜನಪ್ರಿಯ ಬೆಲೆಗಳ ಸೂಚಿಯಾಗಿದೆ. ಇದನ್ನು *GDP*ಯ **ಅನಪ್ರಸರಣಕ (Deflator)** ಎಂದು ಕರೆಯಲಾಗುತ್ತದೆ. ಹಾಗಾಗಿ *GDP* ನಾಮಮಾತ್ರ *GDP*ಯನ್ನು ಸೂಚಿಸಿದರೆ, gdp ಯು ನೈಜ *GDP*ಯನ್ನು ಸೂಚಿಸುತ್ತದೆ. ಆಗ *GDP* ಅನಪ್ರಸರಣಕ $=\frac{GDP}{gdp}$

ಕೆಲವೊಮ್ಮೆ ಅನಪ್ರಸರಣಕವನ್ನು ಸಹ ಶೇಕಡಾವಾರು ಪದಗಳಲ್ಲಿ ಸೂಚಿಸಲಾಗುತ್ತದೆ. ಅಂತಹ ಸಂದರ್ಭದಲ್ಲಿ

$$\text{ಅನಪ್ರಸರಣಕ} = \frac{GDP}{gdp} \times 100$$

ಹಿಂದಿನ ಉದಾಹರಣೆಯಲ್ಲಿ *GDP* ಅನಪ್ರಸರಣಕ $\frac{1,650}{1100} = 1.5$ ಆಗಿದೆ.

(ಶೇಕಡಾವಾರು ಪದಗಳಲ್ಲಿ ಇದು ಶೇಕಡಾ 150)

ಇದು 2000 ದಲ್ಲಿ ತಯಾರಿಸಿದ ಬ್ರೆಡ್ಡಿನ (ರೊಟ್ಟಿಯ) ಬೆಲೆಯು 2001 ರಲ್ಲಿ 1.5 ಪಟ್ಟು ಹೆಚ್ಚಾಗಿತ್ತು ಎಂಬುದನ್ನು ಸೂಚಿಸುತ್ತದೆ. ಇದು ನಿಜವಾಗಿದ್ದು, ಬ್ರೆಡ್ ಬೆಲೆ ವಾಸ್ತವವಾಗಿ ₹ 10 ರಿಂದ 15 ಕ್ಕೆ ಏರಿಕೆಯಾಗಿದೆ. *GDP*ಯ ಅನಪ್ರಸರಣಕದಂತೆ (*deflator*) ನಾವು *GNP*ಯ ಅನಪ್ರಸರಣಕವನ್ನು (*deflator*) ಸಹ ಹೊಂದಬಹುದು.

ಅರ್ಥಿಕತೆಯಲ್ಲಿ ಬೆಲೆಗಳ ಬದಲಾವಣೆಯನ್ನು ಅಳೆಯಲು ಇನ್ನೊಂದು ವಿಧಾನವಿದೆ. ಅದನ್ನು **ಗ್ರಾಹಕ ಬೆಲೆ ಸೂಚ್ಯಂಕ** (*CPI*) ಎಂದು ಕರೆಯಲಾಗುತ್ತದೆ. ಇದು ಪ್ರಾತಿನಿಧಿಕ ಅನುಭೋಗಿಯು ಕೊಂಡುಕೊಳ್ಳಬಹುದಾದ ಒಂದು ನೀಡಲಾದ ಸರಕುಗಳ ಬುಟ್ಟಿಯ ಬೆಲೆಗಳ ಸೂಚ್ಯಾಂಕವಾಗಿದೆ. ಸಾಮಾನ್ಯವಾಗಿ *CPI*ಯನ್ನು ಶೇಕಡಾವಾರು ಪದಗಳಲ್ಲಿ ವ್ಯಕ್ತಪಡಿಸಲಾಗುತ್ತದೆ. ನಮ್ಮ ಪರಿಗಣನೆಯಲ್ಲಿ 2 ವರ್ಷಗಳಿವೆ. ಒಂದು ಆಧಾರ ವರ್ಷ, ಇನ್ನೊಂದು ಚಾಲ್ತಿ ವರ್ಷ. ಒಂದು ನೀಡಲಾದ ಸರಕುಗಳ ಬುಟ್ಟಿಯನ್ನು ಖರೀದಿಸುವ ವೆಚ್ಚವನ್ನು ಆಧಾರ ವರ್ಷದಲ್ಲಿ ನಾವು ಲೆಕ್ಕಚಾರ ಮಾಡುತ್ತೇವೆ. ನಾವು ಪ್ರಸ್ತುತ ವರ್ಷದಲ್ಲಿ ಅದೇ ಬುಟ್ಟಿಯನ್ನು ಖರೀದಿಸುವ ವೆಚ್ಚವನ್ನು ಸಹ ಲೆಕ್ಕ ಹಾಕುತ್ತೇವೆ. ಆಮೇಲೆ ನಾವು ಚಾಲ್ತಿ ವರ್ಷದ ಲೆಕ್ಕಾಚಾರವನ್ನು, ಆಧಾರ ವರ್ಷದ ಲೆಕ್ಕಚಾರಕ್ಕೆ, ಶೇಕಡವಾರು ರೂಪದಲ್ಲಿ ವ್ಯಕ್ತಪಡಿಸುತ್ತೇವೆ. ಮೂಲ ಆಧಾರ ವರ್ಷದ ಮುಖಾಮುಖಿಯಾಗಿ ಇದು ನಮಗೆ ಪ್ರಸ್ತುತ ವರ್ಷದ ಅನುಭೋಗಿ ಬೆಲೆ ಸೂಚ್ಯಂಕವನ್ನು ನೀಡುತ್ತದೆ. ಉದಾಹರಣೆಗೆ, ನಾವು ಎರಡು ಸರಕುಗಳನ್ನು ಅಕ್ಕಿ ಮತ್ತು ಉಡುಪು ಉತ್ಪಾದಿಸುವ ಆರ್ಥಿಕತೆಯನ್ನು ತೆಗೆದುಕೊಳ್ಳೋಣ. ಒಬ್ಬ ಪ್ರಾತಿನಿಧಿಕ ಅನುಭೋಗಿಯು ಒಂದು ವರ್ಷದಲ್ಲಿ 90 ಕೆ.ಜಿ. ಯಷ್ಟು ಅಕ್ಕಿ ಮತ್ತು 5 ಉಡುಪುಗಳನ್ನು ಖರೀದಿಸುತ್ತಾನೆ. 2000ದ ಇಸುವಿಯಲ್ಲಿ ಒಂದು ಕಿ.ಗ್ರಾಂ. ಅಕ್ಕಿ ಬೆಲೆಯು ₹ 10 ಮತ್ತು ಒಂದು ಉಡುಪಿನ ಬೆಲೆ ₹ 100 ಆಗಿತ್ತು ಎಂದು ಕೊಳ್ಳೋಣ.





ಆದ್ದರಿಂದ ಅನುಭೋಗಿಯು ಅಕ್ಕಿಯ ಮೇಲೆ ₹ $10 \times 90$ = ₹ 900 ಅನ್ನು ಹಾಗೆಯೇ ಉಡುಪಿನ ಮೇಲೆ ₹ $100 \times 5$ = ₹ 500 ಅನ್ನು ಒಂದು ವರ್ಷದಲ್ಲಿ ವೆಚ್ಚ ಮಾಡಬೇಕಾಗಿತ್ತು ಈ ಎರಡು ವಸ್ತುಗಳ ಮೇಲಿನ ವೆಚ್ಚದ ಒಟ್ಟು ಮೊತ್ತವು ₹ 900 + ₹ 500 = ₹ 1400 ಆಗಿದೆ. ಈಗ 2005 ರಲ್ಲಿ ಒಂದು ಕಿ.ಗ್ರಾಂ. ಅಕ್ಕಿ ಮತ್ತು ಒಂದು ಉಡುಪಿನ ಬೆಲೆ ಕ್ರಮವಾಗಿ ₹ 15 ಮತ್ತು ₹ 120 ಕ್ಕೆ ಏರಿಕೆಯಾದರೆ, ಅದೇ ಪ್ರಮಾಣದ ಅಕ್ಕಿ ಮತ್ತು ಉಡುಪುಗಳನ್ನು ಖರೀದಿಸಲು ಪ್ರತಿಯೊಬ್ಬನೂ ₹ 1,350 ಮತ್ತು ₹. 600 ಗಳನ್ನು ಖರ್ಚು ಮಾಡಬೇಕಾಗುತ್ತದೆ (ಮೊದಲಿನಂತೆಯೇ ಲೆಕ್ಕ ಹಾಕಲಾಗಿದೆ) ಅವುಗಳ ಮೊತ್ತವು ₹ 1,350 + ₹ 600 = ₹ 1,950 ಆಗಿರುತ್ತದೆ. ಆದ್ದರಿಂದ

$$CPI = \frac{1,950}{1,400} \times 100 = 139.29$$ ಆಗುತ್ತದೆ (ಸರಿಸುಮಾರು).

ಅನೇಕ ಸರಕುಗಳಿಗೆ ಎರಡು ಬೆಲೆಗಳಿವೆ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಒಬ್ಬ ಗ್ರಾಹಕ ವಾಸ್ತವವಾಗಿ ಪಾವತಿಸುವ ಬೆಲೆಯನ್ನು **ಚಿಲ್ಲರೆ ಬೆಲೆ**ಯೆನ್ನುತ್ತೇವೆ. ಸರಕುಗಳನ್ನು ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ಮಾಡುವ ಬೆಲೆಯನ್ನು **ಸಗಟು ಬೆಲೆ** ಎನ್ನುತ್ತೇವೆ. ವ್ಯಾಪಾರಿಗಳು ಮಿತಿಯನ್ನು (ಲಾಭ) ಇಟ್ಟುಕೊಂಡಿರುವುದರಿಂದ ಈ ಎರಡರ ಮೌಲ್ಯವು ಭಿನ್ನವಾಗಿರಬಹುದು. ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುವ ಸರಕುಗಳನ್ನು (ಕಚ್ಚಾ ವಸ್ತುಗಳು ಅಥವಾ ಅರೆ ಸಿದ್ಧಪಡಿಸಿದ ಸರಕುಗಳಂತಹವು) ಸಾಮಾನ್ಯ ಅನುಭೋಗಿಗಳು ಖರೀದಿಸುವುದಿಲ್ಲ

*CPI* ನಂತೆ, ಸಗಟು ಬೆಲೆಯ ಈ ಸೂಚ್ಯಂಕವನ್ನು ಸಗಟು ಬೆಲೆ ಸೂಚ್ಯಂಕ (*WPI*)ಎಂದು ಕರೆಯಲಾಗುತ್ತದೆ. *USA* ನಂತಹ ದೇಶಗಳಲ್ಲಿ ಇದನ್ನು ಉತ್ಪಾದಕ ಬೆಲೆ ಸೂಚ್ಯಂಕ (*PPI*) ಎಂದು ಉಲ್ಲೇಖಿಸಲಾಗುತ್ತದೆ. *CPI* (ಮತ್ತು ಸಮಾನವಾಗಿ *WPI*) *GDP* ಅನಪ್ರಸರಣಕಕ್ಕಿಂತ ವಿಭಿನ್ನವಾಗಿರಬಹುದು ಏಕೆಂದರೆ,

1. ಅನುಭೋಗಿಗಳು ಖರೀದಿಸಿದ ಸರಕುಗಳು ಒಂದು ದೇಶದಲ್ಲಿ ಉತ್ಪತ್ತಿಯಾಗುವ ಎಲ್ಲ ಸರಕುಗಳನ್ನು ಪ್ರತಿನಿಧಿಸುವುದಿಲ್ಲ. *GDP* ಅನಪ್ರಸರಣಕವು ಇಂತಹ ಎಲ್ಲಾ ಸರಕು ಮತ್ತು ಸೇವೆಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

2. *CPI* ಪ್ರಾತಿನಿಧಿಕ ಅನುಭೋಗಿ ಅನುಭೋಗಿಸಿದ ಸರಕುಗಳ ಬೆಲೆಗಳನ್ನು ಒಳಗೊಂಡಿದೆ. ಆದ್ದರಿಂದ ಇದು ಆಮದು ಮಾಡಿಕೊಂಡ ಸರಕುಗಳ ಬೆಲೆಗಳನ್ನು ಒಳಗೊಂಡಿದೆ. *GDP* ಅನಪ್ರಸರಣಕವು ಆಮದು ಮಾಡಿದ ಸರಕುಗಳ ಬೆಲೆಗಳನ್ನು ಒಳಗೊಂಡಿರುವುದಿಲ್ಲ.
3. ತೂಕಗಳು *CPI* ನಲ್ಲಿ ಸ್ಥಿರವಾಗಿರುತ್ತವೆ, ಆದರೆ *GDP* ಅನಪ್ರಸರಣಕದಲ್ಲಿ ಪ್ರತಿಯೊಂದು ಸರಕಿನ ಉತ್ಪಾದನಾ ಮಟ್ಟದಂತೆ ಅವು ಬದಲಾಗುತ್ತದೆ.

## 2.5 *GDP* ಮತ್ತು ಯೋಗಕ್ಷೇಮ *GDP And Welfare*

ಒಂದು ದೇಶದ ಜನರ ಯೋಗಕ್ಷೇಮ ಸೂಚಕವಾಗಿ *GDP*ಯನ್ನು ತೆಗೆದುಕೊಳ್ಳಬಹುದೇ? ಒಬ್ಬ ವ್ಯಕ್ತಿಯು ಅಧಿಕ ಆದಾಯವನ್ನು ಹೊಂದಿದ್ದರೆ ಆ ವ್ಯಕ್ತಿಯು ಹೆಚ್ಚು ಸರಕು ಮತ್ತು ಸೇವೆಗಳನ್ನು ಖರೀದಿಸಬಹುದು. ಮತ್ತು ಅವನ ಅಥವಾ ಅವಳ ಭೌತಿಕ ಕಲ್ಯಾಣ ಉತ್ತಮಗೊಳ್ಳುತ್ತದೆ. ಆದುದರಿಂದ ಆತನ/ಆಕೆಯ ಆದಾಯದ ಮಟ್ಟವನ್ನು ಆತನ/ಆಕೆಯ ಯೋಗಕ್ಷೇಮದ ಮಟ್ಟವೆಂದು ಪರಿಗಣಿಸುವುದು ಸಮಂಜಸವಾಗಿ ಕಾಣಬಹುದು. *GDP*ಯು ನಿರ್ದಿಷ್ಟ ವರ್ಷದಲ್ಲಿ ಒಂದು ದೇಶದ ಭೌಗೋಳಿಕ ಗಡಿಯೊಳಗೆ ನಿರ್ಮಿಸಿದ ಒಟ್ಟು ಸರಕು ಮತ್ತು ಸೇವೆಗಳ ಮೌಲ್ಯದ ಮೊತ್ತವಾಗಿದೆ. ಇದು ಜನರಲ್ಲಿ ಆದಾಯದ ರೂಪದಲ್ಲಿ (ಉಳಿಸಿಕೊಂಡಿರುವ ಸಂಪಾದನೆಗಳನ್ನು ಹೊರತುಪಡಿಸಿ) ಹಂಚಿಕೆಯಾಗುತ್ತದೆ. ಆದುದರಿಂದ ನಾವು ಒಂದು ದೇಶದ ಅಧಿಕ ಮಟ್ಟದ *GDP*ಯನ್ನು ಆ ದೇಶದ ಜನರ ಅತ್ಯಧಿಕ ಯೋಗಕ್ಷೇಮದ ಸೂಚ್ಯಾಂಕವೆಂದು ಪರಿಗಣಿಸಲು ಪ್ರಲೋಭನೆಗೆ ಒಳಗಾಗಬಹುದು. (ಬೆಲೆ ಬದಲಾವಣೆಯ ಲೆಕ್ಕವಿಡಲು ನಾವು ನಾಮಮಾತ್ರ *GDP* ಬದಲು ನೈಜ *GDP*ಯ ಮೌಲ್ಯವನ್ನು ತೆಗೆದು ಕೊಳ್ಳುತ್ತೇವೆ). ಆದರೆ ಇದು ಏಕೆ ಸರಿಯಲ್ಲ ಎಂಬುದಕ್ಕೆ ಕನಿಷ್ಠ ಮೂರು ಕಾರಣಗಳಿವೆ.



*GDP* ಹಂಚಿಕೆಯು ಹೇಗೆ ಏಕಪ್ರಕಾರವಾಗುತ್ತದೆ? ಈಗಲೂ ಬಹುತೇಕ ಜನರು ಬಡವರಾಗಿದ್ದು ಕೆಲವರು ಲಾಭಪಡೆದವರಾಗಿದ್ದಾರೆಂದು ಕಾಣುತ್ತದೆ.

1. ***GDP*ಯ ವಿತರಣೆ – ಇದು ಹೇಗೆ ಏಕರೂಪವಾಗಿದೆ:** ಒಂದು ವೇಳೆ ದೇಶದ *GDP* ಏರಿಕೆಯಾದರೆ, ಅದರ ಪರಿಣಾಮವಾಗಿ ಯೋಗಕ್ಷೇಮವು ಹೆಚ್ಚಾಗದಿರಬಹುದು. ಇದು ಏಕೆಂದರೆ *GDP* ಯಲ್ಲಿನ ಹೆಚ್ಚಳ ಕೆಲವೇ ವ್ಯಕ್ತಿಗಳ ಅಥವಾ ಉದ್ಯಮ ಘಟಕಗಳ ಕೈಯಲ್ಲಿ ಕೇಂದ್ರೀಕೃತವಾಗಿರಬಹುದು. ಉಳಿದಂತೆ ವಾಸ್ತವವಾಗಿ ಆದಾಯವು ಕುಸಿದಿರಬಹುದು. ಅಂತಹ ಸಂದರ್ಭದಲ್ಲಿ ಇಡೀ ದೇಶದ ಯೋಗಕ್ಷೇಮವು ಹೆಚ್ಚಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಉದಾಹರಣೆಗೆ 2000 ಇಸವಿಯಲ್ಲಿ ಒಂದು ಕಾಲ್ಪನಿಕ ದೇಶದಲ್ಲಿನ ಜನಸಂಖ್ಯೆ 100 ಆಗಿದ್ದು ತಲಾ ₹ 10 ನ್ನು ಸಂಪಾದಿಸುತ್ತಿದ್ದರು ಎಂದು ಕೊಳ್ಳೋಣ. ಆದ್ದರಿಂದ ದೇಶದ *GDP*ಯು ₹ 1,000 ಆಗಿತ್ತು (ಆದಾಯದ ವಿಧಾನದಿಂದ). 2001ನೇ ಇಸವಿಯಲ್ಲಿ ಅದೇ ದೇಶದಲ್ಲಿ 90 ವ್ಯಕ್ತಿಗಳು ತಲಾ ₹ 9 ಗಳನ್ನು ಸಂಪಾದಿಸುತ್ತಿದ್ದು ಮತ್ತು ಉಳಿದ 10 ವ್ಯಕ್ತಿಗಳು ತಲಾ ₹ 20 ಸಂಪಾದಿಸುತ್ತಿದ್ದರು ಎಂದು ಕೊಳ್ಳೋಣ. ಈ ಎರಡು ಅವಧಿಗಳ ನಡುವೆ ಸರಕು ಮತ್ತು ಸೇವೆಗಳ ಬೆಲೆಗಳಲ್ಲಿ ಯಾವುದೇ ಬದಲಾವಣೆಗಳಿಲ್ಲವೆಂದುಕೊಳ್ಳೋಣ. 2001 ರಲ್ಲಿ ದೇಶದ *GDP* ಯು 90 × (₹ 9) + 10 × (₹ 20) = ₹ 810 + ₹ 200 = ₹ 1,010 ಆಗಿದ್ದು ಇದನ್ನು 2000ಇಸವಿಗೆ ಹೋಲಿಸಿದರೆ 2001 ರಲ್ಲಿ ದೇಶದ *GDP* ಯು ₹ 10 ರಷ್ಟು ಹೆಚ್ಚಾಗಿರುವುದನ್ನು ಗಮನಿಸಿ.

ಆದರೆ ದೇಶದ ಶೇ. 90ರಷ್ಟು ಜನರ ನೈಜ ಆದಾಯವು ಶೇ. 10ರಷ್ಟು (₹ 10ರಿಂದ ₹ 9ಕ್ಕೆ) ಇಳಿಕೆಯನ್ನು ಕಂಡಾಗ ಇದು ಸಂಭವಿಸಿದೆ ಮತ್ತು ಶೇ. 10ರಷ್ಟು ಜನರು ಮಾತ್ರ ಅದರ ಆದಾಯದ ಶೇ. 100ರಷ್ಟು (₹ 10ರಿಂದ ₹ 20) ಹೆಚ್ಚಳದ ಲಾಭವನ್ನು ಪಡೆದುಕೊಂಡಿದ್ದಾರೆ. ದೇಶದ *GDP*ಯಲ್ಲಿ ಹೆಚ್ಚಳವಾದಾಗ್ಯೂ, ಶೇ. 90ರಷ್ಟು ಜನರ ಪರಿಸ್ಥಿತಿಯು ಕೆಳಕ್ಕಿಳಿದಿದೆ.

ಪರಿಸ್ಥಿತಿ ಉತ್ತಮಗೊಂಡ ಜನರ ಶೇಕಡಾವಾರನ್ನು, ದೇಶದ ಯೋಗಕ್ಷೇಮ ಸುಧಾರಣೆಗೆ ಹೋಲಿಸಿದರೆ *GDP*ಯು ಖಂಡಿತವಾಗಿಯೂ ಒಂದು ಉತ್ತಮ ಸೂಚ್ಯಾಂಕವಾಗಲಾರದು.

2. **ವಿತ್ತೀಯವಲ್ಲದ ವಿನಿಮಯಗಳು:** ಆರ್ಥಿಕತೆಯಲ್ಲಿ ಅನೇಕ ಚಟುವಟಿಕೆಗಳು ಹಣದ ಮೂಲಕ (ವಿತ್ತೀಯ) ಮಾಪನಕ್ಕೆ ಒಳಗಾಗುವುದಿಲ್ಲ. ಉದಾಹರಣೆಗೆ, ಮನೆಯಲ್ಲಿ ಮಹಿಳೆಯರು ನಿರ್ವಹಿಸುವ ಗೃಹಕೃತ್ಯ ಸೇವೆಗಳಿಗೆ ಹಣ ಪಾವತಿಸಲಾಗುವುದಿಲ್ಲ. ಹಣದ ಸಹಾಯವಿಲ್ಲದೇ ಅನೌಪಚಾರಿಕ ವಲಯದಲ್ಲಿ ನಡೆಯುವ ವಿನಿಮಯ ಪದ್ದತಿಯನ್ನು ಸಾಟಿ ವಿನಿಮಯ ಪದ್ಧತಿ ಎಂದು ಕರೆಯಲಾಗುತ್ತದೆ. ವಿನಿಮಯದಲ್ಲಿ ಸರಕುಗಳನ್ನು (ಅಥವಾ ಸೇವೆಗಳು) ನೇರವಾಗಿ ಸರಕುಗಳಿಗೆ ವಿನಿಮಯಮಾಡಲಾಗುತ್ತದೆ. ಆದರೆ ಹಣವನ್ನು ಬಳಸದೆ ಇರುವುದರಿಂದ, ಈ ವಿನಿಮಯಗಳನ್ನು ಆರ್ಥಿಕ ಚಟುವಟಿಕೆಯ ಭಾಗವಾಗಿ ನೋಂದಾಯಿಸಲಾಗಿರುವುದಿಲ್ಲ ಅಭಿವೃದ್ಧಿಶೀಲ ದೇಶಗಳಲ್ಲಿ, ಅನೇಕ ಹಿಂದುಳಿದ ಪ್ರದೇಶಗಳಲ್ಲಿ ಈ ರೀತಿಯ ವಿನಿಮಯ ನಡೆಯುತ್ತದೆ, ಆದರೆ ಅವುಗಳನ್ನು ಸಾಮಾನ್ಯವಾಗಿ ಆ ದೇಶಗಳ *GDP*ಗಳಲ್ಲಿ ಪರಿಗಣಿಸಲಾಗುವುದಿಲ್ಲ. ಇದು ಒಂದು *GDP*ಯ ಕಡಿಮೆ ಅಂದಾಜಿನ ಪ್ರಕರಣವಾಗುತ್ತದೆ. ಆದ್ದರಿಂದ ಪ್ರಮಾಣಿತ ರೀತಿಯಲ್ಲಿ ಲೆಕ್ಕ ಹಾಕಿದ *GDP*ಯು ಆ ದೇಶದ ಉತ್ಪಾದನಾ ಚಟುವಟಿಕೆ ಮತ್ತು ಯೋಗಕ್ಷೇಮದ ಸ್ಪಷ್ಟ ಸೂಚನೆಯನ್ನು ಕೊಡದಿರಬಹುದು.





3. **ಬಾಹ್ಯತೆಗಳು:** ಒಂದು ಉದ್ಯಮ ಘಟಕವು ಇನ್ನೊಂದು ಉದ್ಯಮ ಘಟಕಕ್ಕೆ ಅಥವಾ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಮಾಡುವ ಪ್ರಯೋಜನ (ಅಥವಾ ಹಾನಿಗಳು)ಗಳಿಗೆ ಬಾಹ್ಯತೆಗಳೆನ್ನುವರು ಇದಕ್ಕಾಗಿ ಅವರು (ಪ್ರಯೋಜನ ಪಡೆದ ಘಟಕಗಳು ಅಥವಾ ವ್ಯಕ್ತಿಗಳು) ಏನನ್ನೂ ಪಾವತಿಸಿರುವುದಿಲ್ಲ. ಹಾಗೆಯೇ ಹಾನಿಉಂಟಾದರೆ (ತೊಂದರೆ ನೀಡಿದ ಘಟಕಗಳು ಅಥವಾ ವ್ಯಕ್ತಿಗಳು) ಯಾವುದೇ ದಂಡ ನೀಡಿರುವುದಿಲ್ಲ ಬಾಹ್ಯತೆಗಳನ್ನು ಮಾರಲು ಮತ್ತು ಕೊಳ್ಳಲು ಯಾವುದೇ ಮಾರುಕಟ್ಟೆ ಇರುವುದಿಲ್ಲ. ಉದಾಹರಣೆಗೆ, ತೈಲ ಸಂಸ್ಕರಣಾಗಾರವು ಕಚ್ಚಾ ಪೆಟ್ರೋಲ್ ಅನ್ನು ಶುದ್ಧೀಕರಿಸುತ್ತದೆ ಮತ್ತು ಅದನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತದೆ ಎಂದು ಭಾವಿಸೋಣ. ಸಂಸ್ಕರಣಾಗಾರವು ಶುದ್ಧೀಕರಿಸಿದ ತೈಲ ಅದರ ಉತ್ಪನ್ನದ ಪ್ರಮಾಣವಾಗಿದೆ. ಸಂಸ್ಕರಣಾಗಾರವು ಬಳಸುವ ಮಧ್ಯಂತರ ಸರಕುಗಳ ಮೌಲ್ಯವನ್ನು (ಈ ಸಂದರ್ಭದಲ್ಲಿ ಕಚ್ಚಾ ತೈಲ) ಅದರ ಉತ್ಪಾದನಾ ಮೌಲ್ಯದಲ್ಲಿ ಕಳೆಯುವ ಮೂಲಕ ಶುದ್ಧೀಕರಣ ಘಟಕದ, ಮೌಲ್ಯವರ್ಧಾನೆಯನ್ನು ಅಂದಾಜು ಮಾಡಬಹುದು. ಶುದ್ಧೀಕರಣ ಘಟಕದ ಮೌಲ್ಯ ವರ್ಧನೆಯನ್ನು ಆರ್ಥಿಕತೆಯಲ್ಲಿ *GDP*ಯ ಭಾಗವಾಗಿ ಪರಿಗಣಿಸಬಹುದು. ಆದರೆ ಉತ್ಪಾದನೆಯನ್ನು ಕೈಗೊಳ್ಳುವಾಗ ಸಂಸ್ಕರಣಾ ಘಟಕವು ಹತ್ತಿರದ ನದಿಯನ್ನು ಕಲುಷಿತಗಳಿಸಬಹುದು. ಇದು ನದಿಯ ನೀರನ್ನು ಬಳಸುವ ಜನರಿಗೆ ಹಾನಿ ಉಂಟುಮಾಡಬಹುದು. ಆದ್ದರಿಂದ ಅವರ ಯೋಗಕ್ಷೇಮ ಕುಸಿಯುತ್ತದೆ. ಮಾಲಿನ್ಯವು, ಮೀನು ಅಥವಾ ಮೀನುಗಳಂತೆ ಬದುಕುವ ಇತರ ಜೀವಿರಾಶಿಗಳನ್ನು ಸಹ ಕೊಲ್ಲುತ್ತದೆ. ಇದರ ಪರಿಣಾಮವಾಗಿ ನದಿಯ ಮೀನುಗಾರರು ತಮ್ಮ ಜೀವನೋಪಾಯವನ್ನು ಕಳೆದುಕೊಳ್ಳಬಹುದು. ಇಂತಹ ಶುದ್ಧೀಕರಣವು ಇತರರ ಮೇಲೂ ಹಾನಿಕಾರಕ ಪರಿಣಾಮಗಳನ್ನುಂಟುಮಾಡುತ್ತದೆ, ಇದಕ್ಕಾಗಿ ಇದು ಯಾವುದೇ ವೆಚ್ಚಗಳನ್ನು ಭರಿಸುವುದಿಲ್ಲ, ಇವುಗಳನ್ನು ಬಾಹ್ಯತೆಗಳು ಎಂದು ಕರೆಯಲಾಗುತ್ತದೆ. ಈ ಸಂದರ್ಭದಲ್ಲಿ, *GDP* ಯು ಅಂತಹ ಋಣಾತ್ಮಕ ಬಾಹ್ಯತೆಗಳನ್ನು ಪರಿಗಣಿಸುವುದಿಲ್ಲ. ಆದ್ದರಿಂದ, ನಾವು *GDP*ಯನ್ನು ಆರ್ಥಿಕತೆಯ ಯೋಗಕ್ಷೇಮದ ಮಾಪನವಾಗಿ ತೆಗೆದುಕೊಂಡರೆ, ನೈಜ ಯೋಗಕ್ಷೇಮವನ್ನು ಅತಿಯಾಗಿ ಅಂದಾಜು ಮಾಡಿದಂತಾಗುವುದು. ಇದು ಋಣಾತ್ಮಕ ಬಾಹ್ಯತೆಯ ಒಂದು ಉದಾಹರಣೆಯಾಗಿದೆ. ಹಾಗೆಯೇ ಇಲ್ಲಿ ಧನಾತ್ಮಕ ಬಾಹ್ಯತೆಯ ಸನ್ನಿವೇಶಗಳೂ ಇರಬಹುದು. ಇಂತಹ ಸನ್ನಿವೇಶಗಳಲ್ಲಿ *GDP*ಯು ಆರ್ಥಿಕತೆಯ ವಾಸ್ತವ ಯೋಗಕ್ಷೇಮವನ್ನು ಕೆಳಅಂದಾಜು ಮಾಡಬಹುದು.

## ಸಾರಾಂಶ *Summary*

ಅತ್ಯಂತ ಮೂಲಭೂತ ಮಟ್ಟದಲ್ಲಿ, ಸಮಗ್ರ ಆರ್ಥಿಕತೆಯು (ಇದು ನಾವು ಸಮಗ್ರ ಅರ್ಥಶಾಸ್ತ್ರದಲ್ಲಿ ಅಧ್ಯಯನ ಮಾಡುವ ಆರ್ಥ ವ್ಯವಸ್ಥೆಗೆ ಅನ್ವಯಿಸುತ್ತದೆ) ವೃತ್ತಾಕಾರದಲ್ಲಿ ಕಾರ್ಯ ನಿರ್ವಹಿಸುವುದನ್ನು ನೋಡಬಹುದು. ಕುಟುಂಬಗಳು ಪೂರೈಸುವ ಆದಾನಗಳನ್ನು ಉದ್ಯಮಘಟಕಗಳು ಬಳಸಿಕೊಂಡು ಸರಕು ಮತ್ತು ಸೇವೆಗಳನ್ನು ಉತ್ಪಾದಿಸುತ್ತವೆ ಮತ್ತು ಕುಟುಂಬಗಳಿಗೆ ಮಾರಾಟ ಮಾಡುತ್ತವೆ. ಕುಟುಂಬಗಳು ತಾವು ಸಲ್ಲಿಸಿದ ಸೇವೆಗಳಿಗಾಗಿ ಉದ್ಯಮ ಘಟಕಗಳಿಂದ ಸಂಭಾವನೆ ಪಡೆಯುತ್ತವೆ ಮತ್ತು ಉದ್ಯಮ ಘಟಕಗಳು ಉತ್ಪಾದಿಸಿದ ಸರಕು ಮತ್ತು ಸೇವೆಗಳನ್ನು ಖರೀದಿಸುತ್ತವೆ. ಆದ್ದರಿಂದ ಆರ್ಥಿಕತೆಯಲ್ಲಿ ಉತ್ಪಾದನೆಯಾದ ಸರಕುಗಳು ಮತ್ತು ಸೇವೆಗಳ ಸಮಗ್ರ ಮೌಲ್ಯಗಳನ್ನು ಮೂರು ವಿಧಾನಗಳಲ್ಲಿ ಯಾವುದೇ ವಿಧಾನದಿಂದ ಲೆಕ್ಕಾಚಾರ ಮಾಡಬಹುದು. (ಎ) ಉತ್ಪಾದನಾಂಗಗಳ ಪಾವತಿಗಳ ಸಮಗ್ರ ಮೌಲ್ಯವನ್ನು (ಆದಾಯ ವಿಧಾನ) ಮಾಪನ ಮಾಡುವುದು. (ಬಿ) ಉದ್ಯಮ ಘಟಕಗಳು ಉತ್ಪಾದಿಸಿದ ಒಟ್ಟು ಸರಕು ಮತ್ತು ಸೇವೆಗಳ ಸಮಗ್ರ ಮೌಲ್ಯವನ್ನು ಮಾಪನ ಮಾಡುವುದು (ಉತ್ಪನ್ನ ವಿಧಾನ)(ಸಿ) ಉದ್ಯಮ ಘಟಕಗಳಿಂದ ಸ್ವೀಕರಿಸಿದ ವೆಚ್ಚದ ಸಮಗ್ರ ಮೌಲ್ಯವನ್ನು ಮಾಪನಮಾಡುವುದು.(ವೆಚ್ಚದ ವಿಧಾನ). ಉತ್ಪನ್ನ ವಿಧಾನದಲ್ಲಿ, ದ್ವಿ ಎಣಿಕೆಯನ್ನು ತಪ್ಪಿಸಲು, ನಾವು ಮಧ್ಯಂತರ ಸರಕುಗಳ ಮೌಲ್ಯವನ್ನು ಕಳೆಯಬೇಕಾಗಿದೆ ಮತ್ತು ಅಂತಿಮ ಸರಕು ಮತ್ತು ಸೇವೆಗಳ ಸಮಗ್ರ ಮೌಲ್ಯವನ್ನು ಮಾತ್ರ ಗಣನೆಗೆತೆಗೆದುಕೊಳ್ಳಬೇಕು ಪ್ರತಿಯೊಂದು ವಿಧಾನಗಳ ಮೂಲಕ ಆರ್ಥಿಕತೆಯ ಸಮಗ್ರ ಆದಾಯವನ್ನು ಲೆಕ್ಕಚಾರ ಮಾಡಲು ಸೂತ್ರಗಳನ್ನು ಪಡೆಯುತ್ತೇವೆ. ಹೂಡಿಕೆಯನ್ನು ಮಾಡಲು ಸರಕುಗಳನ್ನು ಸಹ ಖರೀದಿಸಬಹುದೆಂಬುದನ್ನು ನಾವು ಗಮನಿಸಬಹುದು ಮತ್ತು ಈ ಹೂಡಿಕೆಗಳು ಉದ್ಯಮ ಘಟಕಗಳ ಉತ್ಪಾದನಾ ಸಾಮರ್ಥ್ಯಕ್ಕೆ ಸೇರುತ್ತವೆ. ಇವುಗಳ ಒದಗಣೆಯನ್ನು ಅವಲಂಬಿಸಿರುವ ಸಮಗ್ರ ಆದಾಯವು ವಿವಿಧ ವರ್ಗಗಳಾಗಿರಬಹುದು. ನಾವು *GDP*, *GNP*, ಮಾರುಕಟ್ಟೆ ಬೆಲೆಯಲ್ಲಿ *NNP* ಮತ್ತು ಉತ್ಪಾದನಾಂಗದ ವೆಚ್ಚದಲ್ಲಿ *NNP*, *PI* ಮತ್ತು *PDI* ನಡುವಿನ ವ್ಯತ್ಯಾಸಗಳನ್ನು ಸೂಚಿಸಿದ್ದೇವೆ. ಸರಕು ಮತ್ತು ಸೇವೆಗಳ ಬೆಲೆಗಳು ವ್ಯತ್ಯಾಸಗೊಳ್ಳುವುದರಿಂದ, ನಾವು ಮೂರು ಪ್ರಮುಖ ಬೆಲೆ ಸೂಚ್ಯಂಕಗಳನ್ನು (*GDP* ಯ ಅನಪ್ರಸರಣಕ *CPI*, *WPI*) ಹೇಗೆ ಲೆಕ್ಕ ಹಾಕಬೇಕೆಂದು ಚರ್ಚಿಸಿದ್ದೇವೆ. ಅಂತಿಮವಾಗಿ ದೇಶದ ಯೋಗಕ್ಷೇಮದ ಸೂಚ್ಯಂಕವಾಗಿ *GDP* ಯನ್ನು ಪರಿಗಣಿಸುವುದು ತಪ್ಪಾಗಬಹುದು.

## ಪ್ರಮುಖ ಪರಿಭಾಷೆಗಳು *Key Concepts*

| | |
|---|---|
| ಅಂತಿಮ ಸರಕುಗಳು | ಅನುಭೋಗಿ ಸರಕುಗಳು |
| ಗ್ರಾಹಕರ ಬಾಳಿಕೆಗಳು | ಬಂಡವಾಳ ಸರಕುಗಳು |
| ಮಧ್ಯಂತರ ಸರಕುಗಳು | ದಾಸ್ತಾನುಗಳು |
| ಹರಿವುಗಳು | ಒಟ್ಟು ಹೂಡಿಕೆ |
| ನಿವ್ವಳ ಹೂಡಿಕೆಗಳು | ಸವಕಳಿ |
| ಕೂಲಿ | ಬಡ್ಡಿ |
| ಲಾಭ | ಗೇಣಿ |
| ಆದಾಯದ ವೃತ್ತಾಕಾರದ ಚಲನೆ | ರಾಷ್ಟ್ರೀಯ ಆದಾಯದ ಲೆಕ್ಕಾಚಾರದ ಉತ್ಪಾದನಾ ವಿಧಾನ |
| ರಾಷ್ಟ್ರೀಯ ಆದಾಯದ ಲೆಕ್ಕಚಾರದ ವೆಚ್ಚದ ವಿಧಾನ | ರಾಷ್ಟ್ರೀಯ ಆದಾಯದ ಲೆಕ್ಕಾಚಾರದ ಆದಾಯದ ವಿಧಾನ |
| ಸಮಗ್ರ ಆರ್ಥಿಕತೆಯ ಮಾದರಿ | ಆದಾನ |

| | |
|---|---|
| ಮೌಲ್ಯ ವರ್ಧಿತ | ತಪಶೀಲುಪಟ್ಟಿ |
| ತಪಶೀಲುಗಳಲ್ಲಿನ ಯೋಜಿತ ಬದಲಾವಣೆ | ಯೋಜಿತವಲ್ಲದ ದಾಸ್ತಾನುಗಳಲ್ಲಿನ ಬದಲಾವಣೆ |
| ಒಟ್ಟು ದೇಶೀಯ ಉತ್ಪನ್ನ (*GDP*) | ನಿವ್ವಳ ದೇಶೀಯ ಉತ್ಪನ್ನ (*NDP*) |
| ಒಟ್ಟು ರಾಷ್ಟ್ರೀಯ ಉತ್ಪನ್ನ (*GNP*) | ನಿವ್ವಳ ರಾಷ್ಟ್ರೀಯ ಉತ್ಪನ್ನ (*NNP*) (ಮಾರುಕಟ್ಟೆಬೆಲೆಗಳಲ್ಲಿ) |
| *NNP* (ಉತ್ಪಾದನಾಂಗಗಳ ವೆಚ್ಚದಲ್ಲಿ) ಅಥವಾ ರಾಷ್ಟ್ರೀಯ ಆದಾಯ (*NI*) | ವಿತರಣೆಯಾಗದ ಆದಾಯಗಳು |
| ಕುಟುಂಬಗಳು ಮಾಡಿದ ನಿವ್ವಳ ಬಡ್ಡಿಯ ಪಾವತಿಗಳು | ಕಂಪನಿ ತೆರಿಗೆ |
| ಸರ್ಕಾರ ಹಾಗೂ ಉದ್ಯಮ ಘಟಕಗಳಿಂದ ಕುಟುಂಬಗಳಿಗೆ ಮಾಡಿದ ವರ್ಗಾವಣೆ ಪಾವತಿಗಳು | ವೈಯಕ್ತಿಕ ಆದಾಯ (*PI*) |
| ವೈಯಕ್ತಿಕ ತೆರಿಗೆ ಪಾವತಿಗಳು | ತೆರಿಗೆ ರಹಿತ ಪಾವತಿಗಳು |
| ವೈಯಕ್ತಿಕ ವೆಚ್ಚ ಮಾಡಬಹುದಾದ ಆದಾಯ | ರಾಷ್ಟ್ರೀಯ ವೆಚ್ಚ ಮಾಡಬಹುದಾದ ಆದಾಯ |
| ಖಾಸಗಿ ಆದಾಯ | ನಾಮಮಾತ್ರ *GDP* |
| ನೈಜ *GDP* | ಆಧಾರ ವರ್ಷ |
| *GDP* ಅನಪ್ರಸರಣಕ | ಅನುಭೋಗಿ ಬೆಲೆ ಸೂಚ್ಯಂಕ(*CPI*) |
| ಸಗಟು ಬೆಲೆ ಸೂಚ್ಯಂಕ (*WPI*) | ಬಾಹ್ಯತೆಗಳು |

## ಅಭ್ಯಾಸಗಳು *Exercises*

1. ಉತ್ಪಾದನೆಯ ನಾಲ್ಕು ಅಂಗಗಳಾವುವು ? ಮತ್ತು ಇವುಗಳಲ್ಲಿ ಪ್ರತಿಯೊಂದಕ್ಕೆ ಸಂಭಾವನೆ ಏನೆಂದು ಕರೆಯುತ್ತಾರೆ ?
2. ಆರ್ಥಿಕತೆಯ ಒಟ್ಟು ಅಂತಿಮ ವೆಚ್ಚವು ಒಟ್ಟು ಉತ್ಪಾದನಾಂಗಗಳ ಪಾವತಿಗೆ ಏಕೆ ಸಮನಾಗಿರಬೇಕು ? ವಿವರಿಸಿ.
3. ಸಂಗ್ರಹ ಮತ್ತು ಹರಿವಿನ ನಡುವಿನ ವ್ಯತ್ಯಾಸಗಳಾವುವು? ನಿವ್ವಳ ಹೂಡಿಕೆ ಮತ್ತು ಬಂಡವಾಳದ ನಡುವೆ ಸಂಗ್ರಹ ಯಾವುದು ? ಮತ್ತು ಹರಿವು ಯಾವುದು?

   ಒಂದು ತೊಟ್ಟಿಯಲ್ಲಿನ ನೀರಿನ ಹರಿವಿನೊಂದಿಗೆ ನಿವ್ವಳ ಬಂಡವಾಳ ಮತ್ತು ಬಂಡವಾಲವನ್ನು ಹೋಲಿಸಿ.
4. ಯೋಜಿತ ಮತ್ತು ಯೋಜಿತವಲ್ಲದ ದಾಸ್ತಾನಿನ ನಡುವಿನ ವ್ಯತ್ಯಾಸವೇನು ? ದಾಸ್ತಾನುಗಳಲ್ಲಿನ ಬದಲಾವಣೆ ಮತ್ತು ಉದ್ಯಮ ಘಟಕಗಳ ಮೌಲ್ಯಾಧಾರಿತಗಳ ನಡುವಿನ ಸಂಬಂಧವನ್ನು ಬರೆಯಿರಿ.
5. ಮೂರು ವಿಧಾನಗಳಿಂದ ರಾಷ್ಟ್ರದ GDP ಯನ್ನು ಲೆಕ್ಕಾಚಾರ ಮಾಡುವ ಅನನ್ಯತೆಗಳನ್ನು ಬರೆಯಿರಿ.

6. ಮುಂಗಡ ಪತ್ರದ ಕೊರತೆ ಮತ್ತು ವ್ಯಾಪಾರ ಕೊರತೆಯನ್ನು ವ್ಯಾಖ್ಯಾನಿಸಿ. ಒಂದು ನಿರ್ದಿಷ್ಟ ವರ್ಷದಲ್ಲಿ ಒಂದು ದೇಶದ ಉಳಿತಾಯದ ಮೇಲೆ ಖಾಸಗಿ ಹೂಡಿಕೆಯು 2000 ಕೋಟಿಗಳಷ್ಟಿತ್ತು. ಮುಂಗಡ ಪತ್ರದ ಕೊರತೆಯ ಮೊತ್ತವು (–) 1500 ಕೋಟಿ ₹. ಗಳು. ದೇಶದ ವ್ಯಾಪಾರ ಕೊರತೆಯ ಪ್ರಮಾಣ ಯಾವುದು ?

7. ಒಂದು ನಿರ್ದಿಷ್ಟ ವರ್ಷದಲ್ಲಿ ಒಂದು ದೇಶದ ಮಾರುಕಟ್ಟೆ ಬೆಲೆಯಲ್ಲಿ *GDP* ಯು 1000 ಕೋಟಿ ಯಾಗಿತ್ತು ಎಂದು ಭಾವಿಸಿ. ವಿದೇಶದಿಂದ ನಿವ್ವಳ ಉತ್ಪಾದನಾಂಗದ ಆದಾಯ 100 ಕೋಟಿ ₹. ಪರೋಕ್ಷ ತೆರಿಗೆಗಳ ಮೌಲ್ಯ ಸಹಾಯಧನಗಳು ₹ 150 ಕೋಟಿ ಮತ್ತು ರಾಷ್ಟ್ರೀಯ ಆದಾಯ ₹ 850 ಸವಕಳಿಯ ಒಟ್ಟು ಮೌಲ್ಯವನ್ನು ಲೆಕ್ಕಚಾರ ಮಾಡಿರಿ.

8. ಒಂದು ನಿರ್ದಿಷ್ಟ ದೇಶದ ವರ್ಷದಲ್ಲಿನ ಉತ್ಪಾದನಾಂಗದ ವೆಚ್ಚದಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನವು ₹ 1900 ಕೋಟಿ ಯಾಗಿರಲಿ. ಕುಟುಂಬಗಳಿಂದ ಉದ್ಯಮ ಘಟಕಗಳಿಗೆ/ಸರ್ಕಾರಗಳು ಅಥವಾ ಉದ್ಯಮ ಘಟಕಗಳಿಂದ/ ಸರ್ಕಾರಗಳಿಂದ ಕುಟುಂಬಗಳಿಗೆ ಯಾವುದೇ ಬಡ್ಡಿ ಪಾವತಿಗಳಿಲ್ಲ. ಕುಟುಂಬಗಳ ವೈಯಕ್ತಿಕ ವಿತರಣಾ ಆದಾಯ ₹ 1200 ಕೋಟಿ. ಅವು ಪಾವತಿಸಿದ ವೈಯಕ್ತಿಕ ಆದಾಯ ತೆರಿಗೆಯು ₹ 600 ಕೋಟಿ. ಮತ್ತು ಉದ್ಯಮ ಘಟಕಗಳು ಮತ್ತು ಸರಕಾರ ಉಳಿಸಿ ಕೊಂಡಿರುವ ಗಳಿಕೆಯ ಮೌಲ್ಯವು ₹ 200 ಕೋಟಿ ಗಳಷ್ಟಿದೆ. ಸರ್ಕಾರ ಮತ್ತು ಉದ್ಯಮ ಘಟಗಳಿಂದ ಕುಟುಂಬಗಳಿಗೆ ಪಾವತಿಸಿದ ವರ್ಗಾವಣೆ ಪಾವತಿಗಳ ಮೌಲ್ಯವೆಷ್ಟು ?

9. ಈ ಕೆಳಗಿನ ಅಂಕಿ ಅಂಶಗಳನ್ನು ಉಪಯೋಗಿಸಿ ವೈಯಕ್ತಿಕ ಆದಾಯ ಮತ್ತು ವೈಯಕ್ತಿಕ ವಿತರಿಸಲಾಗುವ ಆದಾಯಗಳನ್ನು ಲೆಕ್ಕಾಚಾರ ಮಾಡಿ.

| | | ₹ ಕೋಟಿಗಳಲ್ಲಿ. |
|---|---|---|
| (*a*) | ಉತ್ಪಾದನಾಂಗಗಳ ಬೆಲೆಯಲ್ಲಿ ನಿವ್ವಳ ದೇಶೀಯ ಉತ್ಪನ್ನ | 8000 |
| (*b*) | ವಿದೇಶಗಳ ನಿವ್ವಳ ಉತ್ಪಾದನಾಂಗಗಳಿಂದ ಬಂದ ಆದಾಯ | 200 |
| (*c*) | ವಿತರಿಸಲಾಗದ ಲಾಭ | 1000 |
| (*d*) | ನಿಗಮ ತೆರಿಗೆ | 500 |
| (*e*) | ಕುಟುಂಬಗಳು ಸ್ವೀಕರಿಸಿದ ಬಡ್ಡಿ | 1500 |
| (*f*) | ಕುಟುಂಬಗಳು ಪಾವತಿಸಿದ ಬಡ್ಡಿ | 1200 |
| (*g*) | ವರ್ಗಾವಣೆ ಆದಾಯ | 300 |
| (*h*) | ವೈಯಕ್ತಿಕ ತೆರಿಗೆ | 500 |

10. ಒಂದು ದಿನದಲ್ಲಿ ಕ್ಷೌರಿಕನೊಬ್ಬನು ರಾಜುವಿನ ಕೂದಲು ಕತ್ತರಿಸುವುದರಿಂದ 500 ₹ ಗಳನ್ನು ಸಂಗ್ರಹಿಸುತ್ತಾನೆ. ಈ ದಿನದಲ್ಲಿ ಅವನ ಉಪಕರಣ ₹ 50 ಮೌಲ್ಯದಷ್ಟು ಸವಕಳಿಯಾಗುತ್ತದೆ. ಉಳಿದ 450 ₹ ಗಳಿಗೆ ₹ 30 ಮೌಲ್ಯದಷ್ಟು ಮರಾಟ ತೆರಿಗೆಯನ್ನು ಕಟ್ಟುತ್ತಾನೆ. ಮನೆಗೆ 200 ₹ ಗಳನ್ನು ತೆಗೆದುಕೊಳ್ಳುತ್ತಾನೆ. 220 ₹ ಗಳನ್ನು ಅಭಿವೃದ್ಧಿಗಾಗಿ ಹೊಸ ಉಪಕರಣಗಳನ್ನು ಕೊಳ್ಳುವುದಕ್ಕಾಗಿ ಉಳಿಸಿಕೊಳ್ಳುತ್ತಾನೆ. 20 ₹ ಗಳನ್ನು ತೆರಿಗೆಯಾಗಿ ಅವನು ಮತ್ತಷ್ಟು ಪಾವತಿಸುತ್ತಾನೆ. ಈ ಮಾಹಿತಿಯನ್ನುಆಧರಿಸಿ ರಾಜುವಿನ ಈ ಕೆಳಗಿನ ಆದಾಯ ಲೆಕ್ಕಚಾರಗಳಿಗೆ ರಾಜುವಿನ ಸಂಪೂರ್ಣ ಕೊಡುಗೆಯನ್ನು ತಿಳಿಸಿ.

(*a*) ಒಟ್ಟು ದೇಶೀಯ ಉತ್ಪನ್ನ
(*b*) ಮಾರುಕಟ್ಟೆ ಬೆಲೆಯಲ್ಲಿ *NNP*.
(*c*) ಉತ್ಪಾದನಾಂಗಗಳ ಬೆಲೆಯಲ್ಲಿ *NNP*.
(*d*) ವಿತರಿಸಲಾಗುವ ವೈಯಕ್ತಿಕ ಆದಾಯ.

11. ಒಂದು ನಿರ್ದಿಷ್ಟ ವರ್ಷದಲ್ಲಿ ಒಂದು ಆರ್ಥಿಕತೆಯ ನಾಮರೂಪಿ *GNP* ಯ ಮೌಲ್ಯವು ₹ 2500 ಆಗಿದ್ದು ಅದೇ ವರ್ಷದಲ್ಲಿ ಆ ದೇಶದ *GNP* ಯ ಮೌಲ್ಯಮಾಪನದ ಬೆಲೆಯು ಅದೇ ಆಧಾರ ವರ್ಷದಲ್ಲಿ 3000 ಕೋಟಿಯಾಗಿತ್ತು. ಒಂದು ವರ್ಷದ *GNP* ಯ ಹಣದುಬ್ಬರವನ್ನು ಶೇಕಡವಾರು ಪದಗಳಲ್ಲಿ ಲೆಕ್ಕ ಹಾಕಿ ಆಧಾರ ವರ್ಷ ಮತ್ತು ಗಣನೆಗೆ ತೆಗೆದುಕೊಂಡಿರುವ ವರ್ಷಗಳ ನಡುವೆ ಬೆಲೆಯ ಮಟ್ಟ ಹೆಚ್ಚಳವಾಗುತ್ತದೆಯೇ ?

12. *GDP* ಯನ್ನು ಒಂದು ದೇಶದ ಯೋಗಕ್ಷೇಮದ ಸೂಚ್ಯಂಕವಾಗಿ ಬಳಸಿಕೊಳ್ಳುವುದರ ಕೆಲವು ಮಿತಿಗಳನ್ನು ಬರೆಯಿರಿ.

### ಸೂಚಿತ ಅಧ್ಯಯನಗಳು *Suggested Readings*


1. Bhaduri, A., 1990. Macroeconomics: The Dynamics of Commodity Production, pages 1 – 27, Macmillan India Limited, New Delhi.
2. Branson, W. H., 1992. Macroeconomic Theory and Policy, (third edition), pages 15 – 34, Harper Collins Publishers India Pvt Ltd., New Delhi.
3. Dornbusch, R and S. Fischer. 1988. Macroeconomics, (fourth edition) pages 29 – 62, McGraw Hill, Paris.
4. Mankiw, N. G., 2000. Macroeconomics, (fourth edition) pages 15 – 76, Macmillan Worth Publishers, New York.




## ಉಪಭಾಗ *Appendix* 2.1

Table 2.2: ***Various Macroeconomic Aggregates of India at Current Prices*** (old series; unit: Rs crores); Source: Reserve Bank of India: Handbook of Indian Economy.

| Year | GDP at Factor Cost | Consumption of fixed capital | NDP at factor cost | Indirect taxes less subsidies | GD at market prices |
|---|---|---|---|---|---|
| 1 | 2 | 3 | 4 (2-3) | 5 | 6 (2+5) |
| 2011-12 | 81066.56 | 9171.41 | 71895.15 | 6293.83 | 87360.39 |
| 2012-13 | 85465.52 | 10092.04 | 75373.48 | 6803.27 | 92268.79 |
| 2013-14 | 90843.69 | 11017.53 | 79826.16 | 7550.65 | 98394.34 |
| 2014-15 | 97274.91 | 11926.75 | 85348.16 | 8246.60 | 105521.51 |
| 2015-16(P) | 10427.92 | 12784.65 | 91487.27 | 923.57 | 113502.49 |

| Net factor income from abroad | GNP at factor cost | NNp at factor cost | GNP at market price | Per capita GNP at factor cost* | Per capita NNP at factor cost* |
|---|---|---|---|---|---|
| 7 | 8 (2+7) | 9 (8-3) | 10 (8+5) | 11 (8/population) | 12 (8/population) |
| –768.24 | 80298.32 | 71126.91 | 86592.15 | 66915.26 | 59272.43 |
| –1081.70 | 84383.82 | 74291.78 | 91187.09 | 70319.85 | 61909.82 |
| –1223.72 | 89619.97 | 98602.44 | 97170.62 | 74683.31 | 65502.03 |
| –1244.50 | 96030.41 | 84103.66 | 104277.01 | 80025.34 | 70086.38 |
| –1369.20 | 102902.72 | 90118.07 | 112133.28 | 85752.27 | 75098.39 |

Table 2.3: ***Components of Gross Domestic Product (at market price) at constant* 2011-12 *Prices*** (Unit: billion rupees).

| Year | Private Final Consumption Expenditure | Government Final Consumption expenditure | Gross fixed capital formation | Changes in stocks |
|---|---|---|---|---|
| 1 | 2 | 3 | 4 | 5 |
| 2011-12 | 49104.47 | 9683.75 | 29976.19 | 2068.54 |
| 2012-13 | 51702.57 | 9734.98 | 31435.31 | 1990.96 |
| 2013-14 | 55200.68 | 9775.21 | 32505.39 | 1620.36 |
| 2014-15 | 58642.83 | 11026.07 | 34082.51 | 1950.07 |
| 2015-16 | 63011.28 | 11269.52 | 35407.50 | 2058.16 |

| Valuables | Exports of goods and services | Imports of goods and services | Discre-pancies | GDP at market price |
|---|---|---|---|---|
| 6 | 7 | 8 | 9 | 10<br>(2+3+4+5+6<br>+7+8+9+10) |
| 2530.33 | 21439.31 | 27155.54 | –286.67 | 87360.39 |
| 2597.19 | 22885.81 | 28783.84 | 705.86 | 92268.79 |
| 1501.23 | 24666.32 | 26433.68 | –441.17 | 98394.34 |
| 1732.75 | 25084.02 | 26643.90 | –352.84 | 105521.51 |
| 1738.11 | 23777.42 | 25907.93 | 2148.83 | 113502.49 |

❖ ❖ ❖ ❖

ಅಧ್ಯಾಯ ೩

# ಹಣ ಮತ್ತು ಬ್ಯಾಂಕಿಂಗ್

## *Money and Banking*



ಹಣವು ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾದ ವಿನಿಮಯ ಮಾಧ್ಯಮವಾಗಿದೆ. ಒಬ್ಬ ವ್ಯಕ್ತಿ ಇರುವ ಒಂದು ಅರ್ಥವ್ಯವಸ್ಥೆಯಲ್ಲಿ ಸರಕುಗಳ ಯಾವುದೇ ವಿನಿಮಯವಿರುವುದಿಲ್ಲ. ಆದ್ದರಿಂದ ಹಣಕ್ಕೆ ಯಾವುದೇ ಪಾತ್ರವೂ ಇರುವುದಿಲ್ಲ. ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಇದ್ದಾಗ್ಯೂ ಏಕಾಂತವಾದ ದ್ವೀಪವೊಂದರಲ್ಲಿ ವಾಸವಾಗಿರುವ ಒಂದು ಕುಟುಂಬದಂತೆ ಅವರು ಮಾರುಕಟ್ಟೆ ವ್ಯವಹಾರದಲ್ಲಿ ಭಾಗವಹಿಸದಿದ್ದರೆ ಹಣಕ್ಕೆ ಆ ಕುಟುಂಬಕ್ಕೆ ಸಂಬಂಧಿಸಿದಂತೆ ಯಾವುದೇ ಕೆಲಸವಿರುವುದಿಲ್ಲ. ಆದರೆ ಒಂದಕ್ಕಿಂತ ಹೆಚ್ಚು ಆರ್ಥಿಕ ಘಟಕಗಳು ಮಾರುಕಟ್ಟೆಯ ಮೂಲಕ ವ್ಯವಹಾರದಲ್ಲಿ ತೊಡಗಿದ ಕೂಡಲೇ ಹಣವು ವಿನಿಮಯಗಳನ್ನು ಸುಗಮಗೊಳಿಸುವ ಒಂದು ಉಪಕರಣವಾಗುತ್ತದೆ. ಹಣವನ್ನು ಮಾಧ್ಯಮವಾಗಿ ಬಳಸದೇ ನಡೆಯುವ ಆರ್ಥಿಕ ವಿನಿಮಯಗಳನ್ನು **ಸಾಟಿ ವಿನಿಮಯ ಪದ್ಧತಿ** ಎಂದು ಕರೆಯುತ್ತಾರೆ. ಇಲ್ಲಿ ಅಸಂಭವನೀಯವಾದ ಬಯಕೆಗಳ ದ್ವಿಮುಖ ಹೊಂದಾಣಿಕೆ ಇದೆಯೆಂದು ಭಾವಿಸುತ್ತಾರೆ. ಉದಾಹರಣೆಗೆ, ಒಬ್ಬ ವ್ಯಕ್ತಿಯ ಬಳಿ ಅಧಿಕ ಅಕ್ಕಿಯಿದೆ ಮತ್ತು ಆಕೆಯು ಅದನ್ನು ಬಟ್ಟೆಗೆ ವಿನಿಮಯ ಮಾಡಿಕೊಳ್ಳಲು ಬಯಸಿದ್ದಾಳೆ ಎಂದು ಪರಿಗಣಿಸೋಣ. ಕೆಲವೊಮ್ಮೆ ತಮ್ಮ ಬಯಕೆಗೆ ವ್ಯತಿರಿಕ್ತವಾಗಿ ಅಧಿಕ ಬಟ್ಟೆ ಹೊಂದಿರುವ ಮತ್ತು ಅಕ್ಕಿಗಾಗಿ ಬೇಡಿಕೆ ಇರುವ ಇನ್ನೊಬ್ಬರು ಸಿಗುವುದೇ ಇಲ್ಲ. ಇಂತಹ ವ್ಯಕ್ತಿಗಳ ಸಂಖ್ಯೆ ಹೆಚ್ಚಾದಂತೆ ಶೋಧನಾ ವೆಚ್ಚವು ಪ್ರತಿಬಂಧಕವಾಗುತ್ತದೆ. ಆದ್ದರಿಂದ ವ್ಯವಹಾರಗಳನ್ನು ಸುಗಮವಾಗಿಸಲು ಎರಡೂ ಕಡೆಯವರು ಒಪ್ಪಿಕೊಳ್ಳುವಂತಹ ಒಂದು ಮಧ್ಯವರ್ತಿ ವಸ್ತುವಿನ ಅವಶ್ಯಕತೆಯಿದೆ. ಅಂತಹ ವಸ್ತುವನ್ನೇ ಹಣ ಎಂದು ಕರೆಯುತ್ತಾರೆ. ವ್ಯಕ್ತಿಗಳು ತಮ್ಮ ಉತ್ಪನ್ನಗಳನ್ನು ಹಣಕ್ಕೆ ಮಾರಬಹುದು ಮತ್ತು ತಮಗೆ ಅವಶ್ಯವಿರುವ ಸರಕುಗಳನ್ನು ಖರೀದಿಸಲು ಹಣವನ್ನು ಬಳಸಬಹುದು. ವಿನಿಮಯವನ್ನು ಸುಗಮಗೊಳಿಸುವುದನ್ನೇ ಹಣದ ಪ್ರಧಾನ ಪಾತ್ರ ಎಂದು ಪರಿಗಣಿಸಿದರೂ, ಇದು ಇನ್ನೂ ಕೆಲವು ಉದ್ದೇಶಗಳನ್ನು ಈಡೇರಿಸುತ್ತದೆ. ಈ ಕೆಳಗಿನವುಗಳು ಆಧುನಿಕ ಅರ್ಥವ್ಯವಸ್ಥೆಯ ಹಣದ ಪ್ರಮುಖ ಕಾರ್ಯಗಳಾಗಿವೆ.

### 3.1 ಹಣದ ಕಾರ್ಯಗಳು *Functions of Money*

ಮೇಲೆ ವಿವರಿಸಿದಂತೆ ವಿನಿಮಯದ ಮಾಧ್ಯಮವಾಗಿರುವುದೇ ಹಣದ ಪ್ರಥಮ ಮತ್ತು ಅತ್ಯಂತ ಪ್ರಮುಖ ಪಾತ್ರವಾಗಿದೆ. ಬೃಹತ್ ಅರ್ಥವ್ಯವಸ್ಥೆಯಲ್ಲಿ ವಸ್ತು ವಿನಿಮಯ ತುಂಬಾ ಕಷ್ಟವಾಗುತ್ತದೆ. ಏಕೆಂದರೆ ತಮ್ಮಲ್ಲಿರುವ ಹೆಚ್ಚುವರಿ ವಸ್ತುಗಳನ್ನು ವಿನಿಮಯ ಮಾಡಲು ಯೋಗ್ಯರಾದ ವ್ಯಕ್ತಿಗಳ ಶೋಧಕ್ಕಾಗಿ ಜನರು ಭರಿಸಬಹುದಾದ ವೆಚ್ಚ ದುಬಾರಿಯಾಗಿರುತ್ತದೆ.

ಹಣವು ಲೆಕ್ಕದ ಅತ್ಯಂತ ಅನುಕೂಲಕರ ಘಟಕವಾಗಿ ಕಾರ್ಯ ನಿರ್ವಹಿಸುತ್ತದೆ. ಎಲ್ಲಾ ಸರಕು ಮತ್ತು ಸೇವೆಗಳ ಮೌಲ್ಯವನ್ನು ಹಣದ ಘಟಕಗಳಲ್ಲಿ ವ್ಯಕ್ತ ಪಡಿಸಬಹುದಾಗಿದೆ. ಒಂದು ಕೈ ಗಡಿಯಾರದ ಮೌಲ್ಯವು ₹500 ಎಂದು ನಾವು ಹೇಳಿದರೆ ಅದನ್ನು ಹಣದ 500 ಘಟಕಗಳಿಗೆ ವಿನಿಮಯ ಮಾಡಬಹುದು ಎಂದು ಅರ್ಥವಾಗುತ್ತದೆ, ಇಲ್ಲಿ ಒಂದು ರೂಪಾಯಿ ಹಣದ ಒಂದು ಘಟಕವಾಗಿದೆ. ಒಂದು ಪೆನ್ಸಿಲ್‌ನ ಬೆಲೆ ₹2 ಮತ್ತು ಒಂದು ಪೆನ್ನಿನ ಬೆಲೆ ₹10 ಎಂದಾದರೆ ಪೆನ್ಸಿಲ್‌ಗೆ ಸಂಬಂಧಿಸಿದಂತೆ ಪೆನ್ನಿನ ಸಾಪೇಕ್ಷ ಬೆಲೆಯನ್ನು ನಾವು ಲೆಕ್ಕ ಹಾಕಬಹುದು. ಅಂದರೆ ಪೆನ್ನಿನ ಬೆಲೆಯು $10 \div 2 = 5$ ಪೆನ್ಸಿಲ್‌ಗಳಾಗುತ್ತವೆ. ಇದೇ ಭಾವನೆಯನ್ನು ಇತರೆ ಸರಕುಗಳಿಗೆ ಸಂಬಂಧಿಸಿದಂತೆ ಹಣದ ಮೌಲ್ಯವನ್ನು ಲೆಕ್ಕ ಹಾಕಲು ಉಪಯೋಗಿಸಬಹುದು. ಮೇಲಿನ ಉದಾಹರಣೆಯಲ್ಲಿ ಒಂದು ರೂಪಾಯಿಯ ಬೆಲೆ $1 \div 2 = 0.5$ ಪೆನ್ಸಿಲ್ ಅಥವಾ $1 \div 10 = 0.1$ ಪೆನ್‌ಗೆ ಸಮವಾಗುತ್ತದೆ. ಹೀಗೆ ಎಲ್ಲಾ ಸರಕುಗಳ ಹಣದ ರೂಪದ

ಬೆಲೆಗಳು ಹೆಚ್ಚಾದಾಗ, ಬೆಲೆ ಮಟ್ಟದಲ್ಲಿ ಸಾಮಾನ್ಯ ಏರಿಕೆಯಾಗಿದೆಯೆಂದಾಗುತ್ತದೆ. ಯಾವುದೇ ಸರಕಿನ ರೂಪದಲ್ಲಿ ಹಣದ ಮೌಲ್ಯವು ಕಡಿಮೆಯಾಗುತ್ತದೆ, ಆಗ ಹಣದ ಒಂದು ಘಟಕವು ಯಾವುದೇ ಸರಕನ್ನು ಕಡಿಮೆ ಪ್ರಮಾಣದಲ್ಲಿ ಕೊಳ್ಳುತ್ತದೆ. ಇದನ್ನು ಹಣದ ಕೊಳ್ಳುವ ಶಕ್ತಿಯಲ್ಲಿನ ಕುಸಿತ ಎನ್ನುತ್ತೇವೆ.

ಸಾಟಿ ವಿನಿಮಯ ಪದ್ಧತಿಯು ಇತರೆ ಕೊರತೆಗಳನ್ನು ಹೊಂದಿದೆ. ವಸ್ತು ವಿನಿಮಯ ಪದ್ಧತಿಯಲ್ಲಿ ಒಬ್ಬ ವ್ಯಕ್ತಿಯು ಸಂಪತ್ತನ್ನು ಸಂಗ್ರಹಿಸಿಟ್ಟುಕೊಳ್ಳಲು ಕಷ್ಟವಾಗುತ್ತಿತ್ತು. ಒಂದೊಮ್ಮೆ ನೀವು ಅಕ್ಕಿಯ ಸಂಗ್ರಹವನ್ನು ಹೊಂದಿದ್ದು ಅದನ್ನು ಈವಾಗಲೇ ಅನುಭೋಗಿಸುವ ಇಚ್ಛೆ ಹೊಂದಿಲ್ಲವೆಂದುಕೊಳ್ಳೋಣ. ಆ ಅಕ್ಕಿಯ ಹೆಚ್ಚುವರಿ ಸಂಗ್ರಹವನ್ನು ಭವಿಷ್ಯದಲ್ಲಿ ಅನುಭೋಗಿಸುವ ಅಥವಾ ಇತರೆ ಸರಕುಗಳನ್ನು ಪಡೆದುಕೊಳ್ಳುವುದಕ್ಕಾಗಿ ಮಾರಾಟ ಮಾಡಬಹುದಾದ ಆಸ್ತಿಯೆಂದು ನೀವು ಪರಿಗಣಿಸಬಹುದು. ಆದರೆ ಅಕ್ಕಿ ನಾಶವಾಗುವ ಸರಕಾಗಿದ್ದು ಒಂದು ನಿರ್ದಿಷ್ಟ ಅವಧಿಯನ್ನು ಮೀರಿ ಸಂಗ್ರಹಿಸಿಡಲು ಸಾಧ್ಯವಿಲ್ಲ. ಅಲ್ಲದೆ ಅಕ್ಕಿಯ ಸಂಗ್ರಹಣೆಗೆ ತುಂಬಾ ಸ್ಥಳಾವಕಾಶದ ಅವಶ್ಯಕತೆಯಿದೆ. ಇತರೆ ಸರಕುಗಳನ್ನು ಖರೀದಿಸಲು ನಿಮ್ಮ ಅಕ್ಕಿಯ ದಾಸ್ತಾನನ್ನು ವಿನಿಮಯ ಮಾಡಲು ಬಯಸಿದಲ್ಲಿ, ಅಕ್ಕಿಗಾಗಿ ಬೇಡಿಕೆಯುಳ್ಳ ಜನರನ್ನು ಹುಡುಕಲು ನೀವು ಸಾಕಷ್ಟು ಸಮಯ ಮತ್ತು ಸಂಪನ್ಮೂಲವನ್ನು ವ್ಯಯಿಸಬೇಕಾಗುತ್ತದೆ. ನೀವು ಹಣಕ್ಕಾಗಿ ನಿಮ್ಮ ಅಕ್ಕಿಯನ್ನು ಮಾರಾಟ ಮಾಡಿದರೆ ಈ ಸಮಸ್ಯೆಯನ್ನು ಪರಿಹರಿಸಬಹುದು. ಹಣವು ನಾಶವಾಗುವಂತಹುದಲ್ಲ ಮತ್ತು ಅದರ ದಾಸ್ತಾನು ವೆಚ್ಚ ಕೂಡಾ ಗಣನೀಯವಾಗಿ ಕಡಿಮೆ. ಇದನ್ನು ಯಾವುದೇ ಸಮಯದಲ್ಲೂ ಯಾವುದೇ ವ್ಯಕ್ತಿಯೂ ಒಪ್ಪಿಕೊಳ್ಳಬಹುದಾಗಿದೆ. ಹೀಗೆ ವ್ಯಕ್ತಿಗಳಿಗೆ ಹಣವು ಮೌಲ್ಯದ ಸಂಗ್ರಾಹಕವಾಗಿ ಕಾರ್ಯ ನಿರ್ವಹಿಸುತ್ತದೆ. ಭವಿಷ್ಯದ ಉಪಯೋಗಕ್ಕಾಗಿ ಸಂಪತ್ತನ್ನು ಹಣದ ರೂಪದಲ್ಲಿ ಸಂಗ್ರಹಿಸಿಡಬಹುದು. ಆದಾಗ್ಯೂ ಈ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಲು ಹಣದ ಮೌಲ್ಯವು ಸ್ಥಿರವಾಗಿರಲೇಬೇಕು. ಏರುತ್ತಿರುವ ಬೆಲೆಗಳ ಮಟ್ಟವು ಹಣದ ಕೊಳ್ಳುವ ಶಕ್ತಿಯನ್ನು ನಾಶ ಪಡಿಸಬಹುದು. ಹಣವಲ್ಲದೆ ಇತರೆ ಯಾವುದೇ ಆಸ್ತಿಯೂ ಮೌಲ್ಯದ ಸಂಗ್ರಾಹಕವಾಗಿ ಕಾರ್ಯ ನಿರ್ವಹಿಸಬಲ್ಲದು ಎಂಬುದನ್ನು ಗಮನಿಸ ಬಹುದಾಗಿದೆ, ಉದಾ: ಬಂಗಾರ, ಭೂ ಸ್ಥಿರಾಸ್ತಿಗಳು, ಗೃಹಗಳು ಅಥವಾ ಬಾಂಡುಗಳು (ಶೀಘ್ರದಲ್ಲಿ ಪರಿಚಯಿಸಲಾಗುತ್ತದೆ). ಆದಾಗ್ಯೂ ಅವುಗಳನ್ನು ಇತರೆ ಸರಕುಗಳಿಗೆ ಸುಲಭವಾಗಿ ಪರಿವರ್ತಿಸಲು ಸಾಧ್ಯವಿಲ್ಲ ಮತ್ತು ಸಾರ್ವತ್ರಿಕ ಒಪ್ಪಿಗೆಯನ್ನೂ ಹೊಂದಿಲ್ಲ.

## 3.2 ಹಣದ ಬೇಡಿಕೆ *Demand for Money*

ಎಲ್ಲಾ ಆಸ್ತಿಗಳಿಗಿಂತ ಹಣವು ಅತ್ಯಂತ ಹೆಚ್ಚು ದ್ರವ್ಯತೆಯನ್ನು ಹೊಂದಿದ್ದು ಅದನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ ಆದ್ದರಿಂದ ಅದನ್ನು ಇತರೆ ಸರಕುಗಳಿಗೆ ಸುಲಭವಾಗಿ ವಿನಿಮಯ ಮಾಡಬಹುದಾಗಿದೆ. ಮತ್ತೊಂದು ಕಡೆ ಇದು ಸದಾವಕಾಶ ವೆಚ್ಚವನ್ನು ಹೊಂದಿದೆ. ಹಣವನ್ನು ನಗದು ಶಿಲ್ಕಿನ ರೂಪದಲ್ಲಿ ಇಟ್ಟುಕೊಳ್ಳುವ ಬದಲು ಯಾವುದೇ ಬ್ಯಾಂಕಿನಲ್ಲಿ ಸ್ಥಿರ ಠೇವಣಿಯಲ್ಲಿಟ್ಟರೆ ನೀವು ಆ ಹಣದ ಮೇಲೆ ಬಡ್ಡಿಯನ್ನು ಗಳಿಸಬಹುದು. ನಿರ್ದಿಷ್ಟ ಸಮಯದಲ್ಲಿ ಎಷ್ಟು ಹಣವನ್ನು ನಗದಾಗಿ ಇಟ್ಟು ಕೊಳ್ಳಬೇಕು ಎಂದು ನಿರ್ಧರಿಸುವಾಗ ದ್ರವ್ಯತೆಯ ಅನುಕೂಲತೆ ಮತ್ತು ತ್ಯಾಗ ಮಾಡಬಹುದಾದ ಬಡ್ಡಿಯ ಅನಾನುಕೂಲತೆಯ ನಡುವಿನ ತುಲನೆಯನ್ನೂ (ರಾಜಿ ವಿನಿಮಯವನ್ನೂ) ಪರಿಗಣಿಸಬೇಕಾಗುತ್ತದೆ. ಹೀಗಾಗಿ ಹಣದ ಶಿಲ್ಕಿನ (ಬಾಕಿ) ಬೇಡಿಕೆಯನ್ನು ದ್ರವ್ಯತೆಯ ಒಲವು (ಆಯ್ಕೆ) ಎಂದು ಉಲ್ಲೇಖಿಸಬಹುದು. ಮುಖ್ಯವಾಗಿ ಎರಡು ಉದ್ದೇಶಗಳಿಗಾಗಿ ಜನರು ಹಣವನ್ನು (ಶಿಲ್ಕನ್ನು) ನಗದು ರೂಪದಲ್ಲಿ ಇಟ್ಟುಕೊಳ್ಳಲು ಬಯಸುತ್ತಾರೆ.

### 3.2.1: ವ್ಯವಹಾರದ ಉದ್ದೇಶ *The Transaction Motive*

ಹಣವನ್ನು ಇಟ್ಟು ಕೊಳ್ಳುವುದರ ಪ್ರಧಾನ ಉದ್ದೇಶವೇ ವ್ಯವಹಾರಗಳನ್ನು ಕೈಗೊಳ್ಳುವುದು. ನೀವು ನಿಮ್ಮ ವೇತನವನ್ನು ವಾರಕೊಮ್ಮೆ ಪಡೆದು ನಿಮ್ಮ ಬಿಲ್ಲುಗಳನ್ನು ಪ್ರತಿ ವಾರದ ಮೊದಲ ದಿನವೇ ಪಾವತಿಸುತ್ತಿದ್ದರೆ ವಾರದ ಉಳಿದ ದಿನಗಳಿಗಾಗಿ ನೀವು ಯಾವುದೇ ನಗದು ಶಿಲ್ಕನ್ನು ಇಟ್ಟು ಕೊಳ್ಳುವ ಅವಶ್ಯಕತೆಯಿರುವುದಿಲ್ಲ; ನಿಮ್ಮ ವಾರದ ಸಂಬಳದಿಂದ ನೇರವಾಗಿ ಖರ್ಚುಗಳನ್ನು ಕಳೆದು ಉಳಿದ ಶಿಲ್ಕನ್ನು ನಿಮ್ಮ ಬ್ಯಾಂಕಿನ ಖಾತೆಗೆ ಜಮಾ ಮಾಡುವಂತೆ ನಿಮ್ಮ ಉದ್ಯೋಗದಾತನನ್ನು ಕೇಳಬಹುದು. ಆದರೆ ನಮ್ಮ ವೆಚ್ಚದ ನಮೂನೆಗಳು ಸಾಮಾನ್ಯವಾಗಿ ನಮ್ಮ ಆದಾಯದೊಂದಿಗೆ ಹೊಂದಿಕೆಯಾಗುವುದಿಲ್ಲ. ಜನರು ತಮ್ಮ ಆದಾಯವನ್ನು ಬೇರೆ ಬೇರೆ ಸಮಯದಲ್ಲಿ ಗಳಿಸುತ್ತಾರೆ ಮತ್ತು ನಡುವಿನ ಅವಧಿಯ ಉದ್ದಕ್ಕೂ ನಿರಂತರವಾಗಿ ಖರ್ಚು ಮಾಡುತ್ತಾರೆ.

ನೀವು ಪ್ರತಿ ತಿಂಗಳ ಮೊದಲನೇ ದಿನ 100 ರೂಪಾಯಿಗಳನ್ನು ಸಂಪಾದಿಸುತ್ತೀರಿ ಮತ್ತು ಈ ಶಿಲ್ಕನ್ನು ತಿಂಗಳ ಉಳಿದ ದಿನಗಳಲ್ಲಿ ಸಮಾನವಾಗಿ ಖರ್ಚು ಮಾಡುತ್ತೀರಿ ಎಂದುಕೊಳ್ಳೋಣ. ಹೀಗಾಗಿ ನಿಮ್ಮ ನಗದು ಶಿಲ್ಕು ತಿಂಗಳ ಆರಂಭದಲ್ಲಿ ಮತ್ತು ಅಂತ್ಯದಲ್ಲಿ ಅನುಕ್ರಮವಾಗಿ ₹100 ಮತ್ತು 0 ಆಗಿರುತ್ತದೆ. ನಿಮ್ಮ ಸರಾಸರಿ ನಗದು ಹೊಂದಿರುವಿಕೆಯನ್ನು (₹100+₹0)÷2=₹50, ಎಂದು ಲೆಕ್ಕಾಚಾರ ಮಾಡಬಹುದು ಮತ್ತು ಅದರಿಂದ ನೀವು ಪ್ರತಿ ತಿಂಗಳು 100 ರೂಪಾಯಿ ಮೌಲ್ಯದ ವ್ಯವಹಾರಗಳನ್ನು ಮಾಡಿರುವಿರಿ. ಆದ್ದರಿಂದ ಹಣಕ್ಕಾಗಿರುವ ನಿಮ್ಮ ಸರಾಸರಿ ವ್ಯವಹಾರದ ಬೇಡಿಕೆಯು ನಿಮ್ಮ ಅರ್ಧ ತಿಂಗಳ ಆದಾಯಕ್ಕೆ ಸಮವಾಗಿರುತ್ತದೆ ಅಥವಾ ಇನ್ನೊಂದು ಅರ್ಥದಲ್ಲಿ ನಿಮ್ಮ ತಿಂಗಳ ವಹಿವಾಟಿನ ಮೌಲ್ಯದ ಅರ್ಧದಷ್ಟಾಗಿರುತ್ತದೆ.

ಈಗ ಎರಡು ಘಟಕಗಳು ಮಾತ್ರ ಇರುವ ಎರಡೇ ವ್ಯಕ್ತಿಗಳ ಒಂದು ಅರ್ಥವ್ಯವಸ್ಥೆಯನ್ನು ಪರಿಗಣಿಸೋಣ. – ಒಂದು ಉದ್ಯಮ ಘಟಕ (ಒಬ್ಬ ವ್ಯಕ್ತಿಯ ಮಾಲಿಕತ್ವದಲ್ಲಿರುವುದು) ಮತ್ತು ಒಬ್ಬ ಕಾರ್ಮಿಕ. ಉದ್ಯಮ ಘಟಕವು ಪ್ರತಿ ತಿಂಗಳ ಆರಂಭದಲ್ಲಿ ₹100 ವೇತನವನ್ನು ಕಾರ್ಮಿಕನಿಗೆ ಪಾವತಿಸುತ್ತದೆ. ಇದಕ್ಕೆ ಪ್ರತಿಯಾಗಿ ಕಾರ್ಮಿಕನು ತನ್ನ ತಿಂಗಳ ಆದಾಯವನ್ನು ಉದ್ಯಮವು ಉತ್ಪಾದಿಸಿದ ಉತ್ಪನ್ನದ ಮೇಲೆ ಖರ್ಚು ಮಾಡುತ್ತಾನೆ–ಈ ಆರ್ಥಿಕತೆಯಲ್ಲಿ ಒಂದೇ ಸರಕು ದೊರೆಯುತ್ತದೆ! ಆ ರೀತಿಯಲ್ಲಿ ಪ್ರತಿ ತಿಂಗಳ ಆರಂಭದಲ್ಲಿ ಕಾರ್ಮಿಕ ₹100 ರ ಶಿಲ್ಕು ಮತ್ತು ಉದ್ಯಮ ಘಟಕವು ₹0 ಶಿಲ್ಕನ್ನು ಹೊಂದಿರುತ್ತದೆ. ತಿಂಗಳ ಕೊನೆಯ ದಿನ ಚಿತ್ರಣವು ವಿರುದ್ಧವಾಗಿರುತ್ತದೆ. ಉದ್ಯಮ ಘಟಕವು ಕಾರ್ಮಿಕನಿಗೆ ಸರಕುಗಳನ್ನು ಮಾರುವುದರ ಮೂಲಕ ₹100 ಶಿಲ್ಕನ್ನು ಸಂಗ್ರಹಿಸುತ್ತದೆ. ಉದ್ಯಮ ಘಟಕ ಮತ್ತು ಕಾರ್ಮಿಕನ ಸರಾಸರಿ ನಗದು ಹೊಂದಿರುವಿಕೆಯ ಮೊತ್ತ ಇಬ್ಬರಿಗೂ ಸಮಾನವಾಗಿ ₹50 ಆಗಿರುತ್ತದೆ. ಹಾಗಾಗಿ ಈ ಆರ್ಥಿಕತೆಯ ಒಟ್ಟು ಹಣದ ಬೇಡಿಕೆಯು ₹100 ಕ್ಕೆ ಸಮವಿರುತ್ತದೆ. ಈ ಆರ್ಥಿಕತೆಯಲ್ಲಿ ತಿಂಗಳ ವಹಿವಾಟಿನ ಒಟ್ಟು ಮೊತ್ತ ₹200 ಆಗಿರುತ್ತದೆ. ಉದ್ಯಮ ಘಟಕವು ₹100 ಮೊತ್ತದ ತನ್ನ ಉತ್ಪನ್ನವನ್ನು ಕಾರ್ಮಿಕನಿಗೆ ಮತ್ತು ಕಾರ್ಮಿಕ ₹100 ಮೊತ್ತದ ತನ್ನ ಸೇವೆಯನ್ನು ಉದ್ಯಮ ಘಟಕಕ್ಕೆ ಮಾರಾಟ ಮಾಡಿರುತ್ತಾರೆ. ನಿರ್ದಿಷ್ಟ ಸಮಯದಲ್ಲಿ ಆರ್ಥಿಕತೆಯಲ್ಲಿನ ನಗದು ವ್ಯವಹಾರದ ಹಣದ ಬೇಡಿಕೆಯು ಪುನಃ ಆರ್ಥಿಕತೆಯ ವಹಿವಾಟಿನ ಒಟ್ಟು ಗಾತ್ರದಲ್ಲಿನ ಒಂದು ಭಾಗವಾಗಿರುತ್ತದೆ.

ಆದ್ದರಿಂದ, ಸಾಮಾನ್ಯವಾಗಿ, ಆರ್ಥಿಕತೆಯಲ್ಲಿ ನಗದು ವ್ಯವಹಾರದ ಬೇಡಿಕೆಯು $M_T^d$, ಇದನ್ನು ಹೀಗೆ ಬರೆಯಬಹುದು.

$$M_T^d = k.T \qquad (3.1)$$

ಇಲ್ಲಿ T ನಿರ್ದಿಷ್ಟ ಸಮಯದಲ್ಲಿ ಆರ್ಥಿಕತೆಯ ವಹಿವಾಟಿನ ಒಟ್ಟು ಮೌಲ್ಯ (ನಾಮ ಮಾತ್ರ) ಮತ್ತು $k$ ಧನಾತ್ಮಕ ಭಾಗವಾಗಿರುತ್ತದೆ.

ಮೇಲೆ ವಿವರಿಸಲಾದ ಎರಡು ವ್ಯಕ್ತಿಗಳ ಆರ್ಥಿಕತೆಯನ್ನು ಮತ್ತೊಂದು ದೃಷ್ಟಿ ಕೋನದಿಂದ ನೋಡಬಹುದಾಗಿದೆ. ಆರ್ಥಿಕತೆಯು ₹100 ಮೌಲ್ಯದ ಶಿಲ್ಕನ್ನು ಉಪಯೋಗಿಸಿಕೊಂಡು ತಿಂಗಳಿಗೆ ₹200 ಮೌಲ್ಯದ ವ್ಯವಹಾರ ಮಾಡುತ್ತಿರುವುದನ್ನು ನೋಡಿದಾಗ ಬಹುಷಃ ನಿಮಗೆ ಆಶ್ಚರ್ಯವೆನಿಸಬಹುದು. ಈ ಒಗಟಿಗೆ ಉತ್ತರ ತುಂಬಾ ಸರಳವಾಗಿದೆ–ಪ್ರತಿ ರೂಪಾಯಿಯೂ ತಿಂಗಳಗೆ ಎರಡು ಬಾರಿ ಕೈ ಬದಲಾಯಿಸುತ್ತದೆ. ಮೊದಲ ದಿನ ಅದು ಮಾಲಿಕನ ಕಿಸೆಯಿಂದ ಕಾರ್ಮಿಕನ ಕಿಸೆಗೆ ವರ್ಗಾಯಿಸಲ್ಪಡುತ್ತಿರುತ್ತದೆ ಮತ್ತು ತಿಂಗಳಿನ ಕೆಲ ಸಮಯದಲ್ಲಿ ಅದು ಕಾರ್ಮಿಕನ ಕೈಯಿಂದ ಮಾಲಿಕನ ಕೈಯಿಗೆ ದಾಟುತ್ತದೆ. ನಿರ್ದಿಷ್ಟ ಸಮಯದಲ್ಲಿ ಹಣದ ಒಂದು ಘಟಕವು ಎಷ್ಟು ಬಾರಿ ಕೈಗಳನ್ನು ಬದಲಾಯಿಸುತ್ತದೆ ಎನ್ನುವುದನ್ನು **ಹಣದ ಚಲಾವಣೆಯ ವೇಗ** ಎಂದು ಕರೆಯುತ್ತಾರೆ. ಮೇಲಿನ ಉದಾಹರಣೆಯಲ್ಲಿ ಅದು 2, ಅರ್ಧದ ವಿಲೋಮ– ಹಣದ ಶಿಲ್ಕು ಮತ್ತು ವಹಿವಾಟಿನ ಮೌಲ್ಯದ ಅನುಪಾತವಾಗಿದೆ. ಹೀಗೆ, ಸಾಮಾನ್ಯವಾಗಿ ಸಮೀಕರಣವನ್ನು (3.1) ಈ ಕೆಳಗಿನಂತೆ ನಾವು ಬರೆಯಬಹುದು.

$$\frac{1}{k}.M_T^d = T, \text{ or, } v.M_T^d = T \qquad (3.2)$$

ಇಲ್ಲಿ $v = \frac{1}{k}$. ಚಲಾವಣೆಯ ವೇಗವಾಗಿದೆ. ಇಲ್ಲಿ ಗಮನಿಸಬೇಕಾದುದು ಮೇಲಿನ ಸಮೀಕರಣದ

ಬಲಗಡೆ ಇರುವ T ಎಂಬುದು ಹರಿವಿನ ಚಲಕವಾಗಿದೆ, ಹಣದ ಬೇಡಿಕೆ $M_T^d$ ದಾಸ್ತಾನು ಪರಿಕಲ್ಪನೆಯಾಗಿದೆ– ಇದು ಒಂದು ನಿರ್ದಿಷ್ಟ ಸಮಯದಲ್ಲಿ ಜನರು ನಗದು ರೂಪದಲ್ಲಿ ಇಟ್ಟುಕೊಳ್ಳಲು ಬಯಸುವ ದಾಸ್ತಾನಾಗಿದೆ. ಅದಾಗ್ಯೂ ಹಣದ ವೇಗ *v*, ಸಮಯದ ಆಯಾಮವನ್ನು ಹೊಂದಿದೆ. ನಿರ್ದಿಷ್ಟ ಸಮಯದಲ್ಲಿ ದಾಸ್ತಾನಿನ ಘಟಕವು ಎಷ್ಟು ಬಾರಿ ಕೈಯನ್ನು ಬದಲಿಸುತ್ತದೆ ಎನ್ನುವುದನ್ನು ಸೂಚಿಸುತ್ತದೆ ಉದಾ: ಒಂದು ತಿಂಗಳು ಅಥವಾ ಒಂದು ವರ್ಷ ಇತ್ಯಾದಿ. ಹಾಗೆಯೇ ಎಡ ಭಾಗದಲ್ಲಿರುವ $v.\ M_T^d$ಯು ನಿರ್ದಿಷ್ಟ ಸಮಯದಲ್ಲಿ ಈ ದಾಸ್ತಾನಿನಿಂದ ಮಾಡಲಾದ ಹಣಕಾಸು ವಹಿವಾಟಿನ ಒಟ್ಟು ಮೌಲ್ಯವನ್ನು ಮಾಪನ ಮಾಡುತ್ತದೆ. ಇದು ಚಲಕದ ಪರಿಮಾಣವಾಗಿದೆ ಆದರಿಂದ ಇದು ಬಲಭಾಗಕ್ಕೆ ಸಮವಾಗಿರುತ್ತದೆ.

ಒಂದು ಅರ್ಥವ್ಯವಸ್ಥೆಯಲ್ಲಿನ ಒಂದು ನಿರ್ದಿಷ್ಟ ವರ್ಷದ (ನಾಮಮಾತ್ರ) ಒಟ್ಟು ದೇಶೀಯ ಉತ್ಪನ್ನದ ಮತ್ತು ಹಣದ ಸಮಗ್ರ ವಹಿವಾಟು ಬೇಡಿಕೆಯ ನಡುವಿನ ಸಂಬಂಧವನ್ನು ಅರಿಯುವುದೇ ನಮ್ಮ ಅಂತಿಮ ಉದ್ದೇಶ. ಒಂದು ಅರ್ಥವ್ಯವಸ್ಥೆಯ ವಾರ್ಷಿಕ ಒಟ್ಟು ವಹಿವಾಟಿನಲ್ಲಿ ಮಧ್ಯವರ್ತಿ ಸರಕುಗಳು ಮತ್ತು ಸೇವೆಗಳ ಎಲ್ಲಾ ವಹಿವಾಟುಗಳೂ ಒಳಗೊಂಡಿರುತ್ತದೆ ಮತ್ತು ಇದು ಸ್ಪಷ್ಟವಾಗಿ ನಾಮಮಾತ್ರ GDP ಗಿಂತ ಹೆಚ್ಚಾಗಿರುತ್ತದೆ. ಆದಾಗ್ಯೂ ಸಾಮಾನ್ಯವಾಗಿ ವಹಿವಾಟಿನ ಮೌಲ್ಯ ಮತ್ತು ನಾಮಮಾತ್ರ GDPಯ ನಡುವೆ ಸ್ಥಿರವಾದ ಮತ್ತು ಧನಾತ್ಮಕವಾದ ಸಂಬಂಧವಿದೆ. ನಾಮಮಾತ್ರ GDPಯಲ್ಲಿ ಏರಿಕೆಯಾದಾಗ ವಹಿವಾಟಿನ ಒಟ್ಟು ಮೌಲ್ಯದಲ್ಲಿ ಏರಿಕೆಯಾಗುತ್ತದೆ ಹಾಗೂ ಅದರಿಂದಾಗಿ ವಹಿವಾಟು ಹಣದ ಬೇಡಿಕೆಯಲ್ಲಿ ಹೆಚ್ಚಳವಾಗಿತ್ತದೆ ಎನ್ನುವುದನ್ನು ಸಮೀಕರಣ (3.1) ಸೂಚಿಸುತ್ತದೆ. ಆ ರೀತಿಯಲ್ಲಿ ಸಾಮಾನ್ಯವಾಗಿ ಸಮೀಕರಣ (3.1)ನ್ನು ಈ ಕೆಳಗಿನಂತೆ ಮಾರ್ಪಡಿಸಬಹುದಾಗಿದೆ.

$$M_T^d = kPY \qquad (3.3)$$

ಇಲ್ಲಿ Y ನೈಜ GDP ಮತ್ತು P ಸಾಮಾನ್ಯ ಬೆಲೆಗಳ ಮಟ್ಟ ಅಥವಾ GDP ಹಣದುಬ್ಬರವಾಗಿದೆ. ವಹಿವಾಟು ಹಣದ ಬೇಡಿಕೆ ಅರ್ಥವ್ಯವಸ್ಥೆಯ ನೈಜ ಆದಾಯದೊಂದಿಗೆ ಮತ್ತು ಸರಾಸರಿ ಬೆಲೆಯ ಮಟ್ಟದೊಂದಿಗೆ ಧನಾತ್ಮಕ ಸಂಬಂಧವನ್ನು ಹೊಂದಿದೆ ಎನ್ನುವುದನ್ನು ಮೇಲಿನ ಸಮೀಕರಣವು ತಿಳಿಸುತ್ತದೆ.

### 3.2.2 ಸಟ್ಟಾ ವ್ಯಾಪಾರದ ಉದ್ದೇಶ *The Speculative Motive*

ಒಬ್ಬ ವ್ಯಕ್ತಿ ತನ್ನ ಸಂಪತ್ತನ್ನು ಭೂ ಆಸ್ತಿ, ಚಿನ್ನ, ಬಾಂಡುಗಳು ಮತ್ತು ಹಣದ ರೂಪದಲ್ಲಿ ಇಟ್ಟುಕೊಳ್ಳಬಹುದು. ಸರಳೀಕರಿಸುದಕ್ಕಾಗಿ ನಾವು ಈಗ ಹಣವನ್ನು ಹೊರತು ಪಡಿಸಿದ ಎಲ್ಲಾ ಆಸ್ತಿಗಳನ್ನು ಒಟ್ಟಾಗಿ 'ಬಾಂಡುಗಳು' ಎಂದು ಕರೆಯೋಣ. ವಿಶೇಷವಾಗಿ ನಿರ್ದಿಷ್ಟ ಕಾಲಾವಧಿಯವರೆಗೆ ಭವಿಷ್ಯದ ಹಣಕಾಸಿನ ಪ್ರತಿಫಲದ, ಹರಿವಿನ ವಚನವನ್ನು ಹೊಂದಿರುವ ಕಾಗದಗಳೇ ಬಾಂಡುಗಳಾಗಿದೆ. ಸಾರ್ವಜನಿಕರಿಂದ ಹಣ ಸಾಲ ಪಡೆಯುವುದಕ್ಕಾಗಿ ಸರಕಾರ ಮತ್ತು ಉದ್ಯಮ ಘಟಕಗಳು ಇವುಗಳನ್ನು ಬಿಡುಗಡೆ ಮಾಡುತ್ತವೆ ಮತ್ತು ಇವುಗಳನ್ನು ಮಾರುಕಟ್ಟೆಯಲ್ಲಿ ಕೊಳ್ಳಬಹುದು ಮತ್ತು ಮಾರಾಟ ಮಾಡಬಹುದಾಗಿದೆ. ಎರಡು–ಅವಧಿಯ ಬಾಂಡುಗಳನ್ನು ಪರಿಗಣಿಸೋಣ. ಒಂದು ಉದ್ಯಮ ಘಟಕವು ಸಾರ್ವಜನಿಕರಿಂದ ₹100 ಸಾಲವನ್ನು ಪಡೆಯಲು ಬಯಸುತ್ತದೆ. ಅದು ಮೊದಲ ವರ್ಷದ ಅಂತ್ಯಕ್ಕೆ ₹10 ಮತ್ತು ಎರಡನೇ ವರ್ಷದ ಅಂತ್ಯಕ್ಕೆ ಅಸಲು ₹100 ಮತ್ತು ಅದಕ್ಕೆ ₹10ನ್ನು ಸೇರಿಸಿ ನೀಡುವ ಖಾತರಿಯೊಂದಿಗೆ ಬಾಂಡನ್ನು ಬಿಡುಗಡೆ ಮಾಡುತ್ತದೆ. ಅಂತಹ ಬಾಂಡಿನ ಮುಖಬೆಲೆಯು ₹100 ಆಗಿದೆ, ಪರಿಪಕ್ವತೆಯ ಅವಧಿ ಎರಡು ವರ್ಷಗಳು ಮತ್ತು ಕೂಪನ್ ದರ ಶೇ.10 ಅಗಿರುತ್ತದೆ. ಬ್ಯಾಂಕಿನ ನಿಮ್ಮ ಉಳಿತಾಯ ಖಾತೆಯ ಪ್ರಚಲಿತ ಬಡ್ಡಿಯ ದರವು ಶೇ.5ಕ್ಕೆ ಸಮನಾಗಿದೆ ಎಂದು ಕಲ್ಪಿಸಿಕೊಳ್ಳಿರಿ. ಸ್ವಾಭಾವಿಕವಾಗಿ ನೀವು ಈ ಬಾಂಡಿನ ಮೇಲಿನ ಗಳಿಕೆಯನ್ನು ನಿಮ್ಮ ಉಳಿತಾಯ ಖಾತೆಯ ಬಡ್ಡಿ ಗಳಿಕೆಯೊಂದಿಗೆ ಹೋಲಿಸಲು ಬಯಸುವಿರಿ. ನೀವು ನಿಖರವಾಗಿ ಕೇಳುವ ಪ್ರಶ್ನೆ ಹೀಗಿರುತ್ತದೆ. ನನ್ನ ಉಳಿತಾಯ ಖಾತೆಯಲ್ಲಿ ಎಷ್ಟು ಹಣವನ್ನು ಇಟ್ಟರೆ ಅದು ವರ್ಷದ ಕೊನೆಯಲ್ಲಿ ₹10ನ್ನು ಸೃಷ್ಟಿಸಬಲ್ಲದು? ಈ ಮೊತ್ತವು X ಆಗಿರಲಿ ಎಂದುಕೊಳ್ಳೋಣ. ಆದ್ದರಿಂದ,

$$X\left(1+\frac{5}{100}\right)=10$$

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ

$$X = \frac{10}{\left(1+\frac{5}{100}\right)}$$

ಇಲ್ಲಿ X ಎಂಬುದು ಮಾರುಕಟ್ಟೆ ಬಡ್ಡಿದರದಲ್ಲಿ ವಟಾಯಿಸಿದ ₹ 10ರ ವರ್ತಮಾನ ಮೌಲ್ಯವಾಗಿದೆ. ಅದೇ ರೀತಿ ಎರಡು ವರ್ಷಗಳ ಅಂತ್ಯಕ್ಕೆ ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಯಾವ ಮೊತ್ತವನ್ನು ಇಟ್ಟರೆ ₹ 110 ಸೃಷ್ಟಿಯಾಗುತ್ತದೋ ಆ ಮೊತ್ತವು Y ಆಗಿದೆ ಎಂದುಕೊಳ್ಳೋಣ. ಹೀಗೆ ಬಾಂಡಿನ ಪ್ರತಿಫಲದ ಹರಿವಿನ ವರ್ತಮಾನದ ಮೌಲ್ಯವು

$$PV = X + Y = \frac{10}{\left(1+\frac{5}{100}\right)} + \frac{10+100}{\left(1+\frac{5}{100}\right)^2}$$

ಇದಕ್ಕೆ ಸಮವಾಗಿರಲೇಬೇಕು. ಇಲ್ಲಿ PV = ವರ್ತಮಾನದ ಮೌಲ್ಯ

ಲೆಕ್ಕಾಚಾರವು ಇದು ಸುಮಾರು ₹109.29 ಆಗಿದೆಯೆಂದು ತಿಳಿಸುತ್ತದೆ. ಇದರರ್ಥ ನೀವು ₹109.29ನ್ನು ಬ್ಯಾಂಕಿನ ಉಳಿತಾಯ ಖಾತೆಯಲ್ಲಿಟ್ಟರೆ ಅದು ಬಾಂಡಿನ ಪ್ರತಿಫಲಕ್ಕೆ ಸಮಾನವಾದ ಪ್ರತಿಫಲವನ್ನು ನೀಡುತ್ತದೆ. ಆದರೆ ಬಾಂಡಿನ ಮಾರಾಟಗಾರನು ಅದನ್ನೇ ಕೇವಲ ₹100ರ ಮುಖಬೆಲೆಗೆ ನೀಡುತ್ತಿದ್ದಾನೆ. ಬ್ಯಾಂಕಿನ ಉಳಿತಾಯ ಖಾತೆಗಿಂತ ಬಾಂಡು ಹೆಚ್ಚು ಆಕರ್ಷಣೀಯ ಎನ್ನುವುದು ಸ್ಪಷ್ಟವಾಗಿದೆ ಮತ್ತು ಜನರು ಬಾಂಡನ್ನು ಪಡೆದುಕೊಳ್ಳಲು ಧಾವಿಸುತ್ತಾರೆ. ಸ್ಪರ್ಧಾತ್ಮಕ ಹರಾಜು, ಬಾಂಡಿನ ಬೆಲೆಯು ಅದರ PV ಬೆಲೆಗೆ ಸಮಾನವಾಗುವವರೆಗೆ, ಬಾಂಡಿನ ಬೆಲೆಯನ್ನು ಅದರ ಮುಖಬೆಲೆಗಿಂತ ಮೇಲೆ ಏರಿಸುತ್ತದೆ. ಬೆಲೆಯು PV ಗಿಂತ ಹೆಚ್ಚಾದರೆ ಬ್ಯಾಂಕ್ ಉಳಿತಾಯ ಖಾತೆಗೆ ಹೋಲಿಸಿದಾಗ ಬಾಂಡುಗಳ ಮೇಲಿನ ಆಕರ್ಷಣೆಯು ಕಡಿಮೆಯಾಗುತ್ತದೆ ಮತ್ತು ಜನರು ಅದನ್ನು ಬಿಟ್ಟು ಬಿಡಲು ಬಯಸುತ್ತಾರೆ. ಬಾಂಡುಗಳ ಅಧಿಕ ಪೂರೈಕೆಯು ಬಾಂಡಿನ ಬೆಲೆಗಳ ಇಳಿಮುಖ ಒತ್ತಡಕ್ಕೆ ಕಾರಣವಾಗಿ ಪುನಃ ಹಿಂದಿನ PV ಗೆ ತರುತ್ತದೆ. ಪೈಪೋಟಿಯುತ ಆಸ್ತಿ ಮಾರುಕಟ್ಟೆಯ ಸ್ಥಿತಿಗತಿಗಳಲ್ಲಿ ಬಾಂಡಿನ ಬೆಲೆಯು ಯಾವಾಗಲೂ ಅದರ ಸಮತೋಲನದ ವರ್ತಮಾನದ ಮೌಲ್ಯಕ್ಕೆ ಸರಿ ಸಮಾನವಾಗಿರಬೇಕು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಈಗ ಮಾರುಕಟ್ಟೆ ಬಡ್ಡಿ ದರವು ಶೇ.5 ರಿಂದ ಶೇ.6ಕ್ಕೆ ಏರಿದೆಯೆಂದು ಪರಿಗಣಿಸೋಣ. ವರ್ತಮಾನ ಮೌಲ್ಯ ಮತ್ತು ಅದರಿಂದ ಬಾಂಡಿನ ಬೆಲೆಯು ಈ ರೀತಿಯಲ್ಲಿ ಆಗುತ್ತದೆ.

$$\frac{10}{\left(1+\frac{6}{100}\right)} + \frac{10+100}{\left(1+\frac{6}{100}\right)^2} = 107.33 \quad \text{(ಸುಮಾರು)}$$

ಒಂದು ಬಾಂಡಿನ ಬೆಲೆಯು ಮಾರುಕಟ್ಟೆಯ ಬಡ್ಡಿದರವನ್ನು ವಿರುದ್ಧವಾಗಿ (ವಿಲೋಮವಾಗಿ) ಅನುಸರಿಸುತ್ತದೆ.

ವಿವಿಧ ಜನರು ಅರ್ಥವ್ಯವಸ್ಥೆಯ ಕುರಿತಾದ ತಮ್ಮ ಖಾಸಗಿ ಮಾಹಿತಿಗಳಿಂದಾಗಿ ಮಾರುಕಟ್ಟೆ ಬಡ್ಡಿ ದರದಲ್ಲಿನ ಭವಿಷ್ಯದ ಚಲನವಲನಗಳ ಬಗ್ಗೆ ವಿವಿಧ ನಿರೀಕ್ಷೆಗಳನ್ನು ಹೊಂದಿರುತ್ತಾರೆ. ಮಾರುಕಟ್ಟೆ ಬಡ್ಡಿ ದರವು ಕೊನೆಗೆ ವಾರ್ಷಿಕ ಶೇ.8ಕ್ಕೆ ಸ್ಥಿರವಾಗುತ್ತದೆಂದು ನೀವು ಯೋಚಿಸುವುದಾದರೆ, ಪ್ರಸ್ತುತ ದರ ಶೇ.5 ತುಂಬಾ ಕಡಿಮೆಯೆಂದು ನೀವು ಭಾವಿಸಬಹುದು. ಬಡ್ಡಿಯ ದರ ಹೆಚ್ಚಾಗುತ್ತದೆ ಮತ್ತು ಅದರ ಪರಿಣಾಮವಾಗಿ ಬಾಂಡಿನ ದರಗಳು ಕಡಿಮೆಯಾಗುತ್ತದೆ ಎಂದು ನೀವು ನಿರೀಕ್ಷಿಸಬಹುದು. ನೀವು ಬಾಂಡುಧಾರಕನಾಗಿದ್ದರೆ ಅಥವಾ ಬಾಂಡನ್ನು ಹೊಂದಿದ್ದರೆ ಬಾಂಡಿನ ಬೆಲೆಗಳಲ್ಲಿ ಆಗುವ ಇಳಿಕೆ ಎಂದರೆ ನಿಮಗೆ ನಷ್ಟವೆಂದೇ ಅರ್ಥ– ಇದು ಮಾರುಕಟ್ಟೆಯಲ್ಲಿ ಆಸ್ತಿಯ ಮೌಲ್ಯವು ಹಠಾತ್ ಕುಸಿಯುವುದರಿಂದ ನೀವು ಅನುಭವಿಸುವ

ನಷ್ಟದಂತೆಯೇ ಇರುತ್ತದೆ. ಬಾಂಡಿನ ಬೆಲೆಗಳು ಕಡಿಮೆ ಆಗುವುದರಿಂದ ಆಗುವ ಅಂತಹ ನಷ್ಟವನ್ನು ಬಾಂಡುಧಾರಕನಿಗೆ ಆಗುವ ಬಂಡವಾಳ ನಷ್ಟವೆಂದು ಕರೆಯುತ್ತಾರೆ. ಅಂತಹ ಸನ್ನಿವೇಶದಲ್ಲಿ ನೀವು ನಿಮ್ಮ ಬಾಂಡನ್ನು ಮಾರಾಟ ಮಾಡಿ ಅದರ ಬದಲು ಹಣವನ್ನು ಇಟ್ಟುಕೊಳ್ಳಲು ಪ್ರಯತ್ನಿಸುತ್ತೀರಿ. ಹೀಗೆ ಬಡ್ಡಿಯ ದರ ಮತ್ತು ಬಾಂಡಿನ ಬೆಲೆಗಳಲ್ಲಿ ಭವಿಷ್ಯದ ಬಗೆಗಿನ ಊಹೆಗಳು ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯನ್ನು ಹೆಚ್ಚಿಸುತ್ತದೆ.

ಯಾವಾಗ ಬಡ್ಡಿ ದರವು ತುಂಬಾ ಮೇಲಕ್ಕೇರುತ್ತದೆಯೋ ಆಗ ಪ್ರತಿಯೊಬ್ಬರೂ ಅದು ಭವಿಷ್ಯದಲ್ಲಿ ಕಡಿಮೆಯಾಬಹುದು ಎನ್ನುವ ನಿರೀಕ್ಷೆಯಲ್ಲಿರುತ್ತಾರೆ ಮತ್ತು ಬಾಂಡುಗಳ್ನು ಹೊಂದುವುದರಿಂದಾಗುವ ಬಂಡವಾಳ ಗಳಿಕೆಯನ್ನು ನಿರೀಕ್ಷಿಸುತ್ತಾರೆ, ಇದರಿಂದಾಗಿ ಜನರು ತಮ್ಮ ಹಣವನ್ನು ಬಾಂಡುಗಳಿಗೆ ಪರಿವರ್ತಿಸುತ್ತಾರೆ. ಹೀಗೆ ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯು ಕಡಿಮೆಯಾಗುತ್ತದೆ. ಯಾವಾಗ ಬಡ್ಡಿ ದರ ಕಡಿಮೆಯಾಗುತ್ತದೆಯೋ ಹೆಚ್ಚು ಹೆಚು ಜನರು ಅದು ಭವಿಷ್ಯದಲ್ಲಿ ಹೆಚ್ಚಾಗುವ ಹಾಗೂ ಬಂಡವಾಳ ನಷ್ಟದ ನಿರೀಕ್ಷೆಯಲ್ಲಿರುತ್ತಾರೆ. ಆಗ ಅವರು ತಮ್ಮ ಬಾಂಡುಗಳನ್ನು ಹಣಕ್ಕೆ ಪರಿವರ್ತಿಸುವುದು ಸಟ್ಟಾ ವ್ಯಾಪಾರದ ಉದ್ದೇಶದ ಅಧಿಕ ಹಣದ ಬೇಡಿಕೆಗೆ ಕಾರಣವಾಗುತ್ತದೆ. ಹೀಗೆ ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯು ಬಡ್ಡಿಯ ದರದೊಂದಿಗೆ ವಿಲೋಮ ಸಂಬಂಧವನ್ನು ಹೊಂದಿದೆ. ಒಂದು ಸರಳ ಮಾದರಿಯ ಕಲ್ಪನೆಯೊಂದಿಗೆ ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯನ್ನು ಈ ರೀತಿಯಲ್ಲಿ ಬರೆಯಬಹುದು.

$$M_S^d = \frac{r_{max} - r}{r - r_{min}} \qquad (3.4)$$

ಇಲ್ಲಿ $r$ ಎಂಬುದು ಮಾರುಕಟ್ಟೆ ಬಡ್ಡಿ ದರ ಮತ್ತು $r_{max}$ ಹಾಗೂ $r_{min}$ ಎಂಬುದು $r$ ನ ಮೇಲಿನ ಮಿತಿ ಮತ್ತು ಕೆಳಗಿನ ಮಿತಿಯಾಗಿದೆ., ಎರಡೂ ಧನಾತ್ಮಕ ಸ್ಥಿರಾಂಕಗಳಾಗಿವೆ. $r$ ಎಂಬುದು $r_{max}$ ದಿಂದ $r_{min}$ ಗೆ ಇಳಿಯುತ್ತದೆ, $M_S^d$ ನ ಮೌಲ್ಯವು 0 ಯಿಂದ ∞ ಗೆ ಏರುತ್ತದೆ ಎನ್ನುವುದನ್ನು ಸಮೀಕರಣ 3.4 ಸ್ಪಷ್ಟಪಡಿಸುತ್ತದೆ

ಮೊದಲೇ ತಿಳಿಸಿದಂತೆ ಬಡ್ಡಿ ದರವನ್ನು ಸದಾವಕಾಶ ವೆಚ್ಚ ಅಥವಾ ಹಣದ ಶಿಲ್ಕನ್ನು ಇಟ್ಟುಕೊಳ್ಳುವುದರ **'ಬೆಲೆ'** ಎಂದೂ ಯೋಚಿಸಬಹುದಾಗಿದೆ. ಅರ್ಥವ್ಯವಸ್ಥೆಯಲ್ಲಿ ಹಣದ ಪೂರೈಕೆ ಹೆಚ್ಚಾದರೆ, ಜನರು ಈ ಹೆಚ್ಚುವರಿ ಹಣದಿಂದ ಬಾಂಡುಗಳನ್ನು ಖರೀದಿಸುತ್ತಾರೆ, ಬಾಂಡುಗಳ ಬೇಡಿಕೆಯು ಹೆಚ್ಚಾಗುತ್ತದೆ, ಬಾಂಡುಗಳ ಬೆಲೆ ಹೆಚ್ಚಾಗುತ್ತದೆ ಮತ್ತು ಬಡ್ಡಿ ದರ ಕಡಿಮೆಯಾಗುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಅರ್ಥವ್ಯವಸ್ಥೆ ಅಲ್ಲಿ ಹಣದ ಪೂರೈಕೆ ಹೆಚ್ಚಾದಂತೆ ಹಣದ ಶಿಲ್ಕನ್ನು ಇಟ್ಟುಕೊಳ್ಳುವ ಬೆಲೆ ಅಂದರೆ ಬಡ್ಡಿಯ ದರ ಕಡಿಮೆ ಆಗಲೇಬೇಕು. ಆದಾಗ್ಯೂ ಮಾರುಕಟ್ಟೆ ಬಡ್ಡಿ ದರವು ಈಗಾಗಲೇ ಸಾಕಷ್ಟು ಕಡಿಮೆಯಾಗಿದ್ದರೆ, ಭವಿಷ್ಯದಲ್ಲಿ ಅದು ಹೆಚ್ಚಾಗಬಹುದೆಂಬ ನಿರೀಕ್ಷೆಯಲ್ಲಿ ಪ್ರತಿಯೊಬ್ಬರೂ ಇರುತ್ತಾರೆ ಇದು ಬಂಡವಾಳ ನಷ್ಟಕ್ಕೆ ಕಾರಣ ಆಗುತ್ತದೆ, ಯಾರೊಬ್ಬರೂ ಕೂಡಾ ಬಾಂಡುಗಳನ್ನು ಇಟ್ಟುಕೊಳ್ಳಲು ಬಯಸುವುದಿಲ್ಲ. ಅರ್ಥವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ತಮ್ಮ ಸಂಪತ್ತನ್ನು ಹಣದ ಶಿಲ್ಕಿನ ರೂಪದಲ್ಲಿ ಇಟ್ಟುಕೊಳ್ಳುವರು ಅರ್ಥವ್ಯವಸ್ಥೆಯೊಳಗೆ ಹೆಚ್ಚುವರಿ ಹಣವನ್ನು ಸೇರಿಸಿದರೆ ಅದು ಬಾಂಡಿನ ಬೇಡಿಕೆಯನ್ನು ಹೆಚ್ಚಿಸದೆ ತಳ ಮಟ್ಟದಲ್ಲಿರುವ ಬಡ್ಡಿ ದರ $r_{min}$ ಗಿಂತ ಕಡಿಮೆ ಮಾಡದೆ ಹಣದ ಶಿಲ್ಕಿಗಾಗಿ ಇರುವ ಜನರ ಹಂಬಲವನ್ನು ತಣಿಸಲು ಉಪಯೋಗಿಸಲಾಗುತ್ತದೆ. ಈ ತರಹದ ಸನ್ನಿವೇಶವನ್ನು **ದ್ರವ್ಯತೆಯ ಬಲೆ** ಎಂದು ಕರೆಯುತ್ತಾರೆ. ಇಲ್ಲಿ ಸಟ್ಟಾ ವ್ಯಾಪಾರದ ಇಲ್ಲಿ ಹಣದ ಬೇಡಿಕೆಯ ಕಾರ್ಯವು ಅನಂತ ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ.




**ರೇಖಾಚಿತ್ರ 3.1** ಹಣದ ಸಟ್ಟಾ ವ್ಯಾಪಾರದ ಬೇಡಿಕೆ

ಚಿತ್ರ 3.1 ರಲ್ಲಿ ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯನ್ನು ಸಮನಾಂತರ ಅಕ್ಷದಲ್ಲಿ ಮತ್ತು ಬಡ್ಡಿಯ ದರವನ್ನು ಲಂಬ ಅಕ್ಷದಲ್ಲಿ ಗುರುತಿಸಲಾಗಿದೆ. ಯಾವಾಗ $r = r_{max}$ ಆಗಿರುತ್ತದೋ ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯು ಶೂನ್ಯವಾಗಿರುತ್ತದೆ. ಬಡ್ಡಿ ದರವು ಎಷ್ಟು ಗರಿಷ್ಠವಾಗಿರುತ್ತದೆಂದರೆ, ಪ್ರತಿಯೊಬ್ಬರೂ ಭವಿಷ್ಯದಲ್ಲಿ ಅದು ಇಳಿಯುತ್ತದೆಂದು ನಿರೀಕ್ಷಿಸುತ್ತಾರೆ ಮತ್ತು ಆ ಮೂಲಕ ಭವಿಷ್ಯದ ಬಂಡವಾಳ ಲಾಭ ಗಳಿಸುವುದರ ಬಗ್ಗೆ ಖಾತ್ರಿಯಾಗಿರುತ್ತಾರೆ. ಹೀಗೆ ಪ್ರತಿಯೊಬ್ಬರೂ ಹಣದ ಶಿಲ್ಕನ್ನು ಬಾಂಡುಗಳಾಗಿ ಪರಿವರ್ತಿಸಿರುತ್ತಾರೆ. ಯಾವಾಗ $r = r_{min}$ ಆಗಿರುವುದೋ ಆಗ ಅರ್ಥವ್ಯವಸ್ಥೆಯು ದ್ರವ್ಯತೆಯ ಬಲೆಯಲ್ಲಿರುತ್ತದೆ. ಭವಿಷ್ಯದಲ್ಲಿ ಬಡ್ಡಿ ದರವು ಹೆಚ್ಚಾಗುವ ಮತ್ತು ಬಾಂಡಿನ ದರ ಕಡಿಮೆಯಾಗುವ ಖಚಿತತೆ ಪ್ರತಿಯೊಬ್ಬರಿಗೂ ಇರುತ್ತದೆ. ಪ್ರತಿಯೊಬ್ಬರೂ ತಾವು ಸಂಪಾದಿಸಿದ ಸಂಪತ್ತನ್ನು ಹಣದ ರೂಪದಲ್ಲಿ ಇಡುತ್ತಾರೆ ಮತ್ತು ಸಟ್ಟಾ ವ್ಯಾಪಾರದ ಉದ್ದೇಶದ ಹಣದ ಬೇಡಿಕೆಯು ಅನಂತವಾಗಿರುತ್ತದೆ.

ಆದ್ದರಿಂದ ಅರ್ಥವ್ಯವಸ್ಥೆಯಲ್ಲಿ ಒಟ್ಟು ಹಣದ ಬೇಡಿಕೆಯು, ವಹಿವಾಟು ಬೇಡಿಕೆ ಮತ್ತು ಸಟ್ಟಾ ವ್ಯಾಪಾರದ ಬೇಡಿಕೆಯಿಂದ ಸಂಯೋಜಿತವಾಗಿರುತ್ತದೆ. ಇದರಲ್ಲಿ ಮೊದಲನೆಯದು ನೈಜ GDP ಮತ್ತು ಬೆಲೆಯ ಮಟ್ಟಕ್ಕೆ ಅನುಲೋಮವಾಗಿದ್ದರೆ ಎರಡನೆಯದು ಮಾರುಕಟ್ಟೆ ಬಡ್ಡಿಯ ದರಕ್ಕೆ ವಿಲೋಮವಾಗಿ ಇರುತ್ತದೆ. ಒಂದು ಅರ್ಥವ್ಯವಸ್ಥೆಯ ಸಮಗ್ರ ಹಣದ ಬೇಡಿಕೆಯನ್ನು ಈ ಕೆಳಗಿನ ಸಮೀಕರಣದಲ್ಲಿ ಸಂಕ್ಷೇಪಿಸಬಹುದಾಗಿದೆ.

$$M^d = M_T^d + M_S^d$$

ಅಥವಾ

$$M^d = kPY + \frac{r_{max} - r}{r - r_{min}} \quad (3.5)$$

## 3.3 ಹಣದ ಪೂರೈಕೆ *The Supply of Money*

ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಹಣವು ಮುಖ್ಯವಾಗಿ, ದೇಶದ ಹಣಕಾಸು ಪ್ರಾಧಿಕಾರವು ಚಲಾವಣೆಗೆ ತಂದಿರುವ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳನ್ನು ಒಳಗೊಂಡಿರುತ್ತದೆ. ಭಾರತದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಕರೆನ್ಸಿ ನೋಟುಗಳನ್ನು ಚಲಾವಣೆಗೆ ತರುತ್ತದೆ. ಇದು ಭಾರತದಲ್ಲಿನ ಹಣಕಾಸು ಪ್ರಾಧಿಕಾರವಾಗಿದೆ. ಆದಾಗ್ಯೂ ಭಾರತ ಸರಕಾರವು ನಾಣ್ಯಗಳನ್ನು ಚಲಾವಣೆಗೆ ತರುತ್ತದೆ. ಏಕೆಂದರೆ ಈ ಖಾತೆಗಳ ಮೇಲೆ ಬರೆಯಲಾದ ಚೆಕ್ಕುಗಳನ್ನು ವ್ಯವಹಾರಗಳನ್ನು ತೀರಿಸಲು ಬಳಸಲಾಗುತ್ತದೆ. ಕರೆನ್ಸಿ ನೋಟುಗಳು ಮತ್ತು ನಾಣ್ಯಗಳಲ್ಲದೆ ಸಾರ್ವಜನಿಕರು ವಾಣಿಜ್ಯ ಬ್ಯಾಂಕುಗಳಲ್ಲಿ ಹೊಂದಿರುವ ಉಳಿತಾಯಗಳ ಖಾತೆ, ಅಥವಾ ಚಾಲ್ತಿ ಖಾತೆಯ ಠೇವಣಿಗಳನ್ನೂ ಕೂಡಾ ಹಣವೆಂದು ಪರಿಗಣಿಸಲಾಗುತ್ತದೆ. ಖಾತೆದಾರನ ಬೇಡಿಕೆಯ ಮೇರೆಗೆ ಪಾವತಿ ಮಾಡುವುದರಿಂದ ಇಂತಹ ಠೇವಣಿಗಳನ್ನು ಬೇಡಿಕೆ ಠೇವಣಿಗಳು ಎಂದು ಕರೆಯುತ್ತಾರೆ. ಇತರೆ ಠೇವಣಿಗಳು ಉದಾ: ಪರಿಪಕ್ವತೆಗೆ ನಿಶ್ಚಿತ ಕಾಲಾವಧಿಯನ್ನು ಹೊಂದಿರುವ ನಿಶ್ಚಿತ ಠೇವಣಿಗಳನ್ನು **ಅವಧಿ ಠೇವಣಿ**ಗಳೆಂದು ಕರೆಯುತ್ತಾರೆ.

₹100 ಮೌಲ್ಯದ ವಸ್ತುಗಳನ್ನು ಅಂಗಡಿಯಿಂದ ಖರೀದಿಸಲು ₹100 ನೋಟನ್ನು ಬಳಸಬಹುದು, ಆದಾಗ್ಯೂ ಕಾಗದದ ಮೌಲ್ಯ ನಗಣ್ಯವಾಗಿರುತ್ತದೆ–ಖಂಡಿತವಾಗಿಯೂ ಅದು ₹100 ಕ್ಕಿಂತ ಕಡಿಮೆಯಿರುತ್ತದೆ. ಹಾಗೆಯೇ ಐದು ರೂಪಾಯಿ ನಾಣ್ಯದಲ್ಲಿರುವ ಲೋಹದ ಮೌಲ್ಯವು ಬಹುಶಃ ₹5 ಬೆಲೆಯಷ್ಟಿಲ್ಲ. ನೋಟು ಮತ್ತು ನಾಣ್ಯಗಳ ಮೌಲ್ಯಕ್ಕಿಂತ ಸರಕುಗಳ ಮೌಲ್ಯ ಹೆಚ್ಚಾಗಿದ್ದರೂ ಏಕೆ ಜನರು ಅಂತಹ ನೋಟು ಮತ್ತು ನಾಣ್ಯಗಳನ್ನು ಸರಕುಗಳ ವಿನಿಮಯದಲ್ಲಿ ಒಪ್ಪಿಕೊಳ್ಳುತ್ತಾರೆ? ಕರೆನ್ಸಿ ನೋಟುಗಳು ಮತ್ತು ನಾಣ್ಯಗಳ ಮೌಲ್ಯವನ್ನು ಅವುಗಳನ್ನು ಚಲಾವಣೆಗೆ ತರುವ ಪ್ರಾಧಿಕಾರ ಒದಗಿಸಿರುವ ಖಾತರಿಯಿಂದ ಪಡೆಯಲಾಗಿದೆ. ಯಾರಾದರೂ ನೋಟನ್ನು ಭಾರತೀಯ ರಿಸರ್ವ್ ಬ್ಯಾಂಕಿಗೆ ಅಥವಾ ಇತರೆ ಯಾವುದೇ ವಾಣಿಜ್ಯ ಬ್ಯಾಂಕಿಗೆ ನೀಡಿದಲ್ಲಿ ಆ ವ್ಯಕ್ತಿಗೆ ನೋಟಿನ ಮೇಲೆ ಮುದ್ರಿತವಾದ ಮೌಲ್ಯಕ್ಕೆ ಸಮಾನವಾದ ಖರೀದಿಯ ಸಾಮರ್ಥ್ಯವನ್ನು ನೀಡುವ ಜವಾಬ್ದಾರಿ ಭಾರತೀಯ ರಿಸರ್ವ್ ಬ್ಯಾಂಕಿನದ್ದಾಗಿರುತ್ತದೆ. ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್‌ರವರ ವಾಗ್ದಾನವು ಪ್ರತಿ ಕರೆನ್ಸಿ ನೋಟಿನ ಮೇಲಿರುತ್ತದೆ. ನಾಣ್ಯಗಳ ವಿಷಯದಲ್ಲೂ ಇದೇ ಸರಿ. ಆದ್ದರಿಂದ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳನ್ನು **ಫಿಯೆಟ್ ಹಣ** ಎಂದು ಕರೆಯುತ್ತಾರೆ. ಬೆಳ್ಳಿ ಅಥವಾ ಬಂಗಾರದ ನಾಣ್ಯಗಳಂತೆ ಅವುಗಳಿಗೆ **ಆಂತರಿಕ ಮೌಲ್ಯ**ವಿರುವುದಿಲ್ಲ. ಯಾವುದೇ ವಿಧಧ ವ್ಯವಹಾರವನ್ನು

ಚುಕ್ತಾ ಮಾಡಲು ಈ ಹಣವನ್ನು ಬಳಸಿದಾಗ ದೇಶದ ಪ್ರಜೆಗಳ್ಯಾರೂ ಅದನ್ನು ತಿರಸ್ಕರಿಸಲು ಸಾಧ್ಯವಾಗದ ಕಾರಣ ಇವುಗಳನ್ನು **ಶಾಸನ ಬದ್ಧ** ಹಣ ಎಂದು ಕರೆಯುತ್ತಾರೆ. ಉಳಿತಾಯ ಅಥವಾ ಚಾಲ್ತಿ ಖಾತೆಯ ಮೇಲೆ ಬರೆಯಲಾದ ಚೆಕ್ಕುಗಳನ್ನು ವಿನಿಮಯದ ಮಾಧ್ಯಮವಾಗಿ ಬಳಸಿದಾಗ ಯಾರು ಬೇಕಾದರೂ ಅದನ್ನು ತಿರಸ್ಕರಿಸಬಹುದು. ಆದ್ದರಿಂದ ಬೇಡಿಕೆ ಠೇವಣಿಗಳು ಶಾಸನಬದ್ಧ ಹಣವಲ್ಲ.

### 3.3.1 ಶಾಸನಾತ್ಮಕ ವ್ಯಾಖ್ಯಾನಗಳು: ಸಂಕುಚಿತ ಹಣ ಮತ್ತು ವಿಶಾಲ ಹಣ
### *Legal Definitions: Narrow and Broad Money*

ಹಣದ ಬೇಡಿಕೆಯಂತೆ ಹಣದ ಪೂರೈಕೆಯೂ ಕೂಡಾ ದಾಸ್ತಾನು ಚಲಕವಾಗಿದೆ. ಒಂದು ನಿರ್ಧಿಷ್ಟ ಸಮಯದಲ್ಲಿ ಸಾರ್ವಜನಿಕರ ನಡುವೆ ಚಲಾವಣೆಯಾಗುವ ಹಣದ ಒಟ್ಟು ದಾಸ್ತಾನನ್ನು ಹಣದ ಪೂರೈಕೆಯೆಂದು ಕರೆಯಲಾಗುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್, ಹಣದ ಪೂರೈಕೆಯ ಅಂಕಿ ಅಂಶಗಳನ್ನು ನಾಲ್ಕು ಪರ್ಯಾಯ ಮಾಪನಗಳನ್ನು ಪ್ರಕಟಿಸುತ್ತದೆ. ಅವುಗಳೆಂದರೆ M1, M2, M3 ಮತ್ತು M4. ಅವುಗಳನ್ನು ಈ ರೀತಿಯಲಿ ವ್ಯಾಖ್ಯಾನಿಸಬಹುದಾಗಿದೆ.

M1 = CU + DD

M2 = M1 + ಅಂಚೆ ಕಛೇರಿ ಉಳಿತಾಯ ಬ್ಯಾಂಕಿನಲ್ಲಿರುವ ಉಳಿತಾಯ ಠೇವಣಿಗಳು.

M3 = M1 + ವಾಣಿಜ್ಯ ಬ್ಯಾಂಕುಗಳಲ್ಲಿನ ನಿವ್ವಳ ಅವಧಿ ಠೇವಣಿಗಳು.

M4 = M3 + ಅಂಚೆ ಕಛೇರಿಯಲ್ಲಿರುವ ಒಟ್ಟು ಠೇವಣಿಗಳು (ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಹೊರತು ಪಡಿಸಿ)

ಇಲ್ಲಿ CU ಎಂದರೆ ಸಾರ್ವಜನಿಕರು ಹೊಂದಿರುವ ಕರೆನ್ಸಿ (ನೋಟುಗಳು + ನಾಣ್ಯಗಳು) ಮತ್ತು DD ಎಂದರೆ ವಾಣಿಜ್ಯ ಬ್ಯಾಂಕಿನಲ್ಲಿರುವ ಬೇಡಿಕೆ ಠೇವಣಿಗಳು. ಹಣದ ಪೂರೈಕೆಗೆ ಸೇರಿಸಲಾಗುವ, ಬ್ಯಾಂಕುಗಳಲ್ಲಿರುವ ಸಾರ್ವಜನಿಕರ ಠೇವಣಿಗಳನ್ನು ಮಾತ್ರ 'ನಿವ್ವಳ' ಎಂಬ ಪದವು ಸೂಚಿಸುತ್ತದೆ. ಒಂದು ಬ್ಯಾಂಕು ಇತರ ವಾಣಿಜ್ಯ ಬ್ಯಾಂಕುಗಳಲ್ಲಿ ಹೊಂದಿರುವ ಅಂತರ ಬ್ಯಾಂಕು ಠೇವಣಿಗಳನ್ನು ಹಣದ ಪೂರೈಕೆಯ ಭಾಗವೆಂದು ಪರಿಗಣಿಸಲಾಗುವುದಿಲ್ಲ.

M1 ಮತ್ತು M2 ಗಳನ್ನು **ಸಂಕುಚಿತ ಹಣವೆಂದು** ಕರೆಯಲಾಗಿತ್ತದೆ. M3 ಮತ್ತು M4 ಗಳನ್ನು **ವಿಶಾಲ ಹಣವೆಂದು** ಕರೆಯಲಾಗಿತ್ತದೆ. ಈ ಹಂತಗಳು ದ್ರವ್ಯತೆಯ ಅವರೋಹಣ ಕ್ರಮದಲ್ಲಿ ಇರುತ್ತವೆ. M1 ವ್ಯವಹಾರದಲ್ಲಿ ಅತ್ಯಂತ ಹೆಚ್ಚು ದ್ರವ್ಯತೆ ಮತ್ತು ಸುಲಭವಾಗಿದ್ದರೆ M4 ಎಲ್ಲಕ್ಕಿಂತ ಕಡಿಮೆ ದ್ರವ್ಯತೆ ಹೊಂದಿರುತ್ತದೆ. M3 ಹಣದ ಪೂರೈಕೆಯ ಮಾಪನದ ಅತ್ಯಂತ ಸಾಮಾನ್ಯ ವಿಧಾನವಾಗಿದೆ. ಇದನ್ನು **ಸಮಗ್ರ ಹಣಕಾಸಿನ ಸಂಪನ್ಮೂಲ**[1] ಎಂದೂ ಕರೆಯಲಾಗುತ್ತದೆ.

### 3.3.2 ಬ್ಯಾಂಕಿಂಗ್ ವ್ಯವಸ್ಥೆಯಿಂದ ಹಣದ ನಿರ್ಮಾಣ
### *Money Creation by the Banking System*

ಈ ವಿಭಾಗದಲ್ಲಿ ಹಣದ ಪೂರೈಕೆಯ ನಿರ್ಧಾರಕಗಳನ್ನು ನಾವು ಕೂಲಂಕುಷವಾಗಿ ಅಧ್ಯಯನ ಮಾಡೋಣ. ಹಣದ ಪೂರೈಕೆಯ ಘಟಕಗಳಾಗಿರುವ ಅಂದರೆ CU, DD ಅಥವಾ ಅವಧಿ ಠೇವಣಿಗಳ ಮೌಲ್ಯದಲ್ಲಿ ಯಾವುದೇ ಬದಲಾವಣೆಗಳಾದರೆ ಹಣದ ಪೂರೈಕೆಯಲ್ಲಿಯೂ ಬದಲಾವಣೆಯಾಗುತ್ತದೆ. ಸರಳತೆಗಾಗಿ, ಹಣದ ಅತಿದ್ರವ್ಯತೆಯ ವ್ಯಾಖ್ಯಾನವಾದ M1 = CU + DD ಯನ್ನು ಅರ್ಥವ್ಯವಸ್ಥೆಯಲ್ಲಿನ ಹಣದ ಪೂರೈಕೆಯನ್ನು ಮಾಪನ ಮಾಡಲು ಬಯಸೋಣ. ಹಣಕಾಸು ಪ್ರಾಧಿಕಾರ, ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ವಾಣಿಜ್ಯ ಬ್ಯಾಂಕುಗಳ ವಿವಿಧ ಚಟುವಟಿಕೆಗಳು ಈ ಅಂಶಗಳ ಮೌಲ್ಯದಲ್ಲಿನ ವ್ಯತ್ಯಾಸಕ್ಕೆ ಕಾರಣವಾಗಿವೆ. ನಗದು ಶಿಲ್ಕನ್ನು ಹೊಂದುವ ಸಾರ್ವಜನಿಕರ ಆದ್ಯತೆಗೆ ಎದುರಾಗಿ ಬ್ಯಾಂಕುಗಳಲ್ಲಿರುವ ಠೇವಣಿಗಳೂ ಕೂಡಾ ಹಣದ ಪೂರೈಕೆಯ ಮೇಲೆ ಪರಿಣಾಮ ಬೀರುತ್ತದೆ. ಹಣದ ಪೂರೈಕೆಯ ಮೇಲೆ ಪ್ರಭಾವ ಬೀರುವ ಈ ಅಂಶಗಳನ್ನು ಈ ಮುಖ್ಯ ಅನುಪಾತದಲ್ಲಿ ಸಂಕ್ಷೇಪಿಸಬಹುದಾಗಿದೆ.

---

[1] ಕಾಲಾವಧಿಯಲ್ಲಿ M1 ಮತ್ತು M3 ನಡುವಿನ ವೆತ್ಯಾಸದ ಅಂದಾಜಿಗಾಗಿ ಅನುಬಂಧ 3.2 ನ್ನು ನೋಡಿ.

**ಕರೆನ್ಸಿ ಠೇವಣಿ ಅನುಪಾತ:** ಕರೆನ್ಸಿ ಠೇವಣಿ ಅನುಪಾತ (*cdr*) ಎಂದರೆ ಸಾರ್ವಜನಿಕರು ಕರೆನ್ಸಿ ರೂಪದಲ್ಲಿ ಹೊಂದಿರುವ ಹಣ ಮತ್ತು ಅವರು ಬ್ಯಾಂಕ್ ಠೇವಣಿ ರೂಪದಲ್ಲಿ ಹೊಂದಿರುವ ಹಣದ ಅನುಪಾತವಾಗಿದೆ. ಅಂದರೆ *cdr* = CU/DD. ಒಬ್ಬ ₹1 ನ್ನು ಪಡೆದರೆ ಅವಳು ₹ 1/(1 + *cdr*)ನ್ನು ಬ್ಯಾಂಕ್ ಖಾತೆಯಲ್ಲಿ ಇಟ್ಟರೆ ₹ *cdr*/(1 + *cdr*) ನ್ನು ನಗದಾಗಿ ಇಟ್ಟುಕೊಳ್ಳುತ್ತಾಳೆ. ಇದು ಜನರ ದ್ರವ್ಯತಾ ಆದ್ಯತೆಯನ್ನು ಪ್ರತಿಬಿಂಬಿಸುತ್ತದೆ. ಇದೊಂದು ಅಪ್ಪಟ ನಡವಳಿಕೆ ಮಾನದಂಡವಾಗಿದ್ದು, ಇತರೆ ಸಂಗತಿಗಳೊಂದಿಗೆ, ಋತುಕಾಲಿಕ ವೆಚ್ಚದ ಮಾದರಿಯನ್ನು ಅವಲಂಬಿಸಿದೆ. ಉದಾ: ಹಬ್ಬದ ದಿನಗಳಲ್ಲಿ *cdr* ಹೆಚ್ಚಾಗುತ್ತದೆ ಏಕೆಂದರೆ ಜನರು ಆ ಅವಧಿಯಲ್ಲಿನ ಅಧಿಕ ವೆಚ್ಚವನ್ನು ಭರಿಸಲು ಠೇವಣಿಗಳನ್ನು ನಗದು ಶಿಲ್ಕಿಗೆ ಪರಿವರ್ತಿಸುತ್ತಾರೆ.

**ಮೀಸಲು ಠೇವಣಿ ಅನುಪಾತ:** ಬ್ಯಾಂಕುಗಳು ಜನರು ಬ್ಯಾಂಕಿನಲ್ಲಿ ಜಮಾ ಮಾಡುವ ಠೇವಣಿಯಲ್ಲಿ ಒಂದು ಭಾಗವನ್ನು ಮೀಸಲು ಹಣವಾಗಿ ಇಟ್ಟುಕೊಂಡು ಉಳಿದ ಭಾಗವನ್ನು ವಿವಿಧ ಹೂಡಿಕೆ ಯೋಜನೆಗಳಿಗೆ ಸಾಲವನ್ನು ನೀಡುತ್ತದೆ. ಮೀಸಲು ಹಣವು ಎರಡು ಅಂಶಗಳನ್ನು ಒಳಗೊಂಡಿರುತ್ತದೆ– ಬ್ಯಾಂಕಿನಲ್ಲಿರುವ ನಗದು ಮತ್ತು ವಾಣಿಜ್ಯ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಇಟ್ಟಿರುವ ಠೇವಣಿ. ಬ್ಯಾಂಕುಗಳು ಈ ಮೀಸಲು ಹಣವನ್ನು ಖಾತೆದಾರರ ನಗದು ಬೇಡಿಕೆಯನ್ನು ಪೂರೈಸಲು ಬಳಸಿಕೊಳ್ಳುತ್ತವೆ. ಮೀಸಲು ಠೇವಣಿ ಅನುಪಾತವು (*reserve deposit ratio-rdr*) ವಾಣಿಜ್ಯ ಬ್ಯಾಂಕುಗಳು ಒಟ್ಟು ಠೇವಣಿಯಲ್ಲಿ ಮೀಸಲಾಗಿ ಇಟ್ಟುಕೊಳ್ಳುವ ಭಾಗವಾಗಿದೆ.

ಮೀಸಲನ್ನು ಇಟ್ಟುಕೊಳ್ಳುವುದು ಬ್ಯಾಂಕುಗಳಿಗೆ ದುಬಾರಿಯೆನಿಸುತ್ತದೆ, ಅದರ ಬದಲು ಬಡ್ಡಿಯನ್ನು ಗಳಿಸಲು ಈ ಶಿಲ್ಕನ್ನು ಹೂಡಿಕೆ ಯೋಜನೆಗಳಿಗೆ ಸಾಲವಾಗಿ ನೀಡಬಹುದಾಗಿರುತ್ತದೆ. ಆದಾಗ್ಯೂ ಖಾತೆದಾರರು ಬಯಸಿದಾಗ ಅವರ ಹಣವನ್ನು ತೆಗೆಯಲು ಅನುಕೂಲವಾಗುವಂತೆ ಅವರ ಆಸ್ತಿಗಳ ಭದ್ರತೆಯನ್ನು ಖಾತರಿ ಪಡಿಸುವ ಸಲುವಾಗಿ ವಾಣಿಜ್ಯ ಬ್ಯಾಂಕುಗಳು ಮೀಸಲನ್ನು ಇಟ್ಟುಕೊಳ್ಳವುದು ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಕಾರ ಅಗತ್ಯವಾಗಿದೆ. ವಾಣಿಜ್ಯ ಬ್ಯಾಂಕುಗಳಲ್ಲಿ ಆರೋಗ್ಯ ಪೂರ್ಣ *rdr* ನ್ನು ಮುಂದೆ ತರಲು ಭಾರತೀಯ ರಿಸರ್ವ್ ಬ್ಯಾಂಕ್ ವಿವಿಧ ನೀತಿ ಸಾಧನಗಳನ್ನು ಬಳಸುತ್ತದೆ. ಮೊದಲ ಸಾಧನವೇ **ನಗದು ಮೀಸಲು ಅನುಪಾತ**. ಇದು ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಬ್ಯಾಂಕುಗಳು ಇಡಲೇ ಬೇಕಾದ ತಮ್ಮ ಠೇವಣಿಗಳ ನಿರ್ದಿಷ್ಟ ಭಾಗವನ್ನು ಸೂಚಿಸುತ್ತದೆ. ಇನ್ನೊಂದು ಸಾಧನವನ್ನು **ಶಾಸನ ಬದ್ಧ ದ್ರವ್ಯತಾ ಅನುಪಾತ** ಎಂದು ಕರೆಯುತ್ತಾರೆ. ಇದರ ಪ್ರಕಾರ ಬ್ಯಾಂಕುಗಳು ತಮ್ಮ ಬೇಡಿಕೆ ಮತ್ತು ಅವಧಿ ಠೇವಣಿಗಳಲ್ಲಿ ನಿಗದಿತ ಭಾಗವನ್ನು ನಿರ್ದಿಷ್ಟ ದ್ರವ್ಯತಾ ಆಸ್ತಿಗಳ ರೂಪದಲ್ಲಿ ಕಾಯ್ದುಕೊಳ್ಳಬೇಕಾಗುತ್ತದೆ. ಈ ಅನುಪಾತಗಳ ಹೊರತಾಗಿ *rdr*ನ ಮೌಲ್ಯವನ್ನು ನಿಯಂತ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್, **'ಬ್ಯಾಂಕ್ ದರ'** ಎಂದು ಕರೆಯಲಾಗುವ ನಿಶ್ಚಿತವಾದ ಬಡ್ಡಿ ದರವನ್ನು ಬಳಸುತ್ತದೆ. ವಾಣಿಜ್ಯ ಬ್ಯಾಂಕುಗಳು ಮೀಸಲು ಕೊರತೆಯನ್ನು ಎದುರಿಸುವಾಗ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಹಣವನ್ನು ಸಾಲವಾಗಿ ಪಡೆಯುತ್ತವೆ. ಬ್ಯಾಂಕ್ ದರ ಹೆಚ್ಚಾದಾಗ ಭಾರತೀಯ ರಿಸರ್ವ್ ಬ್ಯಾಂಕಿನ ಸಾಲವು ದುಬಾರಿಯೆನಿಸುತ್ತದೆ. ಪರಿಣಾಮವಾಗಿ ಇದು ಆರೋಗ್ಯಪೂರ್ಣ *rdr* ನ್ನು ಕಾಯ್ದುಕೊಳ್ಳಲು ವಾಣಿಜ್ಯ ಬ್ಯಾಂಕುಗಳನ್ನು ಪ್ರೋತ್ಸಾಹಿಸುತ್ತದೆ.

**ಕೋಷ್ಟಕ 3.1 ಒಂದು ವಾಣಿಜ್ಯ ಬ್ಯಾಂಕಿನ ಮಾದರಿ ಅಢಾವೆ ಪತ್ರಿಕೆ**

| ಆಸ್ತಿ–₹ | | ಹೊಣೆಗಾರಿಕೆ–₹ | |
|---|---|---|---|
| ಮೀಸಲು | | ಠೇವಣಿ | 100 |
| –ನಗದು | 15 | | |
| –RBI ನಲ್ಲಿನ ಠೇವಣಿ | 5 | | |
| ಬ್ಯಾಂಕ್ ಸಾಲ | | | |
| –ಸಾಲಗಳು | 30 | | |
| –ಹೂಡಿಕೆ | 50 | | |
| *rdr* = 0.2 | | | |

**ವಾಣಿಜ್ಯ ಬ್ಯಾಂಕುಗಳು**

ವಾಣಿಜ್ಯ ಬ್ಯಾಂಕುಗಳು ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸಿ ಆ ಹಣದಲ್ಲಿ ಬಡ್ಡಿ ಗಳಿಸುವಂತಹ ಬಂಡವಾಳ ಯೋಜನೆಗಳಿಗೆ ಸಾಲ ನೀಡುತ್ತದೆ. ಠೇವಣಿದಾರರಿಗೆ ಬ್ಯಾಂಕು ನೀಡುವ ಬಡ್ಡಿಯ ದರವನ್ನು **'ಸಾಲದ ದರ'** ಎಂದು ಕರೆಯಲಾಗುತ್ತದೆ ಮತ್ತು ಬ್ಯಾಂಕುಗಳು ತಮ್ಮ ಮೀಸಲಿನಿಂದ ಹೂಡಿಕೆದಾರರಿಗೆ ಸಾಲ ನೀಡುವ ದರವನ್ನು **'ಸಾಲ ನೀಡಿಕೆ ದರ'** ಎನ್ನುತ್ತಾರೆ. ಹರವು ಎಂದು ಕರೆಯಲಾಗುವ ಇವೆರಡೂ ದರಗಳ ನಡುವಿನ ವ್ಯತ್ಯಾಸವು ಲಾಭವಾಗಿದ್ದು, ಇದನ್ನು ಬ್ಯಾಂಕುಗಳು ವಿನಿಯೋಗಿಸಿಕೊಳ್ಳುತ್ತವೆ. ವ್ಯಾಪಕವಾಗಿ ಠೇವಣಿಗಳು ಎರಡು ವಿಧದಲ್ಲಿರುತ್ತವೆ– ಬೇಡಿಕೆ ಠೇವಣಿಗಳು, ಖಾತೆದಾರನ ಬೇಡಿಕೆಯ ಮೇಲೆ ಬ್ಯಾಂಕುಗಳು ಪಾವತಿಸುವುದು, ಉದಾ: ಚಾಲ್ತಿ ಮತ್ತು ಉಳಿತಾಯ ಖಾತೆ ಠೇವಣಿಗಳು ಹಾಗೂ ಪರಿಪಕ್ವತೆಗೆ ನಿಶ್ಚಿತ ಸಮಯನ್ನು ಹೊಂದಿರುವ ಅವಧಿ ಠೇವಣಿಗಳು ಉದಾ: ನಿಶ್ಚಿತ ಠೇವಣಿಗಳು. ವಾಣಿಜ್ಯ ಬ್ಯಾಂಕುಗಳು ನೀಡುವ ಸಾಲವು ಮುಖ್ಯವಾಗಿ ನಗದು ಸಾಲ, ಬೇಡಿಕೆ ಮತ್ತು ಖಾಸಗಿ ಹೂಡಿಕೆದಾರರಿಗೆ ಮತ್ತು ಬ್ಯಾಂಕುಗಳಿಗೆ ನೀಡುವ ಅಲ್ಪಾವಧಿ ಸಾಲ, ಸರಕಾರದ ಭದ್ರತೆಗಳು ಮತ್ತು ಇತರೆ ಅನುಮೋದಿತ ಬಾಂಡುಗಲ್ಲಿನ ಹೂಡಿಕೆಗಳನ್ನು ಒಳಗೊಂಡಿರುತ್ತದೆ. ಒಬ್ಬ ವ್ಯಕ್ತಿಯ ಸಾಲದ ಅರ್ಹತೆಯನ್ನು ಅವಳ ಚಾಲ್ತಿ ಆಸ್ತಿಗಳು ಅಥವಾ ಅವಳು ಒದಗಿಸಬಹುದಾದ **ಮೇಲಾಧಾರಗಳ**(ಸಾಲದ ಮರುಪಾವತಿಗೆ ಒತ್ತೆಯಿಡಲಾದ ಭದ್ರತೆ) ಮೇಲೆ ತೀರ್ಮಾನಿಸಲಾಗುತ್ತದೆ.

**3.2 ಭಾರತೀಯ ರಿಸರ್ವ್ ಬ್ಯಾಂಕಿನ ಮಾದರಿ ಆಢಾವೆ ಪತ್ರಿಕೆ**

| ಆಸ್ತಿಗಳು(ಮೂಲಗಳು) | ರೂ (₹) | ಹೊಣೆಗಾರಿಕೆ(ಬಳಕೆಗಳು) | ರೂ (₹) |
|---|---|---|---|
| ಬಂಗಾರ | 10 | ಕರೆನ್ಸಿ | |
| ವಿದೇಶಿ ವಿನಿಮಯ | 20 | ಸಾರ್ವಜನಿಕರು ಹೊಂದಿರುವ ಕರೆನ್ಸಿ | 200 |
| ಸರಕಾರಿ ಭದ್ರತೆಗಳು (ಭಾರತ ಸರಕಾರಕ್ಕೆ ಸಾಲ) | 230 | ವಾಣಿಜ್ಯ ಬ್ಯಾಂಕುಗಳು ಹೊಂದಿರುವ ಕರೆನ್ಸಿ | 10 |
| ವಾಣಿಜ್ಯ ಬ್ಯಾಂಕುಗಳಿಗೆ ಸಾಲ | 5 | ವಾಣಿಜ್ಯ ಬ್ಯಾಂಕುಗಳು RBI ನಲ್ಲಿ ಹೊಂದಿರುವ ಠೇವಣಿಗಳು | 40 |
| | | ಭಾರತ ಸರಕಾರದ ಖಜಾನೆ ಠೇವಣಿಗಳು | 15 |
| ಹಣಕಾಸಿನ ಆಧಾರ (ಮೂಲಗಳು) | 265 | ಹಣಕಾಸಿನ ಆಧಾರ (ಬಳಕೆಗಳು) | 265 |

**ಅಧಿಕ ಶಕ್ತಿಯ ಹಣ:** ದೇಶದ ಹಣಕಾಸು ಪ್ರಾಧಿಕಾರ RBI ನ ಒಟ್ಟು ಹೊಣೆಗಾರಿಕೆಯನ್ನು **ಹಣಕಾಸಿನ ನೆಲೆ** ಅಥವಾ **ಅಧಿಕ ಶಕ್ತಿಯ ಹಣ** ಎಂದು ಕರೆಯುತ್ತಾರೆ. ಇದು ಕರೆನ್ಸಿ (ವಾಣಿಜ್ಯ ಬ್ಯಾಂಕುಗಳಲ್ಲಿನ ನಗದು ಮತ್ತು ಸಾರ್ವಜನಿಕರ ಬಳಿ ಚಲಾವಣೆಯಲ್ಲಿರುವ ನೋಟುಗಳು ಮತ್ತು ನಾಣ್ಯಗಳು) ಮತ್ತು RBI ನಲ್ಲಿ ಭಾರತ ಸರಕಾರ ಮತ್ತು ವಾಣಿಜ್ಯ ಬ್ಯಾಂಕುಗಳು ಹೊಂದಿರುವ ಠೇವಣಿಗಳನ್ನು ಒಳಗೊಂಡಿದೆ. ಯಾರೇ ಒಬ್ಬ ಸಾರ್ವಜನಿಕ ವ್ಯಕ್ತಿ ಕರೆನ್ಸಿ ನೋಟನ್ನು RBI ಗೆ ನೀಡಿದರೆ ಅದು ನೋಟಿನ ಮೇಲೆ ಮುದ್ರಿತವಾದ ಅಂಕೆಗೆ ಸಮಾನವಾದ ಮೌಲ್ಯವನ್ನು ಪಾವತಿಸಲೇಬೇಕು. ಅದೇ ರೀತಿ ಠೇವಣಿದಾರರಿಂದ ಬರುವ ಬೇಡಿಕೆಯ ಮೇರೆಗೆ RBI ಠೇವಣಿಗಳನ್ನು ಮರುಪಾವತಿಸಬೇಕಾಗುತ್ತದೆ. ಈ ಬಾಬತ್ತುಗಳು RBI ನ ಮೇಲೆ ಜನಸಾಮಾನ್ಯರು, ಸರಕಾರ ಮತ್ತು ಬ್ಯಾಂಕುಗಳು ಹೊಂದಿರುವ ಹಕ್ಕು ಕೋರಿಕೆಯಾಗಿರುವುದರಿಂದ ಇವುಗಳನ್ನು RBI ನ ಹೊಣೆಗಾರಿಕೆಯೆಂದು ಪರಿಗಣಿಸಲಾಗುತ್ತದೆ.

RBI ಈ ಹೊಣೆಗಾರಿಕೆಗಳ ವಿರುದ್ಧ ಆಸ್ತಿಗಳನ್ನು ಆರ್ಜಿಸಿಕೊಳ್ಳುತ್ತದೆ. ಸರಳ ಶೈಲಿಯ ಉದಾಹರಣೆಯನ್ನು ಪರಿಶೀಲಿಸಿದರೆ ಈ ಪ್ರಕ್ರಿಯೆಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದಾಗಿದೆ. RBI ₹5 ರ ಮೌಲ್ಯದ ಬಂಗಾರ ಅಥವಾ ಡಾಲರನ್ನು ಖರೀದಿಸುತ್ತದೆ ಎಂದುಕೊಳ್ಳೋಣ, ಅದು

ಮಾರಾಟಗಾರನಿಗೆ ಕರೆನ್ಸಿಯನ್ನು ನೀಡುವುದರ ಮೂಲಕ ಬಂಗಾರ ಅಥವಾ ವಿದೇಶಿ ವಿನಿಮಯಕ್ಕೆ ಪಾವತಿಯನ್ನು ಮಾಡುತ್ತದೆ. ಆರ್ಥಿಕತೆಯಲ್ಲಿನ ಕರೆನ್ಸಿ ಚಲಾವಣೆಯು ₹5 ರಷ್ಟು ಏರುತ್ತದೆ ಹಾಗೂ ಅಢಾವೆ ಪತ್ರಿಕೆಯಲ್ಲಿನ ಹೊಣೆಗಾರಿಕೆಯ ಭಾಗದ ಬಾಬತ್ತಿನ ಏರಿಕೆಯನ್ನು ತೋರಿಸುತ್ತದೆ. ₹ 5ಕ್ಕೆ ಸಮವಾಗಿರುವ ಗಳಿಸಿದ ಆಸ್ತಿಯನ್ನು ಸರಿಯಾಗಿ ಆಸ್ತಿಗಳ ಭಾಗದ ಬಾಬತ್ತಿನಲ್ಲಿ ದಾಖಲಿಸಲಾಗುತ್ತದೆ. ಅದೇ ರೀತಿ ಸರಕಾರವು ಬಿಡುಗಡೆ ಮಾಡಿದ ಸಾಲದ ಬಾಂಡುಗಳು ಅಥವಾ ಭದ್ರತೆಗಳನ್ನು RBI ಆರ್ಜಿಸಿಕೊಂಡು ಅದಕ್ಕೆ ಪ್ರತಿಯಾಗಿ ಕರೆನ್ಸಿಯನ್ನು ಬಿಡುಗಡೆ ಮಾಡಿ ಸರಕಾರಕ್ಕೆ ಪಾವತಿಯನ್ನು ಮಾಡುತ್ತದೆ. ಅದೇ ರೀತಿಯಲ್ಲಿ[2] ಇದು ವಾಣಿಜ್ಯ ಬ್ಯಾಂಕುಗಳಿಗೆ ಸಾಲವನ್ನು ನೀಡುತ್ತದೆ.

ಹಣಕಾಸು ಪ್ರಾಧಿಕಾರವಾದ RBI ಹಣವನ್ನು ಸೃಷ್ಟಿಸುವ ಯಾಂತ್ರಿಕತೆಯನ್ನು ವಿವರಿಸಲು ನಾವು ಈಗ ಸಿದ್ಧರಾಗಿದ್ದೇವೆ. ಹಣದ ಪೂರೈಕೆಯನ್ನು ಹೆಚ್ಚಿಸಲು RBI ಬಯಸುತ್ತದೆಂದುಕೊಳ್ಳೋಣ. ಆಗ ಅದು ಈ ಕೆಳಗಿನ ರೀತಿಯಲ್ಲಿ ಅಧಿಕ ಶಕ್ತಿಯ ಹಣವನ್ನು ಹೆಚ್ಚುವರಿಯಾಗಿ ಅರ್ಥವ್ಯವಸ್ಥೆಗೆ ಸೇರಿಸುತ್ತದೆ. RBI ಮಾರುಕಟ್ಟೆಯಿಂದ ₹ H ಮೌಲ್ಯದ ಸರಕಾರಿ ಬಾಂಡುಗಳು ಅಥವಾ ಬಂಗಾರದಂತಹ ಕೆಲವು ಆಸ್ತಿಗಳನ್ನು ಖರೀದಿಸುತ್ತದೆ ಎಂದು ನಾವು ಕಲ್ಪಿಸಿಕೊಳ್ಳೋಣ. ಅದು ಬಾಂಡಿನ ಮಾರಾಟಗಾರನಿಗೆ ತನ್ನ ಮೇಲೆಯೇ ₹ H ಮೌಲ್ಯದ ಚೆಕ್ಕನ್ನು ನೀಡುತ್ತದೆ. ಈ ಅರ್ಥವ್ಯವಸ್ಥೆಯ *cdr* ಮತ್ತು *rdr* ಮೌಲ್ಯವು ಕ್ರಮವಾಗಿ 1 ಮತ್ತು 0.2 ಆಗಿರುತ್ತದೆ ಎಂದು ಊಹಿಸೋಣ. ಮಾರಾಟಗಾರ ತನ್ನ A ಬ್ಯಾಂಕಿನ ಖಾತೆಯಲ್ಲಿ ₹$\frac{H}{2}$ನ್ನು ಅವಳ ಖಾತೆಯಲ್ಲಿಟ್ಟು ಮತ್ತು ₹$\frac{H}{2}$ ನಗದನ್ನು ತೆಗೆದು ಕೊಳ್ಳುವುದರ ಮೂಲಕ ಚೆಕ್ಕನ್ನು ನಗದೀಕರಿಸಿ ಕೊಳ್ಳುತ್ತಾಳೆ. ಆ ರೀತಿಯಲ್ಲಿ ಸಾರ್ವಜನಿಕರು ಹೊಂದಿರುವ ನಗದು $\frac{H}{2}$ ರಷ್ಟು ಹೆಚ್ಚಾಗುತ್ತದೆ. ಠೇವಣಿಗಳಲ್ಲಿನ ಹೆಚ್ಚಳದಿಂದ A ಬ್ಯಾಂಕಿನ ಹೊಣೆಗಾರಿಕೆಯು ₹$\frac{H}{2}$ ರಷ್ಟು ಹೆಚ್ಚಾಗುತ್ತದೆ. ಆದರೆ ಚೆಕ್ಕಿನ ಸ್ವಾಧೀನದಿಂದಾಗಿ ಅದರ ಆಸ್ತಿಯೂ ಕೂಡಾ ಅಷ್ಟೇ ಮೊತ್ತಕ್ಕೆ ಏರುತ್ತದೆ, ಅದು RBI ಮೇಲಿನ ಅಷ್ಟೇ ಮೊತ್ತದ ಹಕ್ಕು ಕೋರಿಕೆಯೇ ಅಗಿರುತ್ತದೆ. RBI ನ ಹೊಣೆಗಾರಿಕೆಯು ₹ H ನಷ್ಟು ಹೆಚ್ಚಾಗುತ್ತದೆ, ಇದು A ಬ್ಯಾಂಕಿನ ಗ್ರಾಹಕರಾದ, ಮಾರಾಟಗಾರನ ಒಟ್ಟು ಹಕ್ಕು ಕೋರಿಕೆಯಾಗಿದ್ದು ಅದರ ಮೌಲ್ಯವು ಕ್ರಮವಾಗಿ ₹ $\frac{H}{2}$ ಮತ್ತು ₹ $\frac{H}{2}$ ಆಗಿರುತ್ತದೆ. ಹೀಗೆ, ವ್ಯಾಖ್ಯಾನದಂತೆ ಅಧಿಕ ಶಕ್ತಿ ಹಣವು ₹ H ನಷ್ಟು ಹೆಚ್ಚಾಗುತ್ತದೆ.

ಈ ಪ್ರಕ್ರಿಯೆ ಇಲ್ಲಿಗೇ ಮುಗಿಯುವುದಿಲ್ಲ. ಬ್ಯಾಂಕ್ A ಹೆಚ್ಚುವರಿ ಠೇವಣಿಯಲ್ಲಿ $\frac{0.2\,H}{2}$ ರಷ್ಟನ್ನು ಮೀಸಲಾಗಿ ಇಟ್ಟುಕೊಂಡು ಉಳಿದ ಮೊತ್ತವನ್ನು ಅಂದರೆ $\frac{1-0.2H}{2}$ = ₹$\frac{0.8H}{2}$ ನ್ನು ಇನ್ನೊಬ್ಬ ಸಾಲಗಾರನಿಗೆ[3] ಸಾಲವಾಗಿ ನೀಡುತ್ತದೆ. ಸಾಲಗಾರನು ಈ ಸಾಲವನ್ನು ಕೆಲವು ಸಂಭಾವ್ಯ ಹೂಡಿಕೆ ಯೋಜನೆಗಳಿಗೆ ಬಳಸಿ ಅದನ್ನೂ ಅಂಶ ಪಾವತಿಯಾಗಿ ಖರ್ಚು ಮಾಡಬಹುದು. ಆ ಯೋಜನೆಯಲ್ಲಿನ ಕಾರ್ಮಿಕನೊಬ್ಬ ಪಾವತಿಯನ್ನು ಪಡೆದುಕೊಳ್ಳುತ್ತಾನೆ ಎಂದುಕೊಳ್ಳೋಣ. ಕಾರ್ಮಿಕನು ₹ $\frac{0.8H}{4}$ ರಷ್ಟನ್ನು ನಗದಾಗಿ ಇಟ್ಟುಕೊಂಡು ಉಳಿದ ₹ $\frac{0.8H}{4}$ ಮೊತ್ತವನ್ನು B ಬ್ಯಾಂಕಿನ ಆತನ/ಆಕೆಯ ಖಾತೆಯಲ್ಲಿ ಇಡುತ್ತಾನೆ/ಳೆ. ಇದಕ್ಕೆ ಪ್ರತಿಯಾಗಿ B ಬ್ಯಾಂಕ್ ₹ $\frac{0.64H}{4}$ ನ್ನು ಸಾಲವಾಗಿ ನೀಡುತ್ತದೆ. ಆ ಹಣವನ್ನು ಸ್ವೀಕರಿಸುವವರು $\frac{0.6.4H}{2}$ ರಷ್ಟನ್ನು ನಗದಾಗಿ ಇಟ್ಟುಕೊಂಡು ಉಳಿದ $\frac{0.64H}{8}$ ಮೊತ್ತವನ್ನು ಬೇರೆ ಬ್ಯಾಂಕಾದ 'C' ಬ್ಯಾಂಕಿನಲ್ಲಿ ಇಡುತ್ತಾರೆ. ಈ ಪ್ರಕ್ರಿಯೆ ಅನಂತವಾಗಿ ಮುಂದುವರೆಯುತ್ತದೆ.

ನಾವು ಈಗ ಕೋಷ್ಟಕ 3.3 ನ್ನು ನೋಡಿ ಹಲವು ಸುತ್ತುಗಳ ನಂತರ ಅರ್ಥವ್ಯವಸ್ಥೆಯಲ್ಲಿ ಹಣದ ಪೂರೈಕೆಯು ಹೇಗೆ ಬದಲಾಗುತ್ತದೆ ಎನ್ನುವುದರ ತತ್ವವನ್ನು ಗ್ರಹಿಸೋಣ.

---

[2] ಕಾಲಾವಧಿಯಲ್ಲಿ ಹಣದ ಆಧಾರ ಮೂಲದಲ್ಲಿನ ವ್ಯತ್ಯಾಸದ ಅಂದಾಜಿಗಾಗಿ ಅನುಬಂಧ 3.2 ನ್ನು ನೋಡಿ.

[3] ಪ್ರಸ್ತುತ ಸಾಲದ ದರದಲ್ಲಿ ಬ್ಯಾಂಕ್ ಸಾಲಕ್ಕಾಗಿ ಇರುವ ಬೇಡಿಕೆಯು ಅನಂತವಾಗಿರುತ್ತದೆ ಎಂದು ನಾವು ಸೂಚ್ಯವಾಗಿ ಕಲ್ಪಿಸಿಕೊಳ್ಳುತ್ತಿದ್ದೇವೆ. ಅಂದರೆ ಬ್ಯಾಂಕುಗಳು ಅವು ಬಯಸಿದ ಯಾವುದೇ ಮೊತ್ತದ ಸಾಲವನ್ನು ನೀಡಬಹುದು.

**ಕೋಷ್ಟಕ 3.3 ಗುಣಕದ ಪ್ರಕ್ರಿಯೆ**

| | ಕರೆನ್ಸಿ | ಠೇವಣಿ | ಹಣದ ಪೂರೈಕೆ |
|---|---|---|---|
| ಒಂದನೇ ಸುತ್ತು | $\frac{H}{2}$ | $\frac{H}{2}$ (ಬ್ಯಾಂಕ್ A) | H |
| ಎರಡನೇ ಸುತ್ತು | $\frac{0.8H}{4}$ | $\frac{0.8H}{4}$ (ಬ್ಯಾಂಕ್ B) | $\frac{0.8H}{2}$ |
| ಮೂರನೇ ಸುತ್ತು<br>.<br>.<br>.<br>. | $\frac{0.64H}{8}$<br>.<br>.<br>.<br>. | $\frac{0.64H}{8}$ (ಬ್ಯಾಂಕ್ C)<br>.<br>.<br>.<br>. | $\frac{0.64H}{4}$<br>.<br>.<br>.<br>. ಇತ್ಯಾದಿ |

ಎರಡನೇ ಕಂಬ ಸಾಲು ಪ್ರತಿ ಸುತ್ತಿನಲ್ಲಿ ಸಾರ್ವಜನಿಕರು ಹೊಂದಿರುವ ಕರೆನ್ಸಿಯಲ್ಲಿನ ಮೌಲ್ಯದ ಹೆಚ್ಚಳವನ್ನು ತೋರಿಸುತ್ತದೆ. ಅದೇ ರೀತಿಯಲ್ಲಿ ಮೂರನೇ ಕಾಲಂ ಅರ್ಥವ್ಯವಸ್ಥೆಯಲ್ಲಿನ ಬ್ಯಾಂಕ್ ಠೇವಣಿಗಳ ಮೌಲ್ಯದ ಹೆಚ್ಚಳವನ್ನು ತೋರಿಸುತ್ತದೆ. ಕೊನೆಯ ಕಾಲಂ ಈ ಎರಡರ ಒಟ್ಟು ಮೊತ್ತವಾಗಿದೆ ಮತ್ತು ವ್ಯಾಖ್ಯಾನದ ಪ್ರಕಾರ ಪ್ರತಿ ಸುತ್ತಿನಲ್ಲಿ ಅರ್ಥವ್ಯವಸ್ಥೆಯಲ್ಲಿನ ಹಣದ ಪೂರೈಕೆಯ ಹೆಚ್ಚಳವಾಗಿದೆ (ಸಂಭಾವ್ಯವಾಗಿ ಹಣದ ಸರಳವಾದ ಮತ್ತು ಅತ್ಯಂತ ಹೆಚ್ಚು ದ್ರವ್ಯತೆಯ ಮಾಪನವಾಗಿದೆ, ಅಂದರೆ M1). ನಂತರದ ಸುತ್ತುಗಳಲ್ಲಿ ಹಣದ ಪೂರೈಕೆಯಲ್ಲಿನ ಹೆಚ್ಚಳವು ಕ್ರಮೇಣ ಇಳಿಮುಖವಾಗುತ್ತಿರುವುದನ್ನು ಗಮನಿಸಿ. ಹಲವಾರು ಸುತ್ತುಗಳ ನಂತರ ಹಣದ ಪೂರೈಕೆಯ ಗಾತ್ರದ ಹೆಚ್ಚಳವನ್ನು ವಾಸ್ತವವಾಗಿ ಸೊನ್ನೆಯಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ ಮತ್ತು ನಂತರದ ಸುತ್ತಿನ ಪರಿಣಾಮಗಳು ಹಣದ ಪೂರೈಕೆಯ ಗಾತ್ರಕ್ಕೆ ಪ್ರಾಯೋಗಿಕವಾಗಿ ಯಾವುದೇ ಕೊಡುಗೆಯನ್ನು ನೀಡುವುದಿಲ್ಲ. ಹಣದ ಪೂರೈಕೆಯ ಮೇಲಿನ ಸುತ್ತಿನ ಪರಿಣಾಮಗಳು ಒಮ್ಮುಖ ಪ್ರಕ್ರಿಯೆಯನ್ನು ಪ್ರತಿನಿಧಿಸುತ್ತದೆ. ಹಣದ ಪೂರೈಕೆಯಲ್ಲಿನ ಒಟ್ಟು ಹೆಚ್ಚಳವನ್ನು ಕಂಡು ಹಿಡಿಯುವುದಕ್ಕಾಗಿ ನಾವು ಅಂತಿಮ ಕಾಲಂನಲ್ಲಿ ಅನಂತ ಜ್ಯಾಮಿತಿಯ ಶ್ರೇಣಿ[4]ಯನ್ನು ಸೇರಿಸಲೇಬೇಕು ಅಂದರೆ,

$$H + \frac{0.8H}{2} + \frac{0.64H}{4} + \ldots\ldots\ldots\ldots \infty$$

$$H\left\{1+\left(\frac{0.8}{2}\right)+\left(\frac{0.8}{2}\right)^2+\ldots\ldots\ldots\ldots\ldots\ldots\infty\right\}=\frac{H}{1-0.4}=\frac{5H}{3}$$

ಒಟ್ಟು ಹಣದ ಪೂರೈಕೆಯಲ್ಲಿನ ಏರಿಕೆಯು, RBI ಅರ್ಥವ್ಯವಸ್ಥೆಗೆ ಆರಂಭಿಕವಾಗಿ ಸೇರಿಸಿದ ಅಧಿಕ ಶಕ್ತಿಯ ಹಣದ ಮೊತ್ತವನ್ನು ಮೀರಿರುತ್ತದೆ. ಒಂದು ಅರ್ಥವ್ಯವಸ್ಥೆಯಲ್ಲಿ ಅಧಿಕ ಶಕ್ತಿಯ ಹಣದ ಸಂಗ್ರಹಕ್ಕೆ ಇರುವ ಹಣದ ಸಂಗ್ರಹದ ಅನುಪಾತವನ್ನು ಹಣದ ಗುಣಕ ಎಂದು ನಾವು ವ್ಯಾಖ್ಯಾನಿಸಬಹುದು ಅಂದರೆ M/H. ಸ್ಪಷ್ಟವಾಗಿ ಅದು 1 ಕ್ಕಿಂತ ಹೆಚ್ಚಾಗಿರುತ್ತದೆ.

ನಾವು ಯಾವಾಗಲೂ ಸುತ್ತು ಪರಿಣಾಮಗಳ ಮೂಲಕವೇ ಹಣದ ಗುಣಕದ ಮೌಲ್ಯವನ್ನು ಲೆಕ್ಕ ಹಾಕುವ ಅವಶ್ಯಕತೆಯಿಲ್ಲ. ವಾಣಿಜ್ಯ ಬ್ಯಾಂಕುಗಳು ಪ್ರಮುಖ ಪಾತ್ರ ವಹಿಸುವ ಹಣದ ಸೃಷ್ಟಿಯ ಪ್ರಕ್ರಿಯೆಯನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸಲು ಇದನ್ನು ನಾವು ಇಲ್ಲಿ ಮಾಡಿದ್ದೇವೆ. ಆದಾಗ್ಯೂ ಗುಣಕವನ್ನು ಪಡೆಯಲು

ಸರಳವಾದ ಮಾರ್ಗವಿದೆ. ವ್ಯಾಖ್ಯಾನದ ಪ್ರಕಾರ ಹಣದ ಪೂರೈಕೆಯು ಕರನ್ಸಿ ಮತ್ತು ಠೇವಣಿಗಳ ಒಟ್ಟು ಮೊತ್ತಕ್ಕೆ ಸಮವಿರುತ್ತದೆ.

$$M = CU + DD = (1 + cdr)DD$$

ಇಲ್ಲಿ $cdr = CU/DD$. ಇದನ್ನು ಸರಳವಾಗಿ ಅರ್ಥೈಸಲು RBI ನಲ್ಲಿರುವ ಸರಕಾರದ ಖಜಾನೆ ಠೇವಣಿ ಶೂನ್ಯವಾಗಿದೆ ಎಂದು ಊಹಿಸೋಣ. ಅಧಿಕ ಶಕ್ತಿಯ ಹಣವು RBI ನಲ್ಲಿರುವ ಠೇವಣಿಗಳು ಮತ್ತು ಬ್ಯಾಂಕಿನಲ್ಲಿರುವ ನಗದನ್ನು ಒಳಗೊಂಡಂತೆ ಇರುವ ವಾಣಿಜ್ಯ ಬ್ಯಾಂಕಿನ ಮೀಸಲು ಹಾಗೂ ಸಾರ್ವಜನಿಕರು ಹೊಂದಿರುವ ಕರೆನ್ಸಿಯನ್ನು ಒಳಗೊಂಡಿರುತ್ತದೆ. ಆ ರೀತಿಯಲ್ಲಿ

$$H = CU + R = cdr.\ DD + rdr.\ DD = (cdr + rdr)\ DD$$

ಆ ರೀತಿಯಲ್ಲಿ ಅಧಿಕ ಶಕ್ತಿಯ ಹಣಕ್ಕೆ ಹಣದ ಅನುಪಾತವು ಹೀಗಿರುತ್ತದೆ.

$$\frac{M}{H} = \frac{1 + cdr}{cdr + rdr} > 1 \qquad rdr < 1 \text{ ಆಗಿರುವಾಗ}$$

ಇದು ನಿಖರವಾಗಿ ಹಣದ ಗುಣಕದ ಮಾಪನವಾಗಿದೆ.

### ೩.೩.೩ ಹಣಕಾಸು ನೀತಿಯ ಸಾಧನಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ *Instruments of Monetary Policy and the Reserve Bank of India*



ಅರ್ಥವ್ಯವಸ್ಥೆಯಲ್ಲಿ ಅಧಿಕ ಶಕ್ತಿಯ ಹಣದ ಗಾತ್ರಕ್ಕಿಂತ ಹಣದ ದಾಸ್ತಾನಿನ ಒಟ್ಟು ಮೊತ್ತವು ಬಹಳ ದೊಡ್ಡದಾಗಿರುತ್ತದೆ ಎನ್ನುವುದು ಮೇಲಿನ ಚರ್ಚೆಯಿಂದ ಸ್ಪಷ್ಟವಾಗುತ್ತದೆ. ವಾಣಿಜ್ಯ ಬ್ಯಾಂಕುಗಳು ತಮ್ಮ ಠೇವಣಿಗಳ ಸ್ವಲ್ಪ ಭಾಗವನ್ನು ಸಾಲಗಳು ಅಥವಾ ಹೂಡಿಕೆ ಸಾಲಗಳ ಮೂಲಕ ಈ ಹೆಚ್ಚುವರಿ ಹಣವನ್ನು ಸೃಷ್ಟಿಸುತ್ತದೆ. ದೇಶದಲ್ಲಿನ ವಾಣಿಜ್ಯ ಬ್ಯಾಂಕುಗಳು ಹೊಂದಿರುವ ಠೇವಣಿಗಳ ಮೊತ್ತವು ಅವುಗಳ ಮೀಸಲಿನ ಮೊತ್ತಕ್ಕಿಂತ ತುಂಬಾ ಹೆಚ್ಚಾಗಿರುತ್ತದೆ ಎನ್ನುವುದು ಕೋಷ್ಟಕ 3.1 ರಿಂದ ಸ್ಪಷ್ಟವಾಗುತ್ತದೆ. ಒಂದು ವೇಳೆ ಅರ್ಥವ್ಯವಸ್ಥೆಯಲ್ಲಿನ ಎಲ್ಲಾ ವಾಣಿಜ್ಯ ಬ್ಯಾಂಕುಗಳ ಎಲ್ಲಾ ಖಾತೆದಾರರು ಏಕ ಕಾಲಕ್ಕೆ ತಮ್ಮ ಠೇವಣಿಗಳನ್ನು ಹಿಂಪಡೆಯಲು ಬಯಸಿದಾಗ, ಬ್ಯಾಂಕುಗಳು ಎಲ್ಲಾ ಖಾತೆದಾರರ ಅವಶ್ಯಕತೆಗಳನ್ನು ಈಡೇರಿಸಲು ಸಾಕಷ್ಟು ಸಂಪನ್ಮೂಲಗಳನ್ನು ಹೊಂದಿರುವುದಿಲ್ಲ ಮತ್ತು ಬ್ಯಾಂಕುಗಳು ದಿವಾಳಿಯಾಗಬಹುದು.




**ರೇಖಾಚಿತ್ರ 3.2:** ಒಟ್ಟು ಹಣದ ಪೂರೈಕೆಗೆ ಸಂಬಂಧಿಸಿದಂತೆ ಅಧಿಕ ಶಕ್ತಿಯ ಹಣ

ಇದು ಅರ್ಥವ್ಯವಸ್ಥೆಯ ಪ್ರತಿಯೊಬ್ಬ ಪ್ರಜ್ಞಾವಂತ ವ್ಯಕ್ತಿಗಳಿಗೆ ಇರಬೇಕಾದ ಸಾಮಾನ್ಯ ಜ್ಞಾನವಾಗಿದೆ. ಬ್ಯಾಂಕ್ ರನ್ (ಬ್ಯಾಂಕಿನ ಮೀಸಲು ಮುಗಿಯುವುದಕ್ಕೆ ಮೊದಲೇ ಪ್ರತಿಯೊಬ್ಬರೂ ತಮ್ಮ ಬ್ಯಾಂಕ್ ಖಾತೆಯಿಂದ ಹಣವನ್ನು ತೆಗೆಯಲು ಬಯಸುವ ಸ್ಥಿತಿ) ನಂತಹ ಸಮಯದಲ್ಲಿ ಠೇವಣಿಯ ಕೊರತೆಯಾಗಬಹುದು ಎನ್ನುವುದು ಗೊತ್ತಿದ್ದರೂ ಅವರು ಏಕೆ ಅವರ ಹಣವನ್ನು ಬ್ಯಾಂಕ್ ಠೇವಣಿಗಳಲ್ಲಿ ಇಡುತ್ತಾರೆ?

ಭಾರತೀಯ ರಿಸರ್ವ್ ಬ್ಯಾಂಕ್ ಇಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಮೇಲಿನ ಬಿಕ್ಕಟ್ಟಿನಂತಹ ಸನ್ನಿವೇಶದಲ್ಲಿ ವಾಣಿಜ್ಯ ಬ್ಯಾಂಕುಗಳಿಗೆ ಋಣ ಪರಿಹಾರ ಸಾಮರ್ಥ್ಯದ ಖಾತರಿ ನೀಡುವ ಸಲುವಾಗಿ ಜಾಮೀನುದಾರನಾಗಿ ಮತ್ತು ಸಾಲವನ್ನು ನೀಡಿ ಆಸರೆಯಾಗುತ್ತದೆ. ಬಿಕ್ಕಟ್ಟಿನ ಸಮಯದಲ್ಲಿ ವ್ಯಕ್ತಿಗತ ಖಾತೆದಾರರಿಗೆ ಅವರ ಬ್ಯಾಂಕುಗಳು ಹಣವನ್ನು ಮರಳಿ ಪಾವತಿಸುತ್ತದೆ ಮತ್ತು ಆ ರೀತಿಯಲ್ಲಿ ಬ್ಯಾಂಕ್ ರನ್ ನಂತಹ ಸ್ಥಿತಿಯನ್ನು ತಪ್ಪಿಸುತ್ತಾ, ಚಿಂತಿಸುವ ಅಗತ್ಯವಿಲ್ಲಾ ಎನ್ನುವ ಭರವಸೆಯನ್ನು ಈ ಖಾತರಿ ವ್ಯವಸ್ಥೆಯು ನೀಡುತ್ತದೆ. ಹಣಕಾಸು ಪ್ರಾಧಿಕಾರದ ಈ ಪಾತ್ರವನ್ನು **ಅಂತಿಮ ಋಣದಾತ** ಎಂದು ಕರೆಯುತ್ತಾರೆ.

RBI, ವಾಣಿಜ್ಯ ಬ್ಯಾಂಕುಗಳ ಬ್ಯಾಂಕಾಗಿ ಕಾರ್ಯನಿರ್ವಹಿಸುವುದಲ್ಲದೆ, ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳಿಗೂ ಕೂಡಾ ಬ್ಯಾಂಕಾಗಿ ಕಾರ್ಯನಿರ್ವಹಿಸುತ್ತದೆ. ಬಜೆಟ್ ಕೊರತೆಯ ಸಂದರ್ಭದಲ್ಲಿ ಸರಕಾರ ಕೆಲವೊಮ್ಮೆ **'ಹಣವನ್ನು ಮುದ್ರಿಸುತ್ತದೆ'** ಎನ್ನುವ ಸಾಮಾನ್ಯ ಭಾವನೆಯಿದೆ. ಅಂದರೆ ಅದು ಗಳಿಸಿದ ತೆರಿಗೆ ಆದಾಯದಿಂದ ತನ್ನ ವೆಚ್ಚಗಳನ್ನು ಭರಿಸಲು ಶಕ್ತವಾಗದೇ ಇರುವ ಸ್ಥಿತಿ (ಉದಾ: ಸರಕಾರಿ ನೌಕರರಿಗೆ ವೇತನ ಪಾವತಿ, ಉತ್ಪಾದಕರಿಂದ ರಕ್ಷಣಾ ಸಾಮಗ್ರಿಗಳನ್ನು ಅವುಗಳ ಉತ್ಪಾದಕರಿಂದ ಖರೀದಿಸುವುದು ಇತ್ಯಾದಿ) ಆದಾಗ್ಯೂ ಈ ವಿಧಾನದಲ್ಲಿ ಕರೆನ್ಸಿಯನ್ನು ಚಲಾವಣೆಗೆ ತರಲು ಸರಕಾರಕ್ಕೆ ಶಾಸನ ಬದ್ಧ ಅಧಿಕಾರವಿಲ್ಲ. ಆದ್ದರಿಂದ ಅದು ಖಜಾನೆ ಹುಂಡಿಗಳನ್ನು ಅಥವಾ ಸರಕಾರದ ಭದ್ರತೆಗಳನ್ನು RBI ಗೆ ಮಾರಿ ಸಾಲವನ್ನು ಪಡೆಯುತ್ತದೆ ಅದಕ್ಕೆ ಪ್ರತಿಯಾಗಿ RBI ಸರಕಾರಕ್ಕೆ ಕರೆನ್ಸಿಯನ್ನು ನೀಡುತ್ತದೆ. ನಂತರ ಸರಕಾರ ಈ ಹಣದಿಂದ ತನ್ನ ವೆಚ್ಚಗಳನ್ನು ಪಾವತಿಸುತ್ತದೆ. ಆ ರೀತಿಯಲ್ಲಿ ಹಣವು ಅಂತಿಮವಾಗಿ ಜನಸಾಮಾನ್ಯರ ಕೈಗೆ ಬರುತ್ತದೆ (ವೇತನ ಅಥವಾ ರಕ್ಷಣ ಸಾಮಾಗ್ರಿಗಳ ಮಾರಾಟದಿಂದ ಬಂದ ಹಣ ಇತ್ಯಾದಿ ರೂಪದಲ್ಲಿ) ಮತ್ತು ಹಣದ ಪೂರೈಕೆಯ ಭಾಗವಾಗುತ್ತದೆ. ಈ ಮಾದರಿಯಲ್ಲಿ ಸರಕಾರದಿಂದ ಬಜೆಟ್ ಕೊರತೆಗೆ ಹಣಕಾಸು ಒದಗಿಸುವುದನ್ನು **ಕೇಂದ್ರ ಬ್ಯಾಂಕಿನ ಸಾಲದಿಂದ ಕೊರತೆಯ ಹಣಕಾಸು ಪಾವತಿ** ಎಂದು ಕರೆಯುತ್ತಾರೆ.

ಏನೇ ಆದರೂ RBI ನ ಅತ್ಯಂತ ಮಹತ್ವ ಪಾತ್ರವೆಂದರೆ, ಆರ್ಥಿಕತೆಯಲ್ಲಿನ ಹಣದ ಪೂರೈಕೆಯ ಮತ್ತು ಪತ್ತು ನಿರ್ಮಾಣದ ನಿಯಂತ್ರಕನಾಗಿ ಕಾರ್ಯ ನಿರ್ವಹಿಸುವುದಾಗಿದೆ. ಅರ್ಥವ್ಯವಸ್ಥೆಯ ಹಿತಾಸಕ್ತಿಗೆ ಅನುಗುಣವಾಗಿ ಹಣಕಾಸು ನೀತಿಯನ್ನು ನಿರ್ವಹಿಸಲು RBI ಸ್ವತಂತ್ರವಾಗಿದೆ–ಇದು ಅರ್ಥವ್ಯವಸ್ಥೆಯಲ್ಲಿ ಅಧಿಕ ಶಕ್ತಿಯ ಹಣದ ಪೂರೈಕೆಯನ್ನು ಏರಿಸುತ್ತದೆ ಅಥವಾ ಇಳಿಸುತ್ತದೆ ಮತ್ತು ಹೂಡಿಕೆದಾರರಿಗೆ ಸಾಲವನ್ನು ನೀಡಲು ವಾಣಿಜ್ಯ ಬ್ಯಾಂಕುಗಳಿಗೆ ಉತ್ತೇಜಕ ಮತ್ತು ಅನುತ್ತೇಜಕಗಳನ್ನು ಸೃಷ್ಟಿಸುತ್ತದೆ. ಹಣಕಾಸು ನೀತಿಯ ನಿರ್ವಹಣೆಗೆ ಬಳಸುವ ಸಾಧನಗಳು ಈ ಕೆಳಗಿನಂತಿವೆ.

**ಮುಕ್ತ ಮಾರುಕಟ್ಟೆ ಕಾರ್ಯಾಚರಣೆಗಳು:** ಆರ್ಥಿಕತೆಯಲ್ಲಿ ಅಧಿಕಶಕ್ತಿಯ ಹಣದ ದಾಸ್ತಾನನ್ನು ಹೆಚ್ಚಿಸುವ (ಅಥವಾ ಇಳಿಸುವ) ಸಲುವಾಗಿ RBI ಸರ್ಕಾರಿ ಭದ್ರತೆಗಳನ್ನು ಸಾರ್ವಜನಿಕರಿಂದ ಕೊಳ್ಳುತ್ತದೆ (ಅಥವಾ ಮಾರಾಟ ಮಾಡುತ್ತದೆ). RBI ಬಾಂಡು ಮಾರುಕಟ್ಟೆಯಿಂದ ₹100ರಷ್ಟು ಬೆಲೆಬಾಳುವ ಸರ್ಕಾರಿ ಭದ್ರತೆಗಳನ್ನು ಕೊಳ್ಳುತ್ತದೆಂದು ಭಾವಿಸೋಣ ಆಗ ಅದು ತನ್ನ ಮೇಲೇ ಬರೆದುಕೊಂಡು ₹100 ರ ಚೆಕ್‌ನ್ನು ಬಾಂಡು ಮಾರಾಟಗಾರನಿಗೆ ನೀಡುತ್ತದೆ. ಅಂದರೆ ಚೆಕ್‌ನ್ನು ಹೊಂದಿರುವ ಒಬ್ಬ ವ್ಯಕ್ತಿ ಅಥವಾ ಸಂಸ್ಥೆ RBI ಗೆ ಅದನ್ನು ನೀಡಿದ ಪಕ್ಷದಲ್ಲಿ RBI ಆ ವ್ಯಕ್ತಿಗೆ ಅಥವಾ ಸಂಸ್ಥೆಗೆ ಅದಕ್ಕೆ ಸಮನಾದ ಹಣವನ್ನು ಪಾವತಿಸಬೇಕಾಗುತ್ತದೆ. ಮಾರಾಟಗಾರನು ಆ ಚೆಕ್‌ನ್ನು ತನ್ನ ಬ್ಯಾಂಕಿನಲ್ಲಿ ಠೇವಣಿ ಮಾಡುತ್ತಾನೆ. ಪ್ರತಿಯಾಗಿ ಆ ಬ್ಯಾಂಕು ಆತನ ಖಾತೆಗೆ ₹100 ಜಮಾ ಮಾಡುತ್ತದೆ. ಬ್ಯಾಂಕಿನ ಠೇವಣಿ ₹100 ರಷ್ಟು ಹೆಚ್ಚಾಗುತ್ತದೆ. ಇದು ಬ್ಯಾಂಕಿನ ಹೊಣೆಗಾರಿಕೆಯಾಗುತ್ತದೆ. ಆದಾಗ್ಯೂ ಈ ಚೆಕ್‌ನ್ನು ಹೊಂದಿರುವುದರಿಂದ ಅದರ ಆಸ್ತಿಯೂ ಕೂಡ ₹100 ರಷ್ಟು ಹೆಚ್ಚಾಗುತ್ತದೆ. ಇದು RBI ನ ಮೇಲೆ ಮಾಡಿದ ಹಕ್ಕು ಕೋರಿಕೆಯಾಗಿರುತ್ತದೆ. ಬ್ಯಾಂಕು ಈ ಚೆಕ್ಕನ್ನು RBI ಗೆ ಠೇವಣಿಯಾಗಿ ನೀಡುತ್ತದೆ. ಪ್ರತಿಯಾಗಿ ಆ ಬ್ಯಾಂಕು RBI ನಲ್ಲಿ ಹೊಂದಿರುವ ಖಾತೆಗೆ ₹ 100ನ್ನು RBI ಜಮಾ ಮಾಡುತ್ತದೆ. RBI ನ ಬ್ಯಾಲೆನ್ಸ್ ಷೀಟ್‌ನಲ್ಲಿನ ಬದಲಾವಣೆಯನ್ನು ಕೋಷ್ಟಕ 3.4ರಲ್ಲಿ ತೋರಿಸಲಾಗಿದೆ.

RBI ನ ಒಟ್ಟು ಹೊಣೆಗಾರಿಕೆ ಅಥವಾ ವ್ಯಾಖ್ಯಾನದಂತೆ ಅರ್ಥವ್ಯವಸ್ಥೆಯಲ್ಲಿ ಅಧಿಕ ಶಕ್ತಿಯ ಹಣದ ಪೂರೈಕೆಯು ₹100 ರಷ್ಟು ಹೆಚ್ಚಾಗಿದೆ. ಅಧಿಕ ಶಕ್ತಿಯ ಹಣದ ಪೂರೈಕೆಯನ್ನು ಕಡಿಮೆ ಮಾಡಲು RBI

ಬಯಸಿದರೆ ವ್ಯತಿರಿಕ್ತ ರೀತಿಯಲ್ಲಿ ತನ್ನಲ್ಲಿರುವ ಸರಕಾರಿ ಭದ್ರತೆಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತದೆ ಆ ಮೂಲಕ ಹಣಕಾಸಿನ ಆಧಾರವನ್ನು ಕಡಿಮೆ ಮಾಡಲಾಗುತ್ತದೆ.

**ಕೋಷ್ಟಕ 3.4 ಮುಕ್ತ ಮಾರುಕಟ್ಟೆಯ ಖರೀದಿಯಿಂದ RBI ನ ಅಢಾವೆ ಪತ್ರಿಕೆಯ ಮೇಲಾಗಿರುವ ಪರಿಣಾಮ**

| ಆಸ್ತಿಗಳು (ಮೂಲಗಳು) | | ಹೊಣೆಗಾರಿಕೆ(ಬಳಕೆಗಳು) | |
|---|---|---|---|
| ಇತರೆ ಎಲ್ಲಾ ಆಸ್ತಿಗಳು | 0 | ಕರೆನ್ಸಿ | 0 |
| ಸರಕಾರಿ ಭದ್ರತೆಗಳು | +100 | RBIನಲ್ಲಿರುವ ವಾಣಿಜ್ಯ ಬ್ಯಾಂಕುಗಳ ಠೇವಣಿ | + 100 |
| ಹಣಕಾಸಿನ ಆಧಾರ (ಮೂಲಗಳು) | +100 | ಹಣಕಾಸಿನ ಆಧಾರ (ಮೂಲಗಳು) | + 100 |

**ಬ್ಯಾಂಕ್ ದರದ ನೀತಿ:** ಈ ಮೊದಲೇ ತಿಳಿಸಿದಂತೆ, ಬ್ಯಾಂಕ್ ದರದ ಮೌಲ್ಯದಲ್ಲಿ ಹೊಂದಾಣಿಕೆ ಮಾಡುವುದರ ಮೂಲಕ RBI ವಾಣಿಜ್ಯ ಬ್ಯಾಂಕುಗಳ ಮೀಸಲು ಠೇವಣಿ ಅನುಪಾತದ ಮೇಲೆ ಪರಿಣಾಮ ಬೀರುತ್ತದೆ–ಬ್ಯಾಂಕ್ ದರ ಎಂದರೆ ವಾಣಿಜ್ಯ ಬ್ಯಾಂಕುಗಳು RBI ಗೆ ಪಾವತಿಸುವ ಬಡ್ಡಿ ದರ– ಮೀಸಲಿನ ಕೊರತೆಯುಂಟಾದಾಗ ಅವು RBI ನಿಂದ ಹಣವನ್ನು ಸಾಲವಾಗಿ ಪಡೆಯುತ್ತವೆ. RBI ನಿಂದ ಪಡೆಯುವ ಸಾಲದ ವೆಚ್ಚ ಮೊದಲಿಗಿಂತ ಈಗ ಕಡಿಮೆ ಇರುವುದರಿಂದ, ಕಡಿಮೆ (ಅಥವಾ ಹೆಚ್ಚು) ಬ್ಯಾಂಕ್ ದರವು ತಮ್ಮ ಠೇವಣಿಗಳಿಂದ ಸಣ್ಣ (ಅಥವಾ ದೊಡ್ಡ) ಭಾಗದ ಮೀಸಲನ್ನು ಇಟ್ಟುಕೊಳ್ಳುವಂತೆ ಬ್ಯಾಂಕುಗಳನ್ನು ಪ್ರೋತ್ಸಾಹಿಸುತ್ತದೆ. ಇದರ ಫಲವಾಗಿ ಬ್ಯಾಂಕುಗಳು ಅವರ ಸಂಪನ್ಮೂಲದಲ್ಲಿ ದೊಡ್ಡ (ಅಥವಾ ಸಣ್ಣ) ಭಾಗವನ್ನು ಹೂಡಿಕೆದಾರರಿಗೆ ಅಥವಾ ಸಾಲಗಾರರಿಗೆ ಸಾಲ ನೀಡಲು ಬಳಸುತ್ತವೆ ಆ ಮೂಲಕ ಮಾಧ್ಯಮಿಕ ಹಣದ ಸೃಷ್ಟಿಗೆ ಸಹಾಯ (ಅಥವಾ ಪ್ರತಿರೋಧ) ಮಾಡುವ ಮೂಲಕ ಗುಣಕದ ಪ್ರಕ್ರಿಯೆಯನ್ನು ಹೆಚ್ಚು (ಅಥವಾ ಕಡಿಮೆ) ಮಾಡುತ್ತದೆ. ಸಂಕ್ಷಿಪ್ತವಾಗಿ ಕಡಿಮೆ (ಹೆಚ್ಚು) ಬ್ಯಾಂಕ್ ದರವು *rdr* ನ್ನು ಕಡಿಮೆ (ಅಥವಾ ಹೆಚ್ಚು) ಮಾಡುತ್ತದೆ ಇದರಿಂದ ಹಣದ ಗುಣಕದ ಮೌಲ್ಯವು ಹೆಚ್ಚಾಗುತ್ತದೆ (ಕಡಿಮೆಯಾಗುತ್ತದೆ). ಅದು $(1+ cdr)/ (cdr + rdr)$ ಆಗಿದೆ. ಆ ರೀತಿಯಲ್ಲಿ ನೀಡಿದ ಯಾವುದೇ ನಿರ್ದಿಷ್ಟ ಮೊತ್ತದ ಅಧಿಕ ಶಕ್ತಿಯ ಹಣಕ್ಕೆ, ಉದಾ. H ಮೊತ್ತಕ್ಕೆ ಒಟ್ಟು ಹಣದ ಪೂರೈಕೆ ಹೆಚ್ಚಾಗುತ್ತದೆ.

**ಬದಲಾಗುವ ಮೀಸಲು ಅಗತ್ಯತೆಗಳು:** ನಗದು ಮೀಸಲು ಅನುಪಾತ (CRR) ಮತ್ತು ಶಾಸನ ದ್ರವ್ಯತಾ ಅನುಪಾತ(SLR)ಗಳು ಕೂಡಾ *rdr* ಮಾರ್ಗದಲ್ಲಿಯೇ ಕಾರ್ಯ ನಿರ್ವಹಿಸುತ್ತವೆ. ಅಧಿಕ (ಅಥವಾ ಕಡಿಮೆ) ಮೌಲ್ಯದ CRR ಮತ್ತು SLR ಮೀಸಲು ಠೇವಣಿ ಅನುಪಾತ ಮೌಲ್ಯದ ಏರಿಕೆಗೆ (ಅಥವಾ ಇಳಿತಕ್ಕೆ) ಸಹಾಯ ಮಾಡುತ್ತದೆ. ಹೀಗೆ ಅರ್ಥವ್ಯವಸ್ಥೆಯಲ್ಲಿ ಅದೇ ವಿಧಾನದಲ್ಲಿ ಹಣ ಗುಣಕದ ಮೌಲ್ಯವನ್ನು ಮತ್ತು ಹಣದ ಪೂರೈಕೆಯನ್ನು ಕಡಿಮೆಮಾಡುತ್ತದೆ (ಅಥವಾ ಹೆಚ್ಚಿಸುತ್ತದೆ).

**RBI ನಿಂದ ಸ್ಥಿರೀಕರಣ:** ಬಾಹ್ಯ ಆಘಾತಗಳಿಂದ ಅರ್ಥವ್ಯವಸ್ಥೆಯ ಹಣದ ಸಂಗ್ರಹದಲ್ಲಿ ಸ್ಥಿರತೆಯನ್ನು ತರಲು RBI ತನ್ನ ಹಣದ ಸೃಷ್ಟಿಯ ಸಾಧನವನ್ನು ಆಗಾಗ ಬಳಸುತ್ತದೆ. ಭವಿಷ್ಯದಲ್ಲಿ ಭಾರತದಲ್ಲಿ ಉತ್ತಮ ಬೆಳವಣಿಗೆ ನಿರೀಕ್ಷಿಸಿ ಜಗತ್ತಿನಾದ್ಯಂತ ಇರುವ ಹೂಡಿಕೆದಾರರು ಭಾರತದ ಬಾಂಡುಗಳಲ್ಲಿ ಹೂಡುವುದನ್ನು ಹೆಚ್ಚಿಸುತ್ತಾರೆ ಎಂದುಕೊಳ್ಳೋಣ. ಈ ಸನ್ನಿವೇಶದಲ್ಲಿ ಬಾಂಡುಗಳು ಅಧಿಕ ದರದ ಪ್ರತಿಫಲವನ್ನು ನೀಡುವ ಸಾಧ್ಯತೆ ಇರುತ್ತದೆ. ಅವರು ಈ ಬಾಂಡುಗಳನ್ನು ವಿದೇಶಿ ಕರೆನ್ಸಿಯಿಂದ ಖರೀದಿಸುತ್ತಾರೆ. ಯಾರೂ ಕೂಡಾ ವಿದೇಶಿ ಹಣದಿಂದ ದೇಶೀಯ ಮಾರುಕಟ್ಟೆಯಲ್ಲಿ ಸರಕುಗಳನ್ನು ಖರೀದಿಸಲು ಸಾಧ್ಯವಿಲ್ಲವಾದುದರಿಂದ, ಈ ಬಾಂಡುಗಳನ್ನು ವಿದೇಶೀ ಹೂಡಿಕೆದಾರರಿಗೆ ಮಾರಾಟ ಮಾಡುವ ವ್ಯಕ್ತಿ ಅಥವಾ ಸಂಸ್ಥೆ ಒಂದು ವಾಣಿಜ್ಯ ಬ್ಯಾಂಕಿನಲ್ಲಿ ಈ ವಿದೇಶಿ ಕರೆನ್ಸಿಯನ್ನು ರೂಪಾಯಿಗೆ ವಿನಿಮಯ ಮಾಡಿಕೊಳ್ಳುತ್ತಾರೆ. ಇದಕ್ಕೆ ಪ್ರತಿಯಾಗಿ ವಾಣಿಜ್ಯ ಬ್ಯಾಂಕು ವಿದೇಶಿ ಕರೆನ್ಸಿಯನ್ನು RBI ಗೆ ಒಪ್ಪಿಸುತ್ತದೆ ಹಾಗೂ ಅದಕ್ಕೆ ಸಮಾನವಾದ ಹಣದ ಮೊತ್ತವು RBI ಯಲ್ಲಿನ ಅದರ ಠೇವಣಿಗೆ ಜಮಾ ಅಗುತ್ತದೆ. ಈ ಇಡೀ ವಹಿವಾಟಿನಲ್ಲಿ ಯಾವ ವಿಧದ ಹೊಂದಾಣಿಕೆಗಳು ನಡೆಯುತ್ತವೆ? ವಾಣಿಜ್ಯ ಬ್ಯಾಂಕಿನ ಒಟ್ಟು ಮೀಸಲುಗಳು ಮತ್ತು ಠೇವಣಿಗಳು ಬದಲಾಗದೇ ಹಾಗೇಯೇ ಇರುತ್ತವೆ (ಇದು ತನ್ನ ಮಾರಾಟಗಾರನಿಂದ ವಿದೇಶಿ ಕರೆನ್ಸಿಯನ್ನು ತನ್ನ ನಗದು ಕೋಶದಿಂದ ಖರೀದಿಸಿರುತ್ತದೆ. ಆದ್ದರಿಂದ ಅದು ಕಡಿಮೆಯಾಗುತ್ತದೆ; ಆದರೆ RBI ಯಲ್ಲಿನ ಠೇವಣಿಯು ಅದಕ್ಕೆ

ಸಮಾನವಾಗಿ ಹೆಚ್ಚಾಗುತ್ತದೆ–ಒಟ್ಟು ಮೀಸಲು ಬದಲಾಗದೆ ಇರುತ್ತದೆ). ಆದರೆ RBI ನ ಅಥಾವೆ ಪತ್ರಿಕೆಯಲ್ಲಿನ ಆಸ್ತಿ ಮತ್ತು ಹೊಣೆಗಾರಿಕೆಗಳು ಹೆಚ್ಚಾಗುತ್ತವೆ. RBI ಅಧೀನದಲ್ಲಿರುವ ವಿದೇಶಿ ವಿನಿಮಯವೂ ಹೆಚ್ಚಾಗುತ್ತದೆ. ಇನ್ನೊಂದು ಕಡೆ RBI ಯಲ್ಲಿರುವ ವಾಣಿಜ್ಯ ಬ್ಯಾಂಕಿನ ಠೇವಣಿಗಳಲ್ಲಿ ಅದಕ್ಕೆ ಸಮಾನವಾದ ಮೊತ್ತದ ಹೆಚ್ಚಳವಾಗುತ್ತದೆ. ಆದರೆ ಅದರರ್ಥ ಅಧಿಕ ಶಕ್ತಿಯ ಹಣದ ಸಂಗ್ರಹದಲ್ಲಿ ಹೆಚ್ಚಳವಾಗಿದೆ–ವ್ಯಾಖ್ಯಾನದಂತೆ ಅದು RBI ನ ಒಟ್ಟು ಹೊಣೆಗಾರಿಕೆಗೆ ಸಮವಾಗಿರುತ್ತದೆ. ಹಣ ಗುಣಕದ ಕಾರ್ಯಾಚರಣೆಯಿಂದ ಇದು ಪ್ರತಿಯಾಗಿ ಅರ್ಥವ್ಯವಸ್ಥೆಯಲ್ಲಿನ ಹಣದ ಪೂರೈಕೆಯ ಹೆಚ್ಚಳಕ್ಕೆ ಕಾರಣವಾಗುತ್ತದೆ.

ಈ ಹೆಚ್ಚಾದ ಹಣದ ಪೂರೈಕೆಯು ಒಟ್ಟಾರೆಯಾಗಿ ಅರ್ಥವ್ಯವಸ್ಥೆಯ ಆರೋಗ್ಯಕ್ಕೆ ಒಳ್ಳೆಯದಾಗಿಲ್ಲದೇ ಅರ್ಥವ್ಯವಸ್ಥೆಯಲ್ಲಿ ಉತ್ಪಾದಿಸಲಾದ ಸರಕು ಮತ್ತು ಸೇವೆಗಳ ಪ್ರಮಾಣವು ಬದಲಾಗದೇ ಇದ್ದರೆ, ಹೆಚ್ಚುವರಿ ಹಣವು ಎಲ್ಲ ಸರಕುಗಳ ಬೆಲೆ ಏರಿಕೆಗೆ ಕಾರಣವಾಗುತ್ತದೆ. ಅದೇ ಹಳೆಯ ಸರಕಿನ ದಾಸ್ತಾನನ್ನು ಕೊಳ್ಳುವುದಕ್ಕೆ ಸರಕು ಮಾರುಕಟ್ಟೆಯಲ್ಲಿ ಜನರು ಕೈಯ್ಯಲ್ಲಿ ಹೆಚ್ಚು ಹಣವನ್ನು ಇಟ್ಟುಕೊಂಡು ಪರಸ್ಪರ ಪೈಪೋಟಿಗಿಳಿಯುತ್ತಾರೆ. ಅಧಿಕ ಹಣವು ಅದೇ ಹಳೆಯ ಪ್ರಮಾಣದ ಸರಕುಗಳನ್ನು ಬೆಂಬತ್ತಿರುವುದರಿಂದ ಪ್ರತಿ ಸರಕಿನ ಬೆಲೆಗಳನ್ನು ಏರಿಸುವುದರೊಂದಿಗೆ ಈ ಪ್ರಕ್ರಿಯೆಯು ಕೊನೆಗೊಳ್ಳುತ್ತದೆ–ಸಾರ್ವತ್ರಿಕ ಬೆಲೆಯ ಮಟ್ಟದಲ್ಲಿ ಆಗುವ ಹೆಚ್ಚಳವನ್ನೂ ಹಣದುಬ್ಬರವೆಂದು ಕರೆಯುತ್ತಾರೆ.

RBI ಯು ಇಂತಹ ಪರಿಣಾಮಗಳನ್ನು ತಡೆಯುವುದಕ್ಕಾಗಿ ತನ್ನ ಸಾಧನಗಳನ್ನು ಬಳಸಿ ಆಗಾಗ ಮಧ್ಯ ಪ್ರವೇಶಿಸುತ್ತದೆ. ಈ ಮೇಲಿನ ಉದಾಹರಣೆಯಲ್ಲಿ, ಅರ್ಥವ್ಯವಸ್ಥೆಯಲ್ಲಿನ ವಿದೇಶಿ ವಿನಿಮಯದ ಒಳಹರಿವಿನ ಮೊತ್ತಕ್ಕೆ ಸಮಾನವಾದ ಮೊತ್ತದ ಸರಕಾರಿ ಭದ್ರತೆಗಳ ಮುಕ್ತ ಮಾರಾಟವನ್ನು RBI ಕೈಗೊಳ್ಳುತ್ತದೆ, ಆ ಮೂಲಕ ಅಧಿಕ ಶಕ್ತಿಯ ಹಣದ ಸಂಗ್ರಹ ಮತ್ತು ಒಟ್ಟು ಹಣದ ಪೂರೈಕೆ ಬದಲಾಗದಂತೆ ನೋಡಿಕೊಳ್ಳುತ್ತದೆ. ಈ ರೀತಿ ಅದು ಬಾಹ್ಯ ಪ್ರತಿಕೂಲ ಆಘಾತಗಳಿಂದ ಅರ್ಥವ್ಯವಸ್ಥೆಯಲ್ಲಿ ಸ್ಥಿರತೆಯನ್ನು ತರುತ್ತದೆ. RBI ನ ಈ ಕಾರ್ಯಾಚರಣೆಯನ್ನು **ಸ್ಥಿರೀಕರಣ** ಎಂದು ಕರೆಯುತ್ತಾರೆ.

ಆದ್ದರಿಂದ ಹಣದ ಪೂರೈಕೆ ಸಮಗ್ರ ಅರ್ಥಶಾಸ್ತ್ರದ ಒಂದು ಪ್ರಮುಖ ಚಲಕವಾಗಿದೆ. ಒಂದು ಅರ್ಥ ವ್ಯವಸ್ಥೆಯಲ್ಲಿನ ಉತ್ಪಾದನೆ, ಬೆಲೆಯ ಮಟ್ಟ ಮತ್ತು ಸಮತೋಲನದ ಬಡ್ಡಿಯ ದರಗಳ ಮೌಲ್ಯದ ಮೇಲಿನ ಇದರ ಒಟ್ಟಾರೆ ಪ್ರಭಾವವು ಅತ್ಯಂತ ಮಹತ್ವದ್ದಾಗಿದೆ. ಈ ಆಂಶಗಳನ್ನು ಮುಂದಿನ ಅಧ್ಯಾಯದಲ್ಲಿ ತೆಗೆದುಕೊಳ್ಳೋಣ.


**ಸಾರಾಂಶ *Summary***

ಹಣವನ್ನು ಮಾಧ್ಯಮವಾಗಿ ಬಳಸದೇ ನಡೆಯುವ ಸರಕುಗಳ ವಿನಿಮಯವನ್ನು ವಸ್ತು ವಿನಿಮಯ ಪದ್ಧತಿ ಎಂದು ಕರೆಯುತ್ತಾರೆ. ಇದು ಬಯಕೆಗಳ ದ್ವಿಮುಖ ಹೊಂದಾಣಿಕೆಯ ಕೊರತೆಯಿಂದ ಬಳಲುತ್ತಿತ್ತು. ಸಾರ್ವತ್ರಿಕವಾದ ಒಪ್ಪಿಗೆಯಿರುವ ವಿನಿಮಯದ ಮಾಧ್ಯಮವಾಗಿ ಕಾರ್ಯ ನಿರ್ವಹಿಸಿ ಹಣವು ವಿನಿಮಯವನ್ನು ಸುಗಮಗೊಳಿಸುತ್ತದೆ. ಆಧುನಿಕ ಅರ್ಥವ್ಯವಸ್ಥೆಯಲ್ಲಿ ಜನರು ಎರಡು ಉದ್ದೇಶಗಳಿಗಾಗಿ ಜನರು ಹಣವನ್ನು ಇಟ್ಟುಕೊಳ್ಳಲು ಬಯಸುತ್ತಾರೆ–ವ್ಯವಹಾರದ ಉದ್ದೇಶ ಮತ್ತು ಸಟ್ಟಾ ವ್ಯಾಪಾರದ ಉದ್ದೇಶ. ಹಣದ ಪೂರೈಕೆ, ಇನ್ನೊಂದು ಕಡೆ ಕರೆನ್ಸಿ ನೋಟು ಮತ್ತು ನಾಣ್ಯಗಳು, ವಾಣಿಜ್ಯ ಬ್ಯಾಂಕುಗಳಲ್ಲಿರುವ ಬೇಡಿಕೆ ಮತ್ತು ಅವಧಿ ಠೇವಣಿಗಳನ್ನು ಒಳಗೊಂಡಿದೆ. ದ್ರವ್ಯತೆಯ ಇಳಿಕೆಯ ಆಧಾರದಲ್ಲಿ ಅದನ್ನು ಸಂಕುಚಿತ ಮತ್ತು ವಿಶಾಲ ಎಂದು ವರ್ಗೀಕರಿಸಲಾಗಿದೆ. ಭಾರತದಲ್ಲಿ ಹಣದ ಪೂರೈಕೆಯು ಭಾರತೀಯ ರಿಸರ್ವ್ ಬ್ಯಾಂಕಿನಿಂದ ನಿಯಂತ್ರಿಸಲ್ಪಡುತ್ತದೆ. ಅದು ದೇಶದ ಹಣಕಾಸು ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕರ ವಿವಿಧ ಚಟುವಟಿಕೆಗಳು, ದೇಶದ ವಾಣಿಜ್ಯ ಬ್ಯಾಂಕುಗಳು ಮತ್ತು RBI ಇವುಗಳು ಅರ್ಥವ್ಯವಸ್ಥೆಯಲ್ಲಿನ ಹಣದ ಪೂರೈಕೆಯ ಬದಲಾವಣೆಗಳಿಗೆ ಕಾರಣವಾಗಿವೆ. ಅಧಿಕ ಶಕ್ತಿಯ ಸಂಗ್ರಹ, ಬ್ಯಾಂಕ್ ದರ ಮತ್ತು ವಾಣಿಜ್ಯ ಬ್ಯಾಂಕುಗಳ ಮೀಸಲು ಇತ್ಯಾದಿಗಳನ್ನು RBI ನಿಯಂತ್ರಿಸುತ್ತದೆ. ಆರ್ಥಿಕತೆಯ ಬಾಹ್ಯ ಆಘಾತಗಳ ವಿರುದ್ಧ ಕೂಡ ಹಣದ ಪೂರೈಕೆಯಲ್ಲಿ ಸ್ಥಿರತೆಯನ್ನು ತರುತ್ತದೆ.

## ಪ್ರಮುಖ ಪರಿಭಾಷೆಗಳು *Key Concepts*

| | |
|---|---|
| ವಸ್ತು ವಿನಿಮಯ ಪದ್ಧತಿ | ಬಯಕೆಗಳ ದ್ವಿಮುಖ ಹೊಂದಾಣಿಕೆ |
| ಹಣ | ವಿನಿಮಯದ ಮಾಧ್ಯಮ |
| ಲೆಕ್ಕದ ಘಟಕ | ಮೌಲ್ಯ ಸಂಗ್ರಾಹಕ |
| ವ್ಯವಹಾರದ ಬೇಡಿಕೆ | ಸಟ್ಟಾ ವ್ಯಾಪಾರದ ಉದ್ದೇಶ |
| ಬಾಂಡುಗಳು | ಪ್ರಸಕ್ತ ಮೌಲ್ಯ |
| ಬಡ್ಡಿಯ ದರ | ಬಂಡವಾಳ ಲಾಭ ಅಥವಾ ನಷ್ಟ |
| ದ್ರವ್ಯತೆಯ ಬಲೆ | ಫಿಯೆಟ್ ಹಣ |
| ಶಾಸನ ಬದ್ಧ | ಸಂಕುಚಿತ ಹಣ |
| ವಿಶಾಲ ಹಣ | ಸಮಗ್ರ ಹಣಕಾಸಿನ ಸಂಪನ್ಮೂಲಗಳು |
| ಕರೆನ್ಸಿ ಠೇವಣಿ ಅನುಪಾತ | ಮೀಸಲು ಠೇವಣಿ ಅನುಪಾತ |
| ಅಧಿಕ ಶಕ್ತಿಯ ಹಣ | ಹಣ ಗುಣಕ |
| ಅಂತಿಮ ಋಣದಾತ | ಕೇಂದ್ರ ಬ್ಯಾಂಕಿನ ಸಾಲದ ಮೂಲಕ ಕೊರತೆಯ ಹಣಕಾಸು |
| ಮುಕ್ತ ಮಾರುಕಟ್ಟೆ ಕಾರ್ಯಾಚರಣೆ | ಬ್ಯಾಂಕ್ ದರ |
| ನಗದು ಮೀಸಲು ಅನುಪಾತ (CRR) | ಶಾಸನ ಬದ್ಧ ದ್ರವ್ಯತಾ ಅನುಪಾತ (SLR) |
| ಸ್ಥಿರೀಕರಣ | |

## ಅಭ್ಯಾಸಗಳು *Exercises*

1. ವಸ್ತು ವಿನಿಮಯ ಪದ್ಧತಿ ಎಂದರೇನು? ಅದರ ದೋಷಗಳಾವುವು?
2. ಹಣದ ಪ್ರಮುಖ ಕಾರ್ಯಗಳಾವುವು? ಹಣವು ಹೇಗೆ ವಸ್ತು ವಿನಿಮಯ ಪದ್ಧತಿಯ ದೋಷಗಳನ್ನು ಪರಿಹರಿಸಿದೆ?
3. ಹಣದ ವ್ಯವಹಾರದ ಬೇಡಿಕೆ ಎಂದರೇನು? ಇದು ಹೇಗೆ ನಿರ್ದಿಷ್ಟ ಕಾಲಾವಧಿಯಲ್ಲಿ ವ್ಯವಹಾರದ ಮೌಲ್ಯಕ್ಕೆ ಸಂಬಂಧಿಸಿದೆ?
4. ಎರಡು ವರ್ಷಗಳ ಅಂತ್ಯದಲ್ಲಿ ಯಾವುದೇ ಮಧ್ಯಂತರ ಪ್ರತಿಫಲವಿಲ್ಲದೆ ರೂ.500 ರ ಬಾಂಡು ವಚನವನ್ನು ನೀಡಿದೆಯೆಂದು ಊಹಿಸಿರಿ. ವಾರ್ಷಿಕ ಬಡ್ಡಿ ದರ ಶೇ.5 ರಷ್ಟು ಇದ್ದರೆ ಬಾಂಡಿನ ಬೆಲೆ ಎಷ್ಟಾಗುತ್ತದೆ?
5. ಏಕೆ ಸಟ್ಟಾ ವ್ಯಾಪಾರದ ಹಣದ ಬೇಡಿಕೆ ಮತ್ತು ಬಡ್ಡಿಯ ದರದ ನಡುವೆ ವಿಲೋಮ ಸಂಬಂಧವಿದೆ?
6. ದ್ರವ್ಯತಾ ಬಲೆ ಎಂದರೇನು?
7. ಭಾರತದಲ್ಲಿ ಹಣದ ಪೂರೈಕೆಯ ಪರ್ಯಾಯ ವ್ಯಾಖ್ಯೆಗಳು ಯಾವುವು?
8. ಶಾಸನ ಬದ್ಧ ಹಣ ಎಂದರೇನು? ಫಿಯೆಟ್ ಹಣ ಎಂದರೇನು?
9. ಅಧಿಕ ಶಕ್ತಿಯ ಹಣ ಎಂದರೇನು?
10. ವಾಣಿಜ್ಯ ಬ್ಯಾಂಕಿನ ಕಾರ್ಯಗಳನ್ನು ವಿವರಿಸಿ

11. ಹಣದ ಗುಣಕ ಎಂದರೇನು? ಹೇಗೆ ಅದರ ಮೌಲ್ಯವನ್ನು ನೀವು ನಿರ್ಧರಿಸುವಿರಿ? ಯಾವ ಅನುಪಾತಗಳು ಹಣದ ಗುಣಕದ ಮೌಲ್ಯವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ?
12. RBI ನ ಹಣಕಾಸು ನೀತಿಯ ಸಾಧನಗಳಾವುವು? ಹೇಗೆ RBI ಹಣದ ಪೂರೈಕೆಯಲ್ಲಿ ಬಹಿರ್ಜಾತ ಆಘಾತಗಳ ವಿರುದ್ಧ ಸ್ಥಿರತೆಯನ್ನು ತರುತ್ತದೆ?
13. ಅರ್ಥವ್ಯವಸ್ಥೆಯಲ್ಲಿ ವಾಣಿಜ್ಯ ಬ್ಯಾಂಕು 'ಹಣದ ನಿರ್ಮಾತೃ' ಎನ್ನುವುದನ್ನು ನೀವು ಪರಿಗಣಿಸುತ್ತೀರಾ?
14. 'ಅಂತಿಮ ಋಣದಾತ'ನಾಗಿ RBI ನ ಪಾತ್ರವನ್ನು ಏನೆಂದು ಅರ್ಥೈಸುವಿರಿ?

## ಸೂಚಿತ ಅಧ್ಯಯನಗಳು *Suggested Readings*

1. Dornbusch, R. and S. Fischer. 1990. Macroeconomics, (fifth edition) pages 345 -427, McGraw Hill, Paris.
2. Branson, W. H., 1992. Macroeconomic Theory and Policy, (second edition), Pages 243 – 280, Harper Collins Publishers India Pvt. Ltd., New Delhi.
3. Sikdar, S., 2006. Principles of Macroeconomics, pages 77 – 89, Oxford University Press, New Delhi.





ಉಪಭಾಗ *Appendix* 3.1

### The Sum of an Infinite Geometric Series

We want to find out the sum of an infinite geometric series of the following form

$S = a + a.r + a.r2 + a.r3 + \cdots + a.rn \cdots \infty$

where a and r are real numbers and $0 < r < 1$. To compute the sum, multiply the above equation by r to obtain

$r.S = a.r + a.r2 + a.r3 + \cdots + a.r\ n + 1 \cdots \infty$

Subtract the second equation from the first to get

$$S - r.\ S = a$$

$$\text{or, } (1 - r)S = a$$

Which yields

$$S = \frac{a}{1 - r}$$

In the example used for the derivation of the money multiplier, a = 1 and r = 0.4. Hence the value of the infinite series is

$$\frac{1}{1 - 0.4} = \frac{5}{3}$$

**Money Supply in India**

**Table 3.5: Change in M1 and M3 Over Time**

| Year | M1 | M3 |
|---|---|---|
| 1999-00 | 3417.96 | 11241.74 |
| 2000-01 | 3794.33 | 13132.04 |
| 2001-02 | 4228.24 | 14983.36 |
| 2002-03 | 4735.58 | 17179.6 |
| 2003-04 | 5786.94 | 20056.54 |
| 2004-05 | 6497.66 | 22456.53 |
| 2005-06 | 8263.89 | 27194.93 |
| 2006-07 | 9679.25 | 33100.38 |
| 2007-08 | 11558.10 | 40178.55 |
| 2008-09 | 12596.71 | 47947.75 |
| 2009-10 | 14893.68 | 56026.98 |
| 2010-11 | 16383.45 | 65041.16 |
| 2011-12 | 17373.94 | 73848.31 |
| 2012-13 | 18975.26 | 83898.19 |
| 2013-14 | 20597.62 | 95173.86 |
| 2014-15 | 22924.04 | 105501.68 |
| 2015-16 | 26105.67 | 116543.39 |

**Source:** *Handbook of statistics on Indian Economy, Reserve Bank of India 2015-16*

The difference in values between the two columns is attributable to the time deposits held by commercial banks.

Changes in the Composition of the Sources of Monetary Base Over Time components of Money Stock.

**Table 3.6: Sources of Changes in the Monetary Base (In Billion)**

| Year | Currency in Circulation | Cash with banks | Currency with the public (2-3) | Other Deposit with the RBI | Banker's Deposit with the RBI |
|---|---|---|---|---|---|
| 1981-82 | 154.11 | 9.37 | 144.74 | 1.68 | 54.19 |
| 1991-92 | 637.38 | 26.40 | 610.98 | 8.85 | 348.82 |
| 2001-02 | 2509.74 | 101.79 | 2407.94 | 28.31 | 841.47 |
| 2004-05 | 3686.61 | 123.47 | 3563.14 | 64.54 | 1139.96 |
| 2005-06 | 4295.78 | 174.54 | 4121.24 | 68.43 | 1355.11 |
| 2006-07 | 5040.99 | 212.44 | 4828.54 | 74.67 | 1972.95 |
| 2007-08 | 5908.01 | 223.90 | 5684.10 | 90.27 | 3284.47 |
| 2008-09 | 6911.53 | 257.03 | 6654.50 | 55.33 | 2912.75 |
| 2009-10 | 7995.49 | 320.56 | 7674.92 | 38.06 | 3522.99 |
| 2010-11 | 9496.59 | 378.23 | 9118.36 | 36.53 | 4235.09 |
| 2011-12 | 10672.30 | 435.60 | 10236.70 | 28.22 | 3562.91 |
| 2012-13 | 11909.75 | 499.14 | 11410.61 | 32.40 | 3206.71 |
| 2013-14 | 13010.75 | 552.55 | 12458.19 | 19.65 | 4297.03 |
| 2014-15 | 14483.12 | 621.31 | 13861.82 | 145.90 | 4655.61 |
| 2015-16(P) | 16634.63 | 653.68 | 15980.95 | 154.51 | 5018.26 |

**Source:** *Handbook of Statistics on Indian Economy, Reserve Bank of India, 2015-16*

❖ ❖ ❖ ❖

## ಅಧ್ಯಾಯ 4

# ವರಮಾನದ ನಿರ್ಧಾರ

# *Income Determination*



ಇಲ್ಲಿಯವರೆಗೆ ನಾವು ರಾಷ್ಟ್ರೀಯ ವರಮಾನ, ಬೆಲೆಯ ಮಟ್ಟ, ಬಡ್ಡಿದರ ಇತ್ಯಾದಿಗಳ ಬಗ್ಗೆ ಅವುಗಳ ಮೌಲ್ಯಗಳ ಮೇಲೆ ಪ್ರಭಾವ ಬೀರುವ ಶಕ್ತಿಗಳ ಪರಿಶೀಲನೆ ನಡೆಸದೆ ತಾತ್ಪೂರ್ತಿಕ ರೀತಿಯಲ್ಲಿ ಅಧ್ಯಯನ ನಡೆಸಿದ್ದೇವೆ. ಈ ಚಲಕಗಳ ಮೌಲ್ಯಗಳನ್ನು ನಿರ್ಧರಿಸುವ ಪ್ರಕ್ರಿಯೆಗಳನ್ನು ವರ್ಣಿಸುವ ಸಾಮರ್ಥ್ಯವುಳ್ಳ ಮಾದರಿಗಳೆಂದು ಕರೆಯಲಾಗುವ ಸೈದ್ಧಾಂತಿಕ ಪರಿಕರಗಳನ್ನು ಅಭಿವೃದ್ಧಿಪಡಿಸುವುದು ಸಮಗ್ರ ಅರ್ಥಶಾಸ್ತ್ರದ ಮುಖ್ಯ ಉದ್ದೇಶವಾಗಿದೆ. ಈ ಮಾದರಿಗಳು, ಮಂದಗತಿಯ ಬೆಳವಣಿಗೆ ಅಥವಾ ಅರ್ಥವ್ಯವಸ್ಥೆಯಲ್ಲಿನ ಹಿಂಜರಿಕೆಗಳ ಅವಧಿಗಳು ಅಥವಾ ಬೆಲೆಯ ಮಟ್ಟದಲ್ಲಿನ ಹೆಚ್ಚಳ ಅಥವಾ ನಿರುದ್ಯೋಗದಲ್ಲಾಗುವ ಹೆಚ್ಚಳಗಳಿಗೆ ಯಾವ ಅಂಶಗಳು ಕಾರಣವಾಗುತ್ತವೆ ಎಂಬ ಪ್ರಶ್ನೆಗಳಿಗೆ ಸೈದ್ಧಾಂತಿಕವಾದ ವಿವರಣೆಯನ್ನು ನೀಡುವ ಪ್ರಯತ್ನವನ್ನು ಮಾಡುತ್ತವೆ. ಏಕಕಾಲದಲ್ಲಿ ಎಲ್ಲಾ ಚಲಕಗಳನ್ನು ಗಣನೆಗೆ ತೆಗೆದುಕೊಳ್ಳುವುದು ಕಷ್ಟ. ಆದ್ದರಿಂದ ಒಂದು ನಿರ್ದಿಷ್ಟ ಚಲಕದ ಮೌಲ್ಯದ ನಿರ್ಧಾರದ ಬಗ್ಗೆ ಕೇಂದ್ರೀಕರಿಸುವಾಗ ನಾವು ಇತರ ಎಲ್ಲಾ ಚಲಕಗಳ ಮೌಲ್ಯಗಳನ್ನು ಸ್ಥಿರವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಹೆಚ್ಚು ಕಡಿಮೆ ಎಲ್ಲಾ ಸೈದ್ಧಾಂತಿಕ ಅಭ್ಯಾಸಗಳಲ್ಲಿ ಇದೊಂದು ಶೈಲಿಯಾಗಿದೆ ಮತ್ತು ಇದನ್ನು 'ಸೆಟರೀಸ್ ಪೆರಿಬಸ್' ಕಲ್ಪನೆ ಎನ್ನುತ್ತಾರೆ. ಇದು ಅಕ್ಷರಶ: 'ಇತರ ಅಂಶಗಳು ಸಮವಾಗಿರುತ್ತವೆ '(ಸ್ಥಿರವಾಗಿರುತ್ತದೆ) ಎಂಬ ಅರ್ಥವನ್ನು ನೀಡುತ್ತದೆ. ನೀವು ಈ ಕಾರ್ಯವಿಧಾನವನ್ನು ಈ ಕೆಳಗಿನಂತೆ ಆಲೋಚಿಸಬಹುದು. ಎರಡು ಸಮೀಕರಣಗಳಿಂದ x ಮತ್ತು y ಎಂಬ ಎರಡು ಚಲಕಗಳ ಮೌಲ್ಯಗಳನ್ನು ಕಂಡುಹಿಡಿಯಲು ಮೊದಲು ನಾವು ಒಂದು ಸಮೀಕರಣದಿಂದ ಒಂದು ಚಲಕದ ಮೌಲ್ಯವನ್ನು ಉದಾಹರಣೆಗೆ x ನ ಮೌಲ್ಯವನ್ನು y ರೂಪದಲ್ಲಿ ಕಂಡುಹಿಡಿದು ಅನಂತರ ಈ ಮೌಲ್ಯವನ್ನು ಮತ್ತೊಂದು ಸಮೀಕರಣದಲ್ಲಿ ಪ್ರತಿನಿಧಿಸಿ ಸಂಪೂರ್ಣ ಪರಿಹಾರವನ್ನು ಪಡೆಯುತ್ತೇವೆ. ಸಮಗ್ರ ಆರ್ಥಿಕ ವ್ಯವಸ್ಥೆಯ ವಿಶ್ಲೇಷಣೆಯಲ್ಲಿ ಇದೇ ವಿಧಾನವನ್ನು ಅಳವಡಿಸುತ್ತೇವೆ.

ಈ ಅಧ್ಯಾಯದಲ್ಲಿ ನಾವು ಆರ್ಥಿಕತೆಯಲ್ಲಿ ಅಂತಿಮ ಸರಕುಗಳ ಸ್ಥಿರ ಬೆಲೆಗಳು ಮತ್ತು ಸ್ಥಿರ ಬಡ್ಡಿ ದರಗಳ ಊಹೆಯೊಂದಿಗೆ ರಾಷ್ಟ್ರೀಯ ವರಮಾನದ ನಿರ್ಧಾರವನ್ನು ಅಭ್ಯಸಿಸುತ್ತೇವೆ.

## 4.1 ಯೋಜಿತ ಮತ್ತು ಯೋಜನಾರಹಿತ *Ex Ante and Ex Post*

ನಾವು ರಾಷ್ಟ್ರೀಯ ವರಮಾನದ ಲೆಕ್ಕಾಚಾರದ ಅಧ್ಯಾಯದಲ್ಲಿ ಆರ್ಥಿಕತೆಯೊಂದರ (GDP) ಅನುಭೋಗ, ಹೂಡಿಕೆ ಅಥವಾ ಅಂತಿಮ ಸರಕು ಸೇವೆಗಳ ಒಟ್ಟು ಉತ್ಪಾದನೆ ಮೊದಲಾದ ಪರಿಕಲ್ಪನೆಗಳ ಬಗ್ಗೆ ತಿಳಿದಿದ್ದೇವೆ. ಈ ಪರಿಕಲ್ಪನೆಗಳು ಬೇರೆ ಬೇರೆ ಅರ್ಥಗಳನ್ನು ಹೊಂದಿವೆ. ಅವುಗಳನ್ನು ಎರಡನೇ ಅಧ್ಯಾಯದಲ್ಲಿ ಲೆಕ್ಕಾಚಾರದ ಅರ್ಥದಲ್ಲಿ ಬಳಸಲಾಗಿದೆ. ಈ ಪರಿಕಲ್ಪನೆಗಳ ನೈಜ ಮೌಲ್ಯಗಳನ್ನು ಒಂದು ನಿರ್ದಿಷ್ಟ ವರ್ಷದಲ್ಲಿ ಆರ್ಥಿಕತೆಯೊಳಗಿನ ಚಟುವಟಿಕೆಗಳಿಂದ ಮಾಪನ ಮಾಡಿ ಸೂಚಿಸಲಾಗಿದೆ. ನಾವು ಈ ಬಾಬ್ತುಗಳ ನೈಜ ಅಥವಾ ಲೆಕ್ಕಾಚಾರ ಮಾಡಲಾದ ಮೌಲ್ಯಗಳನ್ನು **ಯೋಜನಾರಹಿತ** ಮಾಪನಗಳೆಂದು ಕರೆಯುತ್ತೇವೆ.

ಆದಾಗ್ಯೂ ಈ ಪದಗಳನ್ನು ಭಿನ್ನ ಅರ್ಥದಲ್ಲಿ ಬಳಸಲು ಸಾಧ್ಯವಿದೆ. ಅನುಭೋಗವು ಒಂದು ನಿರ್ದಿಷ್ಟ ವರ್ಷದಲ್ಲಿ ಜನರು ವಾಸ್ತವವಾಗಿ ಏನನ್ನು ಅನುಭೋಗಿಸಿದ್ದಾರೆ ಎಂಬುದನ್ನು ಸೂಚಿಸದೆ ಅದೇ ವರ್ಷದಲ್ಲಿ ಅವರು ಏನನ್ನು ಅನುಭೋಗಿಸಲು ಯೋಜಿಸಿದ್ದರು ಎಂಬುದನ್ನು ಸೂಚಿಸುತ್ತದೆ. ಅದರಂತೆ ಹೂಡಿಕೆಯು ಉತ್ಪಾದಕರು

ಅವರ ದಾಸ್ತಾನಿಗೆ ಎಷ್ಟು ಪ್ರಮಾಣವನ್ನು ಸೇರಿಸಲು ಯೋಜಿಸುತ್ತಾರೆ ಎಂಬುದನ್ನು ಸೂಚಿಸುತ್ತದೆ. ಆದರೆ ಅಂತಿಮವಾಗಿ ಈ ಹೂಡಿಕೆಯ ಪ್ರಮಾಣವು ಭಿನ್ನವಾಗಿರಬಹುದು. ಉದಾಹರಣೆಗೆ ಒಬ್ಬ ಉತ್ಪಾದಕಳು ವರ್ಷದ ಕೊನೆಗೆ ಆಕೆಯ ದಾಸ್ತಾನಿಗೆ ₹100 ರ ಮೌಲ್ಯದ ಸರಕುಗಳನ್ನು ಸೇರಿಸಲು ಯೋಜಿಸಿರುತ್ತಾಳೆ ಎಂದು ಭಾವಿಸೋಣ. ಆಗ ಆ ವರ್ಷದ ಆಕೆಯ ಯೋಜಿತ ಹೂಡಿಕೆಯು ₹100 ಆಗಿರುತ್ತದೆ. ಆದಾಗ್ಯೂ ಮಾರುಕಟ್ಟೆಯಲ್ಲಿ ಆಕೆಯ ಸರಕುಗಳಿಗೆ ಅನಿರೀಕ್ಷಿತವಾಗಿ ಬೇಡಿಕೆ ಏರಿಕೆಯಾಗಿ ಮಾರಾಟವು ಆಕೆ ಯೋಜಿಸಿದ ಪ್ರಮಾಣಕ್ಕಿಂತ ಹೆಚ್ಚಾಗುತ್ತದೆ. ಈ ಹೆಚ್ಚುವರಿ ಬೇಡಿಕೆಯನ್ನು ಪೂರೈಸಲು ₹ಮೂವತ್ತರಷ್ಟು ಮೌಲ್ಯದ ಸರಕುಗಳನ್ನು ಆಕೆಯ ದಾಸ್ತಾನಿನಿಂದ ಮಾರಾಟ ಮಾಡಬೇಕಾಗುತ್ತದೆ. ಆದುದರಿಂದ ವರ್ಷದ ಕೊನೆಯ ವೇಳೆಗೆ ಆಕೆಯ ದಾಸ್ತಾನು ₹ ಎಪ್ಪತ್ತರಷ್ಟು ಮಾತ್ರ ಹೆಚ್ಚಾಗುತದ್ತೆ(100–30). ಆಕೆಯ ಯೋಜಿತ ಹೂಡಿಕೆಯು ₹ 100. ಆದರೆ ವಾಸ್ತವ ಅಥವಾ ಯೋಜನಾರಹಿತ ಹೂಡಿಕೆಯು ₹ 70 ಮಾತ್ರ ಆಗಿರುತ್ತದೆ. ಚಲಕಗಳ ಯೋಜಿಸಿದ ಮೌಲ್ಯಗಳನ್ನು– ಅನುಭೋಗ, ಹೂಡಿಕೆ ಅಥವಾ ಅಂತಿಮ ಸರಕುಗಳ ಉತ್ಪನ್ನ –ಅವುಗಳ **ಯೋಜಿತ** ಮಾಪನಗಳು ಎಂದು ನಾವು ಕರೆಯುತ್ತೇವೆ.

ಆರ್ಥಿಕತೆಯ ಸೈದ್ಧಾಂತಿಕ ಮಾದರಿಯಲ್ಲಿ ಈ ಚಲಕಗಳ ಯೋಜಿತ ಮೌಲ್ಯಗಳು ನಮ್ಮ ಪ್ರಾಥಮಿಕ ಕಾಳಜಿಯಾಗಬೇಕು. ಯಾರಾದರೂ ಅಂತಿಮ ಸರಕುಗಳ ಉತ್ಪಾದನೆಯ ಸಮತೋಲನ ಮೌಲ್ಯವನ್ನು ಅಥವಾ *GDP* ಯನ್ನು ಮುಂಚಿತವಾಗಿ ತಿಳಿಯಲು ಬಯಸಿದರೆ, ಯಾವ ಪ್ರಮಾಣದಲ್ಲಿ ಜನರು ಅಂತಿಮ ಸರಕುಗಳ ಬೇಡಿಕೆ ಮತ್ತು ಪೂರೈಕೆಗಳಿಗೆ ಯೋಜಿಸುತ್ತಾರೆ ಎಂಬುದನ್ನು ತಿಳಿಯುವುದು ಮುಖ್ಯವಾಗುತ್ತದೆ. ಆದುದರಿಂದ ಅನುಭೋಗ, ಹೂಡಿಕೆ ಅಥವಾ ಆರ್ಥಿಕತೆಯ ಸಮಗ್ರ ಉತ್ಪನ್ನಗಳ ಯೋಜಿತ ಮೌಲ್ಯಗಳ ನಿರ್ಧಾರಕಗಳನ್ನು ನಾವು ತಿಳಿದುಕೊಳ್ಳಬೇಕು.

**ಯೋಜಿತ ಅನುಭೋಗ *Ex Ante consumption*:** ಯೋಜಿತ ಅನುಭೋಗವು ಏನನ್ನು ಅವಲಂಬಿಸಿದೆ? ಜನರು ಆದಾಯದ ಒಂದು ಭಾಗವನ್ನು ಅನುಭೋಗಕ್ಕೆ ವೆಚ್ಚಮಾಡಿ ಉಳಿದ ಭಾಗವನ್ನು ಉಳಿತಾಯ ಮಾಡುತ್ತಾರೆ. ನಿಮ್ಮ ಆದಾಯದಲ್ಲಿ ನೂರು ರೂಪಾಯಿ ಹೆಚ್ಚಳವಾಗಿದೆ ಎಂದು ಭಾವಿಸೋಣ, ಈ ಹೆಚ್ಚುವರಿಯಾದ ಎಲ್ಲಾ ಆದಾಯವನ್ನು ನೀವು ಖರ್ಚು ಮಾಡದೆ, ಅದರ ಒಂದು ಭಾಗವನ್ನು ಅಂದರೆ ಶೇ.20ನ್ನು, ಆದಾಯಗಳಿಗೆ ನಿಂತು ಹೋದ ಅವಧಿಗೆ ಉಳಿತಾಯದ ರಕ್ಷಣಾ ಕವಚವನ್ನು ನಿರ್ಮಿಸಲು ಅಥವಾ ಭವಿಷ್ಯದ ಬೃಹತ್ ಮಟ್ಟದ ಖರ್ಚುಗಳನ್ನು ಭರಿಸಲು ಉಳಿತಾಯ ಮಾಡುವಿರಿ. ವಿಭಿನ್ನ ಜನರು ಅವರ ಹೆಚ್ಚುವರಿ ಆದಾಯದ ವಿಭಿನ್ನ ಭಾಗಗಳನ್ನು (ಶ್ರೀಮಂತರು ಸಾಮಾನ್ಯವಾಗಿ ಬಡವರಿಗಿಂತ ಹೆಚ್ಚಿನ ಪ್ರಮಾಣದ ಆದಾಯದ ಭಾಗವನ್ನು) ಉಳಿತಾಯ ಮಾಡಲು ಬಯಸುತ್ತಾರೆ. ನಾವು ಇವುಗಳ ಸರಾಸರಿಯನ್ನು ತೆಗೆದುಕೊಂಡರೆ ಜನರು ಒಂದು ಇಡೀ ಅರ್ಥವ್ಯವಸ್ಥೆಯ ಹೆಚ್ಚುವರಿ ಆದಾಯದ ಎಷ್ಟು ಭಾಗವನ್ನು ಉಳಿತಾಯ ಮಾಡಲು ಬಯಸುತ್ತಾರೆ ಎಂಬುದರ ಚಿತ್ರಣ ನಮಗೆ ದೊರಕುತ್ತದೆ. ನಾವು ಈ ಭಾಗವನ್ನು **ಸೀಮಾಂತ ಉಳಿತಾಯದ ಪ್ರವೃತ್ತಿ (*mps*)** ಎಂದು ಕರೆಯುತ್ತೇವೆ. ಅದು ಒಂದು ಅರ್ಥವ್ಯವಸ್ಥೆಯಲ್ಲಿನ ಒಟ್ಟು ಹೆಚ್ಚುವರಿ ಯೋಜಿತ ಉಳಿತಾಯ ಮತ್ತು ಒಟ್ಟು ಹೆಚ್ಚುವರಿ ಆದಾಯದ ಅನುಪಾತವನ್ನು ನೀಡುತ್ತದೆ. ಅನುಭೋಗವು ಉಳಿತಾಯಕ್ಕೆ ಪೂರಕವಾಗಿರುವುದರಿಂದ (ಆರ್ಥಿಕತೆಯ ಹೆಚ್ಚುವರಿ ಆದಾಯವನ್ನು ಜನರು ಹೆಚ್ಚುವರಿ ಉಳಿತಾಯಕ್ಕಾಗಿ ಅಥವಾ ಹೆಚ್ಚುವರಿ ಅನುಭೋಗಕ್ಕಾಗಿ ಉಪಯೋಗಿಸುತ್ತಾರೆ) ನಾವು 1ರಿಂದ *mps* ನ್ನು ಕಳೆದರೆ. **ಸೀಮಾಂತ ಅನುಭೋಗದ ಪ್ರವೃತ್ತಿ (*mpc*)** ಯನ್ನು ಪಡೆಯುತ್ತೇವೆ. ಇದು ಜನರು ಅನುಭೋಗಕ್ಕಾಗಿ ವ್ಯಯಿಸಿದ ಹೆಚ್ಚುವರಿ ಆದಾಯದ ಭಾಗವಾಗಿರುತ್ತದೆ. ಒಂದು ಆರ್ಥಿಕತೆಯ *mpc* ಯು '$c$' ಆಗಿದ್ದು ಅಲ್ಲಿ $0 < c < 1$ ಆಗಿರುತ್ತದೆ. ಆರ್ಥಿಕತೆಯ ಒಟ್ಟು ಆದಾಯವು 0 ದಿಂದ Y ಗೆ ಹೆಚ್ಚಾದರೆ, ಅರ್ಥಿಕತೆಯ ಒಟ್ಟು ಅನುಭೋಗವು ಈ ರೀತಿ ಇರಬೇಕಾಗುತ್ತದೆ.

$$C = c(Y - 0) = c \, .Y \, .$$

ಆದರೆ ಅದು ನಿಖರವಾಗಿ ಮೇಲಿನ ಸಮೀಕರಣದಂತೆ ಆಗುವುದಿಲ್ಲ. ನಾವು ಕೆಲವೊಂದು ಸಂಗತಿಗಳನ್ನು ಇಲ್ಲಿ ಮರೆತಿದ್ದೇವೆ. ಆರ್ಥಿಕತೆಯ ಆದಾಯವು ಒಂದು ನಿರ್ದಿಷ್ಟ ವರ್ಷದಲ್ಲಿ ಶೂನ್ಯವಾದರೆ, ಇಡೀ ವರ್ಷದಲ್ಲಿ ಆ ಆರ್ಥಿಕತೆಯು ಹಸಿವಿನಿಂದ ಬಳಲಬೇಕೆಂದು ಮೇಲಿನ ಸಮೀಕರಣ ತಿಳಿಸುತ್ತದೆ. ಅದು ಪ್ರಾಯಶ: ಅತಿರೇಕದ ಸಂಗತಿಯಾಗಿದೆ. ನಿರ್ದಿಷ್ಟ ವರ್ಷದಲ್ಲಿ ನಿಮ್ಮ ಆದಾಯವು ಶೂನ್ಯವಾಗಿದ್ದರೆ, ನೀವು





ಜೀವಿಸಲು ಅಗತ್ಯವಿರುವ ಕನಿಷ್ಠ ಅನುಭೋಗಿ ಸರಕುಗಳನ್ನು ಖರೀದಿಸಲು ನಿಮ್ಮ ಹಳೆಯ ಉಳಿತಾಯವನ್ನು ಉಪಯೋಗಿಸುತ್ತೀರಿ. ಆದುದರಿಂದ ನಾವು ಆರ್ಥಿಕತೆಯ ಕನಿಷ್ಠ ಅಥವಾ ಜೀವನಾವಶ್ಯಕಮಟ್ಟದ ಅನುಭೋಗವನ್ನು ಮೇಲಿನ ಸಮೀಕರಣಕ್ಕೆ ಸೇರಿಸಬೇಕಾಗುತ್ತದೆ.

ಆಗ ಸಮೀಕರಣವು ಈ ಕೆಳಗಿನಂತೆ ಆಗುತ್ತದೆ.

$$C = \overline{C} + c.Y \qquad (4.1)$$

ಇಲ್ಲಿ $\overline{C} > 0$ ಕನಿಷ್ಠ ಅನುಭೋಗದ ಮಟ್ಟವಾಗಿದೆ ಹಾಗೂ ಅದು ಒಂದು ನೀಡಲಾದ ಅಥವಾ ಬಾಹ್ಯ ಚಲಕವಾಗಿರುವುದರಿಂದ ಅದನ್ನು ನಮ್ಮ ಮಾದರಿಯಲ್ಲಿ ಸ್ಥಿರಾಂಕ ಎಂದು ಪರಿಗಣಿಸುತ್ತೇವೆ. ಆರ್ಥಿಕತೆಯ ಆದಾಯವು ಶೂನ್ಯಕ್ಕಿಂತ ಹೆಚ್ಚಾದರೆ, ಆರ್ಥಿಕತೆಯು ಅನುಭೋಗದ ಪ್ರಮಾಣವನ್ನು ಕನಿಷ್ಠ ಮಟ್ಟಕ್ಕಿಂತ ಹೆಚ್ಚಿಸಲು '*c*' ಪ್ರಮಾಣದಷ್ಟು ಹೆಚ್ಚುವರಿ ಆದಾಯವನ್ನು ಉಪಯೋಗಿಸುತ್ತದೆ ಎಂದು ಸಮೀಕರಣವು ತಿಳಿಸುತ್ತದೆ.

**ಯೋಜಿತ ಹೂಡಿಕೆ *Ex Ante Investment* :** ಭೌತಿಕ ಬಂಡವಾಳ ಸರಕುಗಳ ಸಂಗ್ರಹಣೆಗೆ ಆಗುವ ಸೇರ್ಪಡೆಯನ್ನು (ಯಂತ್ರಗಳು ಕಟ್ಟಡಗಳು, ರಸ್ತೆ ಇತ್ಯಾದಿಗಳು–ಆರ್ಥಿಕತೆಯ ಭವಿಷ್ಯದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವಂತಹ ಸಂಗತಿಗಳು) ಮತ್ತು ಉತ್ಪಾದಕನೊಬ್ಬನ ದಾಸ್ತಾನಿನಲ್ಲಿ ಆಗುವ ಬದಲಾವಣೆಯನ್ನು (ಅಥವಾ ಅಂತಿಮ ಸರಕುಗಳ ದಾಸ್ತಾನು)ಹೂಡಿಕೆ ಎಂದು ವ್ಯಾಖ್ಯಾನಿಸಬಹುದು. ಹೂಡಿಕೆಯ ಸರಕುಗಳು (ಯಂತ್ರಗಳು ಮುಂತಾದ) ಅಂತಿಮ ಸರಕುಗಳ ಭಾಗಗಳಾಗಿವೆ ಎಂಬುದನ್ನು ಗಮನಿಸಬೇಕು – ಅವು ಕಚ್ಚಾ ವಸ್ತುಗಳಂತಹ ಮಧ್ಯವರ್ತಿ ಸರಕುಗಳಲ್ಲ. ಆರ್ಥಿಕತೆಯೊಂದರಲ್ಲಿ ಒಂದು ನಿರ್ದಿಷ್ಟ ವರ್ಷದಲ್ಲಿ ಉತ್ಪಾದಿಸಿದ ಯಂತ್ರಗಳು ಇತರ ಸರಕುಗಳನ್ನು ಉತ್ಪಾದಿಸಲು ಅದೇ ವರ್ಷದಲ್ಲಿ ಮಾತ್ರ ಸರಕುಗಳನ್ನು ಉತ್ಪಾದಿಸಲು ಬಳಕೆಯಾಗದೆ ಅನೇಕ ವರ್ಷಗಳವರೆಗೆ ಸೇವೆಯನ್ನು ನೀಡುತ್ತವೆ.



ಹೊಸ ಯಂತ್ರವನ್ನು ಖರೀದಿಸಬೇಕೇ, ಬೇಡವೇ ಮೊದಲಾದ ಉತ್ಪಾದಕರ ಹೂಡಿಕೆಯ ನಿರ್ಧಾರಗಳು ಮಾರುಕಟ್ಟೆಯ ಬಡ್ಡಿದರವನ್ನು ಹೆಚ್ಚಾಗಿ ಅವಲಂಬಿಸಿದೆ. ಆದರೆ ನಾವು ಸರಳವಾಗಿ ಅರ್ಥಮಾಡಿಕೊಳ್ಳಲು ಉದ್ಯಮ ಘಟಕಗಳು ಪ್ರತೀ ವರ್ಷ ಒಂದೇ ಮೊತ್ತದ ಹೂಡಿಕೆಯನ್ನು ಮಾಡಲು ಬಯಸುತ್ತವೆ ಎಂದು ಊಹಿಸುತ್ತೇವೆ. ನಾವು ಯೋಜಿತ ಹೂಡಿಕೆಯ ಬೇಡಿಕೆಯನ್ನು ಈ ಕೆಳಗಿನಂತೆ ಬರೆಯಬಹುದು.

$$I = \overline{I} \qquad (4.2)$$

ಇಲ್ಲಿ I ಧನಾತ್ಮಕ ಸ್ಥಿರಾಂಕವಾಗಿದ್ದು ಇದು ಆರ್ಥಿಕತೆಯ ಒಂದು ನಿರ್ದಿಷ್ಟ ವರ್ಷದ ಸ್ವಾಯತ್ತ ಹೂಡಿಕೆಯನ್ನು (ಸ್ಥಿರ ಅಥವಾ ಬಾಹ್ಯ) ಪ್ರತಿನಿಧಿಸುತ್ತದೆ.

**ಅಂತಿಮ ಸರಕುಗಳ ಯೋಜಿತ ಸಮಗ್ರ ಬೇಡಿಕೆ (*Ex Ante Aggregate Demand for Final Goods*):** ಸರಕಾರವಿಲ್ಲದ ಆರ್ಥಿಕತೆಯೊಂದರಲ್ಲಿ ಅಂತಿಮ ಸರಕು ಸೇವೆಗಳ ಯೋಜಿತ ಸಮಗ್ರ ಬೇಡಿಕೆಯು ಆ ಅಂತಿಮ ಸರಕುಗಳ ಯೋಜಿತ ಅನುಭೋಗ ವೆಚ್ಚ ಮತ್ತು ಯೋಜಿತ ಹೂಡಿಕೆಯ ವೆಚ್ಚಗಳ ಒಟ್ಟು ಮೊತ್ತವಾಗಿದೆ. ಅಂದರೆ $AD = C + I$ ಆಗಿದೆ. C ಮತ್ತು I ಗಳ ಮೌಲ್ಯಗಳನ್ನು 4.1 ಮತ್ತು 4.2 ಸಮೀಕರಣಗಳಲ್ಲಿ ಪ್ರತಿನಿಧಿಸಿದಾಗ ಅಂತಿಮ ಸರಕುಗಳ ಸಮಗ್ರ ಬೇಡಿಕೆಯನ್ನು ಈ ಕೆಳಗಿನಂತೆ ಬರೆಯಬಹುದು.

$$AD = \overline{C} + \overline{I} + c.Y$$

ಅಂತಿಮ ಸರಕುಗಳ ಮಾರುಕಟ್ಟೆ ಸಮತೋಲನದಲ್ಲಿದ್ದರೆ ಮೇಲಿನ ಸಮೀಕರಣವನ್ನು ಈ ಕೆಳಗಿನಂತೆ ಬರೆಯಬಹುದು.

$$Y = \overline{C} + \overline{I} + c.Y$$

ಮೇಲಿನ ಸಮೀಕರಣದಲ್ಲಿ Y ಅಂತಿಮ ಸರಕುಗಳ ಯೋಜಿತ ಉತ್ಪನ್ನವಾಗಿದೆ. $\overline{C}$ ಮತ್ತು $\overline{I}$ ಎಂಬ ಸ್ವಾಯತ್ತ ಚಲಕಗಳನ್ನು ಸೇರಿಸುವ ಮೂಲಕ ಈ ಸಮೀಕರಣವನ್ನು ಮತ್ತಷ್ಟು ಸರಳೀಕರಿಸಿ ಈ ಕೆಳಗಿನಂತೆಬರೆಯಬಹುದು.

$$Y = \overline{A} + c.Y \qquad (4.3)$$

ಇಲ್ಲಿ $\overline{A} = \overline{C} + \overline{I}$ ಆರ್ಥಿಕತೆಯಲ್ಲಿನ ಒಟ್ಟು ಸ್ವಾಯತ್ತ ವೆಚ್ಚವಾಗಿದೆ. ವಾಸ್ತವವಾಗಿ ಸ್ವಾಯತ್ತ ವೆಚ್ಚದ ಈ ಎರಡು ಭಾಗಗಳು ಭಿನ್ನ ರೀತಿಯಲ್ಲಿ ವರ್ತಿಸುತ್ತವೆ. ಆರ್ಥಿಕತೆಯ ಜೀವನಾವಶ್ಯಕ (ಜೀವನಾಧಾರ) ಅನುಭೋಗ ಮಟ್ಟವನ್ನು ಪ್ರತಿನಿಧಿಸುವ $\overline{C}$ ಎಲ್ಲಾ ಕಾಲದಲ್ಲೂ ಹೆಚ್ಚು ಕಡಿಮೆ ಸ್ಥಿರವಾಗಿರುತ್ತದೆ ಆದರೆ $\overline{I}$ ಕಾಲದಿಂದ ಕಾಲಕ್ಕೆ ಏರಿಳತಗೊಳ್ಳುವುದನ್ನು ಗಮನಿಸುತ್ತೇವೆ.

ಇಲ್ಲಿ ಎಚ್ಚರವಹಿಸಬೇಕಾದ ಸಂಗತಿಯೊಂದಿದೆ. ಮೇಲಿನ ಸಮೀಕರಣದ ಎಡಭಾಗದಲ್ಲಿರುವ ಜ ಯೋಜಿತ ಉತ್ಪನ್ನ ಅಥವಾ ಅಂತಿಮ ಸರಕುಗಳ ಯೋಜಿತ ಪೂರೈಕೆಯನ್ನು ಪ್ರತಿನಿಧಿಸುತ್ತದೆ ಮತ್ತೊಂದು ಕಡೆ ಸಮೀಕರಣದ ಬಲಭಾಗದಲ್ಲಿ ಬಳಸಲಾದ Y ಆರ್ಥಿಕತೆಯ ಅಂತಿಮ ಸರಕುಗಳ ಯೋಜಿತ ಸಮಗ್ರ ಬೇಡಿಕೆಯನ್ನು ಪ್ರತಿನಿಧಿಸುತ್ತದೆ. ಅಂತಿಮ ಸರಕುಗಳ ಮಾರುಕಟ್ಟೆ ಮತ್ತು ಆ ಮೂಲಕ ಆರ್ಥಿಕತೆಯು ಸಮತೋಲನದಲ್ಲಿದ್ದಾಗ ಮಾತ್ರ ಯೋಜಿತ ಪೂರೈಕೆಯು ಯೋಜಿತ ಬೇಡಿಕೆಗೆ ಸಮವಾಗುತ್ತದೆ. ಆದುದರಿಂದ ಆದುದರಿಂದ 4.3 ಸಮೀಕರಣವನ್ನು ಎರಡನೇ ಅಧ್ಯಾಯದ ಲೆಕ್ಕಾಚಾರದ ಅನನ್ಯತೆಯೊಂದಿಗೆ ತಪ್ಪು ಗ್ರಹಿಕೆ ಮಾಡಬಾರದು. ಆ ಸಮೀಕರಣವು ಒಟ್ಟು ಉತ್ಪನ್ನದ ಯೋಜನಾರಹಿತ ಮೌಲ್ಯವು ಆರ್ಥಿಕತೆಯ ಯೋಜನಾರಹಿತ ಅನುಭೋಗ ಮತ್ತು ಯೋಜನಾರಹಿತ ಹೂಡಿಕೆಗಳ ಒಟ್ಟು ಮೊತ್ತಕ್ಕೆ ಸಮವಾಗಿರಬೇಕೆಂದು ಹೇಳುತ್ತದೆ. ಒಂದು ನಿರ್ದಿಷ್ಟ ವರ್ಷದ ಅಂತಿಮ ಸರಕುಗಳ ಯೋಜನಾರಹಿತ ಬೇಡಿಕೆಯು ಉತ್ಪಾದಕರು ಯೋಜಿಸಿದ ಉತ್ಪನ್ನದ ಉತ್ಪಾದನೆಗಿಂತ ಕಡಿಮೆಯಾದರೆ 4.3 ರ ಸಮೀಕರಣವು ಅನ್ವಯವಾಗಲಾರದು. ಆಗ ಗೋದಾಮುಗಳಲ್ಲಿ ದಾಸ್ತಾನು ಹೆಚ್ಚಾಗುತ್ತಾ ಹೋಗಬಹುದು ಅದನ್ನು ಉದ್ದೇಶ ಪೂರ್ವಕವಲ್ಲದ ದಾಸ್ತಾನಿನ ಸಂಗ್ರಹಣೆ ಎಂದು ಪರಿಗಣಿಸಬಹುದು. ಅದು ಯೋಜಿತ ಅಥವಾ ಯೋಜನಾ ರಹಿತ ಹೂಡಿಕೆಯ ಭಾಗವಾಗಲಾರದು. ಆದರೆ ಅದು ಖಂಡಿತವಾಗಿ ವರ್ಷದ ಕೊನೆಗೆ ದಾಸ್ತಾನಿಗೆ ಆಗುವ ವಾಸ್ತವ ಸೇರ್ಪಡೆಯಗಿರುತ್ತದೆ ಅಥವಾ ಯೋಜನಾರಹಿತ ಹೂಡಿಕೆಯಾಗಿರುತ್ತದೆ. **ಹೀಗೆ ಲೆಕ್ಕಾಚಾರದ ಅನನ್ಯತೆಯ ಬಲಭಾಗದಲ್ಲಿ ಹೆಚ್ಚುವರಿ ಉತ್ಪನ್ನವನ್ನು ಯೋಜನಾರಹಿತ I, ನ ಉದ್ದೇಶ ಪೂರ್ವಕವಲ್ಲದ ದಾಸ್ತಾನಿನ ಶೇಖರಣೆಯಾಗಿ ತೋರಿಸುತ್ತೇವೆ. ಯೋಜಿತ Y ಯೋಜಿತ C + I ಗಳಿಗಿಂತ ದೊಡ್ಡದಾದರೂ ವಾಸ್ತವ Y ವಾಸ್ತವ C + I ಗಳಿಗೆ ಸಮವಾಗಿರುವುದು.**

ಈ ಹಂತದಲ್ಲಿ ಆರ್ಥಿಕತೆಯಲ್ಲಿ ಸರಕಾರವನ್ನು ಪರಿಚಯಿಸಬಹುದು. ಅಂತಿಮ ಸರಕು ಸೇವೆಗಳ ಸಮಗ್ರ ಬೇಡಿಕೆಯ ಮೇಲೆ ಪ್ರಭಾವಬೀರುವ ಸರಕಾರದ ಆರ್ಥಿಕ ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ತೆರಿಗೆ (T) ಮತ್ತು ಸರಕಾರದ ವೆಚ್ಚಗಳೆಂಬ (G) ಕೋಶೀಯ ಚಲಕಗಳನ್ನಾಗಿ ವಿಂಗಡಿಸಬಹುದು. ನಮ್ಮ ವಿಶ್ಲೇಷಣೆಯಲ್ಲಿ ಈ ಎರಡು ಚಲಕಗಳು ಸ್ವಾಯತ್ತ ಚಲಕಗಳಾಗಿವೆ. ಉದ್ಯಮ ಘಟಕಗಳು ಮತ್ತು ಕುಟುಂಬಗಳಂತೆ ಸರಕಾರವು ಅಂತಿಮ ಸರಕು ಮತ್ತು ಸೇವೆಗಳ ಮೇಲಿನ ವೆಚ್ಚ (G)ದ ಮೂಲಕ ಸಮಗ್ರ ಬೇಡಿಕೆಗೆ ಸೇರ್ಪಡೆಯನ್ನು ಮಾಡುತ್ತದೆ. ಅದಕ್ಕೆ ತದ್ವಿರುದ್ಧವಾಗಿ ಸರಕಾರ ವಿಧಿಸುವ ತೆರಿಗೆಗಳು ಕುಟುಂಬಗಳಿಂದ ಒಂದು ಭಾಗದ ಆದಾಯವನ್ನು ಕಸಿದುಕೊಳ್ಳುತ್ತವೆ. ಆದುದರಿಂದ ಜನರು ಖರ್ಚು ಮಾಡಬಹುದಾದ ಆದಾಯವು $Y_d = Y - T$ ಆಗುತ್ತದೆ. ಕುಟುಂಬಗಳು ಅನುಭೋಗದ ಉದ್ದೇಶಕ್ಕಾಗಿ ಈ ಆದಾಯದಲ್ಲಿ ಒಂದು ಭಾಗವನ್ನು ಮಾತ್ರ ಖರ್ಚು ಮಾಡುತ್ತವೆ. ಆದುದರಿಂದ ಸರಕಾರವನ್ನು ಸೇರಿಸಿಕೊಳ್ಳಲು ಈ ಕೆಳಗಿನಂತೆ (4.3) ಸಮೀಕರಣವನ್ನು ಪರಿಷ್ಕರಿಸಬೇಕಾಗುತ್ತದೆ.

$$Y = \overline{C} + \overline{I} + G + c(Y - T)$$

$\overline{C}$ ಅಥವಾ $\overline{I}$ ಯಂತೆ $G - c.T$ ಯು ಸ್ವಾಯತ್ತ ಚಲಕವಾದ $\overline{A}$ ಗೆ ಕೇವಲ ಸೇರ್ಪಡೆ ಆಗುತ್ತದೆ. ಅದು ವಿಶ್ಲೇಷಣೆಯನ್ನು ಯಾವುದೇ ಗುಣಾತ್ಮಕ ರೀತಿಯಲ್ಲಿ ಮಹತ್ತರವಾಗಿ ಬದಲಾಯಿಸುವುದಿಲ್ಲ. ನಾವು ವಿಶ್ಲೇಷಣೆಯನ್ನು ಸರಳಗೊಳಿಸಲು ಈ ಅಧ್ಯಾಯದ ಉಳಿದ ಭಾಗಕ್ಕೆ ಸರಕಾರಿ ವಲಯವನ್ನು ಉಪೇಕ್ಷಿಸೋಣ. ಒಂದು ಆರ್ಥಿಕತೆಯಲ್ಲಿ ಉತ್ಪಾದಿಸಿದ ಅಂತಿಮ ಸರಕು ಸೇವೆಗಳ ಒಟ್ಟು ಮೌಲ್ಯವು, GDP ಯು, ಸರಕಾರವು ಪರೋಕ್ಷ ತೆರಿಗೆಯನ್ನು ವಿಧಿಸದಿದ್ದರೂ ಮತ್ತು ಸಹಾಯ ಧನವನ್ನು ನೀಡದಿದ್ದರೂ ಅದು ರಾಷ್ಟ್ರೀಯ ವರಮಾನಕ್ಕೆ ಅನನ್ಯವಾಗಿ ಸಮಾನವಾಗಿರುತ್ತದೆ ಎಂಬುದನ್ನು ಗಮನಿಸಿರಿ. ಆದುದರಿಂದ ಇನ್ನು ಮುಂದೆ ಈ ಅಧ್ಯಾಯದ ಉಳಿದ ಭಾಗದುದ್ದಕ್ಕೂ Y ಯನ್ನು GDP ಅಥವಾ ರಾಷ್ಟ್ರೀಯ ವರಮಾನಗಳಿಗೆ ಅದಲು ಬದಲಾಗಿ ಉಪಯೋಗಿಸೋಣ.

## 4.2 ರೇಖೆಯೊಂದಿಗಿನ ಚಲನೆ ಮತ್ತು ರೇಖೆಯ ಪಲ್ಲಟ
### *Movement Along A Curve versus Shift Of A Curve*

ಆರ್ಥಿಕತೆಯ ಮಾದರಿಯನ್ನು ವಿಶ್ಲೇಷಿಸಲು ನಾವು ರೇಖಾಚಿತ್ರಗಳ ತಂತ್ರವನ್ನು ಉಪಯೋಗಿಸುತ್ತೇವೆ. ಆದುದರಿಂದ ಇಲ್ಲಿ ನಮಗೆ ರೇಖಾ ನಕ್ಷೆಯನ್ನು ಹೇಗೆ ಓದಬೇಕು ಎಂಬುದನ್ನು ಕಲಿಯುವುದು ಮುಖ್ಯವಾಗುತ್ತದೆ. ನಾವು $a$ ಮತ್ತು $b$ಗಳೆಂಬ ಎರಡು ಚಲಕಗಳನ್ನು ಸಮಾನಾಂತರ ಮತ್ತು ಲಂಬ ಅಕ್ಷಗಳಲ್ಲಿ ಜೋಡಿಸೋಣ. ಇದು $b = ma + \varepsilon$ ಎಂಬ ಸರಳರೇಖೆಯೊಂದರ ಸಮೀಕರಣವನ್ನು ಪ್ರತಿನಿಧಿಸುತ್ತದೆ. ಈ ಸಮೀಕರಣದಲ್ಲಿ $m > 0$ ಆಗಿದ್ದು ಇದನ್ನು ಸರಳರೇಖೆಯ ಇಳಿಜಾರು ಎಂದು ಕರೆಯುತ್ತೇವೆ ಹಾಗೂ $\varepsilon > 0$ ಆಗಿದ್ದು ಅದು ಲಂಬಾಕ್ಷದ (ಅಂದರೆ $b$) ಸ್ಥಿರಾಂಕವಾಗಿದೆ (ರೇಖಾಚಿತ್ರ 4.1). ಇಲ್ಲಿ $a$ ಚಲಕವು 1 ಘಟಕದಷ್ಟು ಹೆಚ್ಚಳವಾದಾಗ $b$ಯ ಮೌಲ್ಯವು $m$ ಘಟಕಗಳಷ್ಟು ಹೆಚ್ಚಳವಾಗುತ್ತದೆ. ಇವುಗಳನ್ನು ನಕ್ಷೆಯೊಂದಿಗಿನ ಚಲಕಗಳ ಚಲನೆಗಳೆಂದು ಕರೆಯುವರು.




**ರೇಖಾಚಿತ್ರ 4.1** ಧನಾತ್ಮಕ ಇಳಿಜಾರಿರುವ ಸರಳ ರೇಖೆಯ ಇಳಿಜಾರು ದುಪ್ಪಟ್ಟಾದಂತೆ ಮೇಲ್ಭಾಗಕ್ಕೆ ಚಲಿಸುತ್ತದೆ.

$\varepsilon$ ನ ಸ್ಥಿರ ಮೌಲ್ಯ ಎರಡಕ್ಕೆ ಸಮವಾಗಿದೆ ಎಂದು ಪರಿಗಣಿಸೋಣ. $m$ ಗೆ ಅನುಕ್ರಮವಾಗಿ ಎರಡು ಮೌಲ್ಯಗಳನ್ನು $m = 0.5$ , $m = 1$ ಎಂದು ನೀಡೋಣ. $m$ ನ ಈ ಮೌಲ್ಯಗಳಿಗೆ ಅನುಗುಣವಾಗಿ ನಾವು ಎರಡು ಸರಳರೇಖೆಗಳನ್ನು ಹೊಂದಿದ್ದೇವೆ. ಇಲ್ಲಿ ಒಂದು ರೇಖೆಗಿಂತ ಮತ್ತೊಂದು ರೇಖೆಯ ಇಳಿಜಾರು ಹೆಚ್ಚಾಗಿದೆ. $\varepsilon$ ಮತ್ತು $m$ ಅಂಶಗಳನ್ನು ರೇಖಾ ನಕ್ಷೆಯ ಪರಾಮಿತಿಗಳೆಂದು ಕರೆಯುತ್ತೇವೆ. ಅವು ಅಕ್ಷಗಳಲ್ಲಿ ಚಲಕಗಳಾಗಿ ಗೋಚರಿಸುವುದಿಲ್ಲ. ಆದರೆ ರೇಖಾ ನಕ್ಷೆಯ ಸ್ಥಾನವನ್ನು ನಿಯಂತ್ರಿಸುವಲ್ಲಿ ಅವು ಹಿನ್ನೆಲೆಯಲ್ಲಿ ಪ್ರಭಾವವನ್ನು ಬೀರುತ್ತದೆ. ಮೇಲಿನ ಉದಾಹರಣೆಯಲ್ಲಿ $m$ ನ ಮೌಲ್ಯ ಹೆಚ್ಚಾದಂತೆ ಸರಳರೇಖೆಯು ಮೇಲ್ಮುಖವಾಗಿ ಚಲಿಸುತ್ತದೆ. ಇದನ್ನು ರೇಖಾನಕ್ಷೆಯ **ಪರಾಮಿತಿ ಪಲ್ಲಟ** ಎನ್ನುವರು.

ಮೇಲಿನ ಸರಳರೇಖೆಯು $\varepsilon$ ಎಂಬ ಪರಾಮಿತಿಯ ಇನ್ನೊಂದು ಸ್ವರೂಪವನ್ನು ಹೊಂದಿರುವುದರಿಂದ ನಾವು ಈ ರೇಖೆಯ ಮತ್ತೊಂದು ರೀತಿಯ ಪರಾಮಿತಿ ಪಲ್ಲಟವನ್ನು ಗಮನಿಸಬಹುದು. ಇದಕ್ಕಾಗಿ $m$ ನ ಮೌಲ್ಯವು 0.5ರಲ್ಲಿ ಸ್ಥಿರವಾಗಿರಿಸಿ ಛೇದಕ ಅಂಶ $\varepsilon$ ಯ ಮೌಲ್ಯವನ್ನು 2 ರಿಂದ 3 ಕ್ಕೆ ಹೆಚ್ಚಿಸೋಣ. ಈಗ ಸರಳರೇಖೆಯು ಸಮಾನಾಂತರವಾಗಿ 4.2 ರ ರೇಖಾಚಿತ್ರದಲ್ಲಿ ತೋರಿಸಿದಂತೆ ಮೇಲ್ಭಾಗಕ್ಕೆ ಪಲ್ಲಟಗೊಳ್ಳುತ್ತದೆ. ನಾವೀಗ ಕೆಳಮುಖ ಮತ್ತು ಮೇಲ್ಮುಖ ಇಳಿಜಾರಿನ ಸರಳರೇಖೆಗಳನ್ನು ಪ್ರತಿನಿಧಿಸುವ ಈ ಕೆಳಗಿನ ಎರಡು ಸಮೀಕರಣಗಳನ್ನು ಗಮನಿಸೋಣ.




**ರೇಖಾಚಿತ್ರ 4.2** ಛೇದಕದ ಮೌಲ್ಯ ಹೆಚ್ಚಾದಂತೆ ಧನಾತ್ಮಕ ಇಳಿಜಾರಿರುವ ಸರಳರೇಖೆಯು ಮೇಲ್ಭಾಗಕ್ಕೆ ಸಮನಾಂತರವಾಗಿ ಪಲ್ಲಟಗೊಳ್ಳುತ್ತದೆ

$y = z - x$ ಮತ್ತು $y = I + x$ , $z \geq 0$

ಮೊದಲ ಸಮೀಕರಣದಲ್ಲಿ Z ಒಂದು ಛೇದಕ ಪರಾಮಿತಿಯಾಗಿ ಗೋಚರಿಸುತ್ತದೆ. ಆದುದರಿಂದ Z ನ ಮೌಲ್ಯವನ್ನು ಶೂನ್ಯದಿಂದ ಹೆಚ್ಚಿಸುತ್ತಾ ಹೋದಾಗ ರೇಖಾಚಿತ್ರ 4.3 ರಲ್ಲಿ ತೋರಿಸಿದಂತೆ ಮೊದಲ ಸರಳರೇಖೆ ಸಮಾನಾಂತರ ಮೇಲ್ಮುಖ ಪಲ್ಲಟಗಳನ್ನು ಹೊಂದುತ್ತದೆ. ಅದರ ಪರಿಣಾಮವಾಗಿ 2ನೇ ಸರಳರೇಖೆಯೊಂದಿಗೆ ಅದರ ಛೇದಿಸುವಿಕೆಯ ಬಿಂದುಗಳು ರೇಖಾಚಿತ್ರ 4.3 ರಲ್ಲಿ ತೋರಿಸಿದಂತೆ 2ನೇ ಸರಳ ರೇಖೆಯೊಂದಿಗೆ ಮೇಲ್ಮುಖವಾಗಿ ಚಲಿಸುತ್ತದೆ. ನಾವು $x$ನ ಸಮತೋಲನ ಮೌಲ್ಯಗಳು ಮತ್ತು $z$ ನ ನಡುವೆ ಸಂಬಂಧವನ್ನು ಕಂಡುಹಿಡಿಯಲು ಬಯಸಿದ್ದೇವೆ ಎಂದು ಭಾವಿಸೋಣ $x$ ಮತ್ತು $z$ ಚಲಕಗಳ ಮೌಲ್ಯಗಳನ್ನು ಕ್ರಮವಾಗಿ ತಲಾಕ್ಷ ಮತ್ತು ಲಂಬಾಕ್ಷಗಳಲ್ಲಿ ಪ್ರತಿನಿಧಿಸಿ ರೇಖಾಚಿತ್ರ 4.4 ರಲ್ಲಿ ಪ್ರತಿನಿಧಿಸಲಾಗಿದೆ. $(x^*_1,z_1)$ $(x^*_2,z_2)$ $(x^*_3,z_3)$ ಇತ್ಯಾದಿ ಬಿಂದುಗಳನ್ನು ಜೋಡಿಸುವುದರ ಮೂಲಕ ನಾವು ಇದನ್ನು ಪಡೆಯಬಹುದಾಗಿದೆ.




**ರೇಖಾಚಿತ್ರ 4.3.** $Z$ ನ ಪರಾಮಿತಿ ಪಲ್ಲಟ ಮತ್ತು $x$ ನ ಸಮತೋಲನ ಮೌಲ್ಯಗಳ ಬದಲಾವಣೆ

$(x,y)$ ಸಮತಲದಲ್ಲಿ $z$ ಅನ್ನು ಪರಾಮಿತಿಯಾಗಿ ಪರಿಗಣಿಸಿರುವುದನ್ನು ಗಮನಿಸಿ. ಆದರೆ $(x\ z)$ ಸಮತಲದಲ್ಲಿ $z$ ಅದರದ್ದೇ ಸ್ವಸಾಮರ್ಥ್ಯದಿಂದ ಚಲಕವಾಗಿದೆ. ನಾವು ಇಲ್ಲಿ ಮುಖ್ಯವಾಗಿ ಮಾಡಿಕೊಂಡ ವ್ಯವಸ್ಥೆಗಳೆಂದರೆ $x$ ಅನ್ನು ವಿಶ್ಲೇಷಿಸುವಲ್ಲಿ $z$ ನ್ನು ಸ್ಥಿರವಾಗಿಟ್ಟುಕೊಂಡಿದ್ದೇವೆ ಮತ್ತು ಎರಡನೇ ಸಮೀಕರಣದಲ್ಲಿ $y$ ಅನ್ನು ವಿಶ್ಲೇಷಿಸುವಾಗ $y$ ನ ಮೌಲ್ಯವನ್ನು $x$ ನ ರೂಪದಲ್ಲಿ ಪರಿಹರಿಸಿದ್ದೇವೆ. ಅನಂತರ $x$ ಮತ್ತು $z$ ನಡುವಿನ ಸಂಬಂಧವನ್ನು ಪಡೆಯಲು ಈ ಪರಿಹಾರವನ್ನು ಮೊದಲನೇ ಸಮೀಕರಣದಲ್ಲಿ ಅಳವಡಿಸಿದ್ದೇವೆ. ನಾವು ಈ ತಂತ್ರವನ್ನು ಈ ಅಧ್ಯಾಯದುದ್ದಕ್ಕೂ ಬಳಸುತ್ತೇವೆ.




**ರೇಖಾಚಿತ್ರ 4.4.** $X$ ನ ಮತ್ತು $Z$ ಗಳ ನಡುವಿನ ಸಂಬಂಧ

## 4.3 ಉತ್ಪನ್ನ ಮಾರುಕಟ್ಟೆಯ ಅಲ್ಪಾವಧಿ ಸ್ಥಿರ ಬೆಲೆ ವಿಶ್ಲೇಷಣೆ
### *The Short Run Fixed Price Analysis of the Product Market*

ನಾವೀಗ ಆರ್ಥಿಕತೆಯಲ್ಲಿ ಅಂತಿಮ ಸರಕುಗಳ ಸ್ಥಿರ ಬೆಲೆ ಮತ್ತು ಸ್ಥಿರ ಬಡ್ಡಿದರಗಳಲ್ಲಿ ಸಮಗ್ರ ಬೇಡಿಕೆಯನ್ನು ಪಡೆಯಲು ಯತ್ನಿಸೋಣ. ಆದಾಗ್ಯೂ ಒಂದು ನಿರ್ದಿಷ್ಟ ಮಟ್ಟದಲ್ಲಿ ಬೆಲೆಯನ್ನು ಸ್ಥಿರವಾಗಿರಿಸಲು, ಆ ಬೆಲೆಯಲ್ಲಿ ಅನುಭೋಗಿಗಳ ಬೇಡಿಕೆಗೆ ತಕ್ಕಂತೆ ಪೂರೈಕೆದಾರರು ಪೂರೈಸಲು ಬಯಸುತ್ತಾರೆ ಎಂಬ ಕಲ್ಪನೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಆ ಬೆಲೆಯಲ್ಲಿ ಪೂರೈಕೆಯಾದ ಪ್ರಮಾಣವು ಬೇಡಿಕೆಗಿಂತ ಹೆಚ್ಚಾದರೆ ಅಥವಾ ಕಡಿಮೆಯಾದರೆ, ಆ ಬೆಲೆಯು ಹೆಚ್ಚುವರಿ ಪೂರೈಕೆ ಅಥವಾ ಬೇಡಿಕೆಗಳ ಹೆಚ್ಚಳದ ಕಾರಣದಿಂದ




ಹೆಚ್ಚುವರಿ ಪೂರೈಕೆ ಅಥವಾ ಬೇಡಿಕೆಯನ್ನು ನಿಯಂತ್ರಿಸಲು ಉತ್ಪಾದಕನು ತನ್ನ ಉತ್ಪಾದನೆಯ ಯೋಜನೆಯನ್ನು ಹೇಗೆ ಪರಿಷ್ಕರಿಸುತ್ತಾನೆ ಎಂಬುದನ್ನು ತರಗತಿ ಕೊಠಡಿಯಲ್ಲಿ ಚರ್ಚಿಸಿ.

ಬದಲಾಗಬಹುದು. ಈ ಸಮಸ್ಯೆಯನ್ನು ಹೋಗಲಾಡಿಸಲು ಪೂರೈಕೆಯ ಸ್ಥಿತಿಸ್ಥಾಪಕತ್ವವುಅನಂತವಾಗಿದೆ ಎಂದು ನಾವು ಊಹಿಸುತ್ತೇವೆ–ಅಂದರೆ ಸ್ಥಿರ ಬೆಲೆಯಲ್ಲಿ ಪೂರೈಕೆಯ ಅನುಸೂಚಿಯು ಸಮಾನಾಂತರವಾಗಿರುತ್ತದೆ.. ಇಂತಹ ಸನ್ನಿವೇಶಗಳಲ್ಲಿ ಆರ್ಥಿಕತೆಯಲ್ಲಿ ಈ ಬೆಲೆಯಲ್ಲಿ ಸಮತೋಲನ ಉತ್ಪನ್ನವು ಸಮಗ್ರ ಬೇಡಿಕೆಯ ಪರಿಣಾಮ ಒಂದರಿಂದಲೇ ನಿರ್ಧಾರವಾಗುತ್ತದೆ. ಇದನ್ನು ನಾವು **ಪರಿಣಾಮಕಾರಿ ಬೇಡಿಕೆಯ ತತ್ವ** ಎನ್ನುತ್ತೇವೆ.

ಅಲ್ಪಾವಧಿ ಎಂಬ ಪದವನ್ನೂ ಗಮನಿಸೋಣ. ಇಲ್ಲಿ ಆರ್ಥಿಕತೆಯ ಬೆಲೆಯು ಹೆಚ್ಚುವರಿ ಪೂರೈಕೆ ಅಥವಾ ಬೇಡಿಕೆಯ ಶಕ್ತಿಗಳಿಗೆ ಸ್ಪಂದಿಸಲು ಸ್ವಲ್ಪ ಸಮಯವನ್ನು ತೆಗೆದುಕೊಳ್ಳುತ್ತದೆ ಎಂದು ನಾವು ಊಹಿಸುತ್ತೇವೆ. ಅದೇ ಸಂದರ್ಭದಲ್ಲಿ ಉತ್ಪಾದಕರು ಪೂರೈಕೆ ಅಥವಾ ಬೇಡಿಕೆಯ ಹೆಚ್ಚಳವನ್ನು ತಪ್ಪಿಸಲು ಉತ್ಪಾದನೆಯ ಯೋಜನೆಗಳನ್ನು ನವೀಕರಿಸಲು ಯತ್ನಿಸುತ್ತಾರೆ. ಉದಾಹರಣೆಗೆ ಅವರು ಪ್ರಸ್ತುತ ಉತ್ಪಾದನಾ ವರ್ತುಲದಲ್ಲಿ ಹೆಚ್ಚುವರಿ ಪೂರೈಕೆಯ ಹೆಚ್ಚಳವನ್ನು ಎದುರಿಸಿದರೆ ಅವರ ಗೋದಾಮುಗಳಲ್ಲಿ ದಾಸ್ತಾನುಗಳು ಶೇಖರಣೆಯಾಗುವುದನ್ನು ತಡೆಯಲು ಮುಂದಿನ ಉತ್ಪಾದನಾ ವರ್ತುಲದಲ್ಲಿ ಕಡಿಮೆ ಉತ್ಪಾದನೆ ಮಾಡಲು ಯೋಜಿಸುತ್ತಾರೆ. ಒಬ್ಬ ವೈಯುಕ್ತಿಕ ಉತ್ಪಾದಕರು ರಾಷ್ಟ್ರೀಯ ಮಾರುಕಟ್ಟೆಯ ಗಾತ್ರಕ್ಕೆ ಹೋಲಿಸಿದರೆ ಒಬ್ಬ ಉತ್ಪಾದಕನ ಮಾರುಕಟ್ಟೆಯ ಗಾತ್ರವು ತುಂಬಾ ಚಿಕ್ಕದಾಗಿರುತ್ತದೆ. ಆದುದರಿಂದ ಒಬ್ಬ ಉತ್ಪಾದಕ ಮಾರುಕಟ್ಟೆಯ ಬೆಲೆಯ ಮೇಲೆ ಪ್ರಭಾವ ಬೀರಲು ಸಾಧ್ಯವಿಲ್ಲ. ಪ್ರತಿಯೊಬ್ಬ ಉತ್ಪಾದಕರು ಮಾರುಕಟ್ಟೆಯಲ್ಲಿ ಅಸ್ತಿತ್ವದಲ್ಲಿರುವ ಬೆಲೆಯನ್ನು ಸ್ವೀಕರಿಸಬೇಕಾಗುತ್ತದೆ. ಎಲ್ಲಾ ಮಾರುಕಟ್ಟೆಗಳಲ್ಲಿ ಬೇಡಿಕೆ ಅಥವಾ ಪೂರೈಕೆ ಹೆಚ್ಚಳಗಳು ಹೊಂದಾಣಿಕೆಯಾಗಲು ಸಾಧ್ಯವಿಲ್ಲದಾಗ ಮಾತ್ರ ಆರ್ಥಿಕತೆಯಲ್ಲಿ ಸಮಗ್ರ ಬೆಲೆಯ ಮಟ್ಟ ಬದಲಾವಣೆಯಾಗುತ್ತದೆ. ಆದುದರಿಂದ ದೀರ್ಘಾವಧಿಯಲ್ಲಿ ಮಾತ್ರ ಬೆಲೆಗಳು ಬದಲಾಗುತ್ತದೆ ಎಂದು ಕಲ್ಪಿಸಿಕೊಳ್ಳಲಾಗಿದೆ.





### 4.3.1 ಸಮಗ್ರ ಬೇಡಿಕೆಯ ರೇಖೆಯ ಮೇಲಿನ ಒಂದು ಬಿಂದು
### *A Point on the Aggregate Demand Curve*

ಸ್ಥಿರ ಬೆಲೆಯಲ್ಲಿ ಅಂತಿಮ ಸರಕುಗಳ ಯೋಜಿತ ಸಮಗ್ರ ಬೇಡಿಕೆ ಮೌಲ್ಯವಾದ ೦ಆ ಯೋಜಿತ ಅನುಭೋಗ ವೆಚ್ಚ ಮತ್ತು ಯೋಜಿತ ಹೂಡಿಕೆ ವೆಚ್ಚಗಳ ಒಟ್ಟು ಮೊತ್ತಕ್ಕೆ ಸಮವಾಗಿರುತ್ತದೆ. ಪರಿಣಾಮಕಾರಿ ಬೇಡಿಕೆಯ ತತ್ವದಡಿಯಲ್ಲಿ ಸಮೀಕರಣ 4.3 ರಲ್ಲಿ ಪ್ರತಿನಿಧಿಸಿದಂತೆ ಅಂತಿಮ ಸರಕುಗಳ ಸಮತೋಲನ ಉತ್ಪನ್ನದ ಮೌಲ್ಯವು ಯೋಜಿತ ಸಮಗ್ರ ಬೇಡಿಕೆಗೆ ಸಮವಾಗಿರುತ್ತದೆ.

$$Y = \overline{A} + c.Y$$

ಇಲ್ಲಿ $\overline{A}$ ಯು ಆರ್ಥಿಕತೆಯಲ್ಲಿನ ಸ್ವಾಯತ್ತ ವೆಚ್ಚದ ಒಟ್ಟು ಮೌಲ್ಯವಾಗಿದೆ. ನಾವೀಗ ಸಮಗ್ರ ಬೇಡಿಕೆಯ ಮೌಲ್ಯ ಹಾಗೂ ಆ ಮೂಲಕ ಸ್ಥಿರ ಬೆಲೆಯಲ್ಲಿ ಆರ್ಥಿಕತೆಯ ಸಮತೋಲನ ಉತ್ಪನ್ನವನ್ನು ಪಡೆಯಲು ಒಂದು ಸಂಖ್ಯಾರೂಪದ ಉದಾಹರಣೆಯನ್ನು ಪರಿಗಣಿಸೋಣ. ಸ್ವಾಯತ್ತ ವೆಚ್ಚಗಳ ಮೌಲ್ಯಗಳನ್ನು $\overline{C} = 40$, $\overline{I} = 10$ ಮತ್ತು *mpc* ಯ ಮೌಲ್ಯವನ್ನು $c = 0.8$ ಎಂದು ಭಾವಿಸಿದರೆ Y ಯ ಸಮತೋಲನ ಮೌಲ್ಯವು ಎಷ್ಟಾಗಬಹುದು ?

ಪ್ರಾಯೋಗಿಕ ಪರಿಹಾರಕ್ಕಾಗಿ Y=200 ಎಂದು ಪರಿಗಣಿಸೋಣ ಈ ಉತ್ಪನ್ನದಲ್ಲಿ ಯೋಜಿತ ಅನುಭೋಗ ವೆಚ್ಚದ ಮೌಲ್ಯವು $C = \overline{C} + 0.8\ Y = 40 + (0.8)\ 200 = 200$ ಆಗಿರುತ್ತದೆ. ಯೋಜಿತ ಹೂಡಿಕೆ ವೆಚ್ಚ ಮೌಲ್ಯವು $I = \overline{I} = 10$ ಮತ್ತು ಯೋಜಿತ ಸಮಗ್ರ ಬೇಡಿಕೆಯು $AD = C + I = 200 + 10 = 210$ ಆಗಿರುತ್ತದೆ. ಮತ್ತು Y= 200 ರ ಉತ್ಪನ್ನದ ಮಟ್ಟದಲ್ಲಿ ಯೋಜಿತ ಸಮಗ್ರ ಬೇಡಿಕೆಯು 210 ಆಗಿರುತ್ತದೆ ಹಾಗೂ ಇದು ಬೇಡಿಕೆಯ ಹೆಚ್ಚಳ ಸನ್ನಿವೇಶವನ್ನು ಸೂಚಿಸುತ್ತದೆ. ಆದುದರಿಂದ Y= 200 ಆರ್ಥಿಕತೆಯ ಸಮತೋಲನ ಮಟ್ಟದ ಉತ್ಪನ್ನವಾಗಲಾರದು.

ಮುಂದಿನ ಉತ್ಪನ್ನದ ಮಟ್ಟವು Y = 300 ಎಂದು ಪರಿಗಣಿಸಿದಾಗ, ಮೇಲಿನ ಲೆಕ್ಕಾಚಾರದಂತೆಯೇ, ಯೋಜಿತ ಸಮಗ್ರ ಬೇಡಿಕೆಯನ್ನು ಈ ಕೆಳಗಿನಂತೆ ಲೆಕ್ಕಾಚಾರ ಮಾಡಬಹುದು.

$$\overline{A} + c\,Y = \overline{C} + \overline{I} + cY = 50 + (0.8)\ 300 = 290$$ ಆಗುತ್ತದೆ

ಯೋಜಿತ ಸಮಗ್ರ ಬೇಡಿಕೆಯು ಉತ್ಪನ್ನಕ್ಕಿಂತ ಕಡಿಮೆಯಾಗುವುದರಿಂದ ಇಲ್ಲಿ ಉತ್ಪನ್ನವು ಹೆಚ್ಚಳ ಆಗುತ್ತದೆ. ಆದುದರಿಂದ Y= 300 ಕೂಡಾ ಆರ್ಥಿಕತೆಯ ಸಮತೋಲನ ಮಟ್ಟದ ಉತ್ಪನ್ನವಾಗಲಾರದು. ಅಂತಿಮವಾಗಿ Y=250 ಎಂದು ಪರಿಗಣಿಸಿದಾಗ ಈ ಹಂತದಲ್ಲಿ AD = 50 + (0.8) 250 = 250 ಆಗುತ್ತದೆ. ನಾವು ಅಂತಿಮವಾಗಿ ಸಮಗ್ರ ಬೇಡಿಕೆಯು ಸಮಗ್ರ ಉತ್ಪನ್ನಕ್ಕೆ ಸಮವಾಗುವ ಸರಿಯಾದ Y ಮೌಲ್ಯವನ್ನು ಪಡೆದಿದ್ದೇವೆ. ಆದುದರಿಂದ ಸ್ಥಿರ ಬೆಲೆಯಲ್ಲಿ Y = 250 ಆರ್ಥಿಕತೆಯ ಸಮತೋಲನ ಉತ್ಪನ್ನವಾಗುತ್ತದೆ.

### 4.3.2 ಉತ್ಪನ್ನ ಮಾರುಕಟ್ಟೆಯಲ್ಲಿ ಸಮತೋಲನ ಬೇಡಿಕೆಯ ಮೇಲೆ ಸ್ವಾಯತ್ತ ಬದಲಾವಣೆಯ ಪರಿಣಾಮಗಳು *Effects of an Autonomous Change on Equilibrium Demand in the Product Market*

ಸ್ಥಿರ ಬೆಲೆಯಲ್ಲಿ ಸಮಗ್ರ ಬೇಡಿಕೆಯ ಸಮತೋಲನ ಮೌಲ್ಯವನ್ನು ನಿರ್ಧರಿಸುವ ನಿರ್ಧಾರಕಗಳಾವುವು? ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ,ಮೇಲಿನ ಉದಾಹರಣೆಯಲ್ಲಿ ಸಮತೋಲನ ಸಮಗ್ರ ಬೇಡಿಕೆಯು 250 ಅಥವಾ 210 ಅಥವಾ 290 ಎಂಬುದನ್ನು ಯಾವುದು ನಿರ್ಧರಿಸುತ್ತದೆ. ಸ್ಥಿರ ಬೆಲೆ ಮತ್ತು ಬಡ್ಡಿ ದರಗಳಲ್ಲಿ ಸಮತೋಲನ ಉತ್ಪನ್ನ ಮತ್ತು ಸಮಗ್ರ ಬೇಡಿಕೆಗಳನ್ನು $Y = AD = \bar{A} + cY$ ಸಮೀಕರಣವನ್ನು ಬಿಡಿಸುವುದರ ಮೂಲಕ ಪಡೆಯಬಹುದು. ಇದು Y ಎಂಬ ಏಕಮಾತ್ರ ಚಲಕವನ್ನು ಒಳಗೊಂಡ ಸಮೀಕರಣವಾಗಿದೆ. ಸಮೀಕರಣದ ಪರಿಹಾರವು

$$Y = \frac{\bar{A}}{1-c} \quad \text{ಆಗಿರುತ್ತದೆ.} \qquad (4.4)$$

ಆದುದರಿಂದ Y ಯ, ಮೌಲ್ಯವು ಬಲಭಾಗದಲ್ಲಿರುವ ಪರಾಮಿತಿಗಳ ಮೌಲ್ಯಗಳನ್ನು ಅವಲಂಬಿಸಿದೆ. ಇಲ್ಲಿ ಅವು $\bar{A}$ ಮತ್ತು $c$ ಆಗಿದೆ. ಮೇಲಿನ ಉದಾಹರಣೆಯಲ್ಲಿ ಸಮಗ್ರ ಬೇಡಿಕೆಯ ಸಮತೋಲನ ಮೌಲ್ಯವು 250 ಆಗಿದೆ. ಹಾಗಾಗಿ ನಾವು ಇದುವರೆಗೂ ಪಡೆದ ಸಮಗ್ರ ಬೇಡಿಕೆಯ ಅನುಸೂಚಿಯ ಮೇಲಿನ ಒಂದು ಬಿಂದುವಿನ ಸ್ಥಾನವು ಈ ಪರಾಮಿತಿಗಳ ಮೌಲ್ಯಗಳನ್ನು ಅವಲಂಬಿಸಿವೆ. 4.2 ಭಾಗದಲ್ಲಿ ಚರ್ಚಿಸಿದಂತೆ $AD = \bar{A} + cY$ ಸಮೀಕರಣವನ್ನು ಸರಳರೇಖೆಯ ಪ್ರಮಾಣಿತ ರೂಪದಲ್ಲಿರುವ $b=\varepsilon+ma$ ಸಮೀಕರಣದೊಂದಿಗೆ ಹೋಲಿಕೆ ಮಾಡಿ. $\bar{A}$ ಯು ಈ ಸಮೀಕರಣದ ಛೇದಕ ಪರಾಮಿತಿಯಾಗಿದೆ (*intercept parameter*) ಹಾಗೂ $c$ ಯು ಇಳಿಜಾರಿನ ಪರಾಮಿತಿಯಾಗಿದೆ. $c$ ಯು ಹೆಚ್ಚಾದಾಗ ಸಮಗ್ರ ಬೇಡಿಕೆಯನ್ನು ಪ್ರತಿನಿಧಿಸುವ ಸರಳರೇಖೆಯು ಮೇಲ್ಭಾಗಕ್ಕೆ ಚಲಿಸುತ್ತದೆ ಮತ್ತೊಂದೆಡೆ $\bar{A}$ ಹೆಚ್ಚಾದರೆ ಸರಳರೇಖೆಯು ಸಮಾನಾಂತರವಾಗಿ ಮೇಲ್ಭಾಗಕ್ಕೆ ಪಲ್ಲಟವಾಗುತ್ತದೆ. ಹಾಗಾಗ್ಯೂ $\bar{A}$ ಯು $\bar{C}$ ಮತ್ತು $\bar{I}$ ಗಳ ಮೊತ್ತವನ್ನು ಪ್ರತಿನಿಧಿಸುವ ಸಂಯುಕ್ತಪದ ಮಾತ್ರವಾಗಿದೆ. ಆದುದರಿಂದ ಅವು AD ರೇಖೆಯ ವಾಸ್ತವವಾಗಿ ಪಲ್ಲಟಗೊಂಡ ಪರಾಮಿತಿಗಳಾಗಿವೆ. $\bar{I}$ 10 ರಿಂದ 20 ಕ್ಕೆ ಹೆಚ್ಚಾಗಿದೆ ಎಂದುಕೊಳ್ಳೋಣ. ಆಗ ಸಮತೋಲನ ಉತ್ಪನ್ನ ಮತ್ತು ಸಮಗ್ರ ಬೇಡಿಕೆಗಳು ಏನಾಗಬಹುದು ?

ಮೇಲಿನ ರೇಖಾಚಿತ್ರ 4.5 ಈ ಸನ್ನಿವೇಶವನ್ನು ಪ್ರತಿನಿಧಿಸುತ್ತದೆ. $AD_1$ ಮತ್ತು $AD_2$ ರೇಖೆಗಳು $\bar{A}$ ನ 2 ಮೌಲ್ಯಗಳಿಗೆ ಸಂಬಂಧಿಸಿದೆ ಅವು ಕ್ರಮವಾಗಿ $\bar{A}_1$ ಮತ್ತು $\bar{A}_2$ ಆಗಿವೆ. ಈ ಮೌಲ್ಯಗಳು ಸ್ವಾಯತ್ತ ಹೂಡಿಕೆಯಲ್ಲಿನ ಹೆಚ್ಚುವರಿಯಾದ $\Delta\bar{I} = 10$ ಕ್ಕಿಂತ ಭಿನ್ನವಾಗಿವೆ. ಮತ್ತು AD ರೇಖೆಯ ಇಳಿಜಾರು $0 < c < 1$ ಆಗಿರುತ್ತದೆ. $\bar{A}_1$ ಮತ್ತು $\bar{A}_2$ ಗಳು ಕ್ರಮವಾಗಿ ಲಂಬ ಅಕ್ಷದ ಮೇಲಿನ ಛೇದಕ(*Intercepts*)ಗಳಾಗಿವೆ. AD ರೇಖೆಯ ಇಳಿಜಾರು 1ಕ್ಕೆ (tan 45°=1) ಸಮವಾಗಿರುವುದರಿಂದ AD ರೇಖೆಗಳು 45°




**ರೇಖಾಚಿತ್ರ 4.5** ಸ್ಥಿರ ಬೆಲೆ, ಮಾದರಿಯಲ್ಲಿ ಸಮತೋಲನ ಉತ್ಪನ್ನ ಮತ್ತು ಸಮಗ್ರ ಬೇಡಿಕೆ.

ಗಳಿಗಿಂತ ಹೆಚ್ಚು ಸಮತಟ್ಟಾಗಿರುವುದನ್ನು ಗಮನಿಸಿರಿ. 45° ರೇಖೆಯು ಸಮಗ್ರ ಬೇಡಿಕೆ ಮತ್ತು ಉತ್ಪನ್ನಗಳು ಒಂದಕ್ಕೊಂದು ಸಮವಾಗುವ ಬಿಂದುಗಳನ್ನು ಪ್ರತಿನಿಧಿಸುತ್ತದೆ. ಆದುದರಿಂದ ಆರ್ಥಿಕತೆಯಲ್ಲಿ ಸ್ವಾಯತ್ತ ವ್ಯಯವು $A_1$ ಆದಾಗ $AD_1$ ರೇಖೆಯು 45° ರೇಖೆಯನ್ನು $E_1$ ಬಿಂದುವಿನಲ್ಲಿ ಛೇದಿಸುತ್ತದೆ. ಆದುದರಿಂದ ಅದು ಸಮತೋಲನ ಬಿಂದುವಾಗಿದೆ. ಉತ್ಪನ್ನ ಮತ್ತು ಸಮಗ್ರ ಬೇಡಿಕೆಗಳ ಸಮತೋಲನ ಮೌಲ್ಯಗಳು ಕ್ರಮವಾಗಿ $Y^*_1$ ಮತ್ತು $AD^*_1$ (=250) ಆಗಿರುತ್ತದೆ.

ಸ್ವಾಯತ್ತ ಹೂಡಿಕೆಯು ಹೆಚ್ಚಾದಾಗ $AD_1$ ರೇಖೆಯು ಸಮಾನಾಂತರವಾಗಿ ಮೇಲ್ಭಾಗಕ್ಕೆ ಪಲ್ಲಟಗೊಂಡು $AD_2$ ಸ್ಥಾನವನ್ನುಪಡೆಯುತ್ತದೆ. $Y^*_1$ ಉತ್ಪನ್ನದಲ್ಲಿ ಸಮಗ್ರ ಬೇಡಿಕೆಯ ಮೌಲ್ಯವು $Y^*_1F$, ಆಗಿದ್ದು ಅದು $OY^*_1=Y^*_1E_1$ ಉತ್ಪನ್ನದ ಮೌಲ್ಯಕ್ಕಿಂತ $E_1F$ ಪ್ರಮಾಣದಷ್ಟು ಹೆಚ್ಚಾಗಿದೆ. ಸ್ವಾಯತ್ತ ವೆಚ್ಚದ ಹೆಚ್ಚಳದ ಪರಿಣಾಮವಾಗಿ ಆರ್ಥಿಕತೆಯಲ್ಲಿ ಉಂಟಾಗುವ ಬೇಡಿಕೆಯ ಹೆಚ್ಚಳದ ಪ್ರಮಾಣವನ್ನು $E_1F$ ಮಾಪನ ಮಾಡುತ್ತದೆ. ಆದುದರಿಂದ $E_1$ ಸಮತೋಲನವನ್ನು ಪ್ರತಿನಿಧಿಸುವುದಿಲ್ಲ. ಅಂತಿಮ ಸರಕುಗಳ ಮಾರುಕಟ್ಟೆಯಲ್ಲಿ ಹೊಸ ಸಮತೋಲನವನ್ನು ಕಂಡುಹಿಡಿಯಲು ಹೊಸ ಸಮಗ್ರ ಬೇಡಿಕೆಯಾದ $AD_2$, ರೇಖೆಯನ್ನು 45° ರೇಖೆಯು ಎಲ್ಲಿ ಛೇದಿಸುತ್ತದೆ ಎಂಬುದನ್ನು ಕಂಡುಕೊಳ್ಳಬೇಕು. $E_2$ ಬಿಂದುವಿನಲ್ಲಿ ಅದು ಸಂಭವಿಸುತ್ತದೆ, ಆದುದರಿಂದ ಆ ಬಿಂದು ಹೊಸ ಸಮತೋಲನ ಬಿಂದುವಾಗಿದೆ. ಉತ್ಪನ್ನ ಮತ್ತು ಸಮಗ್ರ ಬೇಡಿಕೆಗಳ ಹೊಸ ಸಮತೋಲನ ಮೌಲ್ಯಗಳು ಕ್ರಮವಾಗಿ $Y^*_2$ ಮತ್ತು $AD^*_2$ ಆಗಿರುತ್ತವೆ.

ಹೊಸ ಸಮತೋಲನದಲ್ಲಿ ಉತ್ಪನ್ನ ಮತ್ತು ವೆಚ್ಚಗಳು $E_1G = E_2G$ ನಷ್ಟು ಪ್ರಮಾಣದಲ್ಲಿ ಹೆಚ್ಚಾಗಿವೆ, ಅವು ಆರಂಭದಲ್ಲಿನ ಸ್ವಾಯತ್ತ ವೆಚ್ಚದಲ್ಲಾದ ಹೆಚ್ಚಳ $\Delta\bar{I} = E_1F = E_2J$ ಗಿಂತ ಹೆಚ್ಚಾಗಿದೆ. ಆದುದರಿಂದ ಆರಂಭದಲ್ಲಾದ ಸ್ವಾಯತ್ತ ವೆಚ್ಚದ ಹೆಚ್ಚಳವು ಸಮಗ್ರ ಬೇಡಿಕೆ ಮತ್ತು ಉತ್ಪನ್ನಗಳ ಸಮತೋಲನ ಮೌಲ್ಯಗಳ ಮೇಲೆ ವಿಸ್ತರಣ ಪರಿಣಾಮವನ್ನುಂಟು ಮಾಡುತ್ತದೆ. ಸಮಗ್ರ ಬೇಡಿಕೆ ಮತ್ತು ಉತ್ಪನ್ನಗಳು ಸ್ವಾಯತ್ತ ವೆಚ್ಚಗಳ ಪ್ರಾರಂಭಿಕ ಹೆಚ್ಚಳದ ಗಾತ್ರಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಧಿಕಗೊಳ್ಳಲು ಕಾರಣಗಳಾವುವು? ಇದನ್ನು ನಾವು 4.3.3 ಭಾಗದಲ್ಲಿ ಚರ್ಚಿಸೋಣ.

### 4.3.3 ಗುಣಕದ ಯಾಂತ್ರಿಕತೆ *The Multiplier Mechanism*:

ಸ್ಪಷ್ಟವಾಗಿ ಹೇಳುವುದಾದರೆ ಉತ್ಪನ್ನ ಅಥವಾ ಸಮಗ್ರ ಬೇಡಿಕೆಯ ಸಮತೋಲನ ಮೌಲ್ಯವು 250 ಆಗುವುದಿಲ್ಲ. $\bar{I} = 20$ ಆದಾಗ ಆರ್ಥಿಕತೆಯ ಸಮಗ್ರ ಬೇಡಿಕೆಯು $40 + 20 + (0.8)\ 250 = 260$ಕ್ಕೆ ಸಮವಾಗುತ್ತದೆ (ಸಮೀಕರಣ 4.4) ಉತ್ಪನ್ನ Y=250 ಕ್ಕಿಂತ ಅದು ಸ್ವಾಯತ್ತ ಹೂಡಿಕೆಯಲ್ಲಾದ ಹೆಚ್ಚಳದ ಮೊತ್ತದಷ್ಟು ($\Delta\bar{I} = 10$) ಅಧಿಕವಾಗಿರುತ್ತದೆ. ಆರ್ಥಿಕತೆಯಲ್ಲಿ ಹೆಚ್ಚುವರಿ ಬೇಡಿಕೆಯಿದ್ದು ಇದನ್ನು ಈಡೇರಿಸಲು ಉತ್ಪಾದಕರು ಅವರ ದಾಸ್ತಾನನ್ನು ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ. ಹೀಗೆ, ಅವರು ಮುಂದಿನ ಉತ್ಪಾದನಾ ವರ್ತಲದಲ್ಲಿ ಅವರ ಉತ್ಪಾದನಾ ಯೋಜನೆಯನ್ನು ಮೇಲ್ಮಟ್ಟಕ್ಕೆ ಪರಿಷ್ಕರಿಸಬೇಕಾಗುತ್ತದೆ. ಅಂದರೆ ಅಂತಿಮ ಸರಕುಗಳ ಮಾರುಕಟ್ಟೆಯಲ್ಲಿ ಸಮತೋಲನವನ್ನು ಪುರ್ನಸ್ಥಾಪಿಸಲು ಅವರ ಯೋಜಿತ ಉತ್ಪನ್ನದ ಪೂರೈಕೆಯ ಮೌಲ್ಯವನ್ನು 10 ರಷ್ಟು ಹೆಚ್ಚಿಸಬೇಕಾಗುತ್ತದೆ.

ಸರಕಾರದ ಸಹಾಯಧನದ ವಿತರಣೆ ಅಥವಾ ಪರೋಕ್ಷ ತೆರಿಗೆ ವಿಧಿಸುವ ಸರಕಾರದ ಅನುಪಸ್ಥಿತಿಯಲ್ಲಿ ಅಂತಿಮ ಸರಕುಗಳ ಉತ್ಪನ್ನದ ಒಟ್ಟು ಮೌಲ್ಯವು ಅಥವಾ ಜಿಡಿಪಿಯು ರಾಷ್ಟ್ರೀಯ ವರಮಾನಕ್ಕೆ ಸಮವಾಗುತ್ತದೆ. ಅಂತಿಮ ಸರಕುಗಳ ಉತ್ಪಾದನೆಯು ಶ್ರಮ, ಬಂಡವಾಳ, ಭೂಮಿ ಮತ್ತು ಸಂಘಟನೆಯಂತಹ ಉತ್ಪಾದನಾಂಗಗಳನ್ನು ಬಳಸುತ್ತದೆ. ಪರೋಕ್ಷ ತೆರಿಗೆಗಳು ಅಥವಾ ಸಹಾಯಧನಗಳ ಅನುಪಸ್ಥಿತಿಯಲ್ಲಿ ಅಂತಿಮ ಸರಕುಗಳ ಉತ್ಪನ್ನದ ಒಟ್ಟು ಮೌಲ್ಯವು ವಿವಿಧ ಉತ್ಪಾದನಾಂಗಗಳಲ್ಲಿ ವಿತರಣೆಯಾಗುತ್ತದೆ–ಶ್ರಮಕ್ಕೆ ಕೂಲಿ, ಬಂಡವಾಳಕ್ಕೆ ಬಡ್ಡಿ, ಭೂಮಿಗೆ ಗೇಣಿ ಇತ್ಯಾದಿ ರಾಷ್ಟ್ರೀಯ ವರಮಾನದ ಉಳಿದ ಭಾಗವನ್ನು ಉದ್ಯಮ ಸಾಹಸಿಯು ಪಡೆಯುತ್ತಾನೆ. ಅದನ್ನು ಲಾಭ ಎನ್ನುವರು. ಹೀಗೆ ಆರ್ಥಿಕತೆಯಲ್ಲಿನ ಒಟ್ಟು ಉತ್ಪಾದನಾಂಗಗಳ ಪಾವತಿಗಳ ಮೊತ್ತವು ಅಥವಾ ರಾಷ್ಟ್ರೀಯ ಆದಾಯವು ಅಂತಿಮ ಸರಕುಗಳ ಉತ್ಪನ್ನದ ಒಟ್ಟು ಮೌಲ್ಯಕ್ಕೆ ಸಮವಾಗುತ್ತದೆ. ಇದುವೇ ಜಿಡಿಪಿಯಾಗಿದೆ. ಮೇಲಿನ ಉದಾಹರಣೆಯಲ್ಲಿ ಹೆಚ್ಚುವರಿ ಉತ್ಪನ್ನದ ಮೌಲ್ಯವು 10 ಆಗಿದ್ದು ಅದು ವಿವಿಧ ಉತ್ಪಾದನಾಂಗಗಳಿಗೆ ಸಂಭಾವನೆಗಳ ರೂಪದಲ್ಲಿ ಹಂಚಿಹೋಗುತ್ತದೆ. ಈ ರೀತಿ

ಆರ್ಥಿಕತೆಯ ಆದಾಯವು ಹತ್ತರಷ್ಟು ಹೆಚ್ಚಾಗುತ್ತದೆ. ಜನರು ಅವರ ಹೆಚ್ಚುವರಿ ಆದಾಯದ 0.8 (*mpc*) ರಷ್ಟು ಭಾಗವನ್ನು ಅನುಭೋಗಕ್ಕಾಗಿ ಖರ್ಚು ಮಾಡುವುದರಿಂದ, ಆದಾಯವು 10 ರಷ್ಟು ಹೆಚ್ಚಾದಾಗ ಅನುಭೋಗ ವೆಚ್ಚವು (0.8) 10 ರಷ್ಟು ಹೆಚ್ಚಾಗುತ್ತದೆ. ಅನಂತರದ ಹಂತದಲ್ಲಿ ಆರ್ಥಿಕತೆಯ ಸಮಗ್ರ ಬೇಡಿಕೆಯು (0.8)10 ರಷ್ಟು ಹೆಚ್ಚಾಗಿ 0.8(10) ರಷ್ಟರ ಬೇಡಿಕೆಯ ಹೆಚ್ಚಳ ಅಲ್ಲಿ ಪುನಃ ಉದ್ಭವಿಸುತ್ತದೆ. ಆದುದರಿಂದ ಅನಂತರದ ಉತ್ಪಾದನಾ ವರ್ತುಲದಲ್ಲಿ ಉತ್ಪಾದಕರು ಸಮತೋಲನವನ್ನು ಪುನರ್ಸ್ಥಾಪಿಸಲು ಅವರ ಯೋಜಿತ ಉತ್ಪನ್ನವನ್ನು ಪುನಃ (0.8) 10 ರಷ್ಟು ಹೆಚ್ಚಿಸಬೇಕಾಗುತ್ತದೆ. ಈ ಉತ್ಪನ್ನದ ಹೆಚ್ಚಳವು ಉತ್ಪಾದನಾಂಗಗಳಿಗೆ ಹಂಚಿಕೆಯಾದಾಗ ಆರ್ಥಿಕತೆಯ ಆದಾಯವು (0.8)10 ರಷ್ಟು ಹೆಚ್ಚಾಗುತ್ತದೆ ಮತ್ತು ಅನುಭೋಗ ವೆಚ್ಚವು ಪುನಃ $(0.8)^2 10$ ರಷ್ಟು ಹೆಚ್ಚಾಗಿ ಮತ್ತೊಮ್ಮೆ ಅಷ್ಟೇ ಪ್ರಮಾಣದ ಬೇಡಿಕೆಯ ಹೆಚ್ಚಳ ಸೃಷ್ಟಿಯಾಗುತ್ತದೆ. ಈ ಪ್ರಕ್ರಿಯೆ ಹಂತ ಹಂತವಾಗಿ ಮುಂದುವರಿಯುತ್ತದೆ. ಪ್ರತೀ ಹಂತದಲ್ಲಿ ಉತ್ಪಾದಕರು ಬೇಡಿಕೆಯ ಹೆಚ್ಚಳವನ್ನು ಈಡೇರಿಸಲು ಅವರ ಉತ್ಪನ್ನವನ್ನು ಹೆಚ್ಚಿಸುತ್ತಾ ಹೋಗುತ್ತಾರೆ ಹಾಗೂ ಅನುಭೋಗಿಗಳು ಈ ಹೆಚ್ಚುವರಿ ಉತ್ಪಾದನೆಯ ಹೆಚ್ಚಳದಿಂದ ಉಂಟಾದ ಆದಾಯದ ಹೆಚ್ಚಳದ ಒಂದು ಭಾಗವನ್ನು ಅನುಭೋಗಿ ಸರಕುಗಳಿಗಾಗಿ ವ್ಯಯಿಸುತ್ತಾರೆ. ಆ ಮೂಲಕ ಮಂದಿನ ಹಂತದಲ್ಲಿ ಬೇಡಿಕೆಯಲ್ಲಿ ಮತ್ತಷ್ಟು ಹೆಚ್ಚಳವನ್ನು ಸೃಷ್ಟಿಸುತ್ತಾರೆ.

ನಾವೀಗ ಪ್ರತೀ ಹಂತದಲ್ಲಿ ಸಮಗ್ರ ಬೇಡಿಕೆ ಮತ್ತು ಉತ್ಪನ್ನಗಳ ಮೌಲ್ಯಗಳಲ್ಲಾದ ಬದಲಾವಣೆಯನ್ನು ಕೋಷ್ಠಕ 4.1 ರಲ್ಲಿ ನಮೂದಿಸೋಣ.

**ಕೋಷ್ಠಕ 4.1: ಅಂತಿಮ ಸರಕು ಮಾರುಕಟ್ಟೆಯಲ್ಲಿ ಗುಣಕದ ಯಾಂತ್ರಿಕತೆ**
(***The Multiplier Mechanism in the Final Goods Market***)

| | **ಅನುಭೋಗ** | **ಸಮಗ್ರ ಬೇಡಿಕೆ** | **ಉತ್ಪನ್ನ/ಆದಾಯ** |
|---|---|---|---|
| 1 ನೇ ಸುತ್ತು | 0 | 10 (ಸ್ವಾಯತ್ತ ಹೆಚ್ಚಳ) | 10 |
| 2 ನೇ ಸುತ್ತು | (0.8)10 | (0.8)10 | (0.8)10 |
| 3 ನೇ ಸುತ್ತು | $(0.8)^2 10$ | $(0.8)^2 10$ | $(0.8)^2 10$ |
| 4 ನೇ ಸುತ್ತು | $(0.8)^3 10$ | $(0.8)^3 10$ | $(0.8)^3 10$ |
| . | . | . | . |
| . | . | . | . |
| . | . | . | . |
| . | . | . | ಇತ್ಯಾದಿ. |

ಅಂತಿಮ ಸರಕುಗಳ ಉತ್ಪನ್ನದ ಮೌಲ್ಯದಲ್ಲಿ (ಮತ್ತು ಹೀಗೆ ಆರ್ಥಿಕತೆಯ ವರಮಾನವನ್ನು) ಪ್ರತೀ ಸುತ್ತಿನಲ್ಲಾ (ಹಂತದಲ್ಲಿ)ದ ಹೆಚ್ಚಳವನ್ನು ಕೊನೆಯ ಕಂಬ ಸಾಲುಗಳು ಮಾಪನ ಮಾಡುತ್ತವೆ. ಅದೇ ರೀತಿ ಆರ್ಥಿಕತೆಯ ಒಟ್ಟು ವೆಚ್ಚದಲ್ಲಾದ ಹೆಚ್ಚಳ ಮತ್ತು ಸಮಗ್ರ ಬೇಡಿಕೆಯ ಮೌಲ್ಯದಲ್ಲಾದ ಹೆಚ್ಚಳವನ್ನು ಎರಡು ಮತ್ತು ಮೂರನೆಯ ಕಂಬ ಸಾಲುಗಳು ಲೆಕ್ಕಾಚಾರ ಮಾಡುತ್ತವೆ. ಅನಂತರದ ಸುತ್ತುಗಳಲ್ಲಿ ಅಂತಿಮ ಸರಕುಗಳ ಉತ್ಪನ್ನವು ನಿಧಾನವಾಗಿ ಇಳಿಕೆಯಾಗುವುದನ್ನು ಗಮನಿಸಬಹುದು ಅನೇಕ ಸುತ್ತುಗಳ ನಂತರ ಹೆಚ್ಚಳದ ಗಾತ್ರವು ಶೂನ್ಯದಿಂದ ಭಿನ್ನವಾಗಿರುವುದಿಲ್ಲ ಹಾಗೂ ಒಟ್ಟು ಉತ್ಪನ್ನದ ಪ್ರಮಾಣಕ್ಕೆ ವಾಸ್ತವವಾಗಿ ಯಾವ ಕೊಡುಗೆಯನ್ನು ನೀಡುವುದಿಲ್ಲ. ಅಂತಿಮ ಸರಕುಗಳ ಉತ್ಪನ್ನದ ಮೇಲೆ ಸುತ್ತಿನ ಪರಿಣಾಮಗಳು ಒಮ್ಮುಖ ಪ್ರಕ್ರಿಯೆಯನ್ನು ಪ್ರತಿನಿಧಿಸುತ್ತದೆ ಎಂದು ನಾವು ಹೇಳಬಹುದು. ಅಂತಿಮ ಸರಕುಗಳ ಉತ್ಪನ್ನದಲ್ಲಾದ ಒಟ್ಟು ಹೆಚ್ಚಳವನ್ನು ಕಂಡಹಿಡಿಯಲು ನಾವು ಕೊನೆಯ ಕಂಬಸಾಲಿನಲ್ಲಿ ಅನಂತ ಜ್ಯಾಮಿತಿಯ ಸರಣಿಗಳನ್ನು ಸೇರಿಸಬೇಕಾಗುತ್ತದೆ. ಅದನ್ನು ಈ ಕೆಳಗಿನಂತೆ ಬರೆಯಬಹುದು. ಅಂದರೆ,

$$10 + (0.8)\,10 + (0.8)^2\,10 + \ldots\ldots\ldots\ldots\ \infty$$

$$= 10 + \{1 + (0.8) + (0.8)^2 + \ldots\ldots\ \infty\} = \frac{10}{1-0.8} = 50$$

ಹೀಗೆ, ಒಟ್ಟು ಉತ್ಪನ್ನದ ಸಮತೋಲನ ಮೌಲ್ಯದಲ್ಲಿನ ಹೆಚ್ಚಳವು ಸ್ವಾಯತ್ತ ವೆಚ್ಚದಲ್ಲಾದ ಪ್ರಾರಂಭದ ಹೆಚ್ಚಳಕ್ಕಿಂತ ಅಧಿಕವಾಗಿರುತ್ತದೆ. ಪ್ರಾರಂಭಿಕ ಸ್ವಾಯತ್ತ ವೆಚ್ಚದಲ್ಲಾದ ಹೆಚ್ಚಳ ಮತ್ತು ಅಂತಿಮ ಸರಕುಗಳ ಉತ್ಪನ್ನದ ಸಮತೋಲನ ಮೌಲ್ಯದಲ್ಲಾದ ಹೆಚ್ಚಳಗಳ ಅನುಪಾತವನ್ನು **ಆರ್ಥಿಕತೆಯ ಉತ್ಪನ್ನದ ಗುಣಕ** ಎನ್ನುವರು. 10 ಮತ್ತು 0.8 ಮೌಲ್ಯಗಳು $\Delta \overline{I} = \Delta \overline{A}$ ಮತ್ತು *mpc* ಮೌಲ್ಯಗಳನ್ನು ಕ್ರಮವಾಗಿ ಪ್ರತಿನಿಧಿಸುವುದನ್ನು ನೆನಪಿಸಿಕೊಂಡರೆ ಗುಣಕವನ್ನು ಪ್ರತಿನಿಧಿಸುವ ಸಮೀಕರಣವನ್ನು ಈ ಕೆಳಗಿನಂತೆ ಬರೆಯಬಹುದು.

$$\text{ಉತ್ಪನ್ನದ ಗುಣಕ} = \frac{\Delta Y}{\Delta \overline{A}} = \frac{1}{1-c} \qquad (4.5)$$

ಇಲ್ಲಿ $\Delta Y$ ಅಂತಿಮ ಸರಕುಗಳ ಉತ್ಪನ್ನದ ಒಟ್ಟು ಮೌಲ್ಯದಲ್ಲಾದ ಹೆಚ್ಚಳವಾಗಿದೆ ಹಾಗೂ $c = mpc$ ಆಗಿದೆ. ಗುಣಕದ ಗಾತ್ರವು $c$ ಯ ಮೌಲ್ಯವನ್ನು ಅವಲಂಬಿಸಿರುವುದನ್ನು ಗಮನಿಸಿ. '$c$' ಯ ಮೌಲ್ಯವು ಹೆಚ್ಚಾದಂತೆ ಗುಣಕದ ಗಾತ್ರವು ಹೆಚ್ಚಾಗುತ್ತದೆ.

ನಮ್ಮ ಹಿಂದಿನ ಉದಾಹರಣೆಯ ಪ್ರಕಾರ ಸ್ವಾಯತ್ತ ವೆಚ್ಚದಲ್ಲಿ 10ರಷ್ಟು ಹೆಚ್ಚಳವಾದಾಗ ಆರ್ಥಿಕತೆಯ ಒಟ್ಟು ಉತ್ಪನ್ನ ಮತ್ತು ಸಮಗ್ರ ಬೇಡಿಕೆಯು 50ರಷ್ಟು ಹೆಚ್ಚಾಗುತ್ತದೆ. ಇಲ್ಲಿ ಗುಣಕದ ಮೌಲ್ಯವು 5 ಆಗಿದೆ. ನಮ್ಮ ಲೆಕ್ಕಾಚಾರವನ್ನು ಮರುಪರಿಶೀಲಿಸಲು ಹೊಸ ಸಮತೋಲನದಲ್ಲಿ ಸಮಗ್ರ ಬೇಡಿಕೆ ಮತ್ತು ಉತ್ಪನ್ನಗಳ ಮೌಲ್ಯಗಳನ್ನು $\overline{I} = 20$ ರೊಂದಿಗೆ ಲೆಕ್ಕಾಚಾರಮಾಡೋಣ. ಸಮೀಕರಣ (4.4)ರಿಂದ ಹೊಸ ಸಮತೋಲನದಲ್ಲಿ ಉತ್ಪನ್ನದ ಮೌಲ್ಯವು ಈ ಕೆಳಗಿನ ಮೌಲ್ಯಕ್ಕೆ ಸಮವಾಗಿರುತ್ತದೆ.





$$Y^*_2 = \frac{40+20}{1-0.8} = 300$$

ಇದು ನಮ್ಮ ಗುಣಕದ ಲೆಕ್ಕಾಚಾರವು ಸರಿಯಾಗಿರುವುದನ್ನು ತೋರಿಸುತ್ತದೆ. ಅಂತಿಮ ಸರಕುಗಳ ಮಾರುಕಟ್ಟೆಯ ಸ್ಥಿರ ಬೆಲೆ–ಬಡ್ಡಿದರಗಳ ವಿಶ್ಲೇಷಣೆಯನ್ನು ಒಂದು ಅಂತರ್ಬೋಧೆಗೆ ವಿರುದ್ಧವಾದ ಸತ್ಯ ಅಥವಾ ವಿರೋಧಾಭಾಸದಿಂದ ಮುಕ್ತಾಯಗೊಳಿಸೋಣ. ಒಂದು ಆರ್ಥಿಕತೆಯಲ್ಲಿನ ಎಲ್ಲಾ ಜನರು ಉಳಿತಾಯ ಮಾಡುವ ಆದಾಯದ ಅನುಪಾತವನ್ನು ಹೆಚ್ಚಿಸಿದರೆ (*mps* ಹೆಚ್ಚಾದರೆ) ಆರ್ಥಿಕತೆಯ ಉಳಿತಾಯದ ಒಟ್ಟು ಮೌಲ್ಯವು ಹೆಚ್ಚಾಗಲಾರದು–ಅದು ಕಡಿಮೆಯಾಗಬಹುದು ಅಥವಾ ಬದಲಾಗದೆ ಇರಬಹುದು. ಇದನ್ನು **ಮಿತವ್ಯಯದ ವಿರೋಧಾಭಾಸ** ಎನ್ನುವರು–ಜನರು ಹೆಚ್ಚು ಮಿತವ್ಯಯಿಗಳಾದರೆ ಅವರು ಕಡಿಮೆ ಉಳಿತಾಯ ಮಾಡುತ್ತಾರೆ ಅಥವಾ ಮೊದಲಿನಷ್ಟೇ ಉಳಿತಾಯ ಮಾಡುತ್ತಾರೆ ಎಂದು ಅದು ತಿಳಿಸುತ್ತದೆ. ಈ ಫಲಿತಾಂಶವು ಅಸಾಧ್ಯದಂತೆ ಸ್ಪಷ್ಟವಾಗಿ ಕಂಡರೂ ಇದು ವಾಸ್ತವವಾಗಿ ನಾವು ಅಧ್ಯಯನ ಮಾಡಿದ ಸರಳವಾದ ಮಾದರಿಯ ಅನ್ವಯವಾಗಿದೆ.

ಅದೇ ಉದಾಹರಣೆಯೊಂದಿಗೆ ನಾವು ಮುಂದುವರಿಯೋಣ. ಪ್ರಾರಂಭದ ಸಮತೋಲನವು $Y = 250$ ಆಗಿದ್ದಾಗ ಜನರ ವ್ಯಯದ ಸಂರಚನೆಯಲ್ಲಿ ಬಾಹ್ಯ ಅಥವಾ ಸ್ವಾಯತ್ತ ಪಲ್ಲಟ ಉಂಟಾಗಿದೆ ಎಂದುಕೊಳ್ಳೋಣ ಅವರು ತಕ್ಷಣವೇ ಹೆಚ್ಚು ಮಿತವ್ಯಯಿಗಳಾಗುತ್ತಾರೆ. ಸಂಭವನೀಯ ಯುದ್ಧ ಅಥವಾ ತಕ್ಷಣ ಸಂಭವಿಸಬಹುದಾದ ವಿಪತ್ತುಗಳ ಹೊಸ ಮಾಹಿತಿಯ ಕಾರಣಗಳಿಂದ ಇದು ಉಂಟಾಗಬಹುದು. ಅದು ವೆಚ್ಚದ ವಿಷಯದಲ್ಲಿ ಜನರನ್ನು ಹೆಚ್ಚು ಜಾಗರೂಕರನ್ನಾಗಿ ಮತ್ತು ಸಂಪ್ರದಾಯಸ್ಥರನ್ನಾಗಿ ಮಾಡುತ್ತದೆ. ಆದುದರಿಂದ ಆರ್ಥಿಕತೆಯಲ್ಲಿನ *mpc* ಹೆಚ್ಚಾಗುತ್ತದೆ, ಅಥವಾ ಪರ್ಯಾಯವಾಗಿ *mpc* ಯು 0.8 ರಿಂದ 0.5ಕ್ಕೆ ಕಡಿಮೆಯಾಗುತ್ತದೆ. ಆರಂಭದ ಆದಾಯದ ಮಟ್ಟ $AD^*_1 = Y^*_1 = 250$ ಆಗಿದ್ದಾಗ *mpc* ಯಲ್ಲಿ ಆಗುವ ತಕ್ಷಣದ ಕುಸಿತವು ಸಮಗ್ರ ಅನುಭೋಗದ ವೆಚ್ಚದಲ್ಲಿ ಇಳಿಕೆಯನ್ನು ಸೂಚಿಸುತ್ತದೆ ಮತ್ತು ಆ ಮೂಲಕ ಸಮಗ್ರ ಬೇಡಿಕೆಯಲ್ಲಿ $AD = \overline{A} + cY$, $(0.8-0.5)\ 250 = 75$ ರಷ್ಟು ಮೊತ್ತಕ್ಕೆ ಸಮನಾದ ಇಳಿಕೆಯನ್ನು ಸೂಚಿಸುತ್ತದೆ. ಇದನ್ನು ಕೆಲವು ಬಾಹ್ಯ ಕಾರಣಗಳಿಂದ ಉಂಟಾಗುವ *mpc* ಯ ಬದಲಾವಣೆಯ ಮಟ್ಟಿಗೆ ಇದನ್ನು ಅನುಭೋಗ ವೆಚ್ಚದಲ್ಲಿನ ಸ್ವಾಯತ್ತ ಇಳಿಕೆ ಎನ್ನಬಹುದು. ಮತ್ತು ಮಾದರಿಯಲ್ಲಿನ ಚಲಕಗಳ ಬದಲಾವಣೆಗಳ ಪರಿಣಾಮವಲ್ಲ.

ಆದರೆ ಸಮಗ್ರ ಬೇಡಿಕೆಯು 75ರಷ್ಟು ಕಡಿಮೆಯಾಗುವುದರಿಂದ ಅದು ಉತ್ಪನ್ನ $Y^*_1$ = 250 ಕ್ಕಿಂತ ಕಡಿಮೆಯಾಗುತ್ತದೆ ಮತ್ತು ಇದರಿಂದ ಆರ್ಥಿಕತೆಯಲ್ಲಿ 75 ಕ್ಕೆ ಸಮವಾದ ಪೂರೈಕೆಯ ಹೆಚ್ಚಳ ಉಂಟಾಗುತ್ತದೆ. ಅದರ ಪರಿಣಾಮವಾಗಿ ಗೋದಾಮುಗಳಲ್ಲಿ ದಾಸ್ತಾನು ರಾಶಿ ಬಿದ್ದು ಮಾರುಕಟ್ಟೆಯಲ್ಲಿ ಸಮತೋಲನವನ್ನು ಪುನಸ್ಥಾಪಿಸಲು ಮುಂದಿನ ಸುತ್ತಿನಲ್ಲಿ 75 ರಷ್ಟು ಪ್ರಮಾಣದ ಉತ್ಪಾದನೆಯನ್ನು ಕಡಿಮೆ ಮಾಡಲು ಉತ್ಪಾದಕರು ನಿರ್ಧರಿಸುತ್ತಾರೆ. ಆದರೆ ಇದು ಮುಂದಿನ ಹಂತದಲ್ಲಿ ಉತ್ಪಾದನಾಂಗಗಳ ಪಾವತಿಯು ಕಡಿಮೆಯಾಗುವುದನ್ನು ಮತ್ತು ಆ ಮೂಲಕ ಆದಾಯದಲ್ಲಿ 75ರಷ್ಟು ಇಳಿಕೆಯನ್ನು ತಿಳಿಸುತ್ತದೆ. ಆದಾಯ ಕಡಿಮೆಯಾಗುತ್ತಿದ್ದಂತೆ ಜನರು ಅದಕ್ಕನುಗುಣವಾಗಿ ಅನುಭೋಗವನ್ನು ಕಡಿಮೆ ಮಾಡುತ್ತಾರೆ. ಈ ಸಂದರ್ಭಗಳಲ್ಲಿ *mpc* ಯ ಹೊಸ ಮೌಲ್ಯವಾದ 0.5 ರಂತೆ ಅನುಭೋಗ ವೆಚ್ಚವು ಹಾಗೂ ಆ ಮೂಲಕ ಸಮಗ್ರ ಬೇಡಿಕೆಯು (0.5)75 ರಷ್ಟು ಕಡಿಮೆಯಾಗುತ್ತದೆ. ಇದು ಮಾರುಕಟ್ಟೆಯಲ್ಲಿ ಮತ್ತೊಮ್ಮೆ ಪೂರೈಕೆಯ ಹೆಚ್ಚಳವನ್ನು ಸೃಷ್ಟಿಸುತ್ತದೆ. ಆದುದರಿಂದ ಮುಂದಿನ ಸುತ್ತಿನಲ್ಲಿ ಉತ್ಪಾದಕರು ಉತ್ಪನ್ನವನ್ನು (0.5)75 ರಷ್ಟು ಪ್ರಮಾಣದಲ್ಲಿ ಪುನಃ ಕಡಿಮೆ ಮಾಡುತ್ತಾರೆ. ಇದರಿಂದ ಜನರ ಆದಾಯ ಕಡಿಮೆಯಾಗುತ್ತದೆ ಮತ್ತು ಅನುಭೋಗ ವೆಚ್ಚ ಹಾಗೂ ಸಮಗ್ರ ಬೇಡಿಕೆಗಳು$(0.5)^2 75$ ರಷ್ಟಕ್ಕೆ ಮತ್ತೆ ಇಳಿಯುತ್ತದೆ. ಈ ಪ್ರಕ್ರಿಯೆ ಇದೇ ರೀತಿ ಮುಂದುವರಿಯುತ್ತಾ ಹೋಗುತ್ತದೆ. ಅನಂತರದ ಸುತ್ತುಗಳಲ್ಲಿ ಕುಗ್ಗುತ್ತಿರುವ ಮೌಲ್ಯಗಳ ಪರಿಣಾಮವಾಗಿ ಈ ಪ್ರಕ್ರಿಯೆಯು ಒಮ್ಮುಖವಾಗಿರುತ್ತದೆ ಎಂದು ತೀರ್ಮಾನಿಸಬಹುದು. ಸಮಗ್ರ ಬೇಡಿಕೆ ಮತ್ತು ಉತ್ಪನ್ನಗಳ ಮೌಲ್ಯಗಳು ಎಷ್ಟು ಪ್ರಮಾಣದಲ್ಲಿ ಕಡಿಮೆಯಾಗುತ್ತದೆ ? ಅನಂತ ಸರಣಿಗಳಾದ $75+(0.5)75+(0.5)^2 75+$ .......ಙ. ಗಳನ್ನು ಕೂಡಿಸಿದಾಗ ಉತ್ಪನ್ನದಲ್ಲಾದ ಒಟ್ಟು ಇಳಿಕೆಯು ಈ ಕೆಳಗಿನಂತಿರುತ್ತದೆ.

$$\frac{75}{1-0.5} = 150$$

ಆದರೆ ಆರ್ಥಿಕತೆಯ ಹೊಸ ಸಮತೋಲನವು $Y^*_2 = 100$ ಮಾತ್ರವಾಗಿದೆ ಎಂದು ಅರ್ಥವಾಗುತ್ತದೆ. ಈಗ ಜನರು ಒಟ್ಟಿನಲ್ಲಿ $S^*_2 = Y^*_2 - C^*_2 = Y^*_2 - (\overline{C} + c_2.Y^*_2) = 100-(40+0.5 \times 100) = 10$ ರಷ್ಟು ಉಳಿತಾಯ ಮಾಡುತ್ತಾರೆ.ಆದರೆ ಹಿಂದಿನ ಸಮತೋಲನದಲ್ಲಿ ಅವರು *mpc* ನ ಮೌಲ್ಯವು $c_1 = 0.8$ ಆಗಿದ್ದಾಗ $S^*_1 = Y^*_1 - C^*_1 = Y^*_1 - (\overline{C} + c_1.Y^*_1) = 250-(40+0.8 \times 250) = 10$ರಷ್ಟು ಉಳಿತಾಯ ಮಾಡುತ್ತಿದ್ದರು. ಆದುದರಿಂದ ಆರ್ಥಿಕತೆಯಲ್ಲಿ ಒಟ್ಟು ಉಳಿತಾಯದ ಮೌಲ್ಯವು ಬದಲಾವಣೆಯಾಗದೇ ಉಳಿದಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಈ ಉದಾಹರಣೆಯು "ಖಂಡ ಖಂಡಗಳು ಅಖಂಡತೆಗೆ ಸಮವಾಗುವುದಿಲ್ಲ" ಎಂಬ ಸಮಗ್ರ ಅರ್ಥಶಾಸ್ತ್ರದ ವಿಶ್ಲೇಷಣೆಯ ಮುಖ್ಯ ವಿಷಯವಸ್ತುವಾದ ಉಳಿತಾಯವನ್ನು ಎಷ್ಟು ಹೆಚ್ಚಿಸಬೇಕೆಂಬ, ವೈಯಕ್ತಿಕ ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಗಳನ್ನು ನಾವು ಅಧ್ಯಯನ ಮಾಡಿದರೂ,ಆರ್ಥಿಕತೆಯಲ್ಲಿ ಸಮಗ್ರ ಉಳಿತಾಯಕ್ಕೆ ಏನಾಗುತ್ತಿದೆ ಎಂಬುದನ್ನು ಸೈದ್ಧಾಂತೀಕರಣಗೊಳಿಸುವುದು ನಮಗೆ ಸಾಧ್ಯವಾಗುವುದಿಲ್ಲ. ಸಮಗ್ರ ಉಳಿತಾಯವನ್ನು ನಿರ್ಧರಿಸುವುದು ವೈಯಕ್ತಿಕ ಉಳಿತಾಯದ ತೀರ್ಮಾನಗಳ ಮೇಲೆ ಪ್ರಭಾವ ಬೀರುವ ಒಟ್ಟು ಅಂಶಗಳಷ್ಟೇ ಆಗಿರದೆ ಅದಕ್ಕಿಂತ ಹೆಚ್ಚಿನದ್ದಾಗಿದೆ.

4.3.2 ರ ಭಾಗದಲ್ಲಿ AD ರೇಖೆಯ ಸ್ಥಾನದಲ್ಲಿನ 2 ರೀತಿಯ ಪರಾಮಿತಿಯ ಬದಲಾವಣೆಗಳನ್ನು ಚರ್ಚಿಸಿದ್ದೇವೆ. $\overline{A}$ ಬದಲಾವಣೆಯಾದಾಗ AD ರೇಖೆಯು ಸಮನಾಂತರವಾಗಿ ಮೇಲ್ಮುಖವಾಗಿ ಅಥವಾ ಕೆಳಮುಖವಾಗಿ ಪಲ್ಲಟಗೊಳ್ಳುತ್ತದೆ ಆದಾಗ್ಯೂ *c* ಬದಲಾವಣೆಯಾದರೆ ರೇಖೆಯು ಮೇಲ್ಭಾಗಕ್ಕೆ ಅಥವಾ ಕೆಳಭಾಗಕ್ಕೆ ಜಗಿಯುತ್ತದೆ. *mps* ಹೆಚ್ಚಾದಾಗ ಅಥವಾ *mpc* ಯು ಕಡಿಮೆಯಾದಾಗ ಂಆ ರೇಖೆಯ ಇಳಿಜಾರು ಕಡಿಮೆಯಾಗುತ್ತದೆ ಹಾಗೂ ಅದು ಕೆಳಭಾಗಕ್ಕೆ ಜಗಿಯುತ್ತದೆ.




**ರೇಖಾಚಿತ್ರ** 4.6 ಮಿತವ್ಯಯದ ವಿರೋಧಾಭಾಸ–ಕೆಳಮುಖವಾಗಿ ಚಲಿಸುವ AD ರೇಖೆ

ಈ ಸನ್ನಿವೇಶವನ್ನು 4.6 ರ ರೇಖಾಚಿತ್ರದಲ್ಲಿ ತೋರಿಸಲಾಗಿದೆ. ಆರಂಭದ ಪರಾಮಿತಿಗಳ ಮೌಲ್ಯಗಳು $\overline{A}$ =50 ಮತ್ತು $c = 0.8$ ಆಗಿದ್ದಾಗ ಉತ್ಪನ್ನ ಮತ್ತು ಸಮಗ್ರ ಬೇಡಿಕೆಗಳ ಸಮತೋಲನ ಮೌಲ್ಯವು ಸಮೀಕರಣ (4.4)ರಂತೆ ಈ ಕೆಳಗಿನಂತಾಗುತ್ತದೆ.

$$Y^*_1 = \frac{50}{1-0.8} \quad 250$$

ಪರಾಮಿತಿಯ ಮೌಲ್ಯವು $c = 0.5$ ಕ್ಕೆ ಬದಲಾದಾಗ, ಉತ್ಪನ್ನ ಮತ್ತು ಸಮಗ್ರ ಬೇಡಿಕೆಗಳ ಹೊಸ ಸಮತೋಲನ ಮೌಲ್ಯವು ಈ ಕೆಳಗಿನಂತಾಗುತ್ತದೆ.

$$Y^*_2 = \frac{50}{1-0.5} \quad 100$$

ಸಮತೋಲನ ಉತ್ಪನ್ನ ಮತ್ತು ಸಮಗ್ರ ಬೇಡಿಕೆಗಳ ಪ್ರಮಾಣಗಳು 150 ಕ್ಕೆ ಇಳಿದಿವೆ.ಮೇಲೆ ವಿವರಿಸಿದಂತೆ ಉಳಿತಾಯದ ಒಟ್ಟು ಮೌಲ್ಯದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ ಎಂಬುದನ್ನು ಇದು ತಿಳಿಸುತ್ತದೆ.

## ಸಾರಾಂಶ *Summary*

ಒಂದು ನಿರ್ದಿಷ್ಟ ಬೆಲೆಯ ಮಟ್ಟದಲ್ಲಿ ಅಂತಿಮ ಸರಕುಗಳ ಸಮಗ್ರ ಬೇಡಿಕೆಯು ಅಂತಿಮ ಸರಕುಗಳ ಸಮಗ್ರ ಪೂರೈಕೆಗೆ ಸಮವಾದಾಗ ಅಂತಿಮ ಸರಕುಗಳ ಅಥವಾ ಉತ್ಪನ್ನ ಮಾರುಕಟ್ಟೆ ಅದರ ಸಮತೋಲನವನ್ನು ತಲುಪುತ್ತದೆ. ಅಂತಿಮ ಸರಕುಗಳ ಸಮಗ್ರ ಬೇಡಿಕೆಯು ಯೋಜಿತ ಅನುಭೋಗ, ಯೋಜಿತ ಹೂಡಿಕೆ, ಸರಕಾರದ ವೆಚ್ಚ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಒಂದು ಘಟಕದಷ್ಟು ಆದಾಯವು ಹೆಚ್ಚಳವಾಗುವುದರಿಂದಾಗಿ ಯೋಜಿತ ಅನುಭೋಗದ ದರದಲ್ಲಿನ ಏರಿಕೆಯನ್ನು ಸೀಮಾಂತ ಅನುಭೋಗದ ಪ್ರವೃತ್ತಿ ಎಂದು ಕರೆಯುತ್ತೇವೆ. ಸರಳವಾಗಿ ಅರ್ಥೈಸಲು ಅಲ್ಪಾವಧಿಯಲ್ಲಿ ಆರ್ಥಿಕತೆಯಲ್ಲಿ ಅಂತಿಮ ಸರಕುಗಳ ಸಮಗ್ರ ಬೇಡಿಕೆಯ ಮಟ್ಟವನ್ನು ನಿರ್ಧರಿಸಲು ಅಂತಿಮ ಸರಕುಗಳ ಬೆಲೆ ಮತ್ತು ಬಡ್ಡಿಯ ದರಗಳು ಸ್ಥಿರವಾಗಿರುತ್ತವೆ ಎಂದು ಊಹಿಸುತ್ತೇವೆ. ಈ ಬೆಲೆಯಲ್ಲಿ ಸಮಗ್ರ ಪೂರೈಕೆಯೂ ಪರಿಪೂರ್ಣ ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ ಎಂದು ಸಹ ಕಲ್ಪಿಸಿಕೊಂಡಿದ್ದೇವೆ. ಇಂತಹ ಸನ್ನಿವೇಶಗಳಲ್ಲಿ ಸಮಗ್ರ ಉತ್ಪನ್ನವು ಸಮಗ್ರ ಬೇಡಿಕೆಯ ಮಟ್ಟವೊಂದರಿಂದಲೇ ನಿರ್ಧಾರವಾಗುತ್ತದೆ. ಇದನ್ನು ಪರಿಣಾಮಕಾರಿ ಬೇಡಿಕೆಯ ತತ್ವ ಎಂದು ಕರೆಯುತ್ತೇವೆ. ಗುಣಕದ ಪ್ರಕ್ರಿಯೆಯ ಮೂಲಕ ಸ್ವಾಯತ್ತ ವೆಚ್ಚದ ಹೆಚ್ಚಳವು (ಇಳಿಕೆ) ಅಧಿಕ ಪ್ರಮಾಣದಲ್ಲಿ ಅಂತಿಮ ಸರಕುಗಳ ಸಮಗ್ರ ಉತ್ಪನ್ನದ ಹೆಚ್ಚಳಕ್ಕೆ (ಕಡಿಮೆ ಮಾಡಲು) ಕಾರಣವಾಗುತ್ತದೆ.

## ಪ್ರಮುಖ ಪರಿಭಾಷೆಗಳು *Key Concepts*

| | |
|---|---|
| ಸಮಗ್ರ ಬೇಡಿಕೆ | ಸಮಗ್ರ ಪೂರೈಕೆ |
| ಸಮತೋಲನ | ಯೋಜಿತ |
| ಯೋಜನಾರಹಿತ | ಯೋಜಿತ ಅನುಭೋಗ |
| ಸೀಮಾಂತ ಅನುಭೋಗದ ಪ್ರವೃತ್ತಿ | ಯೋಜಿತ ಹೂಡಿಕೆ |
| ದಾಸ್ತಾನಿನಲ್ಲಾದ ಉದ್ದೇಶ ಪೂರ್ವಕವಲ್ಲದ ಬದಲಾವಣೆಗಳು | ಸ್ವಾಯತ್ತ ಬದಲಾವಣೆ |
| ಪರಾಮಿತಿಯ ಪಲ್ಲಟ | ಪರಿಣಾಮಕಾರಿ ಬೇಡಿಕೆಯ ತತ್ವ |
| ಮಿತವ್ಯಯದ ವಿರೋಧಾಭಾಸ | ಸ್ವಾಯತ್ತ ವೆಚ್ಚದ ಗುಣಕ |

ಅಭ್ಯಾಸಗಳು *Exercises*

1. ಸೀಮಾಂತ ಅನುಭೋಗಪ್ರವೃತ್ತಿ ಎಂದರೇನು ? ಅದು ಯಾವ ರೀತಿ ಸೀಮಾಂತ ಉಳಿತಾಯ ಪ್ರವೃತ್ತಿಗೆ ಸಂಬಂಧಿಸಿದೆ?
2. ಯೋಜಿತ ಹೂಡಿಕೆ ಮತ್ತು ಯೋಜನಾರಹಿತ ಹೂಡಿಕೆಗಳ ನಡುವಿನ ವ್ಯತ್ಯಾಸಗಳಾವುವು?
3. ರೇಖೆಯ ಪರಾಮಿತಿ ಪಲ್ಲಟ ಎಂಬುದನ್ನು ನೀವು ಹೇಗೆ ಅರ್ಥೈಸುವಿರಿ? ಒಂದು ರೇಖೆಯು (i) ಇಳಿಜಾರು ಇಳಿಕೆಯಾದಾಗ ಮತ್ತು (ii) ಅದರ (ಛೇದಕ) ಹೆಚ್ಚಾದಾಗ ಯಾವ ರೀತಿ ಪಲ್ಲಟವಾಗುತ್ತದೆ?
4. ಪರಿಣಾಮಕಾರಿ ಬೇಡಿಕೆ ಎಂದರೇನು ? ಅಂತಿಮ ಸರಕುಗಳ ಬೆಲೆ ಹಾಗೂ ಬಡ್ಡಿದರಗಳನ್ನು ನೀಡಿದಾಗ ಸ್ವಾಯತ್ತ ವೆಚ್ಚದ ಗುಣಕವನ್ನು ನೀವು ಹೇಗೆ ಪಡೆಯುವಿರಿ.
5. ಸ್ವಾಯತ್ತ ಹೂಡಿಕೆ ಮತ್ತು ಅನುಭೋಗ ವೆಚ್ಚ (A) ಗಳು ₹ 50 ಕೋಟಿ ಹಾಗೂ *mps* 0.2 ಮತ್ತು ಆದಾಯ (Y) ₹ 4000 ಕೋಟಿ ಆದಾಗ ಯೋಜಿತ ಸಮಗ್ರ ಬೇಡಿಕೆಯ ಮಟ್ಟವನ್ನು ಅಂದಾಜು ಮಾಡಿರಿ. ಆರ್ಥಿಕತೆಯು ಸಮತೋಲನದಲ್ಲಿದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಸಿ (ಕಾರಣ ನೀಡಿರಿ)

6 "ಮಿತವ್ಯಯದ ವಿರೋಧಾಭಾಸ" ವನ್ನು ವಿವರಿಸಿರಿ.

## ಸೂಚಿತ ಅಧ್ಯಯನಗಳು *Suggested Readings*


1. Dornbusch, R. and S. Fischer. 1990. Macroeconomics, (fifth edition) pages 63 – 105. McGraw Hill. Paris.


❖ ❖ ❖ ❖

# ಅಧ್ಯಾಯ 5

# ಸರ್ಕಾರದ ಮುಂಗಡಪತ್ರ ಮತ್ತು ಆರ್ಥಿಕತೆ

## *The Government Functions and Scope*



ಮಿಶ್ರ ಆರ್ಥಿಕತೆಯಲ್ಲಿ, ಖಾಸಗಿವಲಯವಲ್ಲದೇ ಪ್ರಮುಖ ಪಾತ್ರವಹಿಸುವ ಸರ್ಕಾರವೂ ಇರುತ್ತದೆ. ಈ ಅಧ್ಯಾಯದಲ್ಲಿ, ಆರ್ಥಿಕ ಜೀವನದ ಮೇಲೆ ಪ್ರಭಾವ ಬೀರುವ ಅಸಂಖ್ಯಾತ ಮಾರ್ಗಗಳ ಬಗ್ಗೆ ನಾವು ಅಭ್ಯಾಸ ಮಾಡುವುದಿಲ್ಲ, ಅದರೆ ಸರಕಾರದ ಮುಂಗಡ ಪತ್ರದ ಆದಾಯ ಮತ್ತು ವೆಚ್ಚದ ಕ್ರಮಗಳ ಮೂಲಕ ಕಾರ್ಯನಿರ್ವಹಿಸುವ ಮೂರು ವಿಬಿನ್ನ ಕಾರ್ಯಗಳಿಗೆ ನಮ್ಮನ್ನು ಸೀಮಿತಗೊಳಿಸಿಕೊಂಡಿದ್ದೇವೆ.

ಮೊದಲನೆಯದಾಗಿ, ಖಾಸಗಿ ಸರಕುಗಳಿಗಿಂತ (ಬಟ್ಟೆ, ಕಾರುಗಳು, ಆಹಾರ ಸಾಮಗ್ರಿಗಳು) ಭಿನ್ನವಾಗಿರುವ ಸಾರ್ವಜನಿಕ ಸರಕುಗಳನ್ನು (ರಾಷ್ಟ್ರೀಯ ರಕ್ಷಣೆ ರಸ್ತಗಳು, ಸರ್ಕಾರದ ಆಡಳಿತ) ಮಾರುಕಟ್ಟೆ ಯಾಂತ್ರಿಕತೆಯ ಮೂಲಕ ಒದಗಿಸುವುದು ಸಾಧ್ಯವಿಲ್ಲ. ಅಂದರೆ ವೈಯಕ್ತಿಕ ಅನುಭೋಗಿಗಳು ಮತ್ತು ಉತ್ಪಾದಕರ ನಡುವಿನ ವ್ಯವಹಾರದಿಂದ ಒದಗಿಸುವುದು ಸಾಧ್ಯವಿಲ್ಲ ಮತ್ತು ಇವುಗಳನ್ನು ಸರ್ಕಾರವೇ ಒದಗಿಸಬೇಕಾಗುತ್ತದೆ. ಇದು **ಹಂಚಿಕೆಯ ಕಾರ್ಯವಾಗಿದೆ.**

ಎರಡನೆಯದಾಗಿ, ಸರ್ಕಾರ ತನ್ನ ತೆರಿಗೆ ಮತ್ತು ವೆಚ್ಚದ ನೀತಿಯ ಮೂಲಕ ಸಮಾಜವು ನಾಯೋಚಿತವೆಂದು ಪರಿಗಣಿಸುವಂತ ಆದಾಯದ ವಿತರಣೆ ಮಾಡಲು ಪ್ರಯತ್ನಿಸುತ್ತದೆ. ಪಾವತಿ ವರ್ಗಾವಣೆ ಮತ್ತು ತೆರಿಗೆ ಸಂಗ್ರಹಣೆ ಮೂಲಕ ಸರ್ಕಾರ ಕುಟುಂಬದ ವೆಚ್ಚ ಮಾಡಬಹುದಾದ ವೈಯಕ್ತಿಕ ವರಮಾನದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಇದು ಆದಾಯ ವಿತರಣೆಯನ್ನು ಮಾರ್ಪಡಿಸಬಹುದು. **ಇದು ವಿತರಣೆಯ ಕಾರ್ಯವಾಗಿದೆ.**

ಮೂರನೆಯದಾಗಿ, ಆರ್ಥಿಕತೆಯು ಗಣನೀಯ ಏರಿಳಿತಗಳಿಗೆ ಒಳಗಾಗುತ್ತದೆ ಮತ್ತು, ಅದು ಅತೀ ಧೀರ್ಘ ಅವಧಿಯ ನಿರುದ್ಯೋಗ ಅಥವಾ ಹಣದುಬ್ಬರದಿಂದ ಬಳಲುತ್ತಿರಬಹುದು. ಆರ್ಥಿಕತೆಯಲ್ಲಿನ ಒಟ್ಟಾರೆ ಉದ್ಯೋಗ ಮಟ್ಟ ಮತ್ತು ಬೆಲೆಗಳು, ಸರ್ಕಾರವಲ್ಲದೆ ಲಕ್ಷಾಂತರ ಖಾಸಗಿ ಆರ್ಥಿಕ ಪ್ರತಿನಿಧಿಗಳ ವೆಚ್ಚದ ನಿರ್ಧಾರಗಳ ಬಿಂಬಕವಾದ ಸಮಗ್ರ ಬೇಡಿಕೆಯ ಮಟ್ಟವನ್ನು ಅವಲಂಬಿಸಿವೆ. ಪ್ರತಿಯಾಗಿ ಈ ನಿರ್ಧಾರಗಳು ಆದಾಯ ಮತ್ತು ಸಾಲ ಲಭ್ಯತೆಯಂತಹ ಹಲವು ಅಂಶಗಳನ್ನು ಅವಲಂಬಿಸಿವೆ. ಯಾವುದೇ ಅವಧಿಯಲ್ಲಿ, ಆರ್ಥಿಕತೆಯಲ್ಲಿನ ಶ್ರಮ ಮತ್ತು ಇತರೆ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಂತಹ ವೆಚ್ಚದ ಮಟ್ಟವು ಸಾಕಾಗದೇ ಇರಬಹುದು. ಕೂಲಿ ಮತ್ತು ಬೆಲೆಗಳು ಸಾಮಾನ್ಯವಾಗಿ ಇಳಿಮುಖ ಕಾಠಿಣ್ಯವನ್ನು (ಅವು ಒಂದು ಮಟ್ಟಕ್ಕಿಂತ ಕೆಳಗಿಳಿಯುವುದಿಲ್ಲ) ಹೊಂದಿರುವುದರಿಂದ, ಉದ್ಯೋಗವು ಸ್ವಯಂ ಪ್ರೇರಿತವಾಗಿ ಪುನರ್ ಸ್ಥಾಪನೆಗೊಳ್ಳುವುದಿಲ್ಲ. ಹೀಗಾಗಿ, ಸಮಗ್ರ ಬೇಡಿಕೆಯನ್ನು ಹೆಚ್ಚಿಸುವಂತಹ ನೀತಿಗಳ ಅಗತ್ಯವಿದೆ. ಮತ್ತೊಂದು ರೀತಿಯಲ್ಲಿ ಅಧಿಕ ಉದ್ಯೋಗಮಟ್ಟವಿರುವಾಗ ಲಭ್ಯವಿರುವ ಉತ್ಪನ್ನಕ್ಕಿಂತ ವೆಚ್ಚ ಅಧಿಕವಿರುವ ಸಂಧರ್ಭವೂ ಇರಬಹುದು ಮತ್ತು ಇದು ಅತಿಪ್ರಸರಣಕ್ಕೆ (ಹಣದುಬ್ಬರ) ಕಾರಣವಾಗಬಹುದು. ಇಂತಹ ಸನ್ನಿವೇಶಗಳಲ್ಲಿ ಬೇಡಿಕೆಯನ್ನು ಕಡಿಮೆ ಮಾಡಲು ನಿರ್ಬಂಧಿತ ಕ್ರಮಗಳ ಅಗತ್ಯವಿರುತ್ತದೆ. ಇವುಗಳು ದೇಶೀಯ ಆರ್ಥಿಕತೆಯಲ್ಲಿ **ಸ್ಥಿರೀಕರಣದ** ಅಗತ್ಯತೆತೆಯನ್ನು ಒಳಗೊಂಡಿವೆ.

ಸಾರ್ವಜನಿಕ ಸರಕುಗಳನ್ನು ಸರ್ಕಾರವು ಪೂರೈಸುವ ಅಗತ್ಯತೆಯನ್ನು ಅರ್ಥಮಾಡಿಕೊಳ್ಳಲು, ಯಾವ ಅಂಶಗಳು ಅವುಗಳನ್ನು ಖಾಸಗಿ ಸರಕುಗಳಿಂದ ಭಿನ್ನವಾಗಿಸುತ್ತವೆ ಎಂಬುದನ್ನು ನಾವು ಪರಿಗಣಿಸಬೇಕಾಗುತ್ತದೆ. ಅದರಲ್ಲಿ ಎರಡು ಪ್ರಮುಖ ವ್ಯತ್ಯಾಸಗಳಿವೆ. ಮೊದಲನೆಯದಾಗಿ ಖಾಸಗಿ ಸರಕುಗಳಂತೆ, ಸಾರ್ವಜನಿಕ ಸರಕುಗಳ

ಪ್ರಯೋಜನವು ಯಾವುದೇ ಒಬ್ಬ ನಿರ್ದಿಷ್ಟ ಅನುಭೋಗಿಗೆ ಸೀಮಿತವಾಗಿಲ್ಲ. ಆದರೆ ಅವುಗಳು ಎಲ್ಲರಿಗೂ ಲಭ್ಯವಾಗುತ್ತವೆ. ಉದಾಹರಣೆಗೆ, ಒಬ್ಬ ವ್ಯಕ್ತಿಯು ಚಾಕೋಲೇಟ್‌ನ್ನು ಅನುಭೋಗಿಸಿದಾಗ ಅಥವಾ ಶರ್ಟ್‌ನ್ನು ಧರಿಸಿದಾಗ ಅವು ಇತರೆ ವ್ಯಕ್ತಿಗಳಿಗೆ ಲಭ್ಯವಾಗುವುದಿಲ್ಲ. ಈ ವ್ಯಕ್ತಿಯ ಅನುಭೋಗವು ಇತರೆ ವ್ಯಕ್ತಿಗಳ ಅನುಭೋಗದ ಪ್ರತಿಸ್ಪರ್ಧಿ ಸಂಬಂಧದ ಮೇಲೆ ನಿಂತಿದೆ. ಆದಾಗ್ಯೂ, ಒಂದು ಸಾರ್ವಜನಿಕ ಉದ್ಯಾನವನ ಅಥವಾ ವಾಯು ಮಾಲಿನ್ಯವನ್ನು ಕಡಿಮೆ ಮಾಡುವ ಕ್ರಮಗಳನ್ನು ನಾವು ಪರಿಗಣಿಸಿದಾಗ, ಅವುಗಳ ಪ್ರಯೋಜನವು ಎಲ್ಲರಿಗೂ ಲಭ್ಯವಾಗುತ್ತದೆ. ಹಲವು ವ್ಯಕ್ತಿಗಳಿಂದ ಅನುಭೋಗಿಸಲಾಗುವ ಇಂತಹ ಉತ್ಪನ್ನಗಳು ಪ್ರತಿಸ್ಪರ್ಧಿತವಾಗಿರುವುದಿಲ್ಲ. ಅಂದರೆ ಇತರರಿಗೆ ಲಭಿಸುವುದನ್ನು ಕಡಿಮೆ ಮಾಡದೆ ಒಬ್ಬ ವ್ಯಕ್ತಿ ಇಂತಹ ಸರಕುಗಳನ್ನು ಆನಂದದಿಂದ ಅನುಭವಿಸಬಹುದು. ಎರಡನೆಯದಾಗಿ, ಖಾಸಗಿ ಸರಕುಗಳಿಗೆ ಸಂಬಂದಿಸಿದಂತೆ ಯಾರೇ ಆಗಲಿ ಸರಕುಗಳಿಗೆ ಹಣವನ್ನು ಪಾವತಿಸದಿದ್ದರೆ ಅವುಗಳ ಅನುಕೂಲಗಳನ್ನು ಅನುಭವಿಸುವುದರಿಂದ ಅಂತಹವರನ್ನು ಹೊರಗಿಡಲಾಗುತ್ತದೆ. ನೀವು ಟಿಕೆಟ್‌ನ್ನು ಖರೀದಿಸದಿದ್ದರೆ, ನೀವು ಸ್ಥಳೀಯ ಸಿನಿಮಾ ಮಂದಿರದಲ್ಲಿನ ಸಿನೆಮಾ ವೀಕ್ಷಣೆಯಿಂದ ನಿಮ್ಮನ್ನು ಹೊರಗಿಡಲಾಗುತ್ತದೆ. ಆದಾಗ್ಯೂ, ಸಾರ್ವಜನಿಕ ಸರಕುಗಳಿಗೆ ಸಂಬಂಧಿಸದಂತೆ, ಸರಕುಗಳ ಲಾಭವನ್ನು ಪಡೆಯುವುದರಿಂದ ಯಾರನ್ನೂ ಹೊರಗಿಡುವ ಸಾಧ್ಯತೆಯಿರುವುದಿಲ್ಲ, ಸಾಮಾನ್ಯವಾಗಿ ಪಾವತಿಸದೇ ಇರುವವರನ್ನೂ ಸಹಾ ಹೊರತು ಪಡಿಸಲು ಆಗದಿರುವುದರಿಂದ, ಸಾರ್ವಜನಿಕ ಸರಕುಗಳಿಗೆ ಅವರಿಂದ ಶುಲ್ಕವನ್ನು ಸಂಗ್ರಹಿಸುವುದು ಕಷ್ಟ ಅಥವಾ ಅಸಾಧ್ಯ. ಇದು 'ಪುಕ್ಕಟೆ ಸವಾರರ' (Free rider) ಸಮಸ್ಯೆಗೆ ಕಾರಣವಾಗುತ್ತದೆ. ಅನುಭೋಗಿಗಳು ತಾವು ಉಚಿತವಾಗಿ ಪಡೆದುದಕ್ಕೆ ಸ್ವಇಚ್ಛೆಯಿಂದ ಪಾವತಿಸುವುದಿಲ್ಲ ಮತ್ತು ಅವರು ಯಾರಿಗೂ ವಿಶೇಷವಾಗಿ ಸೇರದ ಆಸ್ತಿಯನ್ನು ಅನುಭವಿಸಿದ್ದಕ್ಕೆ ಯಾವುದೇ ಪಾವತಿ ಮಾಡುವುದಿಲ್ಲ. ಉತ್ಪಾದಕರು ಮತ್ತು ಅನುಭೋಗಿಗಳ ನಡುವಿನ ಸಂಬಂಧ ಕಡಿದುಹೋಗಿರುತ್ತದೆ ಮತ್ತು ಸರ್ಕಾರ ಅಂತಹ ಸರಕುಗಳನ್ನು ತಾನೇ ಒದಗಿಸಲು ಮುಂದಡಿ ಇಡಬೇಕಾಗುತ್ತದೆ. ಆದಾಗ್ಯೂ, ಸಾರ್ವಜನಿಕ ಸರಬರಾಜು ಸಾರ್ವಜನಿಕ ಉತ್ಪಾದನೆಯಂತೆಯೇ ಇರುವುದಿಲ್ಲ. **ಸಾರ್ವಜನಿಕ ಸರಬರಾಜು** ಎಂದರೆ ಅವುಗಳಿಗೆ ಆಯವ್ಯಯದ ಮೂಲಕ ಹಣಕಾಸನ್ನು ಒದಗಿಸಲಾಗಿರುತ್ತದೆ ಮತ್ತು ಯಾವುದೇ ನೇರ ಪಾವತಿಯಿಂದ ಮುಕ್ತವಾಗಿ ಲಭಿಸುತ್ತವೆ. ಈ ಸರಕುಗಳನ್ನು ನೇರವಾಗಿ ಸರ್ಕಾರದ ನಿರ್ವಹಣೆಯಲ್ಲಿ ಅಥವಾ ಖಾಸಗಿ ವಲಯದಲ್ಲಿ ಉತ್ಪಾದಿಸಬಹುದಾಗಿದೆ.

ಈ ಅಧ್ಯಾಯವು ಕೆಳಗಿನಂತೆ ಮುಂದೆ ಸಾಗುತ್ತದೆ. ವಿಭಾಗ 5.1 ರಲ್ಲಿ ನಾವು ಸರ್ಕಾರದ ಆದಾಯದ ಮೂಲಗಳನ್ನು ಮತ್ತು ಸರ್ಕಾರದ ವೆಚ್ಚದ ಮಾರ್ಗಗಳನ್ನು ಹೊಂದಿರುವ ಸರ್ಕಾರದ ಮುಂಗಡ ಪತ್ರದ ಭಾಗಗಳನ್ನು ಪ್ರಸ್ತುತ ಪಡಿಸುತ್ತೇವೆ. ವಿಭಾಗ 5.2 ರಲ್ಲಿ ನಾವು, ವೆಚ್ಚವು ಆದಾಯದ ಸಂಗ್ರಹಣೆಗಿಂತ ಅಧಿಕವಾದಾಗ, ಉದ್ಭವಿಸುವ ಸರ್ಕಾರದ ಕೊರತೆಯ ಸಮಸ್ಯೆಯನ್ನು ಚರ್ಚಿಸುತ್ತೇವೆ. ವಿಭಾಗ 5.3 ಈ ಹಿಂದೆ ಚರ್ಚಿಸಿದಂತೆ ಕೋಶೀಯ ನೀತಿ ಮತ್ತು ಆದಾಯ ವೆಚ್ಚದ ವಿಧಾನದಲ್ಲಿನ ಗುಣಕ ಪ್ರಕ್ರಿಯೆಯೊಂದಿಗೆ ವ್ಯವಹರಿಸುತ್ತದೆ. ಕೊರತೆಯನ್ನು ತುಂಬಲು ಸರ್ಕಾರದ ಸಾಲವು, ಸಾರ್ವಜನಿಕ ಸಾಲ ಸಂಚಯನಕ್ಕೆ– ಸರಕಾರದ ಋಣ ಸಂಚಯನಕ್ಕೆ– ದಾರಿ ಮಾಡಿಕೊಡುತ್ತದೆ ಈ ಅಧ್ಯಾಯವು ಸಾರ್ವಜನಿಕ ಸಾಲ ಸಮಸ್ಯೆಯ ವಿಶ್ಲೇಷಣೆಯೊಂದಿಗೆ ಸಮಾಪ್ತಿಗೊಳ್ಳುತ್ತದೆ.

## 5.1 ಸರ್ಕಾರದ ಮುಂಗಡ ಪತ್ರದ ಭಾಗಗಳು *Components of the Government Budget*

ಏಪ್ರಿಲ್ 1 ರಿಂದ ಮಾರ್ಚ್ 31 ರ ಅವಧಿಯ ಪ್ರತಿಯೊಂದೂ ಹಣಕಾಸು ವರ್ಷಕ್ಕೆ ಸಂಬಂದಿಸಿದಂತೆ ಸರ್ಕಾರದ ಆದಾಯ ಮತ್ತು ವೆಚ್ಚದ ಅಂದಾಜು ಪಟ್ಟಿಯನ್ನು ಸಂಸತ್ತಿನಲ್ಲಿ ಮಂಡಿಸುವುದು ಭಾರತದಲ್ಲಿ ಸಂವಿದಾನಾತ್ಮಕ (ಅನುಚ್ಛೇದ 112) ಅವಶ್ಯಕತೆಯಾಗಿದೆ. ಈ 'ವಾರ್ಷಿಕ ಹಣಕಾಸಿನ ಪಟ್ಟಿ'ಯು ಮುಂಗಡಪತ್ರದ ಪ್ರಮುಖ ದಾಖಲೆಯಾಗಿರುತ್ತದೆ. ನಂತರ, ಮುಂಗಡ ಪತ್ರವು ಕಂದಾಯ ಖಾತೆಯಲ್ಲಿನ ವೆಚ್ಚವನ್ನು ಇತರೆ ವೆಚ್ಚಗಳಿಂದ ಪ್ರತ್ಯೇಕಿಸಬೇಕಾಗುತ್ತದೆ. ಆದುದರಿಂದ, ಮುಂಗಡ ಪತ್ರವು (ಎ) ಕಂದಾಯ ಮುಂಗಡ ಪತ್ರ ಮತ್ತು (ಬಿ) ಬಂಡವಾಳ ಮುಂಗಡ ಪತ್ರಗಳನ್ನು ಒಳಗೊಂಡಿರುತ್ತದೆ.(ಚಾರ್ಟ್ 1 ನ್ನು ನೋಡಿ)

### ೫.1.1 ಕಂದಾಯ ಖಾತೆ *Revenue Account*

ಕಂದಾಯ ಮುಂಗಡಪತ್ರವು ಸರ್ಕಾರದ ಚಾಲ್ತಿ ಸ್ವೀಕೃತಿಗಳು ಮತ್ತು ಈ ಸ್ವೀಕೃತಿಗಳಿಂದ ಭರಿಸಬಹುದಾದ ವೆಚ್ಚವನ್ನು ತೋರಿಸುತ್ತದೆ.

**ಕಂದಾಯ ಸ್ವೀಕೃತಿಗಳು:** ಕಂದಾಯ ಸ್ವೀಕೃತಿಗಳು ಮರುಪಾವತಿ ಮಾಡಲಾಗದ ಸರ್ಕಾರದ ಸ್ವೀಕೃತಿಗಳಾಗಿವೆ. ಅಂದರೆ ಅವುಗಳು ಸರಕಾದಿಂದ ಮರುಪಾವತಿಯಾಗುವುದಿಲ್ಲ. ಈ ಸ್ವೀಕೃತಿಗಳನ್ನು ತೆರಿಗೆ ಆದಾಯ ಮತ್ತು ತೆರಿಗೆಯೇತರ ಆದಾಯವೆಂದು ವಿಂಗಡಿಸಲಾಗುತ್ತದೆ. ಕೋಷ್ಟಕ 5.1, 2015–16 ನೇ ಹಣಕಾಸು ವರ್ಷದಲ್ಲಿನ ಕೇಂದ್ರ ಸರ್ಕಾರದ ಸ್ವೀಕೃತಿ ಮತ್ತು ವೆಚ್ಚಗಳನ್ನು ಒದಗಿಸುತ್ತದೆ. ತೆರಿಗೆ ಆದಾಯಗಳು ಕೇಂದ್ರ ಸರ್ಕಾರ ವಿಧಿಸುವ ತೆರಿಗೆಗಳು ಮತ್ತು ಇತರೆ ಸುಂಕಗಳನ್ನು ಒಳಗೊಂಡಿರುತ್ತವೆ. ತೆರಿಗೆ ಆದಾಯಗಳು, ಕಂದಾಯ ಸ್ವೀಕೃತಿಯ ಒಂದು ಪ್ರಮುಖ ಭಾಗವಾಗಿವೆ. ನೇರ ತೆರಿಗೆಗಳು–ಇವು ನೇರವಾಗಿ ವ್ಯಕ್ತಿಗಳ ಮೇಲೆ (ವೈಯುಕ್ತಿಕ ವರಮಾನ ತೆರಿಗೆ) ಮತ್ತು ಉದ್ಯಮಗಳ (ಕಾರ್ಪೋರೇಷನ್ ತೆರಿಗೆ) ಮೇಲೆ ಬೀಳುತ್ತವೆ ಮತ್ತು ಪರೋಕ್ಷ ತೆರಿಗೆಗಳೆಂದರೆ, ಅಬಕಾರಿ ತೆರಿಗೆ (ದೇಶದೊಳಗೆ ಉತ್ಪಾದಿಸಲಾಗುವ ಸರಕುಗಳ ಮೇಲೆ ವಿಧಿಸಲಾಗುವ ಸುಂಕ), ಆಮದು – ರಫ್ತು ಸುಂಕಗಳು (ಭಾರತದೊಳಗೆ ಆಮದಾಗುವ ಮತ್ತು ಭಾರತದ ಹೊರಗೆ ರಫ್ತಾಗುವ ಸರಕುಗಳ ಮೇಲೆ ವಿಧಿಸುವ ತೆರಿಗೆ)ಮತ್ತು ಸೇವಾ ತೆರಿಗೆ[1]. ಇತರೆ ನೇರ ತೆರಿಗೆಗಳೆಂದರೆ, ಸಂಪತ್ತಿನ ತೆರಿಗೆ, ಉಡುಗೊರೆ ತೆರಿಗೆ ಮತ್ತು ವಾರಸು ತೆರಿಗೆ (ಈಗ ರದ್ದು ಪಡಿಸಲಾಗಿದೆ) ಮುಂತಾದವುಗಳು. ಆದಾಯ ಗಳಿಕೆಯಲ್ಲಿ ಅಂತಹ ಮಹತ್ತರವೆನಿಸುವುದಿಲ್ಲ ಎಂಬ ಕಾರಣದಿಂದ ಇವುಗಳನ್ನು 'ಕಾಗದದ ತೆರಿಗೆ'ಗಳೆಂದು ಕರೆಯಲಾಗುತ್ತದೆ. ಕಾರ್ಪೋರೇಷನ್ ತೆರಿಗೆಯು 2015–16 ರಲ್ಲಿ ಅಧಿಕ (ಶೇಕಡ 32) ಕೊಡುಗೆಯನ್ನು ನೀಡಿ, ಅದೇ ಸಂದರ್ಭದಲ್ಲಿ ವ್ಯಕ್ತಿಗತ ವರಮಾನ ತೆರಿಗೆಯು ಎರಡನೇ ಅಧಿಕ ಕೊಡುಗೆಯನ್ನು (ಶೇಕಡಾ 22ರಷ್ಟು) ನೀಡಿದೆ. ಒಟ್ಟು ತೆರಿಗೆ ಆದಾಯದಲ್ಲಿ ನೇರ ತೆರಿಗೆಯ ಪಾಲು 1990–91 ರಲ್ಲಿ ಶೇಕಡ 19.1 ರಿಂದ 2015–16 ರಲ್ಲಿ ಶೇಕಡ 55.6ಕ್ಕೆ ಏರಿಕೆಯಾಗಿದೆ.

ಪುರೋಗಾಮಿ ಆದಾಯ ತೆರಿಗೆ ಮೂಲಕ ಮರುಹಂಚಿಕೆಯ ಉದ್ದೇಶವನ್ನು ಸಾಧಿಸಲು ಪ್ರಯತ್ನಿಸಬೇಕಾಗಿದೆ. ಇದರಲ್ಲಿ ಅಧಿಕ ಆದಾಯದ ಮೇಲೆ ಅಧಿಕ ತೆರಿಗೆ ದರವಿರುತ್ತದೆ. ಉದ್ಯಮ ಘಟಕಗಳ ಮೇಲೆ ಪ್ರಮಾಣಾನುಗುಣವಾಗಿ ತೆರಿಗೆ ವಿಧಿಸಲಾಗುತ್ತದೆ, ತೆರಿಗೆ ದರವು ಉದ್ಯಮ ಘಟಕಗಳ ಲಾಭದ ನಿರ್ದಿಷ್ಟ ಪ್ರಮಾಣವನ್ನು ಆಧರಿಸಿರುತ್ತದೆ. ಅಬಕಾರಿ ಸುಂಕಗಳಿಗೆ ಸಂಬಂಧಿಸಿದಂತೆ ಜೀವನ ಅಗತ್ಯ ಸರಕುಗಳಿಗೆ ವಿನಾಯಿತಿ ನೀಡಲಾಗುತ್ತದೆ ಅಥವಾ ಕಡಿಮೆ ತೆರಿಗೆಯನ್ನು ವಿಧಿಸಲಾಗುತ್ತದೆ. ಹಿತಕರ ಸರಕು ಮತ್ತು ಅರೆ–ಐಷಾರಾಮಿ ಸರಕುಗಳ ಮೇಲೆ ಸಾಧಾರಣ ತೆರಿಗೆಯನ್ನು ವಿಧಿಸಲಾಗುತ್ತದೆ ಮತ್ತು ಐಷಾರಾಮಿ ಸರಕುಗಳು, ತಂಬಾಕು ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅಧಿಕ ತೆರಿಗೆಯನ್ನು ವಿಧಿಸಲಾಗುತ್ತದೆ.

ಕೇಂದ್ರ ಸರಕಾರದ ತೆರಿಗೆಯೇತರ ಆದಾಯವು, ಮುಖ್ಯವಾಗಿ, ಕೇಂದ್ರ ಸರ್ಕಾರ ನೀಡುವ ಸಾಲದ ಮೇಲಿನ ಬಡ್ಡಿ ಸ್ವೀಕೃತಿ, ಲಾಭಾಂಶ ಮತ್ತು ಸರ್ಕಾರದ ಹೂಡಿಕೆ ಮೇಲಿನ ಲಾಭಾಂಶಗಳು ಮತ್ತು ಲಾಭಗಳು ಶುಲ್ಕಗಳು ಮತ್ತು ಸರ್ಕಾರದಿಂದ ಮಾಡಲಾದ ಸೇವೆಗಳಿಗೆ ನೀಡಿದ ಸೇವೆಗಳ ಇತರೆ ಸ್ವೀಕೃತಿಗಳನ್ನು ಒಳಗೊಂಡಿರುತ್ತದೆ. ವಿದೇಶಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ನಗದು ಅನುದಾನಗಳೂ ಸಹ ಇದರಲ್ಲಿ ಸೇರಿರುತ್ತವೆ.

ಹಣಕಾಸಿನ ಬಿಲ್ಲ್[2] ನಲ್ಲಿ ಮಾಡಲಾದ ತೆರಿಗೆ ಪ್ರಸ್ತಾವನೆಯ ಪರಿಣಾಮಗಳನ್ನು ಕಂದಾಯ ಸ್ವೀಕೃತಿಯ ಅಂದಾಜು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ.

---

[1] ಸೇವಾತೆರಿಗೆಯು, ಟೆಲಿಫೋನ್ ಸೇವೆ, ಸ್ಟಾಕ್ ಬ್ರೋಕರ್‌ಗಳು ಆರೋಗ್ಯ ಕ್ಲಬ್‌ಗಳು, ಬ್ಯೂಟಿ ಪಾರ್ಲರ್‌ಗಳು, ಡ್ರೈ ಕ್ಲೀನಿಂಗ್ ಸೇವೆಗಳು ಮುಂತಾದ ಸೇವೆಗಳ ಮೇಲಿನ ಒಂದು ತೆರಿಗೆಯಾಗಿದ್ದು, ಸರಕು ಮತ್ತು ಸೇವೆಗಳ ಮೇಲಿನ ತೆರಿಗೆಯಲ್ಲಿನ ಅಸಮಾನತೆಯನ್ನು ಸರಿಪಡಿಸುವ ಸಲುವಾಗಿ 1994–95ರಲ್ಲಿ ಪರಿಚಯಿಸಲಾಯಿತು. ಇದು ಇತ್ತೀಚಿನ ವರ್ಷಗಳಲ್ಲಿ ಆದಾಯದ ಹರ್ಷದಾಯಕ ಮೂಲವಾಗಿದೆ. ತೆರಿಗೆಗೆ ಒಳಪಡುವ ಸೇವೆಗಳ ಸಂಖ್ಯೆ 1994–95 ರಲ್ಲಿ ಇದ್ದ 3 ರಿಂದ 2007–08 ರ ವೇಳಗೆ 100 ಕ್ಕೆ ಏರಿಸಲಾಗಿದೆ.

[2] ಒಂದು ಹಣಕಾಸು ಮಸೂದೆಯನ್ನು ವಾರ್ಷಿಕ ಹಣಕಾಸು ಪಟ್ಟಿಯೊಂದಿಗೆ ಪ್ರಸ್ತುತ ಪಡಿಸಲಾಗುತ್ತದೆ. ಮುಂಗಡ ಪತ್ರದಲ್ಲಿನ ಪ್ರಸ್ತಾವಿತ ತೆರಿಗೆಗಳ ಹೇರಿಕೆ, ರದ್ಧತಿ, ಇಳಿಕೆ, ಬದಲಾವಣೆ ಅಥವಾ ನಿಯಂತ್ರಣಗಳನ್ನು ಅದು ಒದಗಿಸುತ್ತದೆ.



**ಪಟ 1** ಸರ್ಕಾರದ ಮುಂಗಡ ಪತ್ರದ ಭಾಗಗಳು

**ಕಂದಾಯ ವೆಚ್ಚ:** ಕಂದಾಯ ವೆಚ್ಚವು ಕೇಂದ್ರ ಸರ್ಕಾರದ ಭೌತಿಕ ಅಥವಾ ಹಣಕಾಸಿನ ಆಸ್ತಿಗಳ ಸೃಷ್ಟಿಯನ್ನು ಹೊರತುಪಡಿಸಿ ಉಳಿದ ಉದ್ದೇಶಗಳಿಗೆ ಮಾಡುವ ವೆಚ್ಚವಾಗಿದೆ. ಇದು ಸರ್ಕಾರದ ಇಲಾಖೆಗಳ ಸಹಜ ಕಾರ್ಯನಿರ್ವಹಣೆ ಮತ್ತು ವಿವಿಧ ಸೇವೆಗಳಿಗಾಗಿ ಮಾಡುವ ವೆಚ್ಚಗಳು, ಸರ್ಕಾರ ಮಾಡಿದ ಸಾಲದ ಮೇಲಿನ ಬಡ್ಡಿ ಪಾವತಿ ಮತ್ತು ರಾಜ್ಯ ಸರ್ಕಾರ ಮತ್ತು ಇತರೆ ಸಂಸ್ಥೆಗಳಿಗೆ ನೀಡುವ ಅನುದಾನ (ಆಸ್ತಿಗಳನ್ನು ಸೃಷ್ಟಿಸುವಂತಹ ಕೆಲವು ಅನುದಾನಗಳೂ ಸಹ ಸೇರಿವೆ)ಕ್ಕೆ ಸಂಬಂಧಿಸಿದ್ದಾಗಿದೆ.

ಮುಂಗಡಪತ್ರದ ದಾಖಲೆಗಳು ಒಟ್ಟು ವೆಚ್ಚವನ್ನು **ಯೋಜನಾ ವೆಚ್ಚ ಮತ್ತು ಯೋಜನೇತರ ವೆಚ್ಚ**[3]ವೆಂದು ವಿಂಗಡಿಸಿವೆ. ಕಂದಾಯ ವೆಚ್ಚದೊಳಗಿನ ಯೋಜನೆ ಮತ್ತು ಯೋಜನೇತರ ವೆಚ್ಚದ ನಡುವೆ ಮಾಡಲಾದ ವಿಂಗಡನೆಯನ್ನು ಕೋಷ್ಟಕ 5.1 ರಲ್ಲಿನ 6ನೇ ಅಂಶದಲ್ಲಿ ತೋರಿಸಲಾಗಿದೆ. ಈ ವರ್ಗೀಕರಣದ ಪ್ರಕಾರ ಯೋಜನಾ ಕಂದಾಯ ವೆಚ್ಚವು ಕೇಂದ್ರ ಯೋಜನೆಗಳು (ಪಂಚವಾರ್ಷಿಕ ಯೋಜನೆಗಳು) ಹಾಗೂ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಯೋಜನೆಗಳಿಗೆ ಕೇಂದ್ರ ನೀಡುವ ನೆರವುಗಳಿಗೆ ಸಂಬಂಧಿಸಿದ್ದಾಗಿದೆ. ಯೋಜನೇತರ ವೆಚ್ಚವು, ಕಂದಾಯ ವೆಚ್ಚದಲ್ಲಿನ ಪ್ರಮುಖ ಭಾಗವಾಗಿದ್ದು, ಇದು ಸರ್ಕಾರದ ವಿಸ್ತೃತ ವೆಚ್ಚದ ಬಾಬ್ತುಗಳಾದ ಸಾಮಾನ್ಯ ಸೇವೆ, ಆರ್ಥಿಕ ಸೇವೆ ಮತ್ತು ಸಾಮಾಜಿಕ ಸೇವೆಗಳ ಮೇಲೆ ಮಾಡುವ ವೆಚ್ಚವನ್ನು ಒಳಗೊಳ್ಳುತ್ತದೆ. ಯೋಜನೇತರ ವೆಚ್ಚದ ಪ್ರಮುಖ ಬಾಬ್ತುಗಳೆಂದರೆ, ಬಡ್ಡಿ ಪಾವತಿಗಳು, ರಕ್ಷಣಾ ಸೇವೆಗಳು, ಸಹಾಯಧನಗಳು, ವೇತನಗಳು ಮತ್ತು ಪಿಂಚಣಿಗಳು.

ಮಾರುಕಟ್ಟೆ ಸಾಲಗಳು, ಬಾಹ್ಯ ಸಾಲಗಳು ಮತ್ತು ವಿವಿಧ ಮೀಸಲು ನಿಧಿಗಳಿಂದ ಪಡೆಯುವ ಸಾಲಗಳ ಮೇಲಿನ ಬಡ್ಡಿ ಪಾವತಿಗಳು, ಸೇರಿಕೊಂಡು ಯೋಜನೇತರ ವೆಚ್ಚದ ಏಕೈಕ ಬಹುದೊಡ್ಡ ಭಾಗವೆನಿಸಿದೆ. ರಕ್ಷಣಾ ವೆಚ್ಚವು, ಬದ್ಧತೆಯ ವೆಚ್ಚವಾಗಿರುತ್ತದೆ, ಅಂದರೆ ರಾಷ್ಟ್ರೀಯ ಭದ್ರತೆಯ ಕಾಳಜಿಗಾಗಿ ಮಾಡುವ ವೆಚ್ಚವಾಗಿದೆ. ಇವುಗಳನ್ನು ತೀವ್ರವಾಗಿ ಕಡಿತಗೊಳಿಸಲು ಇರುವ ಅವಕಾಶ ತೀರಾ ಅತ್ಯಲ್ಪವಾಗಿದೆ. ಸಹಾಯಧನಗಳು ಕಲ್ಯಾಣವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವಂತಹ ಪ್ರಮುಖ ನೀತಿಯ ಸಾಧನವಾಗಿವೆ. ಸರ್ಕಾರವು ಸಾರ್ವಜನಿಕ ಸರಕುಗಳು ಮತ್ತು ಸೇವೆಗಳಾದ, ಶಿಕ್ಷಣ ಆರೋಗ್ಯ ಇವುಗಳನ್ನು ಕಡಿಮೆ ಬೆಲೆಗೆ ಒದಗಿಸುವುದರ

[3] ಅಸ್ತಿತ್ವದಲ್ಲಿರುವ ಸಾಮರ್ಥ್ಯ ಮತ್ತು ಸೇವಾ ಮಟ್ಟಗಳ ನಿರ್ವಹಣೆಗಳನ್ನು ಕಡೆಗಣಿಸುವ ಹೊಸ ಯೋಜನೆಗಳನ್ನು ಪ್ರಾರಂಭಿಸಲು ಒಂದು ಹೆಚ್ಚುತ್ತಿರುವ ಪ್ರವೃತ್ತಿಗೆ ಕಾರಣವಾಗಿರುವ ಮೂಲ ಉದ್ದೇಶದ ಆಧಾರದ ಮೇಲಿನ ವಿಂಗಡಣೆಯ ವಿಧದ ವಿರುದ್ಧವಿರುವ ಒಂದು ಸಂಗತಿ. ಇದು ತಪ್ಪುಗ್ರಹಿಕೆಗೆ ಕಾರಣವಾಗುತ್ತದೆ, ಅದರಲ್ಲೂ ಯೋಜನಾರಹಿತ ವೆಚ್ಚವು ಸಹಜವಾಗಿ ವ್ಯರ್ಥವಾದುದಾಗಿದೆ, ಸಾಮಾಜಿಕ ವಲಯಗಳಾದಂತಹ, ವೇತನವನ್ನೇ ಪ್ರಮುಖ ಅಂಶವನ್ನಾಗಿ ಒಳಗೊಂಡ ಶಿಕ್ಷಣ ಮತ್ತು ಆರೋಗ್ಯಗಳಿಗೆ ಮಾಡುವ ಸಂಪನ್ಮೂಲಗಳ ಹಂಚಿಕೆಯ ಮೇಲೆ ಇದು ಅಡ್ಡ ಪರಿಣಾಮಬೀರುತ್ತದೆ.

ಮೂಲಕ ಅವ್ಯಕ್ತ ಸಹಾಯಧನವನ್ನು ನೀಡುವುದಲ್ಲದೆ, ರಫ್ತುಗಳು ಸಾಲಗಳ ಮೇಲಿನ ಬಡ್ಡಿ, ಆಹಾರ ಮತ್ತು ಗೊಬ್ಬರಗಳ ಮೇಲೆ ವ್ಯಕ್ತ ಸಹಾಯ ಧನಗಳನ್ನು ವಿಸ್ತರಿಸುತ್ತದೆ. 2014–15ರಲ್ಲಿ ಸಹಾಯಧನದ ಮೊತ್ತವು ಜಿಡಿಪಿಯಲ್ಲಿನ ಶೇಕಡ 2.02ರಷ್ಟಿತ್ತು ಮತ್ತು ಅದು 2015– 16ರಲ್ಲಿ ಶೇಕಡ 1.7ರಷ್ಟಾಗಿದೆ.

### ೫.1.2 ಬಂಡವಾಳ ಖಾತೆ *Capital Account*

ಬಂಡವಾಳ ಮುಂಗಡಪತ್ರವು ಕೇಂದ್ರ ಸರ್ಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಒಂದು ಖಾತೆಯಾಗಿದ್ದು, ಇದು ಬಂಡವಾಳದಲ್ಲಾಗುವ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಇದು ಸರ್ಕಾರದ ಬಂಡವಾಳ ಸ್ವೀಕೃತಿ ಮತ್ತು ಬಂಡವಾಳ ವೆಚ್ಚವನ್ನು ಒಳಗೊಂಡಿರುತ್ತದೆ. ಇದು ಸರ್ಕಾರದ ಬಂಡವಾಳದ ಅಗತ್ಯತೆ ಮತ್ತು ಅವುಗಳ ಹಣ ಒದಗಿಸುವ ಮಾದರಿಯನ್ನು ತೋರಿಸುತ್ತದೆ.

**ಬಂಡವಾಳ ಸ್ವೀಕೃತಿಗಳು:** ಹೊಣೆಗಾರಿಕೆಯನ್ನು ಸೃಷ್ಟಿಸುವಂತಹ ಅಥವಾ ಹಣಕಾಸಿನ ಆಸ್ತಿಗಳನ್ನು ಕಡಿಮೆ ಮಾಡುವಂತಹ ಸರಕಾರದ ಎಲ್ಲಾ ಸ್ವೀಕೃತಿಗಳನ್ನು ಬಂಡವಾಳ ಸ್ವೀಕೃತಿಗಳು ಎನ್ನುತ್ತೇವೆ. ಬಂಡವಾಳ ಸ್ವೀಕೃತಿಗಳ ಪ್ರಮುಖ ಬಾಬ್ತುಗಳೆಂದರೆ, ಮಾರುಕಟ್ಟೆ ಸಾಲಗಳೆಂದು ಕರೆಯಲಾಗುವ ಸಾರ್ವಜನಿಕರಿಂದ ಸರ್ಕಾರ ಎತ್ತುವ ಸಾಲಗಳು, ಖಜಾನೆ ಹುಂಡಿಗಳನ್ನು ಮಾರಾಟ ಮಾಡುವ ಮೂಲಕ ರಿಸರ್ವ್ ಬ್ಯಾಂಕಿನಿಂದ ಮತ್ತು ವಾಣಿಜ್ಯ ಬ್ಯಾಂಕುಗಳಿಂದ ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ಸರ್ಕಾರ ಪಡೆಯುವ ಸಾಲ, ವಿದೇಶಿ ಸರ್ಕಾರಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಸ್ವೀಕರಿಸಿದ ಸಾಲಗಳು ಮತ್ತು ಕೇಂದ್ರ ಸರ್ಕಾರ ಮಂಜೂರು ಮಾಡಿದ ಸಾಲದ ವಸೂಲಾತಿಗಳು. ಸಣ್ಣ ಉಳಿತಾಯಗಳು (ಅಂಚೆ ಕಛೇರಿಯ ಉಳಿತಾಯ ಖಾತೆಗಳು, ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರಗಳು ಇತ್ಯಾದಿ), ಭವಿಷ್ಯ ನಿಧಿಗಳು ಮತ್ತು ಸಾರ್ವಜನಿಕ ಒಡೆತನದ ಉದ್ಯಮಗಳ (PSU) ಷೇರುಗಳ ಮಾರಾಟದಿಂದ ಬಂದಂತಹ ನಿವ್ವಳ ಸ್ವೀಕೃತಿಗಳು (ಇದನ್ನು PSUಗಳ ಹೂಡಿಕೆ ಹಿಂತೆಗೆತ ಎಂದು ಉಲ್ಲೇಖಿಸಲಾಗಿದೆ) ಇವುಗಳು ಇತರೆ ಬಾಬ್ತುಗಳಲ್ಲಿ ಸೇರ್ಪಡೆಯಾಗುತ್ತದೆ.

**ಬಂಡವಾಳ ವೆಚ್ಚ:** ಬೌತಿಕ ಅಥವಾ ಹಣಕಾಸಿನ ಆಸ್ತಿಗಳನ್ನು ಸೃಷ್ಟಿಸುವಂತಹ ಅಥವಾ ಹಣಕಾಸಿನ ಹೊಣೆಗಾರಿಕೆಯ ಕಡಿತಕ್ಕೆ ಕಾರಣವಾಗುವ ಸರ್ಕಾರದ ವೆಚ್ಚಗಳು ಬಂಡವಾಳ ವೆಚ್ಚಗಳಾಗಿವೆ. ಇದು ಭೂ–ಸ್ವಾದೀನ, ಕಟ್ಟಡ, ಯಂತ್ರಗಳು, ಸಲಕರಣೆಗಳು, ಶೇರುಗಳಲ್ಲಿನ ಹೂಡಿಕೆ ಮತ್ತು ರಾಜ್ಯ ಮತ್ತು ಕೇಂದ್ರಾಡಳಿತ ಸರ್ಕಾರಗಳಿಗೆ, PSUಗಳು ಮತ್ತು ಇತರೆ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ನೀಡುವ ಸಾಲಗಳು ಮತ್ತು ಮುಂಗಡಗಳ ಮೇಲೆ ಮಾಡುವ ವೆಚ್ಚಗಳನ್ನು ಒಳಗೊಂಡಿರುತ್ತದೆ. ಬಂಡಾವಳ ವೆಚ್ಚವನ್ನೂ ಸಹ ಮುಂಗಡ ಪತ್ರದ ದಾಖಲೆಗಳಲ್ಲಿ ಯೋಜನೆ ಮತ್ತು ಯೋಜನೇತರ ಎಂದು ವರ್ಗೀಕರಿಸಲಾಗಿದೆ. ಯೋಜನಾ ಬಂಡವಾಳ ವೆಚ್ಚವು ಅದರ ಕಂದಾಯದ ಪ್ರತಿರೂಪದಂತೆ, ಕೇಂದ್ರ ಮತ್ತು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಯೋಜನೆಗಳಿಗೆ ಕೇಂದ್ರ ನೀಡುವ ನೆರವಿಗೆ ಸಂಬಂಧಿಸಿದೆ. ಯೋಜನೇತರ ಬಂಡವಾಳ ವೆಚ್ಚವು ಸರ್ಕಾರ ಒದಗಿಸುವ ವಿವಿಧ ಸಾಮಾನ್ಯ, ಸಾಮಾಜಿಕ ಮತ್ತು ಆರ್ಥಿಕ ಸೇವೆಗಳನ್ನು ಒಳಗೊಳ್ಳುತ್ತದೆ.

ಮುಂಗಡ ಪತ್ರವು ಕೇವಲ ಸ್ವೀಕೃತಿ ಮತ್ತು ವೆಚ್ಚಗಳ ಪಟ್ಟಿ ಮಾತ್ರವಲ್ಲ. ಸ್ವಾತಂತ್ರ್ಯ ಬಂದಂದಿನಿಂದ ಪಂಚವಾರ್ಷಿಕ ಯೋಜನೆಗಳ ಜಾರಿಯೊಂದಿಗೆ, ಇದು ಒಂದು ಮಹತ್ವದ ರಾಷ್ಟ್ರೀಯ ನೀತಿಯ ಹೇಳಿಕೆಯಾಗಿದೆ. ಮುಂಗಡ ಪತ್ರವು ದೇಶದ ಆರ್ಥಿಕ ಜೀವನವನ್ನು ಪ್ರತಿಬಿಂಬಿಸುತ್ತದೆ ಮತ್ತು ರೂಪಿಸುತ್ತದೆ ಹಾಗೂ ಪ್ರತಿಯಾಗಿ ದೇಶದ ಆರ್ಥಿಕ ಜೀವನದಿಂದ ರೂಪಿತಗೊಳ್ಳುತ್ತದೆಂದು ವಾದಿಸಲಾಗಿದೆ. ಮುಗಂಡ ಪತ್ರದೊಂದಿಗೆ ಕೋಶೀಯ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆ ಕಾಯಿದೆ, 2003ರ (FRBMA)[4] ಮೂರು ನೀತಿ ಹೇಳಿಕೆಗಳು ಖಡ್ಡಾಯವಾಗಿವೆ. ಮದ್ಯಮಾವಧಿ ಕೋಶೀಯ ನೀತಿ ಪತ್ರವು ನಿರ್ದಿಷ್ಟ ಕೋಶೀಯ ಸೂಚಕಕ್ಕೆ ಮೂರುವರ್ಷಗಳ ಆವರ್ತ ಗುರಿಯನ್ನು ನಿಗದಿಪಡಿಸುತ್ತದೆ ಮತ್ತು ಇದು ಸುಸ್ಥಿರ ಆಧಾರದ ಮೇಲೆ ಕಂದಾಯ ವೆಚ್ಚಕ್ಕೆ ಹಣಕಾಸನ್ನು ಕಂದಾಯ ಸ್ವೀಕೃತಿಯ ಮೂಲಕ ಒದಗಿಸುತ್ತಯೇ

[4] ಪೆಟ್ಟಿಗೆ 5.1 ಸರ್ಕಾರದ ಹಣಕಾಸುಗಳ ಸಂಕ್ಷಿಪ್ತ ಲೆಕ್ಕಾಚಾರದ(ಕಾನೂನುಬದ್ಧತೆ) ಶಾಸನಬದ್ಧ ಮತ್ತು ಪರಿಣಾಮಗಳನ್ನು ಒದಗಿಸುತ್ತದೆ

ಎಂಬುದನ್ನು ಮತ್ತು ಮಾರುಕಟ್ಟೆ ಸಾಲಗಳನ್ನು ಒಳಗೊಂಡ ಬಂಡವಾಳ ಸ್ವೀಕೃತಿಯು ಹೇಗೆ ಫಲದಾಕವಾಗಿ ಬಳಕೆಯಾಗುತ್ತದೆ ಎಂಬುದನ್ನು ಪರಿಶೀಲಿಸುತ್ತದೆ. ಕೋಶೀಯ ನೀತಿಯ ತಂತ್ರದ ಹೇಳಿಕೆಯು ಕೋಶೀಯ ವಲಯದಲ್ಲಿ ಸರ್ಕಾರದ ಆದ್ಯತೆಗಳನ್ನು ನಿಗದಿಪಡಿಸುತ್ತದೆ, ಪ್ರಸಕ್ತ ನೀತಿಗಳನ್ನು ಪರಿಶೀಲಿಸುತ್ತದೆ ಮತ್ತು ಪ್ರಮುಖ ಕೋಶೀಯ ಕ್ರಮಗಳಲ್ಲಿನ ಯಾವುದೇ ವಿಚಲನೆಯನ್ನು ಸಮರ್ಥಿಸಿಕೊಳ್ಳುತ್ತದೆ. ಸಮಗ್ರ ಆರ್ಥಿಕ ಚೌಕಟ್ಟಿನ ಹೇಳಿಕೆಯು GDP ಬೆಳವಣಿಗೆ ದರ, ಕೇಂದ್ರಸರ್ಕಾರದ ಕೋಶೀಯ ಬಾಕಿ ಮತ್ತು ಬಾಹ್ಯ ಬಾಕಿಗೆ ಸಂಬಂಧಿಸಿದ ಆರ್ಥಿಕತೆಯ ಭವಿಷ್ಯದ ನಿರೀಕ್ಷೆಗಳನ್ನು ಮೌಲ್ಯಮಾಪನ ಮಾಡುತ್ತದೆ[5].

**ಕೋಷ್ಟಕ 5.1 ಕೇಂದ್ರ ಸರ್ಕಾರದ ಸ್ವೀಕೃತಿ ಮತ್ತು ವೆಚ್ಚಗಳು 2015–16**

| | | GDPಯ ಶೇಕಡವಾರು |
|---|---|---|
| 1. | ಕಂದಾಯ ಸ್ವೀಕೃತಿ (ಎ+ಬಿ) | 8.1 |
| | (ಎ) ತೆರಿಗೆ ಆದಾಯ (ರಾಜ್ಯ ಷೇರಿನ ನಿವ್ವಳ) | 6.5 |
| | (ಬಿ) ತೆರಿಗೆಯೇತರ ಆದಾಯ | 1.6 |
| 2. | ಕಂದಾಯ ವೆಚ್ಚ | 10.9 |
| | (ಎ) ಬಡ್ಡಿ ಪಾವತಿಗಳು | 3.2 |
| | (ಬಿ) ಪ್ರಮುಖ ಸಹಾಯಧನಗಳು | 1.6 |
| | (ಸಿ) ರಕ್ಷಣಾ ವೆಚ್ಚ | 1.1 |
| 3. | ಕಂದಾಯ ಕೊರತೆ (2–1) | 2.8 |
| 4. | ಬಂಡವಾಳ ಸ್ವೀಕೃತಿಗಳು (ಎ+ಬಿ+ಸಿ) | 4.5 |
| | (ಎ) ಸಾಲಗಳ ವಸೂಲಾತಿ | 0.1 |
| | (ಬಿ) ಇತರೆ ಸ್ವೀಕೃತಿಗಳು (ಮುಖ್ಯವಾಗಿ PSU ಗಳ ಹೂಡಿಕೆ ಹಿಂತೆಗೆತ) | 0.5 |
| | (ಸಿ) ಸಾಲಗಳು ಮತ್ತು ಇತರೆ ಹೊಣೆಗಾರಿಕೆಗಳು | 3.9 |
| 5. | ಬಂಡವಾಳ ವೆಚ್ಚ | 1.7 |
| 6. | ಒಟ್ಟು ವೆಚ್ಚ 2+5=6(ಎ)+6(ಬಿ) | 12.6 |
| | (ಎ) ಯೋಜನಾ ವೆಚ್ಚ | 3.3 |
| | (ಬಿ) ಯೋಜನೇತರ ವೆಚ್ಚ | 9.3 |
| 7. | ಕೋಶೀಯ ಕೊರತೆ | 3.9 |
| 8. | ಪ್ರಾಥಮಿಕ ಕೊರತೆ [7 – 2 (ಎ)] | 0.7 |

**ಮೂಲ:** ಆರ್ಥಿಕ ಸಮೀಕ್ಷೆ 2015–16

[5]2005–06ರ ಭಾರತೀಯ ಮುಂಗಡಪತ್ರವು ಆಯವ್ಯಯ ಹಂಚಿಕೆಯ ಲಿಂಗ ಸಂವೇದನೆಯನ್ನು ಪ್ರಮುಖವಾಗಿ ತೋರಿಸುವ ಒಂದು ಪಟ್ಟಿಯನ್ನು ಪರಿಚಯಿಸುತ್ತದೆ. ಲಿಂಗ ಆಯವ್ಯಯವು ಸರ್ಕಾರದ ಲಿಂಗಬದ್ಧತೆಯ ನಿರ್ಧಾರವನ್ನು ಆಯವ್ಯಯ ಬದ್ಧತೆಯಾಗಿ ಅನುವಾದಿಸುವ ಸ್ತ್ರೀ ಸಬಲೀಕರಣದಲ್ಲಿ ತೊಡಗಿರುವ ವಿಶೇಷ ಉಪಕ್ರಮಗಳು ಮತ್ತು ಸ್ತ್ರೀ ಯರಿಗೆ ಹಂಚಿಕೆಯಾದ ಸಂಪನ್ಮೂಲಗಳ ಬಳಕೆಯನ್ನು ಪರಿಶೀಲಿಸುವುದು ಮತ್ತು ಸ್ತ್ರೀಯರ ಮೇಲಿನ ಸರ್ಕಾರದ ಸಾರ್ವಜನಿಕ ವೆಚ್ಚ ಮತ್ತು ನೀತಿಗಳ ಪರಿಣಾಮದ ಒಂದು ಪ್ರಯೋಗವಾಗಿದೆ. 2006–07ರ ಮುಂಗಡಪತ್ರವು ಹಿಂದಿನ ಪಟ್ಟಿಯನ್ನು ವಿಸ್ತರಿಸಿದೆ.

### ೫.೧.೩ ಸರ್ಕಾರದ ಕೊರತೆಯ ಕ್ರಮಗಳು *Measures of Government Deficit*

ಸರ್ಕಾರ ಸಂಗ್ರಹಿಸಿದ ಆದಾಯಕ್ಕಿಂತ ಅಧಿಕ ವೆಚ್ಚವನ್ನು ಮಾಡಿದಾಗ, ಅದು ಮುಂಗಡ ಪತ್ರದ ಕೊರತೆಗೆ ಕಾರಣವಾಗುತ್ತದೆ[6]. ಸರ್ಕಾರದ ಕೊರತೆಯನ್ನು ಕಂಡು ಹಿಡಿಯಲು ಹಲವಾರು ಕ್ರಮಗಳಿವೆ ಮತ್ತು ಆರ್ಥಿಕತೆಯ ಮೇಲೆ ಅವು ತಮ್ಮದೇ ಆದ ಪರಿಣಾಮವನ್ನು ಬೀರುತ್ತವೆ.

**ಕಂದಾಯ ಕೊರತೆ:** ಸರ್ಕಾರದ ಕಂದಾಯ ಸ್ವೀಕೃತಿಗಿಂತ ಕಂದಾಯ ವೆಚ್ಚ ಅಧಿಕವಾಗಿರುವುದನ್ನು ಕಂದಾಯ ಕೊರತೆ ಎಂದು ಕರೆಯಲಾಗುತ್ತದೆ

ಕಂದಾಯ ಕೊರತೆ = ಕಂದಾಯ ವೆಚ್ಚ – ಕಂದಾಯ ಸ್ವೀಕೃತಿಗಳು

ಕೋಷ್ಟಕ 5.1ರಲ್ಲಿನ 3ನೇ ಅಂಶದಲ್ಲಿ ತೋರಿಸುವಂತೆ 2015–16ರಲ್ಲಿನ ಕಂದಾಯ ಕೊರತೆಯು GDPಯ ಶೇ. 2.8 ರಷ್ಟಿತ್ತು. ಕಂದಾಯ ಕೊರತೆಯು ಸರಕಾರದ ಪ್ರಸ್ತುತ ಆದಾಯ ಮತ್ತು ವೆಚ್ಚಗಳ ಮೇಲೆ ಪರಿಣಾಮ ಬೀರುವಂತಹ ವ್ಯವಹಾರಗಳನ್ನು ಮಾತ್ರ ಒಳಗೊಂಡಿರುತ್ತದೆ. ಸರ್ಕಾರವು ಕಂದಾಯ ಕೊರತೆಯನ್ನು ಅನುಭವಿಸಿದಾಗ, ಇದು ಸರ್ಕಾರವು ಉಳಿತಾಯ ಮಾಡದೆ ಆರ್ಥಿಕತೆಯ ಇತರೆ ವಲಯಗಳು ಮಾಡುವ ಉಳಿತಾಯವನ್ನು ಅದು ತನ್ನ ಅನುಭೋಗ ವೆಚ್ಚದಲ್ಲಿನ ಒಂದು ಭಾಗವನ್ನು ಭರಿಸಲಿಕ್ಕಾಗಿ ಬಳಸುತ್ತಿದೆ ಎಂಬುದನ್ನು ಸೂಚಿಸುತ್ತದೆ. ಸರ್ಕಾರ ತನ್ನ ಹೂಡಿಕೆಗೆ ಮಾತ್ರವಲ್ಲ, ತನ್ನ ಅನುಭೋಗದ ಅಗತ್ಯಗಳಿಗೂ ಸಾಲ ಪಡೆಯಬೇಕಾಗುತ್ತದೆಂಬುದು ಈ ಸನ್ನಿವೇಶದ ಅರ್ಥವಾಗಿದೆ. ಇದು ಸಾಲ ಮತ್ತು ಬಡ್ಡಿ ಹೊಣೆಗಾರಿಕೆಗಳ ಅಧಿಕ ಸಂಗ್ರಹಣೆಗೆ ಕಾರಣವಾಗುತ್ತದೆ ಮತ್ತು ಅಂತಿಮವಾಗಿ ಸರ್ಕಾರ ವೆಚ್ಚದಲ್ಲಿ ಕಡಿತ ಮಾಡುವಂತೆ ಒತ್ತಾಯಿಸುತ್ತದೆ. ಕಂದಾಯ ವೆಚ್ಚದ ಒಂದು ಪ್ರಮುಖ ಭಾಗವು ಬದ್ಧತೆಯ ವೆಚ್ಚವಾಗಿರುವುದರಿಂದ, ಇದನ್ನು ಕಡಿಮೆ ಮಾಡಲಾಗುವುದಿಲ್ಲ. ಸರ್ಕಾರವು ಆಗಾಗ್ಗೆ ಉತ್ಪಾದಕ ಬಂಡವಾಳ ವೆಚ್ಚ ಅಥವಾ ಕಲ್ಯಾಣ ವೆಚ್ಚವನ್ನು ಕಡಿತಗೊಳಿಸುತ್ತದೆ. ಇದು ಕಡಿಮೆ ಬೆಳವಣಿಗೆ ಮತ್ತು ಕಲ್ಯಾಣದ ಮೇಲೆ ಅಡ್ಡ ಪರಿಣಾಮಗಳನ್ನು ಬೀರುತ್ತದೆ ಎಂಬ ಅರ್ಥ ನೀಡುತ್ತದೆ.

**ಕೋಶೀಯ ಕೊರತೆ:** ಕೋಶೀಯ ಕೊರತೆಯು ಸರ್ಕಾರದ ಒಟ್ಟು ವೆಚ್ಚ ಮತ್ತು ಅದರ ಸಾಲವನ್ನು ಹೊರತುಪಡಿಸಿದ ಒಟ್ಟು ಸ್ವೀಕೃತಿಗಳ ನಡುವಿನ ವ್ಯತ್ಯಾಸವಾಗಿದೆ.

**ಒಟ್ಟು ಕೋಶೀಯ ಕೊರತೆ = ಒಟ್ಟು ವೆಚ್ಚ – (ಕಂದಾಯ ಸ್ವೀಕೃತಿಗಳು + ಸಾಲವನ್ನು ಸೃಷ್ಟಿಸದ ಬಂಡವಾಳ ಸ್ವೀಕೃತಿಗಳು)**

ಸಾಲವನ್ನು ಸೃಷ್ಟಿಸದ ಬಂಡವಾಳ ಸ್ವೀಕೃತಿಗಳು ಸಾಲವಾಗಿ ಪಡೆದ ಸ್ವೀಕೃತಿಗಳಲ್ಲ, ಆದುದರಿಂದ, ಅವು ಸಾಲವನ್ನು ಸೃಷ್ಟಿಸುವುದಿಲ್ಲ. ಉದಾಹರಣೆಗೆ, ಸಾಲ ವಸೂಲಾತಿಗಳು ಮತ್ತು PSU ಗಳ ಮಾರಾಟದಿಂದ ಬರುವ ಆದಾಯಗಳು. ಕೋಷ್ಟಕ 5.1 ರಲ್ಲಿ ಸಾಲವನ್ನು ಸೃಷ್ಟಿಸದ ಬಂಡವಾಳ ಸ್ವೀಕೃತಿಗಳ ಸೃಷ್ಟಿಯು GDPಯ ಶೇಕಡ 0.6 ಗೆ ಸಮವಾಗಿವೆ (ಅಂಕ 4 ರಲ್ಲಿನ ಎ+ಬಿ). ಇದು ಒಟ್ಟು ಬಂಡವಾಳ ಸ್ವೀಕೃತಿಯಲ್ಲಿ ಸಾಲಗಳು ಮತ್ತು ಇತರೆ ಹೊಣೆಗಾರಿಕೆಯನ್ನು ಕಳೆಯುವುದರಿಂದ (4.5– 3.9 = 0.6) ದೊರೆಯುತ್ತದೆ. ಆದ್ದರಿಂದ ಕೋಶೀಯ ಕೊರತೆ GDPಯಲ್ಲಿನ ಶೇಕಡ 3.9 ರಷ್ಟಾಗಿದೆ. ಸಾಲದ ಮೂಲಕ ಹಣಕಾಸನ್ನು ಪೂರೈಸುವುದರಿಂದ ಕೋಶೀಯ ಕೊರತೆಯನ್ನು ತುಂಬಬೇಕಾಗುತ್ತದೆ. ಹೀಗಾಗಿ, ಇದು ಸರ್ಕಾರದ ಎಲ್ಲಾ ಮೂಲಗಳಿಂದ ಬರುವ ಒಟ್ಟು ಸಾಲಗಳ ಅವಶ್ಯಕತೆಯನ್ನು ಸೂಚಿಸುತ್ತದೆ. ಹಣಕಾಸಿನ ಕಡೆಯಿಂದ ಕೆಳಗಿನಂತೆ ಪಡೆಯಬಹುದು.

**ಒಟ್ಟು ಕೋಶೀಯ ಕೊರತೆ = ದೇಶದಲ್ಲಿನ ನಿವ್ವಳ ಸಾಲಗಳು + RBI ನಿಂದ ಪಡೆದ ಸಾಲಗಳು + ವಿದೇಶಗಳಿಂದ ಪಡೆದ ಸಾಲಗಳು**

[6] ಔಪಚಾರಿವಾಗಿ, ಇದು ಒಟ್ಟು ಸ್ವೀಕೃತಿಗಿಂತ (ಕಂದಾಯ ಮತ್ತು ಬಂಡವಾಳಗಳೆರಡೂ) ಹೆಚ್ಚುವರಿ ಒಟ್ಟು ವೆಚ್ಚವನ್ನು ಉಲ್ಲೇಖಿಸುತ್ತದೆ. 1997–98ರ ಮುಂಗಡಪತ್ರದಿಂದ, ಕೊರತೆ ಮುಂಗಡಪತ್ರವನ್ನು ತೋರಿಸುವ ರೂಢಿಯನ್ನು ನಿಲ್ಲಿಸಲಾಗಿದೆ.

ದೇಶದಲ್ಲಿನ ಸಾಲವು ನೇರವಾಗಿ ಸಾಲದ ಸಾಧನಗಳ ಮೂಲಕ ಸಾರ್ವಜನಿಕರಿಂದ ಪಡೆಯುವ ಸಾಲ (ಉದಾಹರಣೆಗೆ ವಿವಿಧ ಸಣ್ಣ ಉಳಿತಾಯ ಯೋಜನೆಗಳು) ಮತ್ತು ಪರೋಕ್ಷವಾಗಿ ವಾಣಿಜ್ಯ ಬ್ಯಾಂಕುಗಳಿಂದ ಪಡೆಯುವ ಶಾಸನ ಬದ್ಧ ದ್ರವ್ಯತೆಯ ಅನುಪಾತ (SLR) ಗಳನ್ನು ಒಳಗೊಂಡಿದೆ. ಒಟ್ಟು ಕೋಶೀಯ ಕೊರತೆಯು ಆರ್ಥಿಕತೆಯಲ್ಲಿನ ಸಾರ್ವಜನಿಕ ವಲಯದ ಹಣಕಾಸಿನ ಆರೋಗ್ಯ ಮತ್ತು ಆರ್ಥಿಕ ಸ್ಥಿರತೆಯನ್ನು ತೀರ್ಮಾನಿಸುವ ಒಂದು ಪ್ರಮುಖ ಚಲಕವಾಗಿದೆ. ಮೇಲೆ ನೀಡಲಾದ ಒಟ್ಟು ಕೋಶೀಯ ಕೊರತೆಯನ್ನು ಮಾಪನ ಮಾಡಿದ ವಿಧಾನದಿಂದ ಕಂದಾಯ ಕೊರತೆಯು, ಕೋಶೀಯ ಕೊರತೆಯ ಒಂದು ಭಾಗವೆಂದು ನೋಡಬಹುದಾಗಿದೆ (ಕೋಶೀಯ ಕೊರತೆ = ಕಂದಾಯ ಕೊರತೆ + ಬಂಡವಾಳ ವೆಚ್ಚ – ಸಾಲವನ್ನು ಸೃಷ್ಟಿಸದ ಬಂಡವಾಳ ಸ್ವೀಕೃತಿಗಳು) ಕೋಶೀಯ ಕೊರತೆಯಲ್ಲಿನ ಕಂದಾಯ ಕೊರತೆಯ ದೊಡ್ಡಪಾಲುಸಾಲಗಳನ್ನು, ಹೂಡಿಕೆಗಿಂತ ಹೆಚ್ಚಾಗಿ, ಅನುಭೋಗ ವೆಚ್ಚದ ಅಗತ್ಯಗಳನ್ನು ಭರಿಸಲು ಬಳಸಲಾಗಿದೆಯೆಂದು ಸೂಚಿಸುತ್ತದೆ.

**ಪ್ರಾಥಮಿಕ ಕೊರತೆ:** ಸರ್ಕಾರ ಪಡೆಯುವ ಸಾಲದ ಅಗತ್ಯತೆಯು ಸಂಚಿತ ಸಾಲದ ಮೇಲಿನ ಬಡ್ಡಿಯ ಹೊರೆಗಳನ್ನು ಒಳಗೊಂಡಿರುತ್ತದೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಪ್ರಾಥಮಿಕ ಕೊರತೆಯನ್ನು ಮಾಪನ ಮಾಡುವ ಗುರಿಯು, ಪ್ರಸ್ತುತ ಕೋಶೀಯ ಅಸಮತೋಲನದ ಮೇಲೆ ಗಮನವನ್ನು ಕೇಂದ್ರೀಕರಿಸುವುದಾಗಿದೆ. ಆದಾಯವನ್ನು ಮೀರಿದ ಪ್ರಸ್ತುತ ವೆಚ್ಚದ ಕಾರಣದಿಂದಾಗಿ ಮಾಡಿದ ಸಾಲದ ಅಂದಾಜು ಮಾಡಲು, ನಾವು ಪ್ರಾಥಮಿಕ ಕೊರತೆಯನ್ನು ಲೆಕ್ಕಾಚಾರ ಮಾಡಬೇಕಾಗುತ್ತದೆ.

**ಒಟ್ಟು ಪ್ರಾಥಮಿಕ ಕೊರತೆ = ಒಟ್ಟು ಕೋಶೀಯ ಕೊರತೆ – ನಿವ್ವಳ ಬಡ್ಡಿ ಹೊಣೆಗಾರಿಕೆಗಳು**

ನಿವ್ವಳ ಬಡ್ಡಿ ಹೊಣೆಗಾರಿಕೆಗಳು, ಸರ್ಕಾರದ ನಿವ್ವಳ ದೇಶೀಯ ಸಾಲ ನೀಡಿಕೆ ಮೇಲಿನ ಬಡ್ಡಿ ಸ್ವೀಕೃತಿಗಳನ್ನು ಕಳೆದ ನಂತರ ಉಳಿಯುವ ಬಡ್ಡಿ ಪಾವತಿಗಳನ್ನು ಒಳಗೊಂಡಿವೆ.

## 5.2 ಕೋಶೀಯ ನೀತಿ *Fiscal Policy*

ಕೇನ್ಸ್‌ರವರು ತಮ್ಮ **'ಉದ್ಯೋಗ, ಬಡ್ಡಿ ಮತ್ತು ಹಣದ ಸಾಮಾನ್ಯ ಸಿದ್ಧಾಂತ'**ದಲ್ಲಿ ಉತ್ಪನ್ನದ ಮಟ್ಟ ಮತ್ತು ಉದ್ಯೋಗ ಮಟ್ಟದಲ್ಲಿ ಸ್ಥಿರತೆಯನ್ನು ತರಲು ಸರ್ಕಾರದ ಕೋಶೀಯ ನೀತಿಯನ್ನು ಬಳಸಬೇಕು ಎಂಬ ಪ್ರಮುಖ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ತನ್ನ ವೆಚ್ಚಗಳು ಮತ್ತು ತೆರಿಗೆಗಳ ಬದಲಾವಣೆಯ ಮೂಲಕ ಉತ್ಪನ್ನ ಮತ್ತು ಆದಾಯವನ್ನು ಹೆಚ್ಚಿಸಲು ಮತ್ತು ಆರ್ಥಿಕತೆಯಲ್ಲಿನ ಏರಿಳಿತಗಳನ್ನು ಸ್ಥಿರಗೊಳಿಸಲು ಸರ್ಕಾರವು ಪ್ರಯತ್ನಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಸಮತೋಲನ (ವೆಚ್ಚವು–ಸ್ವೀಕೃತಿಗಳಿಗೆ ಸಮನಾಗಿದ್ದಾಗ) ಮುಂಗಡಪತ್ರಕ್ಕಿಂತ ಮಿಗುತೆ (ಸ್ವೀಕೃತಿಗಳು ವೆಚ್ಚವನ್ನು ಮೀರಿದಾಗ) ಅಥವಾ ಕೊರತೆ (ಒಟ್ಟು ವೆಚ್ಚವು ಸ್ವೀಕೃತಿಯನ್ನು ಮೀರಿದಾಗ) ಮುಂಗಡ ಪತ್ರ ವನ್ನು ಕೋಶೀಯ ನೀತಿಯು ಸೃಷ್ಟಿಸುತ್ತದೆ. ನಮ್ಮ ಹಿಂದಿನ ಆದಾಯ ನಿರ್ಧಾರದ ವಿಶ್ಲೇಷಣೆಯಲ್ಲಿ ಸರ್ಕಾರಿ ವಲಯವನ್ನು ಪರಿಚಯಿಸುವುದರಿಂದ ಉಂಟಾಗುವ ಪರಿಣಾಮಗಳನ್ನು ನಾವು ಈಗ ಅಧ್ಯಯನ ಮಾಡುತ್ತೇವೆ. ಸರ್ಕಾರವು ಎರಡು ನಿರ್ದಿಷ್ಟ ಮಾರ್ಗಗಳಲ್ಲಿ, ಸಮತೋಲನ ಆದಾಯದ ಮಟ್ಟದ ಮೇಲೆ ನೇರ ಪರಿಣಾಮ ಬೀರುತ್ತದೆ. ಸರ್ಕಾರದ ಸರಕು ಸೇವೆಗಳ ಖರೀದಿಗಳು (G) ಸಮಗ್ರ ಬೇಡಿಕೆಯನ್ನು ಹೆಚ್ಚಿಸುತ್ತವೆ ಮತ್ತು ತೆರಿಗೆಗಳು ಹಾಗೂ ವರ್ಗಾವಣೆಗಳು, ಆದಾಯ (Y) ಮತ್ತು ವೆಚ್ಚ ಮಾಡಬಹುದಾದ ಆದಾಯ (YD)ಗಳ ನಡುವಿನ ಸಂಬಂಧದ ಮೇಲೆ ಪರಿಣಾಮ ಬೀರುತ್ತದೆ. (YD ಎಂದರೆ ಕುಟುಂಬಗಳಿಗೆ ಅನುಭೋಗಿಸಲು ಮತ್ತು ಉಳಿತಾಯ ಮಾಡಲು ಲಭ್ಯವಾಗುವ ಆದಾಯ)



ಕೋಶೀಯ ನೀತಿಯು ಹೇಗೆ ಮೂರು ಮೂಲಭೂತ ಉದ್ದೇಶಗಳನ್ನು ನೆರವೇರಿಸಲು ಪ್ರಯತ್ನಿಸುತ್ತವೆ.

ಮೊದಲು ನಾವು ತೆರಿಗೆಯನ್ನು ಗಮನಿಸೋಣ. ಸರ್ಕಾರವು ವಿಧಿಸುವ ತೆರಿಗೆಯು ಆದಾಯವನ್ನು ಆಧರಿಸಿರುವುದಿಲ್ಲವೆಂದು ನಾವು ಕಲ್ಪಿಸಿಕೊಳ್ಳುತ್ತೇವೆ, ಇದನ್ನು **ಒಟ್ಟು ತೆರಿಗೆಗಳು** ಎನ್ನುತ್ತೇವೆ ಇದು 'T' ಗೆ ಸಮವಾಗಿದೆ. ಸರ್ಕಾರವು ಒಂದು ಸ್ಥಿರ ಮೊತ್ತದ ವರ್ಗಾವಣೆಗಳನ್ನು ಮಾಡುತ್ತದೆ ಎಂದು ಈ ವಿಶ್ಲೇಷಣೆಯುದ್ದಕ್ಕೂ ಕಲ್ಪಿಸಿಕೊಳ್ಳುತ್ತೇವೆ. ಇದನ್ನು '$\overline{TR}$' ಎಂದು ಗುರುತಿಸುತ್ತೇವೆ. ಆಗ ಅನುಭೋಗ ಬಿಂಬಕವು ಈ ಕೆಳಗಿನಂತಿರುತ್ತದೆ.

$$C = \overline{C} + cYD = \overline{C} + c\left(Y - T + \overline{TR}\right) \quad (5.1)$$

YD = ವೆಚ್ಚ ಮಾಡಬಹುದಾದ ಆದಾಯ

ತೆರಿಗೆಗಳು, ವೆಚ್ಚಮಾಡಬಹುದಾದ ಆದಾಯ ಮತ್ತು ಅನುಭೋಗ ಪ್ರಮಾಣವನ್ನು ಕಡಿಮೆ ಮಾಡುತ್ತದೆ ಎಂಬುದನ್ನು ನಾವು ಗಮನಿಸುತ್ತೇವೆ. ಉದಾಹರಣೆಗೆ, ಒಬ್ಬರ ಗಳಿಕೆಯು 1 ಲಕ್ಷ ರೂಪಾಯಿಗಳಾಗಿದ್ದು ಮತ್ತು 10,000 ರೂಪಾಯಿಗಳನ್ನು ತೆರಿಗೆಯಾಗಿ ನೀಡಿದರೆ, ಅವರ ವೆಚ್ಚ ಮಾಡಬಹುದಾದ ಆದಾಯವು ಬೇರೊಬ್ಬರು ತೆರಿಗೆ ನೀಡದೇ ಗಳಿಸಿದ 90,000 ರೂಪಾಯಿಗಳಿಗೆ ಸಮನಾಗಿರುತ್ತದೆ. ಸರ್ಕಾರವನ್ನು ಸೇರಿಸಿಕೊಂಡಂತೆ ವರ್ಧಿಸಲಾದ ಸಮಗ್ರ ಬೇಡಿಕೆಯ ವ್ಯಾಖ್ಯೆಯು ಈ ಕೆಳಗಿನಂತಿದೆ.

$$AD = \overline{C} + c\left(Y - T + \overline{TR}\right) + I + G \quad (5.2)$$

ರೇಖಾತ್ಮಕವಾಗಿ, ಒಟ್ಟು ತೆರಿಗೆಯು (lump-sum tax) ಅನುಭೋಗ ಸೂಚಿಯನ್ನು ಸಮನಾಂತರವಾಗಿ ಕೆಳಗೆ ತಳ್ಳುತ್ತದೆ. ಮತ್ತು ಹೀಗಾಗಿ ಸಮಗ್ರ ಬೇಡಿಕೆ ರೇಖೆಯು ಅದೇ ರೀತಿಯಾಗಿ ಪಲ್ಲಟಗೊಳ್ಳುತ್ತದೆ ಎಂಬುದನ್ನು ನಾವು ಗಮನಿಸುತ್ತೇವೆ. ಉತ್ಪನ್ನ ಮಾರುಕಟ್ಟೆಯಲ್ಲಿ ಆದಾಯ ನಿರ್ಧಾರದ ಸ್ಥಿತಿಯು Y=AD ಆಗಿರುತ್ತದೆ. ಇದನ್ನು ಈ ಕೆಳಗಿನಂತೆ ಬರೆಯಬಹುದು.

$$Y = \overline{C} + c\left(Y - T + \overline{TR}\right) + I + G \quad (5.3)$$

ಆದಾಯದ ಸಮತೋಲನ ಮಟ್ಟದ ಸಮಸ್ಯೆಯನ್ನು ಪರಿಹರಿಸಿದಾಗ, ಈ ಕೆಳಗಿನ ಸೂತ್ರವನ್ನು ಪಡೆಯಬಹುದು

$$Y^* = \frac{1}{1 - C}\left(\overline{C} - cT + c\overline{TR} + I + G\right) \quad (5.4)$$

### 5.2.1 ಸರ್ಕಾರದ ವೆಚ್ಚದಲ್ಲಿನ ಬದಲಾವಣೆಗಳು *Changes in Government Expenditure*

ತೆರಿಗೆಗಳನ್ನು ಸ್ಥಿರವಾಗಿಟ್ಟುಕೊಂಡು ಹೆಚ್ಚುತ್ತಿರುವ ಸರ್ಕಾರದ ಖರೀದಿಗಳ (G) ಪರಿಣಾಮಗಳನ್ನು ಪರಿಗಣಿಸೋಣ. 'G' ಯು 'T' ಯನ್ನು ಮೀರಿದಾಗ ಸರ್ಕಾರ ಕೊರತೆಯನ್ನು ಅನುಭವಿಸುತ್ತದೆ. ಏಕೆಂದರೆ G ಯು ಸಮಗ್ರ ವೆಚ್ಚದ ಒಂದು ಅಂಶವಾಗಿದೆ, ಯೋಜಿತ ಸಮಗ್ರ ವೆಚ್ಚವು ಹೆಚ್ಚಾಗುತ್ತದೆ. ಸಮಗ್ರ ಬೇಡಿಕೆ ಅನುಸೂಚಿಯು AD′ಗೆ ಪಲ್ಲಟಗೊಳ್ಳುತ್ತದೆ. ಆರಂಭಿಕ ಉತ್ಪನ್ನ ಮಟ್ಟದಲ್ಲಿ ಬೇಡಿಕೆಯು ಪೂರೈಕೆಗಿಂತ ಹೆಚ್ಚಿರುತ್ತದೆ ಮತ್ತು ಉದ್ಯಮ ಘಟಕಗಳು ಉತ್ಪಾದನೆಯನ್ನು ವಿಸ್ತರಿಸುತ್ತವೆ. ಹೊಸ ಸಮತೋಲವು E′ ಆಗಿರುತ್ತದೆ. ಗುಣಕ ಯಾಂತ್ರಿಕತೆಯು (ಅಧ್ಯಾಯ – 4ರಲ್ಲಿ ವಿವರಿಸಲಾಗಿದೆ) ಕಾರ್ಯಪ್ರವೃತ್ತವಾಗುತ್ತದೆ. ಸರ್ಕಾರದ ವೆಚ್ಚದ ಗುಣಕವು ಈ ಕೆಳಗಿನಂತಿದೆ.

$$\Delta y = \frac{1}{1 - c}\Delta G \quad (5.5)$$

ಅಥವಾ

$$\frac{\Delta Y}{\Delta G} = \frac{1}{1 - c} \quad (5.6)$$

ಚಿತ್ರ 5.1 ರಲ್ಲಿ ಸರ್ಕಾರದ ವೆಚ್ಚವು G ಯಿಂದ G' ಗೆ ಹೆಚ್ಚುತ್ತದೆ ಮತ್ತು ಸಮತೋಲನ ಆದಾಯವು Y ಯಿಂದ Y' ಹೆಚ್ಚಾಗುತ್ತದೆ.




**ರೇಖಾಚಿತ್ರ 5.1:** ಅಧಿಕ ಸರ್ಕಾರದ ವೆಚ್ಚದ ಪರಿಣಾಮ

### 5.2.2 ತೆರಿಗೆಗಳಲ್ಲಿ ಬದಲಾವಣೆಗಳು Changes in taxes

ತೆರಿಗೆಗಳಲ್ಲಿನ ಕಡಿತವು ಆದಾಯದ ಪ್ರತೀ ಹಂತದಲ್ಲಿ ವೆಚ್ಚಮಾಡಬಹುದಾದ ಆದಾಯವನ್ನು (Y –T) ಹೆಚ್ಚುಸುತ್ತದೆ ಎಂಬುದನ್ನು ನಾವು ಕಾಣುತ್ತೇವೆ. ಇದು ಸಮಗ್ರ ವೆಚ್ಚದ ಅನುಸೂಚಿಯನ್ನು ತೆರಿಗೆಗಳಲ್ಲಿ ಇಳಿಕೆಯಾಗಿರುವ $c$ ಬಿನ್ನಾಂಶದವರೆಗೆ ಮೇಲಕ್ಕೆ ತಳ್ಳುತ್ತದೆ. ಇದನ್ನು ಚಿತ್ರ 5.2 ರಲ್ಲಿ ತೋರಿಸಲಾಗಿದೆ.




**ರೇಖಾಚಿತ್ರ 5.2:** ತೆರಿಗೆಗಳಲ್ಲಿನ ಕಡಿತದ ಪರಿಣಾಮ

ಸಮೀಕರಣ 5.3 ರಿಂದ ನಾವು ಈ ಕೆಳಗಿನ ಸಮೀಕರಣವನ್ನು ಹೊಂದುತ್ತೇವೆ.

$$\Delta Y^* = \frac{1}{1-c}(-c)\,\Delta T \qquad (5.7)$$

$$\text{ತೆರಿಗೆ ಗುಣಕವು} = \frac{\Delta Y}{\Delta T} = \frac{-c}{1-c} \qquad (5.8)$$

ಏಕೆಂದರೆ ತೆರಿಗೆ ಕಡಿತ (ಹೆಚ್ಚಳವು) ಅನುಭೋಗ ಮತ್ತು ಉತ್ಪನ್ನದ ಹೆಚ್ಚಳಕ್ಕೆ (ಕಡಿತ) ಕಾರಣವಾಗುತ್ತದೆ. ತೆರಿಗೆ ಗುಣಕವು ಒಂದು ಋಣಾತ್ಮಕ ಗುಣಕವಾಗಿದೆ. ಸಮೀಕರಣ 5.6 ಮತ್ತು 5.8ಕ್ಕೆ ಹೋಲಿಸಿದಾಗ ಸರ್ಕಾರ ವ್ಯಯಿಸುವ ಗುಣಕಕ್ಕೆ ಹೋಲಿಸಿದರೆ ಪರಿಪೂರ್ಣ ನಿರಪೇಕ್ಷ ಮೌಲ್ಯದಲ್ಲಿ ತೆರಿಗೆ ಗುಣಕವು ಕಡಿಮೆ ಮೌಲ್ಯವನ್ನು ಹೊಂದಿದೆ ಎಂಬುದನ್ನು ನಾವು ನೋಡಬಹುದು. ಇದು ಏಕೆಂದರೆ ಸರ್ಕಾರದ ವೆಚ್ಚದಲ್ಲಿನ ಹೆಚ್ಚಳವು ನೇರವಾಗಿ ಒಟ್ಟು ವೆಚ್ಚದ ಮೇಲೆ ಪರಿಣಾಮ ಬೀರುತ್ತದೆ. ಆದರೆ ವೆಚ್ಚಮಾಡಬಹುದಾದ ಆದಾಯದ ಮೇಲೆ ಪ್ರಭಾವ ಬೀರುವ ಮೂಲಕ ತೆರಿಗೆಗಳು ಗುಣಕ ಪ್ರಕ್ರಿಯೆಯನ್ನು ಪ್ರವೇಶಿಸುತ್ತವೆ. ಇದು ಕುಟುಂಬಗಳ ಅನುಭೋಗವನ್ನು ಪ್ರಭಾವಿಸುತ್ತದೆ (ಇದು ಒಟ್ಟು ವೆಚ್ಚದ ಒಂದು ಭಾಗವಾಗಿದೆ). ಹೀಗೆ, $\Delta T$ ಯಷ್ಟು ತೆರಿಗೆಯಲ್ಲಿನ ಕಡಿತವು ಅನುಭೋಗವನ್ನು ಮತ್ತು ಆ ಮೂಲಕ ಒಟ್ಟು ವೆಚ್ಚವನ್ನು, $c\Delta T$ ಯಷ್ಟು ಪ್ರಥಮ ಬಾರಿಗೆ, ಹೆಚ್ಚಿಸುತ್ತದೆ. ಎರಡು ಗುಣಕಗಳು ಹೇಗೆ ಭಿನ್ನವಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು, ನಾವು ಈ ಕೆಳಗಿನ ಉದಾಹರಣೆಯನ್ನು ಪರಿಗಣಿಸುತ್ತೇವೆ.




ಬಡವ ಏಕೆ ಅಳುತ್ತಿದ್ದಾನೆ?
ಅವನ ಕಣ್ಣೀರನ್ನು ಒರೆಸುವ ಕ್ರಮಗಳನ್ನು ಸೂಚಿಸಿ

**ಉದಾಹರಣೆ 5.1**

ಸೀಮಾಂತ ಅನುಭೋಗ ಪ್ರವೃತ್ತಿಯು 0.8 ಎಂದುಕೊಂಡಾಗ ಸರಕಾರಿ ವೆಚ್ಚದ ಗುಣಕವು

$$\frac{1}{1-c} = \frac{1}{1-0.8} = \frac{1}{0.2} = 5 \text{ ಆಗುತ್ತದೆ.}$$

ಸರಕಾರಿ ವೆಚ್ಚದಲ್ಲಿನ 100ರಷ್ಟು ಹೆಚ್ಚಳಕ್ಕೆ ಸಮತೋಲನ ಆದಾಯವು 500ಕ್ಕೆ ಹೆಚ್ಚಾಗುತ್ತದೆ $\left(\frac{1}{1-c}\Delta G = 5 \times 100\right)$. ತೆರಿಗೆ ಗುಣಕವನ್ನು ಹೀಗೆ

ನೀಡಲಾಗಿದೆ $\frac{-c}{1-c}=\frac{-0.8}{1-0.8}=\frac{-0.8}{0.2}=-4$. ತೆರಿಗೆಯಲ್ಲಿನ 100ರಷ್ಟು ಕಡಿತವು ($\Delta T=-100$) ಸಮತೋಲನ ಆದಾಯವನ್ನು 400ಕ್ಕೆ ಹೆಚ್ಚಿಸುತ್ತದೆ $\left(\frac{-c}{1-c}\Delta T=-4\times-100\right)$. ಹೀಗಾಗಿ ಸಮತೋಲನ ಆದಾಯವು, ಈ ಸನ್ನಿವೇಶದಲ್ಲಿ G ಯಲ್ಲಿನ ಹೆಚ್ಚಳದಲ್ಲಿನ ಹೆಚ್ಚಳಕ್ಕಿಂತ ಕಡಿಮೆ ಪ್ರಮಾಣದಲ್ಲಿ ಹೆಚ್ಚಾಗುತ್ತದೆ.

ಪ್ರಸ್ತುತ ಚೌಕಟ್ಟಿನೊಳಗೆ, ನಾವು ಸೀಮಾಂತ ಅನುಭೋಗ ಪ್ರವೃತ್ತಿಯ ವಿವಿಧ ಮೌಲ್ಯಗಳನ್ನು ತೆಗೆದುಕೊಂಡಾಗ ಮತ್ತು ಎರಡು ಗುಣಕಗಳ ಮೌಲ್ಯಗಳನ್ನು ಲೆಕ್ಕ ಹಾಕಿದಾಗ, ತೆರಿಗೆ ಗುಣಕವು ಯಾವಾಗಲೂ ಸರಕಾರದ ವೆಚ್ಚದ ಗುಣಕಕ್ಕಿಂತ ನಿರಪೇಕ್ಷ ಮೌಲ್ಯದಲ್ಲಿ ಒಂದರಷ್ಟು ಕಡಿಮೆ ಇರುತ್ತದೆ. ಇದು ಒಂದು ಆಸಕ್ತಿದಾಯಕ ಸೂಚ್ಯಾರ್ಥವಾಗಿದೆ. ಸರ್ಕಾರದ ವೆಚ್ಚದಲ್ಲಿನ ಹೆಚ್ಚಳವು ಅಷ್ಟೇ ಪ್ರಮಾಣದ ತೆರಿಗೆಯ ಹೆಚ್ಚಳದೊಂದಿಗೆ ಸಮವಾದರೆ, ಮುಂಗಡ ಪತ್ರವು ಸಮತೋಲನದಲ್ಲಿ ಉಳಿಯುತ್ತದೆ, ಉತ್ಪನ್ನವು ಸರ್ಕಾರದ ವೆಚ್ಚದ ಪ್ರಮಾಣದಷ್ಟು ಹೆಚ್ಚುತ್ತದೆ. ಎರಡು ನೀತಿಯ ಗುಣಕಗಳ ಸಂಕಲನವು ಮುಂದಿನದನ್ನು ನೀಡುತ್ತದೆ.

$$\text{ಸಮತೋಲನ ಮುಂಗಡ ಪತ್ರದ ಗುಣಕ} = \frac{\Delta Y^*}{\Delta G}=\frac{1}{1-c}+\frac{-c}{1-c}=\frac{1-c}{1-c}=1 \quad (5.9)$$

ತೆರಿಗೆಗಳಲ್ಲಿನ 100ರಷ್ಟು ಹೆಚ್ಚಳದ ಮೂಲಕ ಹಣ ಭರಿಸಿಕೊಂಡ G ಯಲ್ಲಿನ 100ರಷ್ಟು ಹೆಚ್ಚಳವು ಆದಾಯವನ್ನು ಕೇವಲ 100 ರಷ್ಟು ಹೆಚ್ಚಿಸುತ್ತದೆ ಎಂಬುದನ್ನು ಏಕತೆಯ ಒಂದು ಸಮತೋಲನ ಮುಂಗಡ ಪತ್ರದ ಗುಣಕವು ಸೂಚಿಸುತ್ತದೆ. ಇದನ್ನು ಉದಾಹರಣೆ 1ರಲ್ಲಿ ನೋಡಬಹುದು. G ಯಲ್ಲಿನ 100 ರಷ್ಟು ಹೆಚ್ಚಳದಿಂದ ಉತ್ಪನ್ನವು 500 ಪಟ್ಟು ಹೆಚ್ಚುತ್ತದೆ. 100ಕ್ಕೆ ಸಮನಾದ ಆದಾಯದ ನಿವ್ವಳ ಹೆಚ್ಚಳದ ಜೊತೆಗೆ ಒಂದು ತೆರಿಗೆಯಲ್ಲಿನ ಹೆಚ್ಚಳವು ಆದಾಯವನ್ನು 400ಕ್ಕೆ ಕಡಿತಗೊಳಿಸುತ್ತದೆ. ಗುಣಕವು ಸ್ವಯಂಚಾಲಿತವಾಗಿ ಕಾರ್ಯನಿರ್ವಹಿಸಲು ಅದರ ಎಲ್ಲಾ ಸುತ್ತುಗಳಲ್ಲಿ ಒಬ್ಬರು ತಲುಪಬಹುದಾದ ಸಾಕಷ್ಟು ಕಾಲಾವಧಿಯ ಅಂತಿಮ ಆದಾಯವನ್ನು ಸಮತೋಲನ ಆದಾಯವೆಂದು ಉಲ್ಲೇಖಿಸಲಾಗುತ್ತದೆ. ತೆರಿಗೆ ಹೆಚ್ಚಳದ ಕಾರಣದಿಂದಾಗಿ ಪ್ರೇರಿತ ಅನುಭೋಗ ವೆಚ್ಚವಿಲ್ಲದೆ ಉತ್ಪನ್ನವು ನಿಖರವಾಗಿ G ಯಲ್ಲಿನ ಹೆಚ್ಚಳದಷ್ಟೇ ಹೆಚ್ಚಾಗುತ್ತದೆ ಎಂಬುದನ್ನು ನಾವು ಗಮನಿಸಬೇಕು. ಈ ಕಾರ್ಯದಲ್ಲಿ ಏನಾಗುತ್ತದೆ ಎಂಬುದನ್ನು ನೋಡಲು, ನಾವು ಗುಣಕ ಪ್ರಕ್ರಿಯೆಯನ್ನು ಪರಿಶೀಲಿಸೋಣ. ಒಂದು ಮೊತ್ತದಷ್ಟು ಸರಕಾರದ ವೆಚ್ಚದ ಹೆಚ್ಚಳದಿಂದ ಪ್ರತ್ಯಕ್ಷವಾಗಿ ಮತ್ತು ಆನಂತರ ಪರೋಕ್ಷವಾಗಿ ಗುಣಕ ಸರಪಳಿಯ ಮೂಲಕ ಅಷ್ಟೇ ಮೊತ್ತದ ಆದಾಯವು ಹೆಚ್ಚುತ್ತದೆ. ಆದಾಯ ಹೆಚ್ಚಳವು ಈ ಕೆಳಗಿನಂತಿದೆ.

$$\Delta Y = \Delta G + c\,\Delta G + c^2\,\Delta G + \ldots\ldots = -\Delta G\,(I + c + c^2 + \ldots) \quad (5.10)$$

ಆದರೆ ವೆಚ್ಚಮಾಡಬಹುದಾದ ಆದಾಯದಲ್ಲಿ ಕಡಿತವಾದಾಗ, ಅದು ತೆರಿಗೆ ಹೆಚ್ಚಳದಲ್ಲಿನ $c$ಯಷ್ಟು ಅನುಭೋಗವನ್ನು ಕಡಿಮೆಮಾಡಿದಾಗ ಮಾತ್ರ ತೆರಿಗೆ ಹೆಚ್ಚಳವು ಗುಣಕ ಪ್ರಕ್ರಿಯೆಯಲ್ಲಿ ಪ್ರವೇಶ ಮಾಡುತ್ತದೆ. ಹೀಗಾಗಿ ತೆರಿಗೆ ಹೆಚ್ಚಳದಿಂದ ಆದಾಯದ ಮೇಲಾಗುವ ಪರಿಣಾಮ ಈ ಕೆಳಗಿನಂತಿದೆ.

$$\Delta Y = -c\Delta T - c^2\,\Delta T + \ldots\ldots = -\Delta T\,(c + c^2 + \ldots) \quad (5.11)$$

ಈ ಎರಡರ (2 ಸಮೀಕರಣಗಳು) ನಡುವಿನ ವ್ಯತ್ಯಾಸವು ಆದಾಯದ ಮೇಲಿನ ನಿವ್ವಳ ಪರಿಣಾಮವನ್ನು ನೀಡುತ್ತದೆ $\Delta G = \Delta T$ ಆಗಿರುವುದರಿಂದ 5.10 ಮತ್ತು 5.11ರಿಂದ ನಾವು $\Delta Y = \Delta G$ ಯನ್ನು ಪಡೆಯುತ್ತೇವೆ, ಅಂದರೆ ಸರ್ಕಾರದ ವೆಚ್ಚದ ಹೆಚ್ಚಳದಿಂದ, ಆದಾಯ ಹೆಚ್ಚಾಗುತ್ತದೆ ಮತ್ತು ಸಮತೋಲನ ಮುಂಗಡಪತ್ರದ ಗುಣಕವು ಒಂದಕ್ಕೆ ಸಮವಾಗಿರುತ್ತದೆ. ಸಮೀಕರಣ 5.3 ರಿಂದ ಕೂಡ ನಾವು ಈ ಕೆಳಕಂಡಂತೆ ಗುಣಕವನ್ನು ಪಡೆಯಬಹುದು.

$$\Delta Y = \Delta\overline{G} + c\,(\Delta Y - \Delta T) \text{ ಹೂಡಿಕೆ ಬದಲಾಗದೇ ಇರುವುದರಿಂದ } (\Delta I = 0) \quad (5.12)$$

$\Delta\overline{G} = \Delta T$ ಆಗಿರುವುದರಿಂದ ನಾವು ಈ ಕೆಳಗಿನ ಸೂತ್ರವನ್ನು ಪಡೆಯಬಹುದು.

$$\frac{\Delta Y}{\Delta G}=\frac{1-c}{1-c}=1 \quad (5.13)$$

**ಪರಿಮಾಣಾನುಗುಣ ತೆರಿಗೆಯ ಸನ್ನಿವೇಶ:** ತೆರಿಗೆಗಳ ರೂಪದಲ್ಲಿ ಆದಾಯದ ಒಂದು ಸ್ಥಿರ ಭಾಗವನ್ನು, $t$ ಯನ್ನು, ಸರ್ಕಾರ ಸಂಗ್ರಹಿಸುವುದು ಒಂದು ಅತ್ಯಂತ ವಾಸ್ತವಿಕ ಕಲ್ಪನೆ ಎಂದು ಭಾವಿಸಲಾಗುತ್ತದೆ, ಆದ್ದರಿಂದ $T = tY$ ಎಂದಾಗುತ್ತದೆ. ಪ್ರಮಾಣಾನುಗುಣ ತೆರಿಗೆಯೊಂದಿಗೆ ಅನುಭೋಗ ಬಿಂಬಕವನ್ನು ಈ ಕೆಳಗಿನಂತೆ ನೀಡಲಾಗಿದೆ.

$$C = \overline{C} + c\left(Y = tY + \overline{TR}\right) = \overline{C} + c(1-t)Y + c\overline{TR} \qquad (5.14)$$

ಪ್ರಮಾಣಾನುಗುಣ ತೆರಿಗೆಗಳು ಕೇವಲ ಆದಾಯದ ಪ್ರತಿ ಹಂತದಲ್ಲಿನ ಅನುಭೋಗವನ್ನು ಕಡಿಮೆ ಮಾಡುವುದಷ್ಟೇ ಅಲ್ಲದೇ, ಅನುಭೋಗ ಬಿಂಬಕದ ಇಳಿಜಾರನ್ನೂ ಕಡಿಮೆ ಮಾಡುತ್ತವೆ. ಆದಾಯದಲ್ಲಿನ MPC (ಸೀಮಾಂತ ಅನುಭೋಗ ಪ್ರವೃತ್ತಿ) ಯು C $(1 - t)$ ಗೆ ಇಳಿಕೆಯಾಗುತ್ತದೆ. ಹೊಸ ಸಮಗ್ರ ಬೇಡಿಕೆ ಅನುಸೂಚಿ AD' ಇದು ಒಂದು ದೊಡ್ಡ ಛೇದಕವನ್ನು ಹೊಂದಿದೆ. ಆದರೆ ಇದು ಸಮತಟ್ಟಾಗಿರುವುದನ್ನು ಚಿತ್ರ 5.3 ರಲ್ಲಿ ತೋರಿಸಲಾಗಿದೆ. ಈಗ ನಾವು ಈ ಕೆಳಗಿನ ಸೂತ್ರವನ್ನು ಪಡೆಯಬಹುದು.




**ರೇಖಾಚಿತ್ರ 5.3:** ಸರ್ಕಾರ ಮತ್ತು ಸಮಗ್ರಬೇಡಿಕೆ (ಪರಿಮಾಣಾನುಗುಣ ತೆರಿಗೆಯು AD ಯನ್ನು ಹೆಚ್ಚು ಸಮತಟ್ಟುಗೊಳಿಸುತ್ತದೆ.)

$$AD = \overline{C} + c(1- t)Y + c\overline{TR} + 1 + G = \overline{A} + c(1-t)Y \qquad (5.15)$$

$\overline{A}$ = ಸ್ವಾಯತ್ತ ವೆಚ್ಚವಾಗಿದ್ದು ಮತ್ತು ಅದು $\overline{C} + c\overline{TR} + I + G$ ಗೆ ಸಮನಾಗಿದೆ. ಉತ್ಪನ್ನ ಮಾರುಕಟ್ಟೆಯಲ್ಲಿ ಆದಾಯ ನಿರ್ಧಾರದ ಸ್ಥಿತಿಯು Y = AD ಆಗಿದ್ದು, ಅದನ್ನು ಈ ಕೆಳಗಿನಂತೆ ಬರೆಯಬಹುದಾಗಿದೆ.

$$Y = \overline{A} + c(1-t)Y \qquad (5.16)$$

ಸಮತೋಲನ ಮಟ್ಟದ ಆದಾಯಕ್ಕೆ ಪರಿಹಾರ $Y^* = \dfrac{1}{1-c(1-t)}\overline{A}$ (5.17)

ಆಗ ಗುಣಕವು ಈ ಕೆಳಗಿನಂತೆ ನೀಡಲಾಗಿದೆ. $\dfrac{\Delta Y}{\Delta \overline{A}} = \dfrac{1}{1- c(1- t)}$ (5.18)

ಇದನ್ನು ಗುಣಕದ ಮೌಲ್ಯ ಮತ್ತು ಒಟ್ಟು ತೆರಿಗೆ ಸಂಗತಿಗೆ ಹೋಲಿಸಿದರೆ, ಇದರ ಮೌಲ್ಯವು ಕಡಿಮೆಯಾಗುವುದನ್ನು ನಾವು ಕಾಣುತ್ತೇವೆ. ಒಟ್ಟು ತೆರಿಗೆಗಳ ಸನ್ನಿವೇಶದಲ್ಲಿ ಸರ್ಕಾರದ ವೆಚ್ಚದಲ್ಲಿನ ಹೆಚ್ಚಳದ ಪರಿಣಾಮವಾಗಿ ಆದಾಯ ಹೆಚ್ಚಿದಾಗ, ಅನುಭೋಗವು, ಆದಾಯ ಹೆಚ್ಚಳದಲ್ಲಿನ 'C' ಪಟ್ಟು ಹೆಚ್ಚಾಗುತ್ತದೆ. ಪರಿಮಾಣಾನುಗುಣ ತೆರಿಗೆಗಳೊಂದಿಗೆ, ಅನುಭೋಗವು ಆದಾಯದ ಹೆಚ್ಚಳದಲ್ಲಿನ $(c - ct = c(1-t)$ ರಷ್ಟು ಕಡಿಮೆ ಪ್ರಮಾಣದಲ್ಲಿ ಏರಿಕೆಯಾಗುತ್ತದೆ.




**ರೇಖಾಚಿತ್ರ 5.4:** ಸರ್ಕಾರದ ವೆಚ್ಚದಲ್ಲಿನ ಹೆಚ್ಚಳ (ಪರಿಮಾಣಾನುಗುಣ ತೆರಿಗೆಗಳೊಂದಿಗೆ).

G ಯಲ್ಲಿನ ಬದಲಾವಣೆಗಳಿಗಾಗಿ ಗುಣಕವನ್ನು ಈ ಕೆಳಗಿನಂತೆ ನೀಡಲಾಗಿದೆ.

$$\Delta Y = \Delta\overline{G} + c(1-t)\Delta Y \qquad (5.19)$$

$$\Delta Y = \frac{1}{1-c\ (1-t)}\Delta\overline{G} \qquad (5.20)$$

ರೇಖಾಚಿತ್ರ 5.4ರಲ್ಲಿ ತೋರಿಸಿದಂತೆ ಆದಾಯವು Y* ನಿಂದ Y' ಗೆ ಹೆಚ್ಚಳವಾಗುತ್ತದೆ.

ರೇಖಾಚಿತ್ರ 5.5ರಲ್ಲಿ ತೋರಿಸಿದಂತೆ, ತೆರಿಗೆಗಳಲ್ಲಿನ ಕಡಿತವು ಅನುಭೋಗದ ಪ್ರವೃತ್ತಿಯಲ್ಲಿನ ಹೆಚ್ಚಳದಂತಹ ಪರಿಣಾಮವನ್ನು ಬೀರುತ್ತದೆ.




**ರೇಖಾಚಿತ್ರ 5.5:** ಪರಿಮಾಣಾನುಗುಣ ತೆರಿಗೆಯ ಕಡಿತದ ಪರಿಣಾಮಗಳು

AD ರೇಖೆಯು AD' ವರೆಗೆ ಪಲ್ಲಟ ಗೊಳ್ಳುತ್ತದೆ. ಆದಾಯದ ಪ್ರಾರಂಭಿಕ ಹಂತದಲ್ಲಿ ಸರಕುಗಳ ಸಮಗ್ರ ಬೇಡಿಕೆ ಪ್ರಮಾಣವು ಉತ್ಪನ್ನ ಪ್ರಮಾಣವನ್ನು ಮೀರಿರುತ್ತದೆ, ಏಕೆಂದರೆ ತೆರಿಗೆ ಕಡಿತವು ಅಧಿಕ ಅನುಭೋಗಕ್ಕೆ ಕಾರಣವಾಗುತ್ತದೆ. ಹೊಸ ಉನ್ನತ ಮಟ್ಟದ ಆದಾಯವು Y' ಆಗಿದೆ.





### ಉದಾಹರಣೆ 5.2

5.1 ರ ಉದಾಹರಣೆಯಲ್ಲಿ ತೆರಿಗೆ ದರವು 0.25 ಎಂದು ತೆಗೆದುಕೊಂಡರೆ, ನಾವು ಅನುಭೋಗವು ಆದಾಯದಲ್ಲಿನ ಪ್ರತಿ ಘಟಕದ ಹೆಚ್ಚಳಕ್ಕೆ ಮೊದಲಿನಂತೆ 0.80ಗಿ ಹೆಚ್ಚುವ ಬದಲಾಗಿ 0.60 ($c\ (1-t) = 0.8 \times 0.75$) ರಷ್ಟು ಹೆಚ್ಚುತ್ತದೆ ಎಂಬುದನ್ನು ನಾವು ಕಾಣುತ್ತೇವೆ. ಹೀಗೆ, ಅನುಭೋಗವು ಮೊದಲಿಗಿಂತ ಕಡಿಮೆಪ್ರಮಾಣದಲ್ಲಿ ಹೆಚ್ಚುತ್ತದೆ. ಸರ್ಕಾರಿ ವೆಚ್ಚದ ಗುಣಕವು $\frac{1}{1-c(1-t)} = \frac{1}{1-0.6} = \frac{1}{0.4} = 2.5$ ಆಗುತ್ತದೆ.

ಇದು ಒಟ್ಟು ತೆರಿಗೆಗಳೊಂದಿಗೆ ಪಡೆದದ್ದಕ್ಕಿಂತ ಕಡಿಮೆ ಇದೆ. ಒಂದು ವೇಳೆ ಸರ್ಕಾರದ ವೆಚ್ಚವನ್ನು 100ರಷ್ಟು ಹೆಚ್ಚಿಸಿದರೆ, ಉತ್ಪನ್ನವು ಸರ್ಕಾರದ ವೆಚ್ಚದಲ್ಲಿನ ಗುಣಕದಪಟ್ಟು ಹೆಚ್ಚುತ್ತದೆ. ಇದು $2.5 \times 100 = 250$ ಆಗುತ್ತದೆ. ಇದು ಒಟ್ಟು ತೆರಿಗೆಗಳೊಂದಿಗಿನ ಉತ್ಪನ್ನದ ಹೆಚ್ಚಳಕ್ಕಿಂತ ಕಡಿಮೆಯಿದೆ.

---

ಹೀಗಾಗಿ, ಪರಿಮಾಣಾತ್ಮಕ ಆದಾಯ ತೆರಿಗೆಯು ಸ್ವಯಂಚಾಲಿತ ಸ್ಥಿರಕಾರಕವಾಗಿ ಕೆಲಸ ಮಾಡುತ್ತದೆ. ಇದು ಒಂದು ಕಂಪನಗ್ರಾಹಕ(ಆಘಾತವನ್ನು ತಡೆಯುವ), ಏಕೆಂದರೆ ಇದು ವೆಚ್ಚ ಮಾಡಬಹುದಾದ ಆದಾಯ ಮತ್ತು ಅನುಭೋಗಿಗಳ ವೆಚ್ಚವನ್ನು GDP ಯಲ್ಲಿನ ಏರಿಳಿತಗಳಿಗೆ ಕಡಿಮೆ ಸಂವೇದನಾಶೀಲವಾಗಿಸುತ್ತದೆ. GDP ಯು ಏರಿಕೆಯಾದಾಗ, ವೆಚ್ಚ ಮಾಡಬಹುದಾದ ಆದಾಯವೂ ಸಹ ಹೆಚ್ಚುತ್ತದೆ, ಆದರೆ ಇದು GDP ಹೆಚ್ಚಳದ ಪ್ರಮಾಣಕ್ಕಿಂತ ಕಡಿಮೆ ಇರುತ್ತದೆ, ಏಕೆಂದರೆ ಇದರ ಒಂದು ಭಾಗವು ತೆರಿಗೆಯಾಗಿ ಹೊರಹೋಗುತ್ತದೆ. ಇದು ಅನುಭೋಗ ವೆಚ್ಚದಲ್ಲಿನ ಮೇಲ್ಮುಖ ಏರಿಳಿತಗಳನ್ನು ಮಿತಗೊಳಿಸುವಲ್ಲಿ ಸಹಾಯ ಮಾಡುತ್ತದೆ. ಆರ್ಥಿಕ ಹಿಂಜರಿತದ (ಕುಸಿತ) ಅವಧಿಯಲ್ಲಿ GDPಯು ಕಡಿಮೆಯಾದಾಗ ವೆಚ್ಚ ಮಾಡಬಹುದಾದ ಆದಾಯವು ಅದಕ್ಕಿಂತ ಕಡಿಮೆ ವೇಗದಲ್ಲಿ ಇಳಿಯುತ್ತದೆ ಮತ್ತು ತೆರಿಗೆ ಹೊಣೆಗಾರಿಕೆಯು ನಿಗದಿಪಡಿಸಿದಾಗ ಇಳಿಕೆಯಾಗುವಷ್ಟು ಪ್ರಮಾಣದಲ್ಲಿ ಅನುಭೋಗವು ಕಡಿಮೆಯಾಗುವುದಲ್ಲ. ಇದು ಸಮಗ್ರ ಬೇಡಿಕೆಯಲ್ಲಿನ ಇಳಿಕೆಯನ್ನು ಕಡಿಮೆ ಮಾಡುತ್ತದೆ ಮತ್ತು ಆರ್ಥಿಕತೆಯನ್ನು ಸ್ಥಿರತೆಯಲ್ಲಿ ಇಡುತ್ತದೆ.

ಹೂಡಿಕೆಯ ಬೇಡಿಕೆಯಲ್ಲಿನ ಅನಪೇಕ್ಷಿತ ಪಲ್ಲಟಗಳ ಪರಿಣಾಮಗಳನ್ನು ಸರಿದೂಗಿಸಲು, ಈ ಕೋಶೀಯ ನೀತಿಯ ಸಾಧನಗಳು ಬಗೆಬಗೆಯಾಗಿ ಇರಬಹುದು ಎಂಬುದನ್ನು ನಾವು ಗಮನಿಸಬೇಕು. ಅಂದರೆ, ಹೂಡಿಕೆಯು $I_0$ ಯಿಂದ $I_1$ ಗೆ ಕುಸಿದರೆ ಸರ್ಕಾರದ ವೆಚ್ಚವನ್ನು $G_0$ ಯಿಂದ $G_1$ ಗೆ ಹೆಚ್ಚಿಸಬಹುದು, ಇದರಿಂದ ಸ್ವಾಯತ್ತ ವೆಚ್ಚ ($C + I_0 + G_0 = C + I_1 + G_1$) ಮತ್ತು ಸಮತೋಲನ

ಆದಾಯಗಳು ಸ್ಥಿರವಾಗಿ ಉಳಿಯುತ್ತವೆ. ಕೋಶೀಯ ವ್ಯವಸ್ಥೆಯ ಅಂತರ್ಗತವಾಗಿರುವ ಸ್ವಯಂ ಚಾಲಿತ ಸ್ಥಿರೀಕರಣ ಲಕ್ಷಣಗಳಿಂದ ಪ್ರತ್ಯೇಕಿಸಲು, ಉದ್ದೇಶಪೂರ್ವಕವಾಗಿ ಕೈಗೊಳ್ಳುವ ಸ್ಥಿರೀಕರಣ ಕ್ರಿಯೆಯನ್ನು ವಿವೇಚನಾಯುಕ್ತ ಕೋಶೀಯ ನೀತಿ (*discretionary fiscal policy*) ಎಂದು ಕರೆಯುತ್ತಾರೆ. ಈ ಮೊದಲೇ ಚರ್ಚಿಸಿದಂತೆ, ಪ್ರಮಾಣಾನುಗುಣ ತೆರಿಗೆಗಳು ಮೇಲ್ಮುಖ ಮತ್ತು ಕೆಳಮುಖ ಚಲನೆಗೆ ವಿರುದ್ಧವಾಗಿ (ಚಲನೆಯನ್ನು ನಿಯಂತ್ರಿಸಿ) ಆರ್ಥಿಕತೆಯಲ್ಲಿ ಸ್ಥಿರತೆಯನ್ನು ತರಲು ಸಹಾಯ ಮಾಡುತ್ತವೆ. ಕಲ್ಯಾಣಾತ್ಮಕ ವರ್ಗಾವಣೆಗಳೂ ಸಹ ಆರ್ಥಿಕತೆಯಲ್ಲಿ ಸ್ಥಿರತೆಯನ್ನು ತರಲು ಸಹಾಯ ಮಾಡುತ್ತವೆ. ಸಮೃದ್ಧಿ ವರ್ಷಗಳಲ್ಲಿ ಉದ್ಯೋಗಮಟ್ಟ ಅಧಿಕವಾಗಿದ್ದಾಗ, ಸಂಗ್ರಹಿಸಿದ ತೆರಿಗೆ ಪಾವತಿಗಳು ಕಲ್ಯಾಣಾತ್ಮಕ ವೆಚ್ಚಗಳನ್ನು ಹೆಚ್ಚಿಸುತ್ತವೆ ಮತ್ತು ಅಧಿಕ ಅನುಭೋಗ ವೆಚ್ಚದ ಮೇಲೆ ಸ್ಥಿರೀಕರಣದ ಒತ್ತಡವನ್ನು ಹೇರುತ್ತವೆ. ಇದಕ್ಕೆ ವಿರುದ್ಧವಾಗಿ ಕುಸಿತದ ಅವಧಿಯಲ್ಲಿ, ಈ ಕಲ್ಯಾಣ ಪಾವತಿಗಳು ಅನುಭೋಗವನ್ನು ಸುಸ್ಥಿರವಾಗಿಡುತ್ತವೆ. ಅಲ್ಲದೇ, ಖಾಸಗಿ ವಲಯವೂ ಸಹ ಆಂತರಿಕ ಸ್ಥಿರೀಕರಣಗಳನ್ನು ಹೊಂದಿರುತ್ತದೆ. ನಿಗಮಗಳು ಅಲ್ಪಾವಧಿಯಲ್ಲಿ ಆದಾಯ ಬದಲಾವಣೆಗಳನ್ನು ಎದುರಿಸಲು ಅವುಗಳ ಲಾಭಾಂಶಗಳನ್ನು ಕಾಪಾಡಿಕೊಂಡು ಬರುತ್ತವೆ ಮತ್ತು ಕುಟುಂಬಗಳು ಹಿಂದಿನ ಜೀವನ ಮಟ್ಟಗಳನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತವೆ. ಯಾವುದೇ ಕ್ರಮಕೈಗೊಳ್ಳಲು, ತೀರ್ಮಾನಗಳನ್ನು ಕೈಗೊಳ್ಳುವವರ ಅವಶ್ಯಕತೆಯಿಲ್ಲದಂತೆ, ಮೇಲೆ ತಿಳಿಸಿದ ಅಂಶಗಳು ಕಂಪನ ಗ್ರಾಹಕಗಳಾಗಿ ಕಾರ್ಯವೆಸಗುತ್ತವೆ. ಅಂದರೆ ಅವುಗಳು ಸ್ವಯಂಚಾಲಿತವಾಗಿ ಕಾರ್ಯ ನಿರ್ವಹಿಸುತ್ತವೆ. ಆದಾಗ್ಯೂ, ಅಂತರ್ಗತ ಸ್ಥಿರೀಕರಣಗಳು ಆರ್ಥಿಕತೆಯಲ್ಲಿನ ಭಾಗಶಃ ಏರಿಳಿತಗಳನ್ನು ಮಾತ್ರ ಕಡಿಮೆ ಮಾಡುತ್ತವೆ, ಉಳಿದವುಗಳನ್ನು ಉದ್ದೇಶಪೂರ್ವಕ ನೀತಿ ಕ್ರಮಗಳು ನೋಡಿಕೊಳ್ಳಬೇಕಾಗುತ್ತದೆ.

**ವರ್ಗಾವಣೆಗಳು:** ಸರಕಾರವು ಸರಕುಸೇವೆಗಳ ಮೇಲಿನ ವೆಚ್ಚವನ್ನು ಏರಿಸುವ ಬದಲು ವರ್ಗಾವಣೆ ಪಾವತಿಗಳನ್ನು ಹೆಚ್ಚಿಸುತ್ತದೆ ಎಂದುಕೊಳ್ಳೋಣ. $\overline{TR}$ ಸ್ವಾಯತ್ತವೆಚ್ಚ, $\overline{A}$ ಯು $c\,\Delta\,\overline{TR}$ ರಷ್ಟು ಹೆಚ್ಚಾಗುತ್ತದೆ, ಆಗ ಉತ್ಪನ್ನವು ಸರ್ಕಾರದ ವೆಚ್ಚ ಹೆಚ್ಚಾದಾಗ ಹೆಚ್ಚುವ ಮೊತ್ತಕ್ಕಿಂತ ಕಡಿಮೆ ಪ್ರಮಾಣದಲ್ಲಿ ಏರಿಕೆಯಾಗುತ್ತದೆ, ಏಕೆಂದರೆ, ವರ್ಗಾವಣಾ ಪಾವತಿಗಳಲ್ಲಿ ಏನೇ ಹೆಚ್ಚಳವಾದರೂ, ಅದರ ಒಂದು ಭಾಗವು ಉಳಿತಾಯವಾಗುತ್ತದೆ. ವರ್ಗಾವಣೆಗಳ ಬದಲಾವಣೆಯಿಂದಾಗಿ ಬದಲಾಗುವ ಸಮತೋಲನ ಆದಾಯವನ್ನು ಈ ಕೆಳಗಿನಂತೆ ನೀಡಲಾಗಿದೆ.

$$\Delta y = \frac{c}{1-c}\Delta TR \qquad (5.21)$$

ಅಥವಾ

$$\frac{\Delta Y}{\Delta TR} = \frac{c}{1-c} \qquad (5.22)$$

**ಉದಾಹರಣೆ 5.3**

ಸೀಮಾಂತ ಅನುಭೋಗ ಪ್ರವೃತ್ತಿಯು 0.75 ಆಗಿದೆ ಮತ್ತು ಒಟ್ಟು ತೆರಿಗೆಗಳನ್ನು ಹೊಂದಿದ್ದೇವೆ ಎಂದು ಕೋಳ್ಳೋಣ. ಸರ್ಕಾರದ ಖರೀದಿಯು 20ಕ್ಕೆ ಹೆಚ್ಚಳವಾದಾಗ ಸಮತೋಲನದ ಆದಾಯದಲ್ಲಿನ ಬದಲಾವಣೆಯು $\Delta Y = \frac{1}{1-0.75}\Delta G = 4 \times 20 = 80$ ಆಗಿರುತ್ತದೆ. ವರ್ಗಾವಣೆಗಳಲ್ಲಿನ 20ಪಟ್ಟು ಹೆಚ್ಚಳವು ಸಮತೋಲನ ಆದಾಯವನ್ನು $\Delta Y = \frac{0.75}{1-0.75}\Delta TR = 3 \times 20 = 60$ ಕ್ಕೆ ಹೆಚ್ಚಿಸುತ್ತದೆ. ಹೀಗಾಗಿ, ಆದಾಯವು, ಸರ್ಕಾರದ ಖರೀದಿಗಳ ಏರಿಕೆಯೊಂದಿಗೆ ಆಗುವ ಹೆಚ್ಚಳಕ್ಕಿಂತ ಕಡಿಮೆ ಪ್ರಮಾಣದಲ್ಲಿ ಹೆಚ್ಚಾಗುತ್ತದೆ. ಎಂಬುದನ್ನು ನಾವು ಕಂಡುಕೊಳ್ಳುತ್ತೇವೆ.

### 5.2.3 ಸಾಲ: *Debt*

ಮುಂಗಡದ ಕೊರತೆಗಳನ್ನು ತುಂಬಲು ತೆರಿಗೆಗಳು, ಸಾಲಗಳು ಅಥವಾ ನೋಟು ಮುದ್ರಣದ ಮೂಲಕ ಹಣಕಾಸನ್ನು ಪೂರೈಸಬೇಕಾಗುತ್ತದೆ. ಸರಕಾರ ಬಹುತೇಕವಾಗಿ ಸಾಲದ ಮೇಲೆ ಅವಲಂಬಿತವಾಗಿದೆ. ಇದು

ಸರ್ಕಾರದ ಸಾಲ ಎಂದು ಕರೆಯಲಾಗುವ ಸಾಲದ ಏರಿಕೆಗೆ ಕಾರಣವಾಗುತ್ತದೆ. ಕೊರತೆಗಳು ಮತ್ತು ಸಾಲ ಪರಿಕಲ್ಪನೆಗಳು ನಿಕಟ ಸಂಬಂಧವನ್ನು ಹೊಂದಿವೆ. ಸಾಲದ ದಾಸ್ತಾನಿಗೆ ಸೇರ್ಪಡೆಯಾಗುವ ಕೊರತೆಗಳನ್ನು ಒಂದು ಹರಿವು ಎಂದು ಯೋಚಿಸಬಹುದು. ಸರ್ಕಾರವು ವರ್ಷದಿಂದ ವರ್ಷಕ್ಕೆ ಸಾಲವನ್ನು ಪಡೆಯುವುದನ್ನು ಮುಂದುವರೆಸಿದರೆ, ಅದು ಸಾಲದ ಮೊತ್ತದ ಏರಿಕೆಗೆ ಕಾರಣವಾಗುತ್ತದೆ ಮತ್ತು ಸರ್ಕಾರ ಬಡ್ಡಿಯ ರೂಪದಲ್ಲಿ ಹೆಚ್ಚು ಹೆಚ್ಚು ಪಾವತಿಸಬೇಕಾಗುತ್ತದೆ. ಈ ಬಡ್ಡಿ ಪಾವತಿಗಳು ಸಾಲದ ಏರಿಕೆಗೆ ತಮ್ಮದೇ ಆದ ಕೊಡುಗೆ ನೀಡುತ್ತವೆ.

**ಸರ್ಕಾರಿ ಸಾಲದ ಸೂಕ್ತ ಮೊತ್ತದ ಮೇಲಿನ ನಿರೀಕ್ಷೆಗಳು:** ಈ ಸಂಗತಿಯಲ್ಲಿ ಪರಸ್ಪರ ಜೋಡಣೆಯಾದ ಎರಡು ಅಂಶಗಳಿವೆ. ಮೊದಲನೆಯದು ಸರ್ಕಾರದ ಸಾಲವು ಹೊರೆಯೇ ಎಂಬುದು ಮತ್ತು ಎರಡನೆಯದು ಸಾಲಕ್ಕೆ ಹಣಕಾಸನ್ನು ಒದಗಿಸುವ ಸಮಸ್ಯೆ. ಒಂದು ಸಣ್ಣ ವ್ಯಾಪಾರಿಯ ಸಾಲದ ವಿಷಯದಲ್ಲಿ ಏನು ನಿಜವಾಗಿರುತ್ತದೆಯೋ ಅದು ಸರ್ಕಾರದ ಸಾಲದ ವಿಷಯದಲ್ಲಿ ನಿಜವಾಗದೇ ಇರಬಹುದು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡೇ ಸಾಲದ ಹೊರೆಯ ಬಗ್ಗೆ ಚರ್ಚಿಸಬೇಕು ಮತ್ತು 'ಇಡೀ' (whole) ಯೊಡನೆ 'ಭಾಗ' (part) ಕ್ಕಿಂತ ಬಿನ್ನವಾಗಿ ವ್ಯವಹರಿಸಬೇಕಾಗುತ್ತದೆ. ಯಾವುದೇ ಒಬ್ಬ ವ್ಯಾಪಾರಿಯಂತಲ್ಲದೆ ಸರ್ಕಾರವು ತೆರಿಗೆಗಳು ಮತ್ತು ನೋಟು ಮುದ್ರಣದ ಮೂಲಕ ಸಂಪನ್ಮೂಲವನ್ನು ಸೃಷ್ಟಿಸಬಹುದು.

ಸಾಲಪಡೆಯುವುದರಿಂದ ಸರ್ಕಾರವು ಕಡಿತಗೊಂಡ ಅನುಭೋಗದ ಹೊರೆಯನ್ನು ಭವಿಷ್ಯದ ಪೀಳಿಗೆಗಳ ಮೇಲೆ ವರ್ಗಾಯಿಸುತ್ತದೆ. ಇದು ಏಕೆಂದರೆ ಇಂದಿನ ಜನರಿಗೆ ಭದ್ರತೆಗಳನ್ನು (ಬಾಂಡುಗಳು) ಮಾರಾಟ ಮಾಡುವ ಮೂಲಕ ಸರ್ಕಾರ ಸಾಲವನ್ನು ಎತ್ತುತ್ತದೆ. ಆದರೆ 20 ವರ್ಷಗಳ ನಂತರ ತೆರಿಗೆಯನ್ನು ಹೆಚ್ಚಿಸುವ ಮೂಲಕ ಈ ಭದ್ರತೆಗಳ ಹಣವನ್ನು ಮರುಪಾವತಿಸಲು ನಿರ್ಧರಿಸಬಹುದು. ಇದನ್ನು ಆಗ ತಾನೆ ಶ್ರಮಬಲಕ್ಕೆ ಪ್ರವೇಶಿಸುತ್ತಿರುವ ಯುವಜನತೆಯ ಮೇಲೆ ಹೇರಬಹುದು, ಹಾಗಾಗಿ ಅವರ ವೆಚ್ಚಮಾಡಬಹುದಾದ ಆದಾಯ ಮತ್ತು ಆ ಮೂಲಕ ಅನುಭೋಗ ಪ್ರಮಾಣ ಕಡಿಮೆಯಾಗುತ್ತವೆ. ಹೀಗಾಗಿ ರಾಷ್ಟ್ರೀಯ ಉಳಿತಾಯಗಳು ಕಡಿಮೆಯಾಗುತ್ತವೆ ಎಂದು ವಾದಿಸಲಾಗಿದೆ. ಅಲ್ಲದೆ ಸರ್ಕಾರ ಜನರಿಂದ ಎತ್ತುವ ಸಾಲಗಳು ಖಾಸಗಿ ವಲಯಕ್ಕೆ ಲಭ್ಯವಾಗುವ ಉಳಿತಾಯಗಳನ್ನು ಕಡಿಮೆ ಮಾಡುತ್ತವೆ. ಒಂದು ಹಂತದವರೆಗೆ ಇದು ಬಂಡವಾಳ ಶೇಖರಣೆ ಮತ್ತು ಬೆಳವಣಿಗೆಯನ್ನು ಕಡಿಮೆ ಮಾಡುತ್ತದೆ, ಸಾಲವು ಭವಿಷ್ಯದ ಪೀಳಿಗೆಯ ಮೇಲೆ 'ಹೊರೆ'ಯಾಗಿ ಪರಿಣಮಿಸುತ್ತದೆ.

ಸಾಂಪ್ರದಾಯಿಕವಾಗಿ, ಸರ್ಕಾರವು ತೆರಿಗೆಗಳನ್ನು ಕಡಿಮೆ ಮಾಡಿ, ಕೊರತೆ ಮುಂಗಡ ಪತ್ರವನ್ನು ಹೊಂದಿದರೆ, ಅನುಭೋಗಿಗಳು ತೆರಿಗೆ ನಂತರದ ತಮ್ಮ ಆದಾಯಕ್ಕೆ ಹೆಚ್ಚು ವೆಚ್ಚ ಮಾಡುವುದರ ಮೂಲಕ ಪ್ರತಿಕ್ರಿಯಿಸುತ್ತಾರೆ ಎಂದು ವಾದಿಸಲಾಗಿದೆ. ಏಕೆಂದರೆ, ಈ ಜನರು ದೂರ ದೃಷ್ಟಿ ಇಲ್ಲದವರಾಗಿದ್ದು, ಅವರು ಮುಂಗಡ ಪತ್ರದ ಕೊರತೆಯ ಪರಿಣಾಮಗಳನ್ನು ಅರ್ಥಮಾಡಿಕೊಳ್ಳದಿರುವ ಸಾಧ್ಯತೆಯೂ ಇರಬಹುದು. ಭವಿಷ್ಯದಲ್ಲಿ ಒಂದು ದಿನ ಸಾಲ ಮತ್ತು ಸಂಚಿತವಾದ ಬಡ್ಡಿಯನ್ನು ಮರುಪಾವತಿಸಲು ಸರ್ಕಾರ ತೆರಿಗೆಯನ್ನು ಹೆಚ್ಚಿಸಬೇಕೆಂಬುದನ್ನು ಬಹುಶಃ ಅರ್ಥಮಾಡಿಕೊಳ್ಳದಿರಬಹುದು. ಅವರು ಇದನ್ನು ಅರ್ಥಮಾಡಿಕೊಂಡರೂ, ಭವಿಷ್ಯತ್ತಿನಲ್ಲಿ ತೆರಿಗೆಗಳು ತಮ್ಮ ಮೇಲೆ ಬೀಳುವುದಿಲ್ಲ ಬದಲಾಗಿ ಭವಿಷ್ಯದ ಪೀಳಿಗೆಯ ಮೇಲೆ ಬೀಳುತ್ತದೆಂದು ನಿರೀಕ್ಷಿಸಬಹುದು.

ಅನುಭೋಗಿಗಳು ಮುಂದಾಲೋಚನೆಯುಳ್ಳವರಾಗಿದ್ದು ಮತ್ತು ಅವರ ವೆಚ್ಚವು ಕೇವಲ ಪ್ರಸಕ್ತ ಆದಾಯದ ಮೇಲೆ ನಿಂತಿರುವುದಿಲ್ಲ, ಬದಲಾಗಿ, ಅವರ ನಿರೀಕ್ಷಿತ ಭವಿಷ್ಯದ ಆದಾಯದ ಮೇಲೂ ನಿಂತಿರುತ್ತದೆ ಎಂಬುದು ಇದಕ್ಕೆ ಪ್ರತಿವಾದವಾಗಿದೆ. ಇಂದಿನ ಸಾಲ ಎಂದರೆ ಭವಿಷ್ಯದ ಅಧಿಕ ತೆರಿಗೆಗಳು ಎಂಬುದನ್ನು ಅವರು ಅರ್ಥಮಾಡಿಕೊಳ್ಳುವರು. ನಂತರ ಅನುಭೋಗಿಗಳು ಭವಿಷ್ಯತ್ತಿನ ಪೀಳಿಗೆಯವರ ಬಗ್ಗೆ ಕಾಳಜಿಯುಳ್ಳವರಾಗಿರುತ್ತಾರೆ. ಏಕೆಂದರೆ ಅವರು ಪ್ರಸ್ತುತ ಪೀಳಿಗೆಯವರ ಮಕ್ಕಳು ಮತ್ತು ಮೊಮ್ಮೊಕ್ಕಳಾಗಿರುತ್ತಾರೆ ಮತ್ತು ಸಂಬಂಧಿತ ನಿರ್ಧಾರ ಮಾಡುವ ಘಟಕವಾದ ಕುಟುಂಬದ ಅಸ್ಥಿತ್ವ ಸದಾ ಮುಂದುವರೆಯುತ್ತದೆ. ಅವರು ಇಂದು ಉಳಿತಾಯವನ್ನು ಹೆಚ್ಚಿಸಬಹುದು, ಇದು ಸರ್ಕಾರ ಉಳಿತಾಯ ಮಾಡದೇ ಇರುವುದನ್ನು ಸರಿದೂಗಿಸುತ್ತದೆ, ಹೀಗಾಗಿ ರಾಷ್ಟ್ರೀಯ ಉಳಿತಾಯವು ಬದಲಾಗುವದಿಲ್ಲ. ಈ ಅಭಿಪ್ರಾಯವನ್ನು 19ನೇ

ಶತಮಾನದ ಶ್ರೇಷ್ಠ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರಾದ ಡೇವಿಡ್ ರಿಕಾರ್ಡೋರವರ ಹೆಸರಿನಲ್ಲಿ, **'ರಿಕಾರ್ಡೋನ ಸಮಾನತೆ'** ಎಂದು ಕರೆಯುತ್ತೇವೆ. ಇವರು ಅತ್ಯಧಿಕ ಕೊರತೆಯ ಸಮ್ಮುಖದಲ್ಲಿ ಜನರು ಹೆಚ್ಚು ಉಳಿತಾಯ ಮಾಡುತ್ತಾರೆ ಎಂದು ಪ್ರಥಮವಾಗಿ ವಾದಿಸಿದ್ದಾರೆ. ಇದನ್ನು ಸಮಾನತೆ ಎಂದು ಕರೆಯಲಾಗಿದೆ, ಏಕೆಂದರೆ ತೆರಿಗೆ ಮತ್ತು ಸಾಲಗಳೆರಡೂ ವೆಚ್ಚಕ್ಕೆ ಹಣಕಾಸನ್ನು ಒದಗಿಸುವ ಸಮಾನ ಸಾಧನಗಳಾಗಿವೆ. ಸರಕಾರ ಇಂದು ಸಾಲವನ್ನು ಪಡೆಯುವ ಮೂಲಕ ಅಧಿಕ ವೆಚ್ಚವನ್ನು ಮಾಡಿದರೆ ಈ ಸಾಲವನ್ನು ಭವಿಷ್ಯತ್ತಿನಲ್ಲಿ ತೆರಿಗೆಗಳ ಮೂಲಕ ಮರುಪಾವತಿ ಮಾಡಲಾಗುವುದು. ಇಂದಿನ ತೆರಿಗೆ ಹೆಚ್ಚಳದಿಂದ ಭರಿಸಲಾಗುವ ಸರ್ಕಾರದ ವೆಚ್ಚದ ಹೆಚ್ಚಳವು, ಆರ್ಥಿಕತೆಯ ಮೇಲೆ ಯಾವ ಪರಿಣಾಮ ಬೀರುತ್ತದೋ ಅದೇ ಪರಿಣಾಮವನ್ನು ಇದು ಬೀರುತ್ತದೆ.

ಸಾಲವು ಅಂತಹ ಪ್ರಮುಖ ವಿಷಯವೇನಲ್ಲ, ಏಕೆಂದರೆ ಅದಕ್ಕೆ ನಮಗೆ ನಾವೇ ಋಣಿಯಾಗಿರುತ್ತೇವೆ ಎಂದು ಆಗಾಗ್ಗೆ ವಾದಿಸಲಾಗುತ್ತದೆ. ಏಕೆಂದರೆ ಪೀಳಿಗೆಗಳ ನಡುವೆ ಸಂಪನ್ಮೂಲಗಳ ವರ್ಗಾವಣೆಯಾದರೂ, ಖರೀದಿಯ ಸಾಮರ್ಥ್ಯವು ದೇಶದ ಒಳಗಡೆಯೇ ಉಳಿಯುತ್ತದೆ. ಆದರೆ ಸಾಲದ ಬಡ್ಡಿಪಾವತಿಗೆ ಅನುಗುಣವಾಗಿ ನಾವು ಸರಕುಗಳನ್ನು ವಿದೇಶಗಳಿಗೆ ಕಳುಹಿಸಿಕೊಡಬೇಕಾಗುವುದರಿಂದ, ವಿದೇಶೀಯರಿಗೆ ಪಾವತಿಸಬೇಕಾಗಿರುವ ಯಾವುದೇ ಸಾಲವು ನಮಗೆ ಹೊರೆಯಾಗುತ್ತದೆ.

**ಕೊರತೆ ಮತ್ತು ಸಾಲದ ಮೇಲಿನ ಇತರೆ ನಿರೀಕ್ಷೆಗಳು:** ಕೊರತೆಗಳ ಮೇಲಿನ ಪ್ರಮುಖ ಟೀಕೆಗಳಲ್ಲಿ ಒಂದೆಂದರೆ ಅವು ಹಣದುಬ್ಬರಕ್ಕೆ ಕಾರಣವಾಗುತ್ತವೆ ಎಂಬುದು. ಏಕೆಂದರೆ ಸರ್ಕಾರವು ವೆಚ್ಚವನ್ನು ಹೆಚ್ಚಿಸಿದಾಗ ಅಥವಾ ತೆರಿಗೆಗಳಲ್ಲಿ ಕಡಿತ ಮಾಡಿದಾಗ, ಸಮಗ್ರ ಬೇಡಿಕೆಯು ಹೆಚ್ಚಾಗುತ್ತದೆ. ಪ್ರಸ್ತುತ ಬೆಲೆಯಲ್ಲಿ ಬೇಡಿಕೆ ಹೆಚ್ಚಾದಂತೆ ಅಧಿಕ ಪ್ರಮಾಣದ ಉತ್ಪಾದನೆಯನ್ನು ಮಾಡಲು ಉದ್ಯಮ ಘಟಕಗಳಿಗೆ ಸಾಧ್ಯವಾಗದೇ ಇರಬಹುದು. ಆದುದರಿಂದ ಬೆಲೆಗಳು ಹೆಚ್ಚಾಗಬೇಕಾಗುತ್ತದೆ. ಆದಾಗ್ಯೂ ಬಳಕೆಯಾಗದ ಸಂಪನ್ಮೂಲಗಳಿದ್ದಾಗ, ಬೇಡಿಕೆಯ ಕೊರತೆಯಿಂದ ಉತ್ಪನ್ನವು ಕಡಿಮೆ ಇರುತ್ತದೆ. ಅಧಿಕ ಕೋಶೀಯ ಕೊರತೆಯು ಅಧಿಕ ಬೇಡಿಕೆ ಮತ್ತು ದೊಡ್ಡಪ್ರಮಾಣದ ಉತ್ಪನ್ನದೊಂದಿಗೆ ಜೊತೆಯಾಗಿರುವುದರಿಂದ ಹಣದುಬ್ಬರವಾಗಬೇಕೆಂದೇನೂ ಇಲ್ಲ.

ಖಾಸಗಿವಲಯಕ್ಕೆ ಲಭ್ಯವಿರುವ ಉಳಿತಾಯಗಳ ಇಳಿಕೆಯ ಕಾರಣದಿಂದ ಹೂಡಿಕೆಯಲ್ಲೂ ಕಡಿತಉಂಟಾಗುತ್ತದೆ ಎಂದು ವಾದಿಸಲಾಗುತ್ತದೆ. ಏಕೆಂದರೆ ಸರ್ಕಾರವು ತನ್ನ ಕೊರತೆಗೆ ಹಣಕಾಸನ್ನು ಪೂರೈಸಲು ಖಾಸಗಿ ನಾಗರೀಕರಿಗೆ ಬಾಂಡ್‌ಗಳನ್ನು ನೀಡುವ ಮೂಲಕ ಸಾಲ ಪಡೆಯಲು ನಿರ್ಧರಿಸಿದರೆ, ಈ ಬಾಂಡುಗಳು ಕಾರ್ಪೋರೇಟ್ ಬಾಂಡುಗಳು ಮತ್ತು ನಿಧಿಗಳ ಪೂರೈಕೆಗೆ ಲಭ್ಯವಿರುವ ಇತರೆ ಹಣಕಾಸಿನ ಸಾಧನಗಳೊಂದಿಗೆ ಸ್ಪರ್ಧಿಸುತ್ತವೆ. ಕೆಲವು ಖಾಸಗಿ ಉಳಿತಾಯಗಾರರು ಬಾಂಡುಗಳನ್ನು (ಸರ್ಕಾರಿ) ಖರೀದಿಸಲು ನಿರ್ಧರಿಸಿದರೆ, ಖಾಸಗಿಯವರ ವಶದಲ್ಲಿ ಉಳಿದಿರುವ ಹೂಡಿಕೆ ಮಾಡಬೇಕಾದ ನಿಧಿಯ ಪ್ರಮಾಣ ಕಡಿಮೆಯಾಗುತ್ತದೆ. ಹೀಗಾಗಿ, ಸರ್ಕಾರ ಆರ್ಥಿಕತೆಯಲ್ಲಿನ ಒಟ್ಟು ಉಳಿತಾಯಗಳ ಅಧಿಕ ಪಾಲನ್ನು ಪಡೆದರೆ ಮಾರುಕಟ್ಟೆ ಕಿಕ್ಕಿರಿದು, ಕೆಲವು ಖಾಸಗಿ ಸಾಲಗಾರರು ಹಣಕಾಸಿನ ಮಾರುಕಟ್ಟೆಯಿಂದ ಹೊರ ನಡೆಯುತ್ತಾರೆ. ಆದಾಗ್ಯೂ, ನಾವು ಆದಾಯವನ್ನು ಹೆಚ್ಚಿಸುವುದು ಸಾಧ್ಯವಿಲ್ಲ ಎಂದು ಕಲ್ಪನೆ ಮಾಡಿಕೊಳ್ಳುವವರೆಗೂ ಆರ್ಥಿಕತೆಯ ಉಳಿತಾಯಗಳ ಹರಿವು ವಾಸ್ತವವಾಗಿ ಸ್ಥಿರೀಕರಣಗೊಳ್ಳುವುದಿಲ್ಲ ಎಂಬುದನ್ನು ಯಾರೊಬ್ಬರೂ ಗಮನಿಸಬೇಕಾಗಿದೆ. ಸರ್ಕಾರದ ಕೊರತೆಗಳು ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶಗಳಲ್ಲಿ ಯಶಸ್ವಿಯಾದರೆ, ಆಗ ಅಧಿಕ ಆದಾಯವಿರುತ್ತದೆ ಮತ್ತು ಅದರಿಂದಾಗಿ ಅಧಿಕ ಉಳಿತಾಯವಿರುತ್ತದೆ. ಇಂತಹ ಪ್ರಸಂಗದಲ್ಲಿ ಸರ್ಕಾರ ಮತ್ತು ಕೈಗಾರಿಕೆ ಅಧಿಕ ಸಾಲವನ್ನು ಪಡೆಯಬಹುದು.

ಜೊತೆಗೆ ಸರ್ಕಾರ ಮೂಲ ಸೌಕರ್ಯಗಳಲ್ಲಿ ಹೂಡಿಕೆ ಮಾಡಿದರೆ ಮತ್ತು ಇಂತಹ ಹೂಡಿಕೆಗಳ ಮೇಲಿನ ಪ್ರತಿಫಲವು ಬಡ್ಡಿದರಕ್ಕಿಂತ ಅಧಿಕವಾಗಿದ್ದರೆ ಭವಿಷ್ಯತ್ತಿನ ಪೀಳಿಗೆಯು ಸುಧಾರಿಸಬಹುದು. ಉತ್ಪನ್ನದಲ್ಲಿನ ಬೆಳವಣಿಗೆಯಿಂದ ವಾಸ್ತವಿಕ ಸಾಲವನ್ನು ಪಾವತಿಸಲಾಗುತ್ತದೆ. ಆಗ ಸಾಲವನ್ನು ಹೊರೆ ಎಂದು ಪರಿಗಣಿಸಬೇಕಾಗಿಲ್ಲ. ಸಾಲದಲ್ಲಿನ ಬೆಳವಣಿಗೆಯನ್ನು ಒಂದು ಇಡೀ ಆರ್ಥಿಕತೆಯ ಬೆಳವಣಿಗೆಯ ಮೂಲಕ ತೀರ್ಮಾನಿಸಬೇಕಾಗುತ್ತದೆ.

**ಕೊರತೆಯ ಕಡಿತ :** ತೆರಿಗೆಗಳ ಹೆಚ್ಚಳ ಅಥವಾ ವೆಚ್ಚದಲ್ಲಿನ ಕಡಿತದಿಂದ ಸರ್ಕಾರದ ಕೊರತೆಯನ್ನು ಕಡಿಮೆ ಮಾಡಬಹುದು. ಭಾರತದಲ್ಲಿ ಸರ್ಕಾರವು ನೇರ ತೆರಿಗೆಗಳನ್ನು (ಪರೋಕ್ಷ ತೆರಿಗೆಗಳು ಸ್ವಭಾವತಃ ತಿರೋಗಾಮಿ

ತೆರಿಗೆಗಳಾಗಿವೆ – ಇವು ಎಲ್ಲಾ ಆದಾಯದ ಗುಂಪಿನವರ ಮೇಲೆ ಸಮಾನ ಪ್ರಭಾವವನ್ನು ಬೀರುತ್ತವೆ) ಹೆಚ್ಚಾಗಿ ನಂಬಿಕೊಂಡು ತೆರಿಗೆ ಆದಾಯವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ. ಸಾರ್ವಜನಿಕ ವಲಯದ ಘಟಕಗಳ (PSUs) ಲ್ಲಿನ ಶೇರುಗಳನ್ನು ಮಾರಾಟ ಮಾಡುವ ಮೂಲಕ ಕೂಡ ಸ್ವೀಕೃತಿಗಳನ್ನು ಹೆಚ್ಚಿಸುವ ಪ್ರಯತ್ನ ನಡೆಯುತ್ತಿದೆ. ಆದಾಗ್ಯೂ, ಸರ್ಕಾರದ ವೆಚ್ಚವನ್ನು ಕಡಿಮೆ ಮಾಡುವಂತಹ ಒತ್ತಡ ಇದ್ದೇ ಇರುತ್ತದೆ. ಉತ್ತಮ ಯೋಜನಾಕ್ರಮಗಳು ಮತ್ತು ಉತ್ತಮ ಆಡಳಿತದಿಂದ ಸರ್ಕಾರದ ಚಟುವಟಿಕೆಗಳನ್ನು ಹೆಚ್ಚು ದಕ್ಷವಾಗಿಸುವ ಮೂಲಕ ಇದನ್ನು ಸಾಧಿಸಬೇಕಾಗಿದೆ. ಯೋಜನಾ ಆಯೋಗದ[7] ಇತ್ತೀಚಿನ ಒಂದು ಅಧ್ಯಯನವು ಬಡವರಿಗೆ ಒಂದು (ರೂ.1) ರೂಪಾಯಿಯನ್ನು ವರ್ಗಾಯಿಸಲು ಸರ್ಕಾರವು ಆಹಾರ ಸಹಾಯಧನದ ರೂಪದಲ್ಲಿ 3.65 ರೂಪಾಯಿಗಳನ್ನು ವೆಚ್ಚ ಮಾಡುತ್ತದೆ ಮತ್ತು ಈ ನಗದು ವರ್ಗಾವಣೆಗಳು ಕಲ್ಯಾಣದ ಹೆಚ್ಚಳಕ್ಕೆ ಕಾರಣವಾಗುವುದನ್ನು ತೋರಿಸುತ್ತವೆ ಎಂಬುದನ್ನು ಯೋಜನಾ ಆಯೋಗದ ಇತ್ತೀಚಿನ ಅಧ್ಯಯನವು ಅಂದಾಜಿಸುತ್ತದೆ. ಇನ್ನೊಂದು ಮಾರ್ಗವೆಂದರೆ, ಸರ್ಕಾರ ಈ ಹಿಂದೆ ಕಾರ್ಯಾಚರಣೆಯನ್ನು ಮಾಡಿದ ಕೆಲವು ಕ್ಷೇತ್ರಗಳಿಂದ ಹಿನ್ನಡೆಯುವುದರಿಂದ ಅದರ ವ್ಯಾಪ್ತಿಯನ್ನು ಬದಲಾಯಿಸುವುದು. ಕೃಷಿ, ಶಿಕ್ಷಣ, ಆರೋಗ್ಯ, ಬಡತನ ಉಪಶಮನ ಇತ್ಯಾದಿಗಳಂತಹ ಮಹತ್ತರ ಕ್ಷೇತ್ರಗಳಲ್ಲಿ ಸರ್ಕಾರದ ಕಾರ್ಯಕ್ರಮಗಳನ್ನು ಕಡಿತಗೊಳಿಸಿದಾಗ, ಇದು ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರಬಹುದು. ಅನೇಕ ದೇಶಗಳ ಸರ್ಕಾರಗಳು ದೊಡ್ಡ ಪ್ರಮಾಣದಲ್ಲಿ ಕೊರತೆಗಳನ್ನು ಎದುರಿಸುತ್ತಿದ್ದು, ಕೊನೆಗೆ ಅದು, ಅವರನ್ನು ಪೂರ್ವನಿರ್ಧಾರಿತ ಮಟ್ಟಗಳಿಗಿಂತ ಹೆಚ್ಚಿನ ವೆಚ್ಚವನ್ನು ಕೈಗೊಳ್ಳದಿರುವಂತೆ ಸ್ವಯಂ ನಿರ್ಬಂಧಕ್ಕೆ ಒಳಗಾಗುವಂತೆ ಮಾಡಬಹುದು (ಪೆಟ್ಟಿಗೆ 5.1 ಭಾರತದಲ್ಲಿನ FRBMA ದ ಪ್ರಮುಖ ಲಕ್ಷಣವನ್ನು ನೀಡುತ್ತದೆ). ಮೇಲಿನ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಇವುಗಳನ್ನು ಪರಿಶೀಲಿಸಬೇಕಾಗುತ್ತದೆ. ಈ ಬೃಹತ್ ಕೊರತೆಗಳು ಯಾವಾಗಲೂ ಕೋಶೀಯ ನೀತಿಯ ಅಧಿಕ ವಿಸ್ತರಣೆಯ ಸೂಚಕವಲ್ಲ ಎಂಬುದನ್ನು ನಾವು ಗಮನಿಸಬೇಕು. ಆರ್ಥಿಕತೆಯ ಸ್ಥಿತಿಯನ್ನು ಅವಲಂಬಿಸಿದಂತೆ, ಇದೇ ಕೋಶೀಯ ಕ್ರಮಗಳು ಒಂದು ಬೃಹತ್ ಅಥವಾ ಸಣ್ಣಕೊರತೆಗೆ ಕಾರಣವಾಗಬಹುದು. ಉದಾಹರಣೆಗೆ, ಒಂದು ಆರ್ಥಿಕತೆ, ಹಿಂಜರಿತವನ್ನು ಅನುಭವಿಸುತ್ತಿದ್ದು GDP ಇಳಿಕೆಯಾದರೆ, ತೆರಿಗೆ ಆದಾಯ ಇಳಿಯುತ್ತದೆ, ಏಕೆಂದರೆ ಉದ್ಯಮ ಘಟಕಗಳು ಮತ್ತು ಕುಟುಂಬಗಳು ಕಡಿಮೆ ಆದಾಯವನ್ನು ಗಳಿಸುತ್ತಿರುವಾಗ ಕಡಿಮೆ ತೆರಿಗೆಗಳನ್ನು ನೀಡುತ್ತಾರೆ. ಕೋಶೀಯ ಕೊರತೆಯಲ್ಲಿ ಯಾವ ಬದಲಾವಣೆಗಳು ಇಲ್ಲದಿದ್ದರೂ ಕೂಡ ಕೊರತೆಯು ಹಿಂಜರಿತ ಸಮಯದಲ್ಲಿ ಏರಿಕೆಯಾಗುತ್ತದೆ ಮತ್ತು ಸಮೃದ್ಧಿ ಸಮಯದಲ್ಲಿ ಇಳಿಕೆಯಾಗುತ್ತದೆ, ಎಂಬುದು ಇದರ ಅರ್ಥವಾಗಿದೆ.


**ಸಾರಾಂಶ *Summary***

1. ಸಾರ್ವಜನಿಕ ಸರಕುಗಳು, ಖಾಸಗಿ ಸರಕುಗಳಿಗಿಂತ ಭಿನ್ನವಾಗಿವೆ ಮತ್ತು ಅವು ಸಾಮೂಹಿಕವಾಗಿ ಬಳಕೆಯಾಗುತ್ತವೆ. ಸಾರ್ವಜನಿಕ ಸರಕುಗಳ ಎರಡು ಮುಖ್ಯ ಲಕ್ಷಣಗಳು– ಈ ಸರಕುಗಳು ಇತರರಿಗೆ ಲಭ್ಯವಾಗುವುದನ್ನು ಕಡಿಮೆ ಮಾಡದೇ, ಒಬ್ಬ ವ್ಯಕ್ತಿಯು ತನ್ನ ತೃಪ್ತಿಯನ್ನು ಗರಿಷ್ಠಗೊಳಿಸಿಕೊಳ್ಳಬಹುದಾದ ಪೈಪೋಟಿ ರಹಿತ ಸರಕುಗಳಾಗಿವೆ, ಮತ್ತು ಅವು ಹೊರತಾದವುಗಳಲ್ಲ, ಮತ್ತು ಈ ಸರಕುಗಳ ಲಾಭವನ್ನು ಅನುಭವಿಸುವುದರಿಂದ ಯಾರೊಬ್ಬರನ್ನು ಹೊರಗಿಡುವ ಸಂಭವನೀಯ ಮಾರ್ಗವಿಲ್ಲ. ಇವುಗಳನ್ನು ಬಳಸಿಕೊಂಡವರಿಂದ ಶುಲ್ಕವನ್ನು ಸಂಗ್ರಹಿಸುವುದು ಕಷ್ಟ ಸಾಧ್ಯ ಮತ್ತು ಈ ಸರಕುಗಳನ್ನು ಸಾಮಾನ್ಯವಾಗಿ ಖಾಸಗಿ ಉದ್ಯಮ ಸಂಸ್ಥೆಗಳು ಪೂರೈಸುವುದಿಲ್ಲ. ಹೀಗಾಗಿ, ಇವುಗಳನ್ನು ಸರಕಾರವೇ ಒದಗಿಸಬೇಕಾಗುತ್ತದೆ.
2. ಹಂಚಿಕೆ, ಮರುಹಂಚಿಕೆ ಮತ್ತು ಸ್ಥಿರೀಕರಣ– ಈ ಮೂರು ಕಾರ್ಯಗಳು ಸರ್ಕಾರದ ವೆಚ್ಚ ಮತ್ತು ಸರ್ಕಾರದ ಸ್ವೀಕೃತಿಗಳಿಂದ ಕಾರ್ಯನಿರ್ವಹಿಸುತ್ತವೆ.
3. ಮುಂಗಡಪತ್ರ, ಇದು ಸರ್ಕಾರದ ಸ್ವೀಕೃತಿಗಳು ಮತ್ತು ವೆಚ್ಚಗಳ ಒಂದು ಪತ್ರವಾಗಿದೆ. ಚಾಲ್ತಿ ಹಣಕಾಸಿನ ಅಗತ್ಯಗಳು ಮತ್ತು ದೇಶದ ಬಂಡವಾಳ ದಾಸ್ತಾನಿನಲ್ಲಿ ಹೂಡಿಕೆಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಲು ಇದನ್ನು ಕಂದಾಯ ಮುಂಗಡಪತ್ರ ಮತ್ತು ಬಂಡವಾಳ ಮುಂಗಡಪತ್ರವೆಂದು ವಿಂಗಡಿಸಲಾಗಿರುತ್ತದೆ.


[7] "ಉದ್ದೇಶಿತ ಸಾರ್ವಜನಿಕ ವಿತರಣಾ ಪದ್ಧತಿಯ ಗುಣಮಟ್ಟದ ಮೌಲ್ಯ ಮಾಪನ" ಕಾರ್ಯಕ್ರಮ ಮೌಲ್ಯಮಾಪನ ಸಂಘಟನೆಯಿಂದ, ಯೋಜನಾ ಆಯೋಗ

4. ಕೋಶೀಯ ಕೊರತೆಯ ಪ್ರತಿಶತ ಭಾಗವಾಗಿ ಕಂದಾಯ ಕೊರತೆಯ ಬೆಳವಣಿಗೆಯು ಕಡಿಮೆ ಬಂಡವಾಳ ಸಂಗ್ರಹಣೆಯನ್ನು ಒಳಗೊಂಡು ಸರ್ಕಾರದ ವೆಚ್ಚದ ಕಡಿಮೆ ಗುಣಮಟ್ಟವನ್ನು ತೋರಿಸುತ್ತದೆ.
5. ಪ್ರಮಾಣಾನುಗುಣ ತೆರಿಗೆಗಳು ಸ್ವಾಯತ್ತ ವೆಚ್ಚದ ಗುಣಕವನ್ನು ಕಡಿಮೆ ಮಾಡುತ್ತವೆ, ಏಕೆಂದರೆ, ತೆರಿಗೆಗಳು ಆದಾಯದಲ್ಲಿನ ಸೀಮಾಂತ ಅನುಭೋಗ ಪ್ರವೃತ್ತಿಯನ್ನು ಕಡಿಮೆ ಮಾಡುತ್ತವೆ.
6. ಉತ್ಪನ್ನದಲ್ಲಿನ ಭವಿಷ್ಯದ ಬೆಳವಣಿಗೆಯನ್ನು ಕಡಿಮೆ ಮಾಡಿದರೆ, ಸಾರ್ವಜನಿಕ ಸಾಲವು ಹೊರೆಯಾಗುತ್ತದೆ.

**ಪ್ರಮುಖ ಪರಿಭಾಷೆಗಳು**
***Key Concepts***

ಸಾರ್ವಜನಿಕ ಸರಕುಗಳು

ಸ್ವಯಂಚಾಲಿತ ಸ್ಥಿರೀಕರಣ

ವಿವೇಚನಾಯುಕ್ತ ಕೋಶೀಯ ನೀತಿ

ರಿಕಾರ್ಡೋನ ಸಮಾನತೆ

**ಪೆಟ್ಟಿಗೆ 5.1 :** ಕೋಶೀಯ ಹೊಣೆಗಾರಿಕೆ ಮತ್ತು ಮುಂಗಡಪತ್ರ ನಿರ್ವಹಣೆಯ ಕಾಯಿದೆ ; 2003.

***Fiscal Responsibility and Budget Management Act, 2003 (FRBMA).***

ಒಂದು ಬಹು ಪಕ್ಷೀಯ ಸಂಸದೀಯ ಪದ್ಧತಿಯಲ್ಲಿ, ಚುನಾವಣಾ ಸಂಬಂಧಿತಗಳು ವೆಚ್ಚದ ನೀತಿಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈಗಿನ ಮತ್ತು ಭವಿಷ್ಯದ ಎಲ್ಲಾ ಸರ್ಕಾರಗಳಿಗೂ ಅನ್ವಯಿಸುವ ಒಂದು ಶಾಸನೀಯ ಅವಕಾಶವು ಕೊರತೆಗಳನ್ನು ನಿಯಂತ್ರಣದಲ್ಲಿಡಲು ಪರಿಣಾಮಕಾರಿಯಾಗಿರುತ್ತದೆಂದು ವಾದಿಸಲಾಗಿದೆ. ಆಗಸ್ಟ್ 2003ರಲ್ಲಿ ಜಾರಿಗೆ ಬಂದ FRBMA ಕಾಯಿದೆಯು, ಕೋಶೀಯ ಸುಧಾರಣೆಯಲ್ಲಿ ಒಂದು ಮಹತ್ತರ ತಿರುವೆಂದು ಗುರುತಿಸಲಾಗಿದ್ದು, ದೂರದೃಷ್ಟಿಯ ಕೋಶೀಯ ನೀತಿಯನ್ನು ಮುಂದುವರೆಸಲು ಸಾಂಸ್ಥಿಕ ಚೌಕಟ್ಟಿನ ಮೂಲಕ ಸರ್ಕಾರವನ್ನು ನಿರ್ಬಂಧಿಸುತ್ತದೆ. ಸಾಕಷ್ಟು ಕಂದಾಯ ಮಿಗುತೆಯನ್ನು ಸಾಧಿಸುವುದರ ಮೂಲಕ, ಹಣಕಾಸಿನ ನೀತಿಗಿರುವ ಕೋಶೀಯ ಅಂತಕಗಳನ್ನು ನಿವಾರಿಸುವುದು ಮತ್ತು ಕೊರತೆಗಳನ್ನು ಹಾಗೂ ಸಾಲಗಳನ್ನು ಮಿತಿಗೊಳಿಸುವುದರಿಂದ ಪರಿಣಾಮಕಾರಿ ಸಾಲ ನಿರ್ವಹಣೆಗಳ ಮೂಲಕ ಅಂತರ ಪೀಳಿಗೆಯ ಸಮಾನತೆ ಹಾಗೂ ದೀರ್ಘಾವಧಿ ಸಮಗ್ರ ಆರ್ಥಿಕ ಸ್ಥಿರತೆಯನ್ನು ಕೇಂದ್ರ ಸರ್ಕಾರವು ಖಚಿತಪಡಿಸಬೇಕಾಗಿದೆ.

ಈ ಕಾಯಿದೆಯಡಿಯಲ್ಲಿರುವ ನಿಯಮಗಳು ಜುಲೈ 2004 ರಿಂದ ಜಾರಿಗೆ ಬಂದಿದ್ದು, ಗಮನಾರ್ಹ ಅಂಶಗಳನ್ನು ಹೊಂದಿವೆ.

**ಮುಖ್ಯ ಲಕ್ಷಣಗಳು**

1. ಈ ಕಾಯಿದೆಯು, ಕೋಶೀಯ ಕೊರತೆಯನ್ನು GDP ಯಲ್ಲಿನ ಶೇಕಡ 3ಕ್ಕಿಂತ ಅಧಿಕವಾಗದಂತೆ, ಕಡಿಮೆ ಮಾಡುವುದು ಮತ್ತು ಮಾರ್ಚ್ 31, 2009 ರಿಂದ ಕಂದಾಯ ಕೊರತೆ[8]ಯನ್ನು ನಿರ್ಮೂಲನೆ ಮಾಡುವಂತೆ ಮತ್ತು ತದನಂತರ ಸಾಕಷ್ಟು ಕಂದಾಯ ಮಿಗುತೆಯನ್ನು ನಿರ್ಮಿಸುವಂತೆ ಕೇಂದ್ರ ಸರ್ಕಾರವನ್ನು ಆಜ್ಞಾಪಿಸುತ್ತದೆ.
2. ಪ್ರತಿ ವರ್ಷ GDP ಯಲ್ಲಿನ ಕೋಶೀಯ ಕೊರತೆಯನ್ನು ಶೇಕಡ 0.3 ರಷ್ಟು ಕಡಿಮೆ ಮಾಡುವುದು ಮತ್ತು ಕಂದಾಯ ಕೊರತೆಯನ್ನು ಶೇಕಡ 0.5 ರಷ್ಟು ಕಡಿಮೆ ಮಾಡುವ ಅಗತ್ಯತೆಯನ್ನು ಇದು ತಿಳಿಸುತ್ತದೆ. ಇದನ್ನು ತೆರಿಗೆ ಆದಾಯಗಳ ಮೂಲಕ ಸಾಧಿಸಲು ಸಾಧ್ಯವಾಗದಿದ್ದರೆ, ವೆಚ್ಚದಲ್ಲಿನ ಕಡಿತದಿಂದ ಅಗತ್ಯ ಹೊಂದಾಣಿಕೆಯನ್ನು ಮಾಡಬೇಕಾಗುತ್ತದೆ.

[8] ಇದು 2009–10ರ ಒಂದು ವರ್ಷದಿಂದ ಪುನರ್ ಸ್ಥಾಪಿತವಾಗಿದೆ, ಪ್ರಾಥಮಿಕವಾಗಿ ಕಂದಾಯ ವೆಚ್ಚದ ಪರವಾದ ಯೋಜನಾ ಆದ್ಯತೆಗಳ ಒಂದು ಪಲ್ಲಟದ ಕಾರಣದಿಂದಾಗಿ – ತೀವ್ರ ಕಾರ್ಯಕ್ರಮಗಳು ಮತ್ತು ಯೋಜನೆಗಳು.

3. ಕೇಂದ್ರ ಸರ್ಕಾರ ಸೂಚಿಸಬಹುದಾದ ರಾಷ್ಟ್ರೀಯ ಭದ್ರತೆ ಅಥವಾ ಪ್ರಕೃತಿ ವಿಕೋಪ ಅಥವಾ ಇತರೆ ವಿಶೇಷ ನೆಲೆಗಳ ಆಧಾರದ ಮೇಲೆ ಮಾತ್ರ ನಿಜವಾದ ಕೊರತೆಯು ನಿಗದಿತ ಗುರಿಗಿಂತ ಅಧಿಕವಾಗಬಹುದು.

4. ಮುಂಗಡ ಮಾರ್ಗದ ಮೂಲಕ ನಗದು ಸ್ವೀಕೃತಿಗಳಿಗಿಂತ ಅಧಿಕವಾದ ನಗದು ವಿತರಣೆಯನ್ನು ತಲುಪುವುದನ್ನು ಹೊರತುಪಡಿಸಿ, ಕೇಂದ್ರ ಸರ್ಕಾರವು ಭಾರತೀಯ ರಿಜರ್ವ್ ಬ್ಯಾಂಕಿನಿಂದ ಸಾಲವನ್ನು ಪಡೆಯಬಾರದು.

5. 2006–07 ರಿಂದ ಕೇಂದ್ರ ಸರ್ಕಾರ ಹೊರಡಿಸುವ ಪ್ರಾಥಮಿಕ ಭದ್ರತೆಗಳನ್ನು ಭಾರತೀಯ ರಿಜರ್ವ್ ಬ್ಯಾಂಕು ಒಪ್ಪಿಕೊಳ್ಳಬಾರದು.

6. ಕೋಶೀಯ ಕಾರ್ಯಾಚರಣೆಯಲ್ಲಿ ಮಹತ್ತರ ಪಾರದರ್ಶಕತೆಯ ಭರವಸೆ ನೀಡುವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

7. ಕೇಂದ್ರ ಸರ್ಕಾರವು ಸಂಸತ್ತಿನ ಎರಡು ಸದನಗಳ ಮುಂದೆ ಮೂರು ಹೇಳಿಕೆಗಳಾದ ಮಧ್ಯಮಾವಧಿ ಕೋಶೀಯ ನೀತಿ ಹೇಳಿಕೆ, ಕೋಶೀಯ ನೀತಿಯ ತಂತ್ರದ ಹೇಳಿಕೆ, ವಾರ್ಷಿಕ ಹಣಕಾಸಿನ ಹೇಳಿಕೆಯೊಂದಿಗೆ ಸಮಗ್ರ ಆರ್ಥಿಕ ಚೌಕಟ್ಟಿನ ಹೇಳಿಕೆಗಳನ್ನು ಮಂಡಿಸಬೇಕಾಗುತ್ತದೆ.

8. ಸ್ವೀಕೃತಿಯಲ್ಲಿನ ತ್ರೈಮಾಸಿಕ ಪರಿಶೀಲನಾ ಪ್ರವೃತ್ತಿ ಮತ್ತು ಮುಂಗಡ ಪತ್ರಕ್ಕೆ ಸಂಬಂಧಿಸಿದ ವೆಚ್ಚವನ್ನು ಸಂಸತ್ತಿನ ಎರಡೂ ಮನೆಗಳಲ್ಲಿ ಮಂಡಿಸಬೇಕಾಗುತ್ತದೆ.

ಈ ಕಾಯಿದೆಯು ಕೇಂದ್ರ ಸರ್ಕಾರಕ್ಕೆ ಅನ್ವಯಿಸುತ್ತದೆ. ಆದಾಗ್ಯೂ 26 ರಾಜ್ಯಗಳು ಹೆಚ್ಚು ವ್ಯಾಪಕತೆಯ ಆಧಾರದ ಮೇಲೆ ಸರ್ಕಾರದ ಹೊಣೆಗಾರಿಕೆಯ ಕಾನುನಾಧಾರಿತ ಕೋಶೀಯ ಸುಧಾರಣಾ ಕಾರ್ಯಕ್ರಮವನ್ನು ತರುವಂತಹ ಕೋಶೀಯ (ಜವಾಬ್ದಾರಿಯ) ಶಾಸನಗಳನ್ನು ಈಗಾಗಲೇ ಜಾರಿಗೆ ತಂದಿವೆ. ಸರ್ಕಾರ ದೂರದೃಷ್ಟಿಯ ಕೋಶೀಯ ನೀತಿಯ ಭರವಸೆಯನ್ನು ತರುವ ಮತ್ತು ಸಮಗ್ರ ಆರ್ಥಿಕ ಸಮತೋಲನವನ್ನು ಪ್ರೋತ್ಸಾಹಿಸುವಂತಹ ಒಂದು ಪ್ರಮುಖ ಸಾಂಸ್ಥಿಕ ಯಾಂತ್ರಿಕತೆಯಾದ FRBMA ಯನ್ನು ಪ್ರಧಾನವಾಗಿ ಜಾರಿಗೆ ತಂದಿದ್ದರೂ ಕೂಡ, ಈ ಕಾಯಿದೆಯಿಂದ ಆದೇಶಿಸಲಾದ ಗುರಿಗಳನ್ನು ತಲುಪಲು ಕಲ್ಯಾಣ ವೆಚ್ಚವು ಕಡಿಮೆಯಾಗಬಹುದೆಂಬ ಭಯವು ಇದ್ದೇ ಇದೆ.



## ಅಭ್ಯಾಸಗಳು *Exercises*

1. ಸಾರ್ವಜನಿಕ ಸರಕುಗಳನ್ನು ಸರ್ಕಾರವೇ ಏಕೆ ಪೂರೈಸಬೇಕೆಂಬುದನ್ನು ವಿವರಿಸಿ.
2. ಕಂದಾಯ ವೆಚ್ಚ ಮತ್ತು ಬಂಡವಾಳ ವೆಚ್ಚದ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.
3. 'ಕೋಶೀಯ ಕೊರತೆಯು ಸರ್ಕಾರದ ಸಾಲದ ಅಗತ್ಯತೆಯನ್ನು ತೋರಿಸುತ್ತದೆ ಇದನ್ನು ಸ್ಪಷ್ಟಪಡಿಸಿ.
4. ಕಂದಾಯ ಕೊರತೆ ಮತ್ತು ಕೋಶೀಯ ಕೊರತೆಯ ನಡುವಿನ ಸಂಬಂಧವನ್ನು ತಿಳಿಸಿ.
5. ಒಂದು ನಿರ್ದಿಷ್ಟ ಆರ್ಥಿಕತೆಯಲ್ಲಿ, ಹೂಡಿಕೆಯು 200ಕ್ಕೆ ಸಮವಾಗಿರುತ್ತದೆ, ಸರ್ಕಾರದ ಖರೀದಿಗಳು 150 ಆಗಿವೆ, ನಿವ್ವಳ ತೆರಿಗೆಗಳು 100 (ಅಂದರೆ ಒಟ್ಟು ತೆರಿಗೆಗಳು – ವರ್ಗಾವಣೆಗಳು) ಮತ್ತು ಅನುಭೋಗವು $c = 100+0.75\ Y$ ಎಂದು ನೀಡಲಾಗಿದೆ ಎಂದು ಕೊಳ್ಳೋಣ, (a) ಸಮತೋಲನ ಆದಾಯದ ಮಟ್ಟ ಯಾವುದು? (b) ಸರ್ಕಾರದ ವೆಚ್ಚ ಗುಣಕ ಮತ್ತು ತೆರಿಗೆ ಗುಣಕದ ಮೌಲ್ಯವನ್ನು ಲೆಕ್ಕ ಹಾಕಿ (c) ಸರ್ಕಾರದ ವೆಚ್ಚವು 200ಕ್ಕೆ ಹೆಚ್ಚಳವಾದರೆ ಆದಾಯ ಸಮತೋಲನದಲ್ಲಿನ ಬದಲಾವಣೆಯನ್ನು ಗುರುತಿಸಿ.

6. ಒಂದು ಆರ್ಥಿಕತೆಯು ಈ ಕೆಳಗಿನ ಬಿಂಬಕದಿಂದ ವರ್ಣಿಸಲ್ಪಟ್ಟಿದೆ ಎಂಬುದನ್ನು ಪರಿಗಣಿಸಿ : $c = 20+0.80\ y$, $I = 30$, $G = 50$, $TR = 100$.

   a. ಈ ಮಾದರಿಯಲ್ಲಿನ ಆದಾಯ ಸಮತೋಲನ ಮಟ್ಟ ಮತ್ತು ಸ್ವಾಯತ್ತ ವೆಚ್ಚ ಗುಣಕವನ್ನು ಕಂಡುಹಿಡಿಯಿರಿ.

   b. ಒಂದು ವೇಳೆ, ಸರ್ಕಾರದ ವೆಚ್ಚವು 30ಕ್ಕೆ ಹೆಚ್ಚಾದರೆ, ಆದಾಯ ಸಮತೋಲನದ ಮೇಲಾಗುವ ಪರಿಣಾಮವೇನು?

   c. ಸರ್ಕಾರದ ಖರೀದಿಗಳಲ್ಲಿನ ಹೆಚ್ಚಳಕ್ಕೆ ನೀಡಲು 30ರಷ್ಟು ಒಟ್ಟು ತೆರಿಗೆಯನ್ನು ಸೇರಿಸಿದರೆ, ಆದಾಯ ಸಮತೋಲನವು ಹೇಗೆ ಬದಲಾಗುತ್ತದೆ?

7. ಈ ಮೇಲಿನ ಪ್ರಶ್ನೆಯಲ್ಲಿ, ವರ್ಗಾವಣೆಗಳಲ್ಲಿನ ಶೇಕಡ 10 ರಷ್ಟು ಹೆಚ್ಚಳವು ಮತ್ತು ಒಟ್ಟು ತೆರಿಗೆಗಳ ಮೇಲಿನ ಶೇಕಡ 10 ರಷ್ಟು ಹೆಚ್ಚಳವು ಉತ್ಪನ್ನದ ಮೇಲೆ ಬೀರುವ ಪರಿಣಾಮವನ್ನು ಲೆಕ್ಕ ಹಾಕಿ. ಈ ಎರಡೂ ಪರಿಣಾಮಗಳನ್ನು ಹೋಲಿಸಿ.

8. $c = 70+0.70\ YD$, $I = 90$, $G = 100$, $T = 0.10\ Y$ ಆದರೆ

   a. ಸಮತೋಲನ ಆದಾಯವನ್ನು ಕಂಡು ಹಿಡಿಯಿರಿ?

   b. ಸಮತೋಲನ ಆದಾಯದಲ್ಲಿ ತೆರಿಗೆ ಆದಾಯಗಳಾವುವು?

   ಸರ್ಕಾರವು ಸಮತೋಲನ ಮುಂಗಡಪತ್ರವನ್ನು ಹೊಂದುವುದೇ?

9. ಸೀಮಾಂತ ಅನುಭೋಗ ಪ್ರವೃತ್ತಿಯು 0.75 ಮತ್ತು ಶೇಕಡ 20 ರಷ್ಟು ಪರಿಮಾಣಾತ್ಮಕ ಆದಾಯ ತೆರಿಗೆಯಾದರೆ, ಈ ಕೆಳಗಿನವುಗಳಿಗೆ ಆದಾಯ ಸಮತೋಲನದಲ್ಲಿನ ಬದಲಾವಣೆಯನ್ನು ಕಂಡುಹಿಡಿಯಿರಿ.

   a. ಸರ್ಕಾರದ ಖರೀದಿಗಳು 20ಕ್ಕೆ ಹೆಚ್ಚಾಗುತ್ತವೆ.

   b. ವರ್ಗಾವಣೆಗಳು 20 ರಷ್ಟು ಕಡಿಮೆಯಾಗುತ್ತವೆ.

10. ಸರ್ಕಾರದ ವೆಚ್ಚ ಗುಣಕಕ್ಕಿಂತ ಪರಿಪೂರ್ಣಮೌಲ್ಯದಲ್ಲಿ ತೆರಿಗೆ ಗುಣಕವು ಸಣ್ಣಪ್ರಮಾಣದಲ್ಲಿರುತ್ತದೆ ಏಕೆ? ವಿವರಿಸಿ.

11. ಸರ್ಕಾರದ ಕೊರತೆ ಮತ್ತು ಸರ್ಕಾರದ ಸಾಲದ ನಡುವಿನ ಸಂಬಂಧವನ್ನು ವಿವರಿಸಿ.

12. ಸಾರ್ವಜನಿಕ ಸಾಲವು ಹೊರೆಯಾಗುವುದೇ? ವಿವರಿಸಿ.

13. ಕೋಶೀಯ ಕೊರತೆಗಳು ಹಣದುಬ್ಬರಕ್ಕೆ ಕಾರಣವಾಗುತ್ತವೆಯೇ?

14. ಕೊರತೆ ಕಡಿತದ ಸಮಸ್ಯೆಯನ್ನು ಚರ್ಚಿಸಿ.

## ಸೂಚಿತ ಅಧ್ಯಯನಗಳು *Suggested Readings*


1. Dornbusch,R. and S.Fircher, 1994. Macroeconomics, Sixth edition, McGraw - Hill, Paris.

2. Mankiw,N.G., 2000 Macro economics, fourth edition. MacMillan worth publishers, Newyark.

3. Economic Survey, Government of India, Various issues.


❖ ❖ ❖ ❖

# ಅಧ್ಯಾಯ 6



# ಮುಕ್ತ ಆರ್ಥಿಕತೆ ಸಮಗ್ರ ಅರ್ಥಶಾಸ್ತ್ರ
## *Open Economy Macroeconomics*

ಇಲ್ಲಿಯವರೆಗೆ ನಾವು ಒಂದು ಆರ್ಥಿಕತೆಯು ಮುಚ್ಚಿದ ಆರ್ಥಿಕತೆಯಾಗಿದ್ದು, ಅದು ಜಗತ್ತಿನ ಇತರೆ ದೇಶಗಳೊಂದಿಗೆ ಯಾವುದೇ ಸಂಪರ್ಕವನ್ನು ಹೊಂದಿರವುದಿಲ್ಲ ಎಂದು ಕಲ್ಪಸಿಕೊಂಡಿದ್ದೆವು. ಸಮಗ್ರ ಅರ್ಥಶಾಸ್ತ್ರದ ಮಾದರಿಗಳನ್ನು ಸರಳಗೊಳಿಸಿ, ಅವುಗಳ ಕಾರ್ಯತಂತ್ರವನ್ನು ವಿವರಿಸಲು ಈ ಕಲ್ಪನೆಯನ್ನು ಮಾಡಿಕೊಳ್ಳಲಾಗಿತ್ತು. ವಾಸ್ತವದಲ್ಲಿ ಬಹಳಷ್ಟು ಆಧುನಿಕ ಆರ್ಥಿಕತೆಗಳು ಮುಕ್ತ ಆರ್ಥಿಕತೆಗಳಾಗಿವೆ. ಜಗತ್ತಿನ ಇತರೆ ಆರ್ಥಿಕತೆಗಳೊಂದಿಗಿನ ಸಂವಹನವು, ಆಯ್ಕೆಗಳನ್ನು ವಿಶಾಲವಾದ ಮೂರು ಮಾರ್ಗಗಳಲ್ಲಿ ವಿಸ್ತರಿಸಿದೆ.

1. ಅನುಭೋಗಿಗಳು ಮತ್ತು ಉದ್ಯಮ ಘಟಕಗಳು ದೇಶೀಯ ಮತ್ತು ವಿದೇಶಿ ಸರಕುಗಳ ನಡುವಿನ ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಹೊಂದಿರುತ್ತಾರೆ, ಇದು ಸರಕು ಮಾರುಕಟ್ಟೆ ಕೊಂಡಿಯಾಗಿದ್ದು, ಅಂತರರಾಷ್ಟ್ರೀಯ ವ್ಯಾಪಾರದ ಮೂಲಕ ಸಂಭವಿಸುತ್ತದೆ.
2. ಹೂಡಿಕೆದಾರರು, ದೇಶೀಯ ಮತ್ತು ವಿದೇಶಿ ಆಸ್ತಿಗಳ ನಡುವೆ ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಹೊಂದಿರುತ್ತಾರೆ. ಇದು ಹಣಕಾಸು ಮಾರುಕಟ್ಟೆ ಕೊಂಡಿಯನ್ನು ಒಳಗೊಂಡಿದೆ.
3. ಉದ್ಯಮ ಘಟಕಗಳು, ಉತ್ಪಾದನೆಯನ್ನು ಎಲ್ಲಿ ಕೈಗೊಳ್ಳಬೇಕು ಮತ್ತು ಕೆಲಸಗಾರರು ಎಲ್ಲಿ ಕೆಲಸ ಮಾಡಬೇಕೆಂಬುದನ್ನು ಆಯ್ಕೆ ಮಾಡಿಕೊಳ್ಳಬಹುದು. ಇದು ಉತ್ಪಾದನಾಂಗ ಮಾರುಕಟ್ಟೆ ಕೊಂಡಿಯಾಗಿದೆ. ಶ್ರಮದ ಮಾರುಕಟ್ಟೆ ಕೊಂಡಿಗಳು ಸಾಪೇಕ್ಷವಾಗಿ ಕಡಿಮೆ ಇವೆ. ಏಕೆಂದರೆ, ವಲಸೆ ಕಾನೂನುಗಳ ಮೂಲಕ ಜನರ ಚಲನೆಯ ಮೇಲಿನ ಅನೇಕ ನಿರ್ಬಂಧಗಳನ್ನು ಹೇರುತ್ತವೆ. ಸರಕುಗಳ ಚಲನೆಯನ್ನು ಶ್ರಮದ ಚಲನೆಗೆ ಬದಲಿಯಾಗಿ ಸಾಂಪ್ರದಾಯಿಕ ರೀತಿಯಲ್ಲಿ ನೋಡಲಾಗಿದೆ. ಇಲ್ಲಿ ನಾವು ಮೊದಲ ಎರಡು ಕೊಂಡಿಗಳ ಬಗ್ಗೆ ನಮ್ಮ ಅಧ್ಯಯನವನ್ನು ಕೇಂದ್ರೀಕರಿಸೋಣ.

ಇತರ ರಾಷ್ಟ್ರಗಳೊಂದಿಗೆ ಸರಕು ಮತ್ತು ಸೇವೆಗಳ ವ್ಯಾಪಾರವನ್ನು, ಹಾಗೂ ಅನೇಕ ವೇಳೆ, ಆರ್ಥಿಕ ಸ್ವತ್ತುಗಳ ವ್ಯವಹಾರವನ್ನು ಕೈಗೊಳ್ಳುವ ಅರ್ಥವ್ಯವಸ್ಥೆಯೇ ಮುಕ್ತ ಆರ್ಥಿಕತೆಯಾಗಿದೆ. ಉದಾಹರಣೆಗೆ, ಭಾರತೀಯರು ಪ್ರಪಂಚದಾದ್ಯಂತ ಉತ್ಪಾದಿಸಲಾಗುವ ಉತ್ಪನ್ನಗಳನ್ನು ಅನುಭೋಗಿಸುತ್ತಾರೆ ಮತ್ತು ನಮ್ಮ ಕೆಲವು ಉತ್ಪನ್ನಗಳು ವಿದೇಶಗಳಿಗೆ ರಫ್ತಾಗುತ್ತವೆ. ಆದ್ದರಿಂದ ವಿದೇಶಿ ವ್ಯಾಪಾರವು ಭಾರತೀಯ ಸಮಗ್ರ ಬೇಡಿಕೆಯನ್ನು ಎರಡು ವಿಧದಲ್ಲಿ ಪ್ರಭಾವಿಸುತ್ತದೆ. ಮೊದಲನೆಯದಾಗಿ, ಭಾರತೀಯರು ವಿದೇಶಿ ಖರೀದಿಗಾಗಿ ಮಾಡಿದ ವೆಚ್ಚವು 'ಸೋರಿಕೆ' ರೂಪದಲ್ಲಿ ಸಮಗ್ರ ಬೇಡಿಕೆಯನ್ನು ಕಡಿಮೆ ಮಾಡುತ್ತಾ, ಆದಾಯದ ವೃತ್ತಾಕಾರದ ಹರಿವಿನಿಂದ ತಪ್ಪಿಸಿಕೊಳ್ಳುತ್ತದೆ. ಎರಡನೆಯದಾಗಿ, ವಿದೇಶಿಯರಿಗೆ ಮಾಡಿದ ನಮ್ಮ ರಫ್ತು, ದೇಶೀಯವಾಗಿ ಉತ್ಪಾದಿಸಿದ ಸರಕುಗಳ ಸಮಗ್ರ ಬೇಡಿಕೆಯನ್ನು ಹೆಚ್ಚಿಸುತ್ತಾ, ಆದಾಯದ ಹರಿನಿನೊಳಗೆ 'ಒಳಸೇರಿಕೆ' ಯಾಗಿ ಸೇರಿಹೋಗುತ್ತದೆ. ಒಟ್ಟು ದೇಶೀಯ ಉತ್ಪನ್ನದ *(GDP* ಯ) ಅನುಪಾತವಾಗಿ ಒಟ್ಟು ವಿದೇಶಿ ವ್ಯಾಪಾರವು (ರಫ್ತು+ಆಮದು) ಒಂದು ಆರ್ಥಿಕತೆಯ ಮುಕ್ತತೆಯ ಮಟ್ಟದ ಮಾಪನವಾಗಿದೆ. ಭಾರತದ ಆರ್ಥಿಕತೆಯಲ್ಲಿ ವಿದೇಶಿ ವ್ಯಾಪಾರವು 2014–15 ರಲ್ಲಿ ಶೇಕಡ 48.8 ರಷ್ಟಿತ್ತು. ವಿದೇಶೀ ವ್ಯಾಪಾರದ ಪ್ರಮಾಣವು *GDP* ಯ ಶೇಕಡ 50ಕ್ಕಿಂತಲೂ ಅಧಿಕವಾಗಿರುವ ಅನೇಕ ರಾಷ್ಟ್ರಗಳೂ ಇವೆ.

ಸರಕುಗಳು ರಾಷ್ಟ್ರೀಯ ಗಡಿಯನ್ನು ದಾಟಿದಾಗ, ಹಣವು ಅದರ ವಿರುದ್ಧ ದಿಕ್ಕಿನಲ್ಲಿ ಚಲಿಸಬೇಕಾಗುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕೇಂದ್ರೀಯ ಪ್ರಾಧಿಕಾರದಿಂದ ಬಿಡುಗಡೆಯಾಗುವ ಒಂದು ಸಾಮಾನ್ಯ ಕರೆನ್ಸಿ

ಅಸ್ಥಿತ್ವದಲ್ಲಿರುವುದಿಲ್ಲ. ಒಂದು ರಾಷ್ಟ್ರೀಯ ಕರೆನ್ಸಿಯು ಸ್ಥಿರವಾದ ಕೊಳ್ಳುವ ಶಕ್ತಿಯನ್ನು ಕಾಪಾಡಿಕೊಂಡು ಬರುತ್ತದೆ ಎಂದು ಮನವರಿಕೆಯಾದಾಗ ಮಾತ್ರ ವಿದೇಶಿ ಆರ್ಥಿಕ ಪ್ರತಿನಿಧಿಗಳು ಅವುಗಳನ್ನು ಸ್ವೀಕರಿಸುತ್ತಾರೆ. ಇಂತಹ ವಿಶ್ವಾಸವಿಲ್ಲದಿದ್ದರೆ, ಒಂದು ಕರೆನ್ಸಿಯನ್ನು ಅಂತರರಾಷ್ಟ್ರೀಯ ಮಟ್ಟದ ವಿನಿಮಯ ಮಾಧ್ಯಮವಾಗಿ ಮತ್ತು ಲೆಕ್ಕಾಚಾರದ ಘಟಕ(ಯುನಿಟ್)ವಾಗಿ ಬಳಸಲಾಗುವುದಿಲ್ಲ. ಏಕೆಂದರೆ, ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಒಂದು ನಿರ್ದಿಷ್ಟ ಕರೆನ್ಸಿಯನ್ನು ಬಳಸಲು ಒತ್ತಾಯ ಹೇರುವ ಅಧಿಕಾರವಿರುವ ಯಾವುದೇ ಅಂತರರಾಷ್ಟ್ರೀಯ ಪ್ರಾಧಿಕಾರ ಅಸ್ಥಿತ್ವದಲ್ಲಿಲ್ಲ. ರಾಷ್ಟ್ರೀಯ ಕರೆನ್ಸಿಗಳು, ಒಂದು ಸ್ಥಿರ ಬೆಲೆಯಲ್ಲಿ ಇತರೆ ಸ್ವತ್ತಾಗಿ ಮುಕ್ತವಾಗಿ ಪರಿವರ್ತನೆಗೊಳ್ಳಬಹುದೆಂದು ಮತ್ತು ಅವುಗಳ ಮೌಲ್ಯದ ಮೇಲೆ ಅದನ್ನು ಜಾರಿ ಮಾಡುವ ಪ್ರಾಧಿಕಾರದ ನಿಯಂತ್ರಣ ಇರುವುದಿಲ್ಲವೆಂದು ಘೋಷಣೆ ಮಾಡುವುದರ ಮೂಲಕ, ವಿಶ್ವದ ಅನೇಕ ಸರಕಾರಗಳು ಅಂತಹ ಸಂಭವನೀಯ ಬಳಕೆದಾರರ ವಿಶ್ವಾಸವನ್ನು ಗಳಿಸಲು ಪ್ರಯತ್ನಿಸುತ್ತವೆ. ಇತರೆ ಆಸ್ತಿಗಳೆಂದರೆ ಹೆಚ್ಚಾಗಿ ಚಿನ್ನ ಅಥವಾ ಇತರೆ ರಾಷ್ಟ್ರಗಳ ಕರೆನ್ಸಿಗಳಾಗಿರುತ್ತವೆ. ಈ ಬದ್ಧತೆಯ ವಿಶ್ವಾಸರ್ಹತೆಯ ಮೇಲೆ ಪರಿಣಾಮ ಬೀರುವ ಎರಡು ಅಂಶಗಳಿವೆ. ಅನಿಯಮಿತ ಮೊತ್ತಗಳಲ್ಲಿ ಮುಕ್ತವಾಗಿ ಪರಿವರ್ತಿತವಾಗುವ ಸಾಮರ್ಥ್ಯ ಮತ್ತು ಪರಿವರ್ತನೆಗೊಳ್ಳುವ ಬೆಲೆಯ ಮಟ್ಟ. ಈ ವಿವಾದಾಂಶಗಳನ್ನು ನಿಭಾಯಿಸಲು ಮತ್ತು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಗಳನ್ನು ರಚಿಸಲಾಗಿದೆ. ಮೇಲಿನ ಎರಡು ಅಂಶಗಳ ಬಗ್ಗೆ ಒಂದು ದೇಶ ಹೊಂದಿರುವ ಬದ್ಧತೆಯು ಅದು ಉಳಿದ ವಿಶ್ವದ ಇತರ ರಾಷ್ಟ್ರಗಳೊಂದಿಗೆ ಹೊಂದಿರುವ ವ್ಯಾಪಾರ ಮತ್ತು ಹಣಕಾಸು ಸಂಪರ್ಕಗಳ ಮೇಲೆ ಪರಿಣಾಮ ಬೀರುತ್ತದೆ.

ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಹಣಕಾಸಿನ ಹರಿವಿನ ಲೆಕ್ಕಾಚಾರದೊಂದಿಗೆ ನಾವು ಭಾಗ 6.1ನ್ನು ಆರಂಭಿಸೋಣ ಮುಂದಿನ ಭಾಗವು ರಾಷ್ಟ್ರೀಯ ಕರೆನ್ಸಿಗಳು ಪರಸ್ಪರ ವಿನಿಯಮಗೊಳ್ಳುವ ಬೆಲೆ ನಿರ್ಧಾರವನ್ನು ಪರಿಶೀಸುತ್ತದೆ. ಭಾಗ 6.3 ರಲ್ಲಿ ಮುಚ್ಚಿದ ಆರ್ಥಿಕತೆಯ ಆದಾಯ ವೆಚ್ಚದ ಮಾದರಿಯು ಅಂತರರಾಷ್ಟ್ರೀಯ ಪರಿಣಾಮವನ್ನು ಒಳಗೊಳ್ಳುವಂತೆ ತಿದ್ದುಪಡಿಯಾಗಿದೆ. ಭಾಗ 6.4 ವ್ಯಾಪಾರ ಕೊರತೆ ಮತ್ತು ಮುಂಗಡ ಪತ್ರದ ಕೊರತೆ ಹಾಗೂ ಉಳಿತಾಯ ಮತ್ತು ಹೂಡಿಕೆ ನಡುವಿನ ಅಂತರದ ಸಂಬಂಧಗಳನ್ನು ಕುರಿತು ಸಂಕ್ಷಿಪ್ತವಾಗಿ ಅಧ್ಯಯನ ಮಾಡುತ್ತದೆ.

## 6.1 ಸಂದಾಯ ಬಾಕಿ (ಪಾವತಿ ಬಾಕಿ) *The Balance of Payments*

ಒಂದು ದೇಶದ ಜನರು ವಿಶ್ವದ ಇತರ ರಾಷ್ಟ್ರಗಳೊಂದಿಗೆ ಸರಕು ಮತ್ತು ಸೇವೆಗಳಲ್ಲಿ ಹಾಗೂ ಸ್ವತ್ತುಗಳಲ್ಲಿ ನಡೆಸಿದ ವ್ಯವಹಾರಗಳನ್ನು ಸಂದಾಯ ಬಾಕಿಯು ದಾಖಲಿಸುತ್ತದೆ. ಭಾರತದ ಆರ್ಥಿಕತೆಯ 2014–15 ನೇ ಸಾಲಿನ ಸಂದಾಯ ಬಾಕಿಯ ಸಾರಾಂಶವನ್ನು ಕೋಷ್ಟಕ 6.1 ನೀಡುತ್ತದೆ. *BOP* ಯಲ್ಲಿ ಎರಡು ಪ್ರಮುಖ ಖಾತೆಗಳಿರುತ್ತವೆ. ಚಾಲ್ತಿಖಾತೆ ಮತ್ತು ಬಂಡವಾಳ ಖಾತೆ.

ಚಾಲ್ತಿ ಖಾತೆಯು ಸರಕುಗಳು ಮತ್ತು ಸೇವೆಗಳಲ್ಲಿನ ಆಮದು ಮತ್ತು ರಫ್ತುಗಳನ್ನು ಹಾಗೂ ವರ್ಗಾವಣೆ ಪಾವತಿಗಳನ್ನು ದಾಖಲಿಸುತ್ತದೆ. ಕೋಷ್ಟಕ 6.1ರಲ್ಲಿನ ಮೊದಲ ಎರಡು ಅಂಶಗಳು ಸರಕುಗಳನ್ನು ರಫ್ತು ಮತ್ತು ಆಮದುಗಳನ್ನು ದಾಖಲಿಸುತ್ತದೆ ಮೂರನೇ ಅಂಶವು ರಫ್ತು ಸರಕುಗಳಿಂದ ಆಮದು ಸರಕುಗಳನ್ನು ಕಳೆಯುವುದರಿಂದ ದೊರೆಯುವ ವ್ಯಾಪಾರ ಬಾಕಿಯನ್ನು ನೀಡುತ್ತದೆ. ರಫ್ತುಗಳು ಆಮದಿಗಿಂತ ಅಧಿಕವಾದಾಗ, ವ್ಯಾಪಾರ ಮಿಗುತೆ (ಉಳಿತಾಯ) ಕಂಡುಬರುತ್ತದೆ ಮತ್ತು ಆಮದುಗಳು ರಫ್ತಿಗಿಂತ ಅಧಿಕವಾದಾಗ ವ್ಯಾಪಾರ ಕೊರತೆ ಕಂಡುಬರುತ್ತದೆ. 2014–15ರಲ್ಲಿ ಭಾರತದಲ್ಲಿ ಆಮದುಗಳು ರಫ್ತಿಗಿಂತ ಹೆಚ್ಚಾಗಿ, ಅದು 144.9 ಬಿಲಿಯನ್ *U.S* ಡಾಲರಗಳಷ್ಟು ಬೃಹತ್ ವ್ಯಾಪಾರ ಕೊರತೆಗೆ ಕಾರಣವಾಯಿತು. ಸೇವೆಗಳಲ್ಲಿನ ವ್ಯಾಪಾರವು ಅಗೋಚರ ವ್ಯಾಪಾರವನ್ನು ಸೂಚಿಸುತ್ತದೆ. (ಏಕೆಂದರೆ ಅವುಗಳ ದೇಶದ ಗಡಿ ದಾಟುವಿಕೆಯು ಅಗೋಚರವಾಗಿರುತ್ತದೆ) ಅಗೋಚರ ವ್ಯಾಪಾರವೆಂದು ಕರೆಯಲಾಗುವ ಸೇವೆಗಳಲ್ಲಿನ ವ್ಯಾಪಾರವು ಉತ್ಪಾದನಾಂಗಗಳ ಆದಾಯ ಮತ್ತು ನಿವ್ವಳ ಉತ್ಪಾದನಾಂಗ ರಹಿತ ಆದಾಯವನ್ನು ಒಳಗೊಂಡಿದೆ. ಇಲ್ಲಿ ಉತ್ಪಾದನಾಂಗಗಳ ಆದಾಯವೆಂದರೆ ಉದ್ಯೋಗಿಗಳಿಗೆ ನೀಡುವ ಪರಿಹಾರಧನದಿಂದ ಬಂದ ನಿವ್ವಳ ಆದಾಯ ಮತ್ತು ನಿವ್ವಳ ಹೂಡಿಕೆ ಆದಾಯವಾಗಿದೆ. ವಿದೇಶಗಳಲ್ಲಿನ ನಮ್ಮ ಆಸ್ತಿಗಳ ಮೇಲಿನ ಬಡ್ಡಿ, ಲಾಭ ಮತ್ತು

ಲಾಭಾಂಶಗಳಿಂದ, ವಿದೇಶೀಯುರು ಭಾರತದಲ್ಲಿ ಹೊಂದಿರುವ ಆಸ್ತಿಗಳಿಂದ ಗಳಿಸುವ ಆದಾಯವನ್ನು ಕಳೆಯುವುದರಿಂದ ನಿವ್ವಳ ಹೂಡಿಕೆಯ ಆದಾಯವನ್ನು ಪಡೆಯಬಹುದು. ದೇಶವಾಸಿಗಳು ಪ್ರಸ್ತುತ ಮತ್ತು ಭವಿಷ್ಯತ್ತಿನಲ್ಲಿ ಯಾವುದೇ ಮರುಪಾವತಿ ಮಾಡದೇ ಉಚಿತವಾಗಿ ಸ್ವೀಕರಿಸುವ ಸ್ವೀಕೃತಿಗಳೇ ವರ್ಗಾವಣೆ ಪಾವತಿಗಳಾಗಿವೆ. ಅವು ಹಣದ ರವಾನೆಗಳು, ದಾನಗಳು ಮತ್ತು ಅನುದಾನಗಳನ್ನು ಒಳಗೊಂಡಿವೆ. ಅವುಗಳು ಅಧಿಕೃತವಾಗಿರಬಹುದು ಅಥವಾ ಖಾಸಗಿಯಾಗಿರಬಹುದು. ಸರಕುಗಳ ರಫ್ತು ಮತ್ತು ಆಮದುಗಳ ಬಾಕಿಯನ್ನು ವ್ಯಾಪಾರ ಬಾಕಿಯೆಂದು ಉಲ್ಲೇಖಿಸಲಾಗುತ್ತದೆ. ವ್ಯಾಪಾರ ಬಾಕಿಗೆ ಸೇವೆಗಳಲ್ಲಿನ ವ್ಯಾಪಾರ ಮತ್ತು ನಿವ್ವಳ ವರ್ಗಾವಣೆಗಳನ್ನು ಸೇರಿಸುವುದರಿಂದ ಕೋಷ್ಟಕ 6.1ರ 5ನೇ ಅಂಶದಲ್ಲಿ ತೋರಿಸಿರುವಂತೆ ನಾವು ಚಾಲ್ತಿ ಖಾತೆ ಬಾಕಿಯನ್ನು ಪಡೆಯುತ್ತೇವೆ

ಈ ಅಂಕಿ ಅಂಶದ ಅರ್ಥವೇನೆಂದರೆ, ಚಾಲ್ತಿ ಖಾತೆಯಲ್ಲಿನ ಒಂದು ಘಟಕದ ವ್ಯವಹಾರವು ಸ್ವೀಕೃತಿಯ ಒಳಹರಿವಿಗಿಂತ 26.8 ಬಿಲಿಯನ್ ಡಾಲರ್‌ಗಳಷ್ಟು ಪಾವತಿಯಾಗಿ ಅಧಿಕ ಹೊರ ಹರಿವಿಗೆ ಕಾರಣವಾಗಿದೆ ಎಂದರ್ಥ. ಇದು 2014–15ನೇ ಸಾಲಿನ ಚಾಲ್ತಿ ಖಾತೆ ಕೊರತೆ ಎಂದು ಉಲ್ಲೇಖಿಸಲಾಗಿದೆ. ಒಂದು ವೇಳೆ ಈ ಸಂಖ್ಯೆಯು ಧನಾತ್ಮಕ ಸಂಖ್ಯೆಯಾಗಿದ್ದರೆ, ಅದು ಚಾಲ್ತಿಖಾತೆ ಮಿಗುತೆ (ಉಳಿತಾಯ) ಯಾಗುತ್ತಿತ್ತು. ಹಣ, ದಾಸ್ತಾನುಗಳು, ಬಾಂಡುಗಳು ಇತ್ಯಾದಿ ಸ್ವತ್ತುಗಳ ಅಂತರರಾಷ್ಟ್ರೀಯ ಖರೀದಿ ಮತ್ತು ಮಾರಾಟಗಳನ್ನು ಬಂಡವಾಳ ಖಾತೆಯು ದಾಖಲಿಸುತ್ತದೆ. ಯಾವುದೇ ವ್ಯವಹಾರವು ವಿದೇಶಿಯರಿಗೆ ಪಾವತಿಯಾಗಿ ಪರಿಣಮಿಸಿದರೆ ಅದನ್ನು ಸಾಲವಾಗಿ ನಮೂದಿಸುತ್ತೇವೆ ಮತ್ತು ಇದು ಋಣಾತ್ಮಕ ಸಂಕೇತವನ್ನು ಸೂಚಿಸುತ್ತದೆ ಎಂಬುದನ್ನು ಗಮನಿಸಿ. ಯಾವುದೇ ವ್ಯವಹಾರವು ವಿದೇಶಿಯರಿಂದ ನಮಗೆ ಸ್ವೀಕೃತಿಯಾಗಿ ಬಂದರೆ ಅದು ಜಮೆಯಾಗಿ ನಮೂದಿತವಾಗುತ್ತದೆ ಮತ್ತು ಇದು ಧನಾತ್ಮಕ ಸಂಕೇತವಾಗಿದೆ.





**ಉದಾಹರಣೆ 6.1**

ಒಂದು ದೇಶ ಏಕಕಾಲದಲ್ಲಿ ವ್ಯಾಪಾರ ಕೊರತೆಯನ್ನು ಮತ್ತು ಚಾಲ್ತಿ ಖಾತೆಯ ಮಿಗುತೆಯನ್ನು (ಉಳಿತಾಯ) ಹೊಂದಲು ಸಾಧ್ಯವೇ? ಹೌದು, ಭಾರತದಲ್ಲಿ ವ್ಯಾಪಾರ ಕೊರತೆಯು, ಪ್ರತೀ ವರ್ಷ ಮೇಲಿಂದ ಮೇಲೆ ಸಂಭವಿಸುವ, ಲಕ್ಷಣವಾಗಿದ್ದರೂ, ಅದು ಸತತ 3 ವರ್ಷಗಳವರೆಗೆ ಅನುಕ್ರಮವಾಗಿ 2001–02 ರಿಂದ 2002–2003 ಮತ್ತು 2003–04 ರವರೆಗೆ ಅನುಕ್ರಮವಾಗಿ *GDP* ಯಲ್ಲಿನ ಶೇಕಡ 0.7, 1.3 ಮತ್ತು ಶೇಕಡ 2.3 ರಷ್ಟು ಚಾಲ್ತಿ ಖಾತೆಯ ಮಿಗುತೆಯನ್ನು ಹೊಂದಿತ್ತು. ಇದು ಏಕೆಂದರೆ ಸೇವೆಗಳಿಂದ ಬಂದ ಗಳಿಕೆ ಮತ್ತು ಖಾಸಗಿ ವರ್ಗಾವಣೆಗಳು ವ್ಯಾಪಾರ ಕೊರತೆಯನ್ನು ನೀಗಿಸಿದ್ದವು.

### 6.1.1 *BOP*ಯ ಮಿಗುತೆ ಮತ್ತು ಕೊರತೆ *BOP surplus and deficit*

ಒಬ್ಬ ವ್ಯಕ್ತಿಯು ತನ್ನ ಆದಾಯಕ್ಕಿಂತ ಅಧಿಕವಾಗಿ ಮಾಡಿದ ವೆಚ್ಚವನ್ನು ಹೇಗೆ ತನ್ನ ಆಸ್ತಿಗಳನ್ನು ಮಾರಾಟಮಾಡುವುದರಿಂದ ಅಥವಾ ಇತರರಿಂದ ಸಾಲವನ್ನು ಪಡೆಯುವುದರಿಂದ ಭರಿಸುತ್ತಾನೆಯೋ, ಅದೇ ರೀತಿ, ಒಂದು ದೇಶವು ತನ್ನ ಸಂದಾಯ ಬಾಕಿಯ ಚಾಲ್ತಿ ಖಾತೆಯಲ್ಲಿ ಕೊರತೆಯನ್ನು ಅನುಭವಿಸಿದರೆ (ವಿಶ್ವದ ಇತರ ರಾಷ್ಟ್ರಗಳಿಗೆ ಮಾರಾಟ ಮಾಡುವುದರಿಂದ ಪಡೆಯುವ ಸ್ವೀಕೃತಿಗಿಂತ ವಿದೇಶಗಳಲ್ಲಿ ಮಾಡಿದ ವೆಚ್ಚವು ಅಧಿಕವಾಗಿದ್ದರೆ) ಅದನ್ನು ತನ್ನ ಆಸ್ತಿಗಳನ್ನು ಮಾರಾಟ (ವಿದೇಶಗಳಲ್ಲಿ) ಮಾಡುವುದರ ಮೂಲಕ ಅಥವಾ ವಿದೇಶಗಳಿಂದ ಸಾಲವನ್ನು ಪಡೆಯುವುದರ ಮೂಲಕ ಭರಿಸಬೇಕಾಗುತ್ತದೆ. ಇದೇ ಅಂತರರಾಷ್ಟ್ರೀಯ ಪಾವತಿಯ ಮೂಲಾಂಶ (ಮೂಲತತ್ವ)ವಾಗಿದೆ. ಹೀಗೆ, ನಿವ್ವಳ ಬಂಡವಾಳ ಒಳ–ಹರಿವಿನಿಂದ ಚಾಲ್ತಿ ಖಾತೆಯ ಕೊರತೆಯನ್ನು ನೀಗಿಸಲು ಅಗತ್ಯವಾದ ಹಣಕಾಸನ್ನು ಒದಗಿಸಲಾಗುತ್ತದೆ.

ಪರ್ಯಾಯವಾಗಿ, ಒಂದು ದೇಶದ ಚಾಲ್ತಿ ಖಾತೆಯಲ್ಲಿ ಕೊರತೆ ಉಂಟಾದಲ್ಲಿ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ವಿದೇಶಿ ಕರೆನ್ಸಿಗಳನ್ನು ಮಾರುವುದರ ಮೂಲಕ, ವಿದೇಶಿ ವಿನಿಮಯ ಮೀಸಲನ್ನು ಕಡಿಮೆ ಮಾಡಿಕೊಂಡು, ಅಧಿಕೃತ ಮೀಸಲು ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳಬಹುದು. ಅಧಿಕೃತ ಮೀಸಲಿನಲ್ಲಿನ ಇಳಿಕೆಯನ್ನು (ಏರಿಕೆಯನ್ನು) ಒಟ್ಟಾರೆ ಸಂದಾಯಬಾಕಿಯ ಕೊರತೆ (ಮಿಗುತೆ) ಎಂದು ಕರೆಯುತ್ತೇವೆ. ಮುಖ್ಯ ವಿಷಯವೆಂದರೆ ಹಣಕಾಸು ಪ್ರಾಧಿಕಾರಗಳು ಸಂದಾಯ ಬಾಕಿಯಲ್ಲಿನ ಕೊರತೆಯನ್ನು ನೀಗಿಸಲು ಅಂತಿಮವಾಗಿ ಹಣಕಾಸನ್ನು ಒದಗಿಸುವ ಪ್ರಾಧಿಕಾರವಾಗಿದೆ (ಅಥವಾ ಹೆಚ್ಚಳದ ಸ್ವೀಕೃತರಾಗಿದ್ದಾರೆ). ಚಾಲ್ತಿ

ಖಾತೆ ಮತ್ತು ಬಂಡವಾಳ ಖಾತೆಯ ಬಾಕಿಯನ್ನು ಕೂಡಿಸಿದಾಗ ಸಂದಾಯ ಬಾಕಿಯ ಕೊರತೆ ಅಥವಾ ಮಿಗುತೆ (ಉಳಿತಾಯ) ಲಭ್ಯವಾಗುತ್ತದೆ. ಇದು ಅಧಿಕೃತ ಮೀಸಲಿಗೆ ಸೇರ್ಪಡೆಯಾಗುವ ಮೊತ್ತವಾಗಿದೆ. ಸಂದಾಯ ಬಾಕಿಯ ಚಾಲ್ತಿ ಖಾತೆ ಮತ್ತು ಮೀಸಲು ರಹಿತ ಬಂಡವಾಳ ಖಾತೆಯ ಮೊತ್ತವು ಶೂನ್ಯಕ್ಕೆ ಸಮನಾಗಿದ್ದಾಗ ಒಂದು ದೇಶದ ಸಂದಾಯ ಬಾಕಿಯು ಸಮತೋಲನದಲ್ಲಿರುತ್ತದೆಂದು ಹೇಳಬಹುದು. ಅಂದರೆ ಇಲ್ಲಿ, ಚಾಲ್ತಿ ಖಾತೆಯ ಬಾಕಿಯನ್ನು ಮೀಸಲು ಚಲನೆ ಇಲ್ಲದೆ ಪೂರ್ಣವಾಗಿ ಅಂತರರಾಷ್ಟ್ರೀಯ ಸಾಲದಿಂದ ಪೂರೈಸಲಾಗುತ್ತದೆ. ಅಧಿಕೃತ ಮೀಸಲು ವ್ಯವಹಾರಗಳು, ತೇಲುವ ವಿನಿಮಯ ದರಕ್ಕಿಂತ ಸ್ಥಿರ ವಿನಿಮಯ ದರವಿದ್ದಾಗ ಹೆಚ್ಚು ಸಮಂಜಸವೆನಿಸುಕೊಳ್ಳುತ್ತದೆ ಎಂಬುದನ್ನು ನಾವು ಗಮನಿಸಬೇಕಾಗಿದೆ. (ವಿಭಾಗ 6.2.3ನ್ನು ನೋಡಿ).

**ಸ್ವಾಯತ್ತ ಮತ್ತು ಹೊಂದಾಣಿಕೆ ವ್ಯವಹಾರಗಳು:** ಸಂದಾಯ ಬಾಕಿಯ ಪರಿಸ್ಥಿತಿಯಿಂದ ಪ್ರಭಾವಿತವಾಗದೆ ಸ್ವತಂತ್ರವಾಗಿ ಕೈಗೊಳ್ಳುವ (ಲಾಭದ ಉದ್ದೇಶದಿಂದ ಕೈಗೊಳ್ಳಬಹುದು) ಅಂತರರಾಷ್ಟ್ರೀಯ ಆರ್ಥಿಕ ವ್ಯವಹಾರಗಳನ್ನು ಸ್ವಾಯತ್ತ ಆರ್ಥಿಕ ವ್ಯವಹಾರಗಳೆನ್ನುತ್ತೇವೆ. ಈ ಬಾಬ್ತುಗಳನ್ನು ಸಂದಾಯ ಬಾಕಿಯಲ್ಲಿನ 'ರೇಖೆಯ ಮೇಲಿನ' ಬಾಬ್ತುಗಳೆಂದು ಕರೆಯಲಾಗುತ್ತದೆ. ಸ್ವಾಯತ್ತ ಪಾವತಿಗಳಿಗಿಂತ ಸ್ವಾಯತ್ತ ಸ್ವೀಕೃತಿಗಳು ಅಧಿಕವಾಗಿದ್ದಾಗ (ಕಡಿಮೆಯಿದ್ದಾಗ) ಸಂದಾಯ ಬಾಕಿಯು ಮಿಗುತೆಯಲ್ಲಿದೆ (ಕೊರತೆಯಲ್ಲಿದೆ) ಎಂದು ಹೇಳಬಹುದು.

**ಹೊಂದಾಣಿಕೆ ವ್ಯವಹಾರಗಳು** 'ರೇಖೆಯ ಕೆಳಗಿನ ಬಾಬ್ತುಗಳು': ಸ್ವಾಯತ್ತ ಬಾಬ್ತುಗಳ ನಿವ್ವಳ ಪರಿಣಾಮದಿಂದ ನಿರ್ಧಾರವಾಗುತ್ತದೆ – ಅಂದರೆ ಸಂದಾಯ ಬಾಕಿಯಲ್ಲಿನ ಅಧಿಕೃತ ಮೀಸಲು ವ್ಯವಹಾರಗಳನ್ನು ಹೊಂದಾಣಿಕೆ ವ್ಯವಹಾರಗಳೆಂದು ಪರಿಗಣಿಸಲಾಗುತ್ತದೆ (ಇತರೆ ವ್ಯವಹಾರಗಳನ್ನು ಸ್ವಾಯತ್ತ ವ್ಯವಹಾರಗಳೆನ್ನುತ್ತಾರೆ).

**ತಪ್ಪುಗಳು ಮತ್ತು ಲೋಪಗಳು:** ಎಲ್ಲಾ ಅಂತರರಾಷ್ಟ್ರೀಯ ವ್ಯವಹಾರಗಳನ್ನು ನಿಖರವಾಗಿ ದಾಖಲಿಸಲು ಸಾಧ್ಯವಾಗದ ನಮ್ಮ ಅಸಮರ್ಥತೆಯನ್ನು ಪ್ರತಿಬಿಂಬಿಸುವ ಸಮತೋಲನ ಬಾಬ್ತುವಾದ *BOP* (ಚಾಲ್ತಿ ಮತ್ತು ಬಂಡವಾಳ ಖಾತೆಗಳನ್ನು ಹೊರತುಪಡಿಸಿ)ಯಲ್ಲಿನ ಮೂರನೇ ಅಂಶವನ್ನು ಒಳಗೊಂಡಿವೆ.

## 6.2 ವಿದೇಶೀ ವಿನಿಮಯ ಮಾರುಕಟ್ಟೆ *The Foreign Exchange Market*

ಅಂತರರಾಷ್ಟ್ರೀಯ ವ್ಯವಹಾರಗಳ ಲೆಕ್ಕಾಚಾರಗಳನ್ನು ಇಡಿಯಾಗಿ ಪರಿಗಣಿಸಿದ ನಂತರ ಈಗ ನಾವು ಒಂದೇ ಒಂದು ವ್ಯವಹಾರವನ್ನು ಪರಿಗಣಿಸೋಣ. ಭಾರತೀಯ ನಿವಾಸಿ ಒಬ್ಬರು ರಜೆಯಲ್ಲಿ ಲಂಡನ್ನಿಗೆ ಭೇಟಿ ನೀಡಲು ಬಯಸಿದ್ದಾರೆ (ಪ್ರವಾಸಿ ಸೇವೆಗಳ ಆಮದು) ಎಂದು ಕಲ್ಪಿಸಿಕೊಳ್ಳೋಣ. ಅವರು ಅಲ್ಲಿ ಉಳಿದುಕೊಳ್ಳಲು ಪೌಂಡ್‌ಗಳಲ್ಲಿ ಪಾವತಿಸಬೇಕಾಗುತ್ತದೆ. ಅವರು, ಈ ಪೌಂಡುಗಳನ್ನು ಎಲ್ಲಿ ಮತ್ತು ಯಾವ ಬೆಲೆಗೆ ಪಡೆಯಬೇಕು ಎಂಬುದನ್ನು ತಿಳಿದುಕೊಳ್ಳುವ ಅಗತ್ಯವಿರುತ್ತದೆ. ಪೌಂಡುಗಳಿಗಾಗಿ ಅವರು ಸಲ್ಲಿಸುವ ಬೇಡಿಕೆಯು ವಿದೇಶಿ ವಿನಿಮಯದ ಬೇಡಿಕೆಯನ್ನು ರಚಿಸುತ್ತದೆ. ಇದನ್ನು ವಿದೇಶಿ ವಿನಿಮಯ ಮಾರುಕಟ್ಟೆಯು – ರಾಷ್ಟ್ರೀಯ ಕರೆನ್ಸಿಗಳು ಪರಸ್ಪರ ವ್ಯಾಪಾರವಾಗುವ ಒಂದು ಮಾರುಕಟ್ಟೆ – ಪೂರೈಸುತ್ತದೆ. ಈ ಮಾರುಕಟ್ಟೆಯಲ್ಲಿ ಪ್ರಧಾನವಾಗಿ ಭಾಗವಹಿಸುವವರೆಂದರೆ, ವಾಣಿಜ್ಯ ಬ್ಯಾಂಕುಗಳು, ವಿದೇಶೀ ವಿನಿಮಯ ದಲ್ಲಾಳಿಗಳು ಮತ್ತು ಇತರೆ ಅಧಿಕೃತ ವಿತರಕರು ಮತ್ತು ವಿತ್ತೀಯ ಪ್ರಾಧಿಕಾರಗಳು. ಇಲ್ಲಿ ಭಾಗವಹಿಸುವವರು ತಮ್ಮದೇ ವ್ಯಾಪಾರಿ ಕೇಂದ್ರಗಳನ್ನು ಹೊಂದಿದ್ದರೂ ಸಹ ಈ ಮಾರುಕಟ್ಟೆಯು ಸ್ವತಃ ವಿಶ್ವ ವ್ಯಾಪಿಯಾಗಿದೆ ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾದ ಅಂಶವಾಗಿದೆ. ವ್ಯಾಪಾರ ಕೇಂದ್ರಗಳ ನಡುವೆ ನಿಕಟ ಮತ್ತು ನಿರಂತರ ಸಂಪರ್ಕವಿರುತ್ತದೆ ಮತ್ತು ಭಾಗವಹಿಸುವವರು ಒಂದಕ್ಕಿಂತ ಹೆಚ್ಚಿನ ಮಾರುಕಟ್ಟೆಯಲ್ಲಿ ಭಾಗವಹಿಸುತ್ತಾರೆ.



**ನಿಮ್ಮ ಕರೆನ್ಸಿಯು ಡಾಲರ್‌ಗೆ ವಿನಿಮಯಗೊಳ್ಳುವುದೇ? ಎರಡು ಕರೆನ್ಸಿಯಗಳ ನಡುವಿನ ವಿನಿಮಯ ದರಗಳು ಈ ರೀತಿ ಇರಬೇಕಾಗುತ್ತದೆಯೇ ಚರ್ಚಿಸಿ.**

ಒಂದು ಕರೆನ್ಸಿಯ ಬೆಲೆಯನ್ನು ಇನ್ನೊಂದು ಕರೆನ್ಸಿಯ ರೂಪದಲ್ಲಿ ವ್ಯಕ್ತಪಡಿಸುವುದಕ್ಕೆ **ವಿನಿಮಯದರ** ಎನ್ನುತ್ತೇವೆ. ಎರಡು ಕರೆನ್ಸಿಗಳ ನಡುವೆ ಒಂದು ಸಾಮ್ಯತೆ ಇದ್ದಾಗ, ವಿನಿಮಯದರವನ್ನು ಎರಡರಲ್ಲಿ ಒಂದು ರೀತಿಯಲ್ಲಿ ವ್ಯಾಖ್ಯಾನಿಸಬಹುದು. ಮೊದಲನೆಯದೆಂದರೆ ಒಂದು ಘಟಕದಷ್ಟು (ಯೂನಿಟ್‌ನಷ್ಟು) ವಿದೇಶಿ ಕರೆನ್ಸಿಯನ್ನು ಕೊಳ್ಳಲು ಅಗತ್ಯವಿರುವ ದೇಶೀಯ ಕರೆನ್ಸಿಯ ಮೊತ್ತ ಅಂದರೆ, ರೂಪಾಯಿ–ಡಾಲರ್ ವಿನಿಮಯ ದರವು 50 ರೂಪಾಯಿಗಳು, ಅಂದರೆ ಒಂದು ಡಾಲರ್‌ನ್ನು ಖರೀದಿಸಲು 50 ರೂಪಾಯಿಗಳನ್ನು ವೆಚ್ಚ ಮಾಡಬೇಕಾಗುತ್ತದೆ ಮತ್ತು ಎರಡನೆಯದೆಂದರೆ, ಒಂದು ಘಟಕದಷ್ಟು ದೇಶೀಯ ಕರೆನ್ಸಿಯನ್ನು ಕೊಳ್ಳಲು ವಿದೇಶಿ ಕರೆನ್ಸಿಯಲ್ಲಿನ ವೆಚ್ಚ. ಈ ಮೇಲಿನ ಸಂಗತಿಯಲ್ಲಿ ಒಂದು ರೂಪಾಯಿಯನ್ನು ಖರೀದಿಸಲು 2ಸೆಂಟ್‌ಗಳ ವೆಚ್ಚ ತಗಲುತ್ತದೆ ಎಂದು ನಾವು ಹೇಳಬಹುದು. ಆರ್ಥಿಕ ಭಾಷೆಯಲ್ಲಿ ರೂಢಿಯಲ್ಲಿರುವಂತೆ ವಿದೇಶಿ ಕರೆನ್ಸಿಯ ಬೆಲೆಯನ್ನು ದೇಶೀಯ ಕರೆನ್ಸಿಯ ಬೆಲೆಯಲ್ಲಿ ಅಳೆಯುವಂತಹ ಮೊದಲನೇ ವ್ಯಾಖ್ಯೆಯನ್ನು ಬಳಸುತ್ತೇವೆ. ಇದು ದ್ವಿಪಕ್ಷೀಯ ವಿನಿಮಯ ದರವಾಗಿದೆ. – ದ್ವಿಪಕ್ಷೀಯ ಎಂದರೆ, ಅವು ಒಂದು ಕರೆನ್ಸಿಯ ಎದುರು ಇನ್ನೊಂದು ಕರೆನ್ಸಿಯು ವಿನಿಮಯಗೊಳ್ಳುವ ದರ ಎಂದರ್ಥ ಮತ್ತು ಅವು **ನಾಮಮಾತ್ರ**. ಏಕೆಂದರೆ, ಇಲ್ಲಿ ವಿನಿಮಯ ದರವು ಹಣದ ರೂಪದಲ್ಲಿ ಉಲ್ಲೇಖಿತವಾಗಿರುತ್ತದೆ. ಒಂದು ಡಾಲರ್ ಅಥವಾ ಪೌಂಡ್‌ಗೆ ಇಂತಿಷ್ಟು ರೂಪಾಯಿಗಳು ಎಂದಾಗುತ್ತದೆ.

ನಮ್ಮ ಉದಾಹರಣೆಗೆ ಸಂಬಂಧಿಸಿದ ಹಾಗೆ, ಒಬ್ಬರು ಲಂಡನ್ನಿಗೆ ಪ್ರವಾಸ ಕೈಗೊಳ್ಳುವ ಯೋಜನೆ ಮಾಡಿದಾಗ, ಅವರು ದೇಶೀಯ ಸರಕುಗಳಿಗೆ ಹೋಲಿಸಿದಾಗ ಬ್ರಿಟೀಷ್ ಸರಕುಗಳು ಎಷ್ಟು ದುಬಾರಿಯಾಗಿವೆ ಎಂಬುದನ್ನು ತಿಳಿಯುವ ಅಗತ್ಯವಿರುತ್ತದೆ. ಇದನ್ನು ಗ್ರಹಿಸುವ ಮಾಪನವೆಂದರೆ **ನೈಜ ವಿನಿಮಯ ದರ**. ವಿದೇಶಿ ಮತ್ತು ಸ್ವದೇಶೀ ಬೆಲೆಗಳ ಅನುಪಾತವೇ ನೈಜ ವಿನಿಮಯ ದರವಾಗಿದೆ ಇದನ್ನು ಒಂದೇ ಕರೆನ್ಸಿಯಲ್ಲಿ ಮಾಪನ ಮಾಡಲಾಗುತ್ತದೆ. ಇದನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ.

$$\text{ನೈಜ ವಿನಿಮಯ ದರ} = \frac{eP_f}{P} \tag{6.1}$$

$P$ ಮತ್ತು $P_f$ ಗಳು ಅನುಕ್ರಮವಾಗಿ ಸ್ವದೇಶದ ಮತ್ತು ವಿದೇಶದ ಬೆಲೆ ಮಟ್ಟಗಳಾಗಿವೆ ಮತ್ತು '$e$'ಯು ರೂಪಾಯಿಯಲ್ಲಿ ವಿದೇಶಿ ವಿನಿಮಯದ (ನಾಮ ಮಾತ್ರ ವಿನಿಮಯದರ) ಬೆಲೆಯಾಗಿದೆ. ಅಂಶವು (*numerator*) ರೂಪಾಯಿಯಲ್ಲಿ ಮಾಪನ ಮಾಡಿದ ವಿದೇಶದಲ್ಲಿನ ಬೆಲೆಗಳನ್ನು ವ್ಯಕ್ತಪಡಿಸುತ್ತದೆ. ಭಾಜಕಾಂಶವು (*denominator*) ರೂಪಾಯಿಯಲ್ಲಿ ಅಳೆಯಲಾದ ಸ್ವದೇಶೀ ಬೆಲೆಗಳನ್ನು ನೀಡುತ್ತದೆ. ಆದ್ದರಿಂದ ನೈಜ ವಿನಿಮಯದರವು ಸ್ವದೇಶದಲ್ಲಿನ ಬೆಲೆಗಳಿಗೆ ಸಾಪೇಕ್ಷವಾಗಿ ವಿದೇಶಿ ಬೆಲೆಗಳನ್ನು ಅಳೆಯುತ್ತದೆ. ನೈಜ ವಿನಿಮಯ ದರವು 1ಕ್ಕೆ ಸಮನಾಗಿದ್ದಾಗ, ಕರೆನ್ಸಿಗಳ ಕೊಳ್ಳುವ ಶಕ್ತಿಯು ಸಮಾನತೆಯಲ್ಲಿರುತ್ತದೆ. ಒಂದೇ ಕರೆನ್ಸಿಯಲ್ಲಿ ಮಾಪನ ಮಾಡಿದಾಗ ಸರಕುಗಳ ಬೆಲೆ ಎರಡೂ ದೇಶಗಳಲ್ಲಿ ಒಂದೇ ಆಗಿರುತ್ತದೆ ಎಂಬುದು ಇದರರ್ಥವಾಗಿದೆ. ಉದಾಹರಣೆಗೆ *US* ಡಾಲರ್‌ನಲ್ಲಿ ಒಂದು ಪೆನ್ $4 ಮತ್ತು ನಾಮ ಮಾತ್ರ ವಿನಿಮಯದರವು 1 ಡಾಲರ್‌ಗೆ 50 ರೂಪಾಯಿಗಳಾಗಿದ್ದರೆ, ಆಗ ನೈಜ ವಿನಿಮಯ ದರ 1ರೊಂದಿಗೆ ಭಾರತದಲ್ಲಿ ಇದರ ಬೆಲೆ 200ರೂಪಾಯಿ ($eP_f = 50 \times 4$) ಗಳಾಗಿರಬೇಕಾಗುತ್ತದೆ. ನೈಜ ವಿನಮಯವು 1 ಕ್ಕಿಂತ ಹೆಚ್ಚಾದರೆ, ಸ್ವದೇಶದಲ್ಲಿನ ಸರಕುಗಳಿಗಿಂತ ವಿದೇಶಿ ಸರಕುಗಳು ಹೆಚ್ಚು ದುಬಾರಿಯಾಗುತ್ತವೆ ಎಂಬುದು ಇದರರ್ಥ. ನೈಜ ವಿನಿಮಯ ದರವನ್ನು ಅನೇಕ ವೇಳೆ ದೇಶದ ಅಂತರರಾಷ್ಟ್ರೀಯ ಸ್ಪರ್ಧಾತ್ಮಕತೆಯ ಮಾಪನವೆಂದು ಪರಿಗಣಿಸಲಾಗುತ್ತದೆ.

ಒಂದು ದೇಶವು ಅನೇಕ ದೇಶಗಳೊಂದಿಗೆ ಪರಸ್ಪರ ವಹಿವಾಟು ನಡೆಸುವುದರಿಂದ ಸ್ವದೇಶಿ ಕರೆನ್ಸಿಯ ಚಲನೆಯನ್ನು ದ್ವಿಪಕ್ಷೀಯ ದರಗಳಿಗೆ ಬದಲಾಗಿ ಏಕ ಪಕ್ಷೀಯ ದರವಾಗಿ ನೀಡಲು ನಾವು ಬಯಸಬಹುದು. ಅಂದರೆ ಸಾಮಾನ್ಯವಾಗಿ ಸರಕುಗಳ ಬೆಲೆಗಳಲ್ಲಿ ಉಂಟಾಗುವ ಬದಲಾವಣೆಯನ್ನು ತೋರಿಸಲು ಒಂದು ಬೆಲೆ ಸೂಚ್ಯಂಕವನ್ನು ಬಳಸುವಂತೆ, ನಾವು, ಬೇರೆ ಕರೆನ್ಸಿಗಳೊಂದಿಗಿನ ವಿನಿಮಯ ದರವನ್ನು ತಿಳಿದುಕೊಳ್ಳಲು ಸೂಚಿಯೊಂದನ್ನು ಪಡೆಯಲು ಬಯಸುತ್ತೇವೆ. ಇದನ್ನು ವಿದೇಶಿ ಕರೆನ್ಸಿಗಳ

ಪ್ರಾತಿನಿಧಿಕ ಬುಟ್ಟಿಯಲ್ಲಿನ ಬೆಲೆಯನ್ನು ಪ್ರತಿನಿಧಿಸುವ ಬಹುಪಕ್ಷೀಯ ದರದ **'ನಾಮಮಾತ್ರ ಪರಿಣಾಮಕಾರಿ ವಿನಿಮಯದರ'** **(NOMINAL EFFECTIVE EXCHANGE RATE - NEER)** ವಾಗಿ ಲೆಕ್ಕ ಹಾಕಲಾಗುತ್ತದೆ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಪ್ರತಿಯೊಂದೂ ಕರೆನ್ಸಿಯು ಸ್ವದೇಶಕ್ಕೆ ಎಷ್ಟು ಮಹತ್ವವಾಗಿದೆ ಎಂಬುದರ ಮೇಲೆ ಅವುಗಳ ತೂಕವನ್ನು ಪಡೆದುಕೊಳ್ಳುತ್ತವೆ. (ರಫ್ತು ಮತ್ತು ಆಮದು ಶೇರುಗಳ ಸರಾಸರಿಯನ್ನು ಇದರ ಸೂಚ್ಯಂಕವಾಗಿ ತೆಗೆದುಕೊಳ್ಳಾಲಾಗುತ್ತದೆ). ಎಲ್ಲಾ ವ್ಯಾಪಾರಿ ಪಾಲುದಾರರ ನೈಜ ವಿನಿಮಯದರದ ತೂಕಿತ ಸರಾಸರಿಯಾಗಿ ನೈಜ ಪರಿಣಾಮಕಾರಿ ವಿನಿಮಯ ದರವನ್ನು ಲೆಕ್ಕಾಚಾರ ಮಾಡಲಾಗುತ್ತದೆ. ಒಂದು ದೇಶದ, ವಿದೇಶಿ ವ್ಯಾಪಾರದ ಎಲ್ಲಾ ಪಾಲುದಾರರ ಶೇರುಗಳೇ ತೂಕಗಳಾಗಿವೆ. ಒಂದು ನೀಡಲಾದ ವಿದೇಶಿ ಸರಕುಗಳ ಬುಟ್ಟಿಯಲ್ಲಿನ ಒಂದು ಘಟಕದಷ್ಟು ಸರಕನ್ನು ಖರೀದಿಸಲು ಅಗತ್ಯವಾದ ಸ್ವದೇಶಿ ಸರಕುಗಳ ಪ್ರಮಾಣವೆಂದು ಇದನ್ನು ಅರ್ಥೈಸಲಾಗಿದೆ.

### 6.2.1 ವಿನಿಮಯದರದ ನಿರ್ಧಾರ *Determination of the Exchange Rate*

ವಿದೇಶಿ ವಿನಿಮಯ ದರಗಳು ಈ ಮಟ್ಟದಲ್ಲಿ ಏಕೆ ಇರುತ್ತವೆ? ಮತ್ತು ಇವುಗಳ ಚಲನೆಗೆ ಏನು ಕಾರಣ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ವಿನಿಮಯ ದರ[1]ದ ನಿರ್ಧಾರದ ಹಿಂದೆ ಇರುವ ಆರ್ಥಿಕ ತತ್ವಗಳನ್ನು ಅರ್ಥಮಾಡಿಕೊಳ್ಳಲು ನಾವು ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯ ಲಕ್ಷಣ ಸ್ವರೂಪವಾಗಿರುವ ಪ್ರಮುಖ ವಿನಿಮಯದರದ ಆಳ್ವಿಕೆ[2]ಗಳನ್ನು ಅಧ್ಯಯನ ಮಾಡುತ್ತೇವೆ. ಸ್ಥಿರ ಬೆಲೆ ಪರಿವರ್ತನೀಯತೆಯ ವ್ಯವಸ್ಥೆಯ ಬದ್ಧತೆಯಿಂದ ದೇಶೀಯ ಕರೆನ್ಸಿಯನ್ನು ವಿದೇಶಿ ಕರೆನ್ಸಿಗಳಿಗೆ ಪರಿವರ್ತಿಸುವಲ್ಲಿ ಹೆಚ್ಚು ಸ್ವಾತಂತ್ರ್ಯವನ್ನು ಅನುಭವಿಸುವ, ಆದರೆ ಬೆಲೆ ಖಾತರಿಯಿಲ್ಲದಿರುವ, ಬದ್ಧತೆಯ ಕಡೆಗೆ ಚಲನೆ ಉಂಟಾಗಿದೆ.

### 6.2.2 ನಮ್ಯ (ಹೊಂದಾಣಿಕೆ) ವಿನಿಮಯದರ *Flexible Exchange Rates*

ನಮ್ಯ ವಿನಿಮಯದರದ ವ್ಯವಸ್ಥೆಯಲ್ಲಿ (ತೇಲುವ ವಿನಿಮಯ ದರವೆಂದು ಕೂಡ ಕರೆಯುವ) ವಿನಿಮಯದರವು ಮಾರುಕಟ್ಟೆ ಬೇಡಿಕೆ ಮತ್ತು ಪೂರೈಕೆ ಶಕ್ತಿಗಳಿಂದ ನಿರ್ಧರಿತವಾಗುತ್ತದೆ. ಸಂಪೂರ್ಣವಾದ ನಮ್ಯ ವ್ಯವಸ್ಥೆಯಲ್ಲಿ ಕೇಂದ್ರ ಬ್ಯಾಂಕುಗಳು ಸರಳ ಕಾಯಿದೆಗಳನ್ನು ಅನುಸರಿಸುತ್ತದೆ– ಅವು ವಿನಿಮಯದರದ ಮಟ್ಟದ ಮೇಲೆ ಯಾವುದೇ ನೇರ ಪರಿಣಾಮವನ್ನು ಬೀರುವುದಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅವು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ (ಆದ್ದರಿಂದ ಯಾವುದೇ ಅಧಿಕೃತ ಮೀಸಲು ವ್ಯವಹಾರಗಳಿರುವುದಿಲ್ಲ). ದೇಶೀಯ ವಾಸಿಗಳಿಂದ ವಿದೇಶೀ ಸರಕುಗಳ, ಸೇವೆಗಳ ಮತ್ತು ಆಸ್ತಿಗಳ ಹಾಗೂ ಎಲ್ಲಾ ವಿದೇಶೀ ವರ್ಗಾವಣಾ ಪಾವತಿಗಳ ಮೇಲೆ ಮಾಡುವ ವೆಚ್ಚಗಳು (*BOP* ಲೆಕ್ಕದಲ್ಲಿನ ಸಾಲಗಳು) ವಿದೇಶಿ ವಿನಿಮಯ ಬೇಡಿಕೆಯನ್ನು ಪ್ರತಿನಿಧಿಸುತ್ತದೆಂದು ಗುರುತಿಸಿದಾಗ, ಸಂದಾಯ ಬಾಕಿ ಖಾತೆ ಮತ್ತು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿನ ವಹಿವಾಟುಗಳ ನಡುವೆ ಸಂಬಂಧವಿದೆ ಎಂಬುದು ಸ್ಪಷ್ಟವಾಗುತ್ತದೆ. ಭಾರತೀಯ ನಿವಾಸಿಯು ಜಪಾನಿನ ಕಾರನ್ನು ಖರೀದಿ ಮಾಡುವಾಗ ಅದಕ್ಕೆ ಪ್ರತಿಯಾಗಿ ರೂಪಾಯಿಯನ್ನು ಕೊಡಲು ಮುಂದಾಗುತ್ತಾನೆ, ಆದರೆ ಜಪಾನಿನ ರಫ್ತುದಾರ ಜಪಾನಿನ ಕರೆನ್ಸಿಯಾದ *Yen* (ಯೆನ್)ನಲ್ಲಿ ಪಾವತಿಯನ್ನು ಅಪೇಕ್ಷಿಸುತ್ತಾನೆ. ಹೀಗಾಗಿ ವಿದೇಶೀ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿಗಳು ಯೆನ್‌ಗೆ ವಿನಿಮಯವಾಗಬೇಕಾಗುತ್ತದೆ. ಅದೇ ರೀತಿ ದೇಶೀಯ ವಾಸಿಗಳ ಎಲ್ಲಾ ರಫ್ತುಗಳು ವಿದೇಶಿ ವಿನಿಮಯದ ಸಮಾನ ಗಳಿಕೆಗಳನ್ನು ಪ್ರತಿಬಿಂಬಿಸುತ್ತವೆ. ಉದಾಹರಣೆಗೆ, ಭಾರತೀಯ ರಫ್ತುದಾರರು ರೂಪಾಯಿಗಳಲ್ಲಿ ಪಾವತಿಸಬೇಕೆಂದು ಅಪೇಕ್ಷಿಸುತ್ತಾರೆ ಮತ್ತು ನಮ್ಮ ಸರಕುಗಳನ್ನು ಖರೀದಿಸಲು, ವಿದೇಶಿಯರು ತಮ್ಮ ಕರೆನ್ಸಿಯನ್ನು ಮಾರಾಟ ಮಾಡಬೇಕು ಮತ್ತು ರೂಪಾಯಿಗಳನ್ನು ಕೊಳ್ಳಬೇಕಾಗುತ್ತದೆ. *BOP* ಖಾತೆಗಳಲ್ಲಿನ ಒಟ್ಟು ಜಮೆಗಳು ವಿದೇಶೀ ವಿನಿಮಯದ ಪೂರೈಕೆಗೆ ಸಮನಾಗಿರುತ್ತವೆ. ವಿದೇಶೀವಿನಿಮಯದ ಬೇಡಿಕೆಗೆ ಇರುವ ಇನ್ನೊಂದು ಕಾರಣವೆಂದರೆ, ಅದು ಸಟ್ಟಾ ವ್ಯಾಪಾರದ ಉದ್ದೇಶಗಳು.

[1] ಯಾವುದೇ ಎರಡು ದೇಶಗಳ ನಡುವೆ

[2] ಒಂದು ವಿನಿಮಯ ದರದ ಆಳ್ವಿಕೆ ಅಥವಾ ವ್ಯವಸ್ಥೆಯು, ವಿನಿಮಯ ದರಗಳನ್ನು ನಿಗದಿ ಮಾಡುವ ಅಂತರರಾಷ್ಟ್ರೀಯ ಕಾನೂನುಗಳ ಆಡಳಿತ ನಡೆಸುವ ಒಂದು ವ್ಯವಸ್ಥೆಯಾಗಿದೆ.

ನಾವೀಗ, ಸರಳತೆಗಾಗಿ ಭಾರತ ಮತ್ತು ಅಮೇರಿಕಾ ದೇಶಗಳು ಮಾತ್ರ ಪ್ರಪಂಚದಲ್ಲಿವೆ ಎಂದು ಕಲ್ಪಿಸಿಕೊಳ್ಳೋಣ. ಆಗ ಕೇವಲ ಒಂದೇ ಒಂದು ವಿನಿಮಯ ದರವನ್ನು ಮಾತ್ರ ನಿರ್ಧರಿಸಬೇಕಾಗುತ್ತದೆ. ಬೇಡಿಕೆ ರೇಖೆ (*DD*)ಯು ಕೆಳಮುಖ ಇಳಿಜಾರನ್ನು ಹೊಂದಿದೆ. ಏಕೆಂದರೆ ವಿದೇಶಿ ವಿನಿಮಯ ಬೆಲೆಗಳಲ್ಲಿನ ಏರಿಕೆಯು ವಿದೇಶಿ ಸರಕುಗಳನ್ನು ರೂಪಾಯಿಗಳಲ್ಲಿ ಕೊಳ್ಳುವ ವೆಚ್ಚವನ್ನು ಹೆಚ್ಚಿಸುತ್ತದೆ. ಆದ್ದರಿಂದ ಆಮದುಗಳು ಇಳಿಕೆಯಾಗುತ್ತವೆ ಮತ್ತು ವಿದೇಶಿ ವಿನಿಮಯದ ಬೇಡಿಕೆ ಕಡಿಮೆಯಾಗುತ್ತದೆ. ವಿನಿಮಯದರ ಹೆಚ್ಚಾದಂತೆ ವಿದೇಶಿ ವಿನಿಮಯದ ಸರಬರಾಜನ್ನು ಹೆಚ್ಚಿಸಲು ನಮ್ಮ ರಫ್ತುಗಳಿಗೆ ವಿದೇಶಿ ಬೇಡಿಕೆಯು ಸರಿ ಸಮ ಸ್ಥಿತಿ ಸ್ಥಾಪಕತೆಗಿಂತ ಅಧಿಕವಾಗಿರಬೇಕಾಗುತ್ತದೆ. ಇದರ ಅರ್ಥವೆಂದರೆ ವಿನಿಮಯದರದಲ್ಲಿನ ಶೇಕಡ ಒಂದರಷ್ಟು ಹೆಚ್ಚಳವು ರಫ್ತು ಸರಕುಗಳ ಬೆಲೆಯ (ನಮ್ಮ ಸರಕುಗಳನ್ನು ಕೊಳ್ಳುವ ವಿದೇಶಕ್ಕೆ ರಫ್ತು ಸರಕಿನ ಬೆಲೆ ಶೇ.1 ರಷ್ಟು ಕಡಿಮೆಯಾಗುತ್ತದೆ.) ಶೇಕಡ 1 ಕ್ಕಿಂತ ಅಧಿಕವಾದ ಬೇಡಿಕೆಯ ಹೆಚ್ಚಳವಾಗಬೇಕಾಗುತ್ತದೆ. ಈ ಷರತ್ತುಗಳನ್ನು ತಲುಪಬೇಕಾದರೆ, ನಮ್ಮ ರಫ್ತುಗಳ ರೂಪಾಯಿಯ ಪರಿಮಾಣವು ವಿನಿಮಯದರದ ಹೆಚ್ಚಳಕ್ಕಿಂತ ಪ್ರಮಾಣಾನುಗುಣವಾಗಿ ಹೆಚ್ಚಾಗಿರುತ್ತದೆ ಮತ್ತು ವಿನಿಮಯ ದರ ಹೆಚ್ಚಾದಂತೆ ಡಾಲರ್‌ಗಳ ಗಳಿಕೆ (ವಿದೇಶಿ ವಿನಿಮಯ ಸರಬರಾಜು)ಯು ಹೆಚ್ಚುತ್ತದೆ. ಆದಾಗ್ಯೂ ಒಂದು ಲಂಬ ಪೂರೈಕೆ ರೇಖೆ (ಭಾರತೀಯ ರಫ್ತುಗಳಿಗೆ ವಿದೇಶಿ ಸರಿಸಮ ಸ್ಥಿತಿಸ್ಥಾಪಕ ಬೇಡಿಕೆಯೊಂದಿಗೆ)ಯು ವಿಶ್ಲೇಷಣೆಯನ್ನು ಬದಲಾವಣೆ ಮಾಡುವುದಿಲ್ಲ. ಇಲ್ಲಿ ವಿನಿಮಯ ದರವನ್ನು ಹೊರತುಪಡಿಸಿ, ಉಳಿದ ಎಲ್ಲಾ ಬೆಲೆಗಳನ್ನು ಸ್ಥಿರವಾಗಿಟ್ಟುಕೊಂಡಿದ್ದೇವೆಂಬುದು ಗಮನಿಸಬೇಕಾದ ಅಂಶವಾಗಿದೆ.





ಕೇಂದ್ರ ಬ್ಯಾಂಕಿನ ಹಸ್ತಕ್ಷೇಪವಿಲ್ಲದ ನಮ್ಮ ವಿನಿಮಯ ದರಗಳ ಈ ವಿಷಯದಲ್ಲಿ ವಿದೇಶಿ ವಿನಿಮಯದ ಬೇಡಿಕೆ ಮತ್ತು ಪೂರೈಕೆಯನ್ನು ಸಮಾನಗೊಳಿಸುವುದಕ್ಕಾಗಿ ಮಾರುಕಟ್ಟೆಯನ್ನು ತೆರವುಗೊಳಿಸಲು ವಿನಿಮಯದರವು ಮುಂದಾಗುತ್ತದೆ. ಚಿತ್ರ 6.1ರಲ್ಲಿ ಸಮತೋಲನ ವಿನಿಮಯ ದರವು $e^*$ ಆಗಿರುತ್ತದೆ.




**ರೇಖಾಚಿತ್ರ 6.1:** ಬದಲಾಗುವ ವಿನಿಮಯ ದರಗಳಲ್ಲಿನ ಸಮತೋಲನ

ಭಾರತೀಯರು ಆಗಾಗ್ಗೆ ವಿದೇಶಿ ಪ್ರವಾಸವನ್ನು ಕೈಗೊಳ್ಳುವುದರಿಂದ ಅಥವಾ ಆಮದು ಸರಕುಗಳಿಗೆ ಹೆಚ್ಚು ಆದ್ಯತೆಯನ್ನು ತೋರಿಸಿದಾಗ ವಿದೇಶಿ ವಿನಿಮಯಕ್ಕೆ ಬೇಡಿಕೆ **$e^*$** ಹೆಚ್ಚಳವಾಗಿ *DD* ರೇಖೆಯು ಮೇಲ್ಭಾಗಕ್ಕೆ, ಬಲಗಡೆಗೆ ಪಲ್ಲಟಗೊಳ್ಳುತ್ತದೆ. ಇದರ ಪರಿಣಾಮವಾಗಿ ಛೇದಿತ ಅಂಶವು ಅಧಿಕ ವಿನಿಮಯದರದಲ್ಲಿ ಆಗುತ್ತದೆ. ನಮ್ಮ ವಿನಿಮಯ ದರಗಳ ಅಡಿಯಲ್ಲಿ ವಿದೇಶಿ ವಿನಿಮಯದ ಬೆಲೆಯಲ್ಲಾಗುವ ಬದಲಾವಣೆಯನ್ನು ಕರೆನ್ಸಿಯ ಅಪಮೌಲ್ಯ ಅಥವಾ ಮೌಲ್ಯದ ಏರಿಕೆ ಎಂದು ಉಲ್ಲೇಖಿಸಲಾಗುತ್ತದೆ. ಮೇಲಿನ ಸಂಗತಿಯಲ್ಲಿ ವಿದೇಶಿ ಕರೆನ್ಸಿಯ ರೂಪದಲ್ಲಿ ದೇಶಿಯ ಕರೆನ್ಸಿಯು ಕಡಿಮೆ ವೆಚ್ಚವಾಗಿರುವುದರಿಂದ (ರೂಪಾಯಿ) ಅಪಮೌಲ್ಯಗೊಳ್ಳುತ್ತದೆ. ಉದಾಹರಣೆಗೆ, ರೂಪಾಯಿ–ಡಾಲರ್‌ನ ಸಮತೋಲನ ವಿನಿಮಯದರವು 45 ರೂಪಾಯಿಗಳಾಗಿದ್ದು ಮತ್ತು ಈಗ ಅದು ಪ್ರತೀ ಡಾಲರ್‌ಗೆ ರೂಪಾಯಿ 50 ಆದಾಗ, ಡಾಲರ್‌ನ ಎದುರು ರೂಪಾಯಿಯು ಅಪಮೌಲ್ಯಗೊಂಡಿದೆ ಇದಕ್ಕೆ ವಿರುದ್ಧವಾಗಿ, ವಿದೇಶಿ ಕರೆನ್ಸಿಯ ರೂಪದಲ್ಲಿ ಇದು ಅಧಿಕ ವೆಚ್ಚದಾಯಕವಾಗಿದ್ದಾಗ, ಈ ಕರೆನ್ಸಿಯ ಮೌಲ್ಯ ಹೆಚ್ಚುತ್ತದೆ.




**ರೇಖಾಚಿತ್ರ 6.2:** ವಿದೇಶೀ ವಿನಿಮಯ ಮಾರುಕಟ್ಟೆಯಲ್ಲಿ ರಫ್ತುಗಳ ಬೇಡಿಕೆಯಲ್ಲಿನ ಹೆಚ್ಚಳದಮೇಲಿನ ಪರಿಣಾಮ

ವಿನಿಮಯದರದ ಆರಂಭಿಕ ಸಮತೋಲನ $e^*$ ರಲ್ಲಿ ವಿದೇಶಿ ವಿನಿಮಯಕ್ಕೆ ಅಧಿಕ ಬೇಡಿಕೆಯಿರುತ್ತದೆ. ಚಿತ್ರ 6.2ರಲ್ಲಿ ತೋರಿಸಿರುವಂತೆ ಮಾರುಕಟ್ಟೆಯನ್ನು ತೆರವುಗೊಳಿಸಲು ವಿನಿಮಯ ದರವು ಸಮತೋಲನ ಮೌಲ್ಯ $e_1$ ಗೆ ಹೆಚ್ಚಾಗಬೇಕಾಗುತ್ತದೆ. ವಿನಿಮಯ ದರದೊಂದಿಗೆ, ಆಮದು ಸರಕುಗಳ ರೂಪಾಯಿ ಬೆಲೆ ಹೆಚ್ಚಾಗುವುದರಿಂದ ವಿನಿಮಯದರದ ಹೆಚ್ಚಳ (ಅಪಮೌಲ್ಯ)ವು ಆಮದು ಬೇಡಿಕೆ ಪ್ರಮಾಣದ ಕುಸಿತಕ್ಕೆ ಕಾರಣವಾಗುತ್ತದೆ. ಹಾಗೆಯೇ ವಿನಿಮಯ ದರದಲ್ಲಿ ಹೆಚ್ಚಳವಾಗುವುದರಿಂದ ರಫ್ತುಗಳು ವಿದೇಶಿಯರಿಗೆ ಕಡಿಮೆ ವೆಚ್ಚವೆಂದು ಅನಿಸುವವರೆಗೂ ರಫ್ತುಗಳ ಪ್ರಮಾಣದ ಬೇಡಿಕೆಯು ಹೆಚ್ಚಾಗುತ್ತದೆ. ಹೊಸ ಸಮತೋಲನ $e_1$ ರಲ್ಲಿ ವಿದೇಶಿ ವಿನಿಮಯದ ಪೂರೈಕೆ ಮತ್ತು ಬೇಡಿಕೆಗಳು ಪುನಃ ಸಮನಾಗುತ್ತವೆ.

**ಸಟ್ಟಾ ವ್ಯಾಪಾರ:** ಮಾರುಕಟ್ಟೆಯಲ್ಲಿನ ವಿನಿಮಯ ದರಗಳು ಕೇವಲ ರಫ್ತು–ಆಮದುಗಳ ಮತ್ತು ಆಸ್ತಿಗಳಲ್ಲಿನ ಹೂಡಿಕೆಯ ಬೇಡಿಕೆ ಮತ್ತು ಪೂರೈಕೆಯ ಮೇಲೆ ಅವಲಂಬಿಸಿರುವುದು ಮಾತ್ರವಲ್ಲದೆ ಕರೆನ್ಸಿಯ ಮೌಲ್ಯದ ಹೆಚ್ಚಳದಿಂದ ಸಂಭವನೀಯ ಲಾಭಕ್ಕಾಗಿ ವಿದೇಶಿ ವಿನಿಮಯಕ್ಕೆ ಸಲ್ಲಿಸುವ ಬೇಡಿಕೆಯಂತಹ ವಿದೇಶಿ ವಿನಿಮಯ ಸಟ್ಟಾ ವ್ಯಾಪಾರದ ಮೇಲೂ ಅವಲಂಬಿತವಾಗಿದೆ. ಯಾವುದೇ ದೇಶದಲ್ಲಿ ಹಣವು ಒಂದು ಆಸ್ತಿಯಾಗಿದೆ. ಭಾರತೀಯರು ರೂಪಾಯಿಗೆ ಸಂಬಂಧಿಸಿದಂತೆ ಬ್ರಿಟೀಷ್ ಪೌಂಡಿನ ಮೌಲ್ಯ ಹೆಚ್ಚಳವಾಗುವುದೆಂದು ನಂಬಿದರೆ ಅವರು ಪೌಂಡ್‌ಗಳನ್ನು ಹೊಂದಿರಲು ಬಯಸುತ್ತಾರೆ. ಉದಾಹರಣೆಗೆ, ಚಾಲ್ತಿ ವಿನಿಮಯ ದರವು ಒಂದು ಪೌಂಡಿಗೆ ರೂಪಾಯಿ 80 ಆದರೆ ಮತ್ತು ಹೂಡಿಕೆದಾರರು ತಿಂಗಳ ಕೊನೆಗೆ ಪೌಂಡಿನ ಮೌಲ್ಯ ₹ 85ಕ್ಕೆ ಹೆಚ್ಚಾಗುತ್ತದೆಂದು ನಂಬಿದರೆ, ಹೂಡಿಕೆದಾರರು ₹ 80,000 ದಿಂದ 1000 ಪೌಂಡುಗಳನ್ನು ಖರೀದಿಸಿ ತಿಂಗಳ ಕೊನೆಗೆ ಈ ಪೌಂಡುಗಳನ್ನು 85,000 ರೂಪಾಯಿಗಳಿಗೆ ವಿನಿಮಯ ಮಾಡಿ ಅವರು ₹ 5000ಗಳಷ್ಟು ಲಾಭಗಳಿಸಬಹುದಾಗುತ್ತದೆ. ಈ ನಿರೀಕ್ಷೆಯು ಪೌಂಡುಗಳಿಗೆ ಬೇಡಿಕೆಯನ್ನು ಹೆಚ್ಚಿಸುತ್ತದೆ ಮತ್ತು ಪ್ರಸ್ತುತದಲ್ಲಿ ರೂಪಾಯಿ–ಪೌಂಡ್ ವಿನಿಮಯ ದರವು ಹೆಚ್ಚಲು ಕಾರಣವಾಗುತ್ತದೆ. ಇದು ನಂಬಿಕೆಯ ಸ್ವಯಂ ನೆರವೇರಿಕೆಯಾಗುವಂತೆ ಮಾಡುತ್ತದೆ.

ಈ ಮೇಲಿನ ವಿಶ್ಲೇಷಣೆಯು ಬಡ್ಡಿದರಗಳು, ಆದಾಯಗಳು ಮತ್ತು ಬೆಲೆಗಳು ಸ್ಥಿರವಾಗಿರುತ್ತವೆ ಎಂದು ಊಹಿಸುತ್ತದೆ. ಆದಾಗ್ಯೂ ಇವು ಬದಲಾಗಬಹುದು ಮತ್ತು ವಿದೇಶಿ ವಿನಿಮಯದ ಬೇಡಿಕೆ ಮತ್ತು ಪೂರೈಕೆ ರೇಖೆಗಳಲ್ಲಿ ಪಲ್ಲಟವನ್ನೂ ಮಾಡಬಹುದು.

**ಬಡ್ಡಿದರಗಳು ಮತ್ತು ವಿನಿಮಯದರ:** ಅಲ್ಪಾವಧಿಯಲ್ಲಿ, ವಿನಿಮಯ ದರದ ಚಲನೆಗಳನ್ನು ನಿರ್ಧರಿಸುವ ಇನ್ನೊಂದು ಪ್ರಮುಖ ಅಂಶವೆಂದರೆ ವಿಭಿನ್ನ ಬಡ್ಡಿದರ. ಅಂದರೆ, ದೇಶಗಳ ನಡುವಿನ ಬಡ್ಡಿದರಗಳ ವ್ಯತ್ಯಾಸ ಬ್ಯಾಂಕುಗಳು, ಬಹುರಾಷ್ಟ್ರೀಯ ನಿಗಮಗಳು, ಆಗರ್ಭ ಶ್ರೀಮಂತರುಗಳ ಒಡೆತನದಲ್ಲಿ ಬೃಹತ್ ಪ್ರಮಾಣದ ನಿಧಿಗಳು ಇರುತ್ತವೆ, ಇವು ವಿಶ್ವಾದ್ಯಂತ ಅಧಿಕ ಬಡ್ಡಿದರವನ್ನು ಅರಸುತ್ತಾ ಚಲಿಸುತ್ತವೆ. '*A*' ದೇಶದಲ್ಲಿ ಸರ್ಕಾರಿ ಬಾಂಡಗಳು ಶೇಕಡ 8ರಷ್ಟು ಬಡ್ಡಿಯನ್ನು ನೀಡಿದರೆ, ಸಮಾನ ಸುರಕ್ಷತೆಯ ಬಾಂಡುಗಳು '*B*'ದೇಶದಲ್ಲಿ ಶೇಕಡ 10ರಷ್ಟು ಬಡ್ಡಿಯನ್ನು ನೀಡುತ್ತವೆ ಎಂದು ನಾವು ಊಹಿಸಿಕೊಂಡರೆ, ಆಗ ಬಡ್ಡಿದರದ ವ್ಯತ್ಯಾಸವು ಶೇಕಡ 2ರಷ್ಟಿರುತ್ತದೆ. '*A*' ದೇಶದಲ್ಲಿನ ಹೂಡಿಕೆದಾರರು '*B*' ದೇಶದಲ್ಲಿನ ಅಧಿಕ ಬಡ್ಡಿದರಗಳಿಂದ ಆಕರ್ಷಿತರಾಗಿ ತಮ್ಮ ಸ್ವಂತ ಕರೆನ್ಸಿಯನ್ನು ಮಾರಾಟ ಮಾಡಿ, '*B*' ದೇಶದ ಕರೆನ್ಸಿಯನ್ನು ಖರೀದಿಸುತ್ತಾರೆ. ಇದೇ ವೇಳೆಯಲ್ಲಿ '*B*' ದೇಶದ ಹೂಡಿಕೆದಾರರೂ ಸಹ ತಮ್ಮ ದೇಶದಲ್ಲಿ ಹೂಡಿಕೆ ಮಾಡುವುದು ಹೆಚ್ಚು ಆಕರ್ಷಕವೆಂದು ಕಂಡುಕೊಳ್ಳುತ್ತಾರೆ ಮತ್ತು '*A*' ದೇಶದ ಕರೆನ್ಸಿಗೆ ಬೇಡಿಕೆಯನ್ನು ಕಡಿಮೆ ಮಾಡುತ್ತಾರೆ. ಆದ್ದರಿಂದ '*A*' ದೇಶದ ಕರೆನ್ಸಿಗೆ ಬೇಡಿಕೆ ಕಡಿಮೆಯಾಗುತ್ತದೆ ಇದರರ್ಥವೆಂದರೆ '*A*' ದೇಶದ ಕರೆನ್ಸಿಯ ಬೇಡಿಕೆಯು ಎಡಗಡೆಗೆ ಪಲ್ಲಟಗೊಳ್ಳುತ್ತದೆ ಮತ್ತು ಪೂರೈಕೆ ರೇಖೆಯು ಬಲಗಡೆಗೆ ಪಲ್ಲಟಗೊಳ್ಳುತ್ತದೆ. ಇದು '*A*' ದೇಶದ ಕರೆನ್ಸಿಯ ಅಪಮೌಲ್ಯಕ್ಕೆ ಹಾಗೂ '*B*' ದೇಶದ ಕರೆನ್ಸಿಯ ಮೌಲ್ಯದ ಹೆಚ್ಚಳಕ್ಕೆ ಕಾರಣವಾಗುತ್ತದೆ. ಆದ್ದರಿಂದ ದೇಶದೊಳಗಿನ ಅಂತರಿಕ ಬಡ್ಡಿದ ದರದ ಹೆಚ್ಚಳವು, ದೇಶೀಯ ಕರೆನ್ಸಿಯ ಮೌಲ್ಯದ ಹೆಚ್ಚಳಕ್ಕೆ ಕಾರಣವಾಗುತ್ತದೆ. ವಿದೇಶಿ ಸರ್ಕಾರಗಳು ಬಿಡುಗಡೆ ಮಾಡುವ ಬಾಂಡುಗಳನ್ನು ಕೊಳ್ಳಲು ಯಾವುದೇ ನಿರ್ಬಂಧಗಳಿರುವುದಿಲ್ಲ ಎಂಬುದು ಇಲ್ಲಿನ ಅವ್ಯಕ್ತ ಕಲ್ಪನೆಯಾಗಿದೆ.

**ಆದಾಯ ಮತ್ತು ವಿನಿಮಯ ದರ:** ಆದಾಯ ಅಧಿಕವಾದಾಗ, ಅನುಭೋಗಿಗಳ ವೆಚ್ಚವೂ ಅಧಿಕವಾಗುತ್ತದೆ. ಆಮದು ಸರಕುಗಳ ಮೇಲಿನ ವೆಚ್ಚವೂ ಸಹ ಹೆಚ್ಚಾಗುವ ಸಂಭವವಿರುತ್ತದೆ. ಆಮದುಗಳು ಹೆಚ್ಚಾದಾಗ, ವಿದೇಶಿ

ವಿನಿಮಯದ ಬೇಡಿಕೆ ರೇಖೆಯು ಬಲಕ್ಕೆ ಪಲ್ಲಟಗೊಳ್ಳುತ್ತದೆ. ದೇಶೀಯ ಕರೆನ್ಸಿಯು ಅಪಮೌಲ್ಯಗೊಳ್ಳುತ್ತದೆ. ವಿದೇಶದಲ್ಲಿನ ಆದಾಯವೂ ಹೆಚ್ಚಾದಾಗ ದೇಶೀಯ ರಫ್ತು ಹೆಚ್ಚುತ್ತದೆ ಮತ್ತು ವಿದೇಶಿ ವಿನಿಮಯದ ಪೂರೈಕೆ ರೇಖೆಯು ಹೊರ ಭಾಗಕ್ಕೆ ಪಲ್ಲಟಗೊಳ್ಳುತ್ತದೆ. ದೇಶೀಯ ಕರೆನ್ಸಿಯು ಅಪಮೌಲ್ಯವಾಗುಬಹುದು ಅಥವಾ ಆಗದಿರಬಹುದು. ಇದು ರಫ್ತುಗಳು ಆಮದುಗಳಿಗಿಂತ ವೇಗವಾಗಿ ಬೆಳವಣಿಗೆಯಾಗುತ್ತಿವೆಯೋ ಇಲ್ಲವೋ ಎಂಬದರ ಮೇಲೆ ಅವಲಂಬಿಸಿರುತ್ತದೆ. ಸಾಮಾನ್ಯವಾಗಿ, ಇತರೆ ಸಂಗತಿಗಳು ಸಮವಾಗಿದ್ದು, ಒಂದು ದೇಶದ ಸಮಗ್ರ ಬೇಡಿಕೆಯು, ವಿಶ್ವದ ಇತರೆ ದೇಶಗಳಿಗಿಂತ ವೇಗವಾಗಿ ಹೆಚ್ಚಾದರೆ ಅದರ ಕರೆನ್ಸಿಯು ಅಪಮೌಲ್ಯವನ್ನು ಹೊಂದುತ್ತದೆ. ಏಕೆಂದರೆ ಅದರ ಆಮದುಗಳು ಅದರ ರಫ್ತುಗಳಿಗಿಂತ ವೇಗವಾಗಿ ಬೆಳೆಯುತ್ತವೆ. ಆ ದೇಶದ ವಿದೇಶಿ ವಿನಿಮಯದ ಬೇಡಿಕೆಯ ರೇಖೆಯು ಪೂರೈಕೆ ರೇಖೆಗಿಂತ ವೇಗವಾಗಿ ಪಲ್ಲಟಗೊಳ್ಳುತ್ತದೆ.

**ದೀರ್ಘಾವಧಿಯಲ್ಲಿ ವಿನಿಮಯ ದರಗಳು:** ನಮ್ಮ ವಿನಿಮಯ ದರ (ಬದಲಾಗುವ ವಿನಿಮಯ ದರ) ಪದ್ಧತಿಯಲ್ಲಿ, ವಿನಿಮಯ ದರಗಳ ದೀರ್ಘಾವಧಿ ಭವಿಷ್ಯ ನುಡಿಯಲು ಕೊಳ್ಳುವ ಶಕ್ತಿಯ ಸಮಾನತೆಯ ಸಿದ್ಧಾಂತವನ್ನು ಬಳಸಲಾಗುತ್ತದೆ.

ಈ ಸಿದ್ಧಾಂತದ ಪ್ರಕಾರ, ಎಲ್ಲಿಯವರೆಗೆ ವ್ಯಾಪಾರಕ್ಕೆ, ಸುಂಕಗಳು (ವ್ಯಾಪಾರದ ಮೇಲಿನ ತೆರಿಗೆ) ಮತ್ತು ಕೋಟಾಗಳಂತಹ (ಆಮದುಗಳ ಮೇಲಿನ ಮಿತಿ) ಅಡೆತಡೆಯಿರುವುದಿಲ್ಲವೋ, ಅಲ್ಲಿಯವರೆಗೆ ಸಾರಿಗೆಯಲ್ಲಿನ ವ್ಯತ್ಯಾಸಗಳನ್ನು ಹೊರತುಪಡಿಸಿ, ವಿನಿಮಯ ದರಗಳು ಭಾರತದಲ್ಲಿನ ರೂಪಾಯಿಯಲ್ಲಾಗಲಿ ಅಥವಾ *US* ಡಾಲರ್‌ನಲ್ಲಾಗಲಿ ಜಪಾನಿ **ಯೆನ್** ನಲ್ಲಾಗಲಿ ಅಳೆಯುವುದರಿಂದ ಅಂತಿಮವಾಗಿ ಒಂದೇ ಉತ್ಪನ್ನ ವೆಚ್ಚಕ್ಕೆ ಹೊಂದಾಣಿಕೆಯಾಗಬೇಕಾಗುತ್ತದೆ. ಆದ್ದರಿಂದ, ದೀರ್ಘಾವಧಿಯಲ್ಲಿ, ಯಾವುದೇ ಎರಡು ರಾಷ್ಟ್ರೀಯ ಕರೆನ್ಸಿಗಳ ನಡುವಿನ ವಿನಿಮಯ ದರಗಳು ಆ ಎರಡೂ ದೇಶಗಳಲ್ಲಿನ ಬೆಲೆ ಮಟ್ಟಗಳಲ್ಲಿನ ವ್ಯತ್ಯಾಸಗಳನ್ನು ಪ್ರತಿಬಿಂಬಿಸುವಂತೆ ಹೊಂದಾಣಿಕೆಯಾಗುತ್ತದೆ.





**ಉದಾಹರಣೆ 6.2**

ಅಮೇರಿಕದಲ್ಲಿ ಒಂದು ಷರ್ಟಿನ ಬೆಲೆ 8 ಡಾಲರ್‌ಗಳು ಮತ್ತು ಭಾರತದಲ್ಲಿ 400 ರೂಪಾಯಿಗಳಾದರೆ, – ರೂಪಾಯಿ – ಡಾಲರ್‌ನ ವಿನಿಮಯದರ 50 ರೂಪಾಯಿ ಆಗಬೇಕಾಗುತ್ತದೆ. ಇದು ಹೀಗೇಕೆ ಎಂದು ತಿಳಿಯಬೇಕಾದರೆ 50 ರೂಪಾಯಿಗಳಿಗಿಂತ ಯಾವುದೇ ಹೆಚ್ಚಿನ ದರದಲ್ಲಿ, ಉದಾಹರಣೆ, ರೂಪಾಯಿ 60 ಆದಲ್ಲಿ, ಅಮೇರಿಕಾದಲ್ಲಿ ಪ್ರತೀ ಷರ್ಟ್‌ನ ಬೆಲೆ 480 ರೂಗಳಾಗುತ್ತದೆ, ಆದರೆ ಭಾರತದಲ್ಲಿ ಮಾತ್ರ 400 ರೂಗಳಾಗಿರುತ್ತದೆ. ಇಂತಹ ಪ್ರಸಂಗದಲ್ಲಿ, ಎಲ್ಲಾ ವಿದೇಶೀ ಗ್ರಾಹಕರು ಭಾರತದಿಂದ ಷರ್ಟುಗಳನ್ನು ಖರೀದಿಸುತ್ತಾರೆ.

ಅದೇ ರೀತಿಯಾಗಿ, ಪ್ರತೀ ಡಾಲರ್‌ಗೆ ರೂ 50 ಕ್ಕಿಂತ ಕೆಳಗಿನ ಯಾವುದೇ ವಿನಿಮಯ ದರವು ಎಲ್ಲಾ ಷರ್ಟಿನ ವ್ಯಾಪಾರವು ಅಮೇರಿಕದಲ್ಲಿ ನಡೆಯುವಂತೆ ಮಾಡುತ್ತದೆ. ಭಾರತದಲ್ಲಿ ಬೆಲೆಗಳು ಶೇಕಡ 20ರಷ್ಟು ಮತ್ತು ಅದೇ ಸಂದರ್ಭದಲ್ಲಿ ಅಮೇರಿಕದಲ್ಲಿ ಶೇಕಡ 50 ರಷ್ಟು ಏರಿಕೆಯಾಗುತ್ತವೆ ಎಂದುಕೊಳ್ಳೋಣ. ಆಗ ಭಾರತದಲ್ಲಿ ಪ್ರತೀ ಷರ್ಟಿನ ಬೆಲೆ 480 ರೂಪಾಯಿಗಳು ಮತ್ತು ಅಮೇರಿಕದಲ್ಲಿ ಪ್ರತೀ ಷರ್ಟಿನ ಬೆಲೆ ಡಾಲರ್ 12 ಆಗುತ್ತದೆ. ಆದರೆ ಈ ಎರಡೂ ಬೆಲೆಗಳು ಸಮವಾಗಿರಬೇಕಾದರೆ, 12 ಡಾಲರ್‌ಗಳು 480 ರೂಗಳಿಗೆ ಬೆಲೆಬಾಳಬೇಕಾಗುತ್ತದೆ, ಅಥವಾ 1 ಡಾಲರ್ 40 ರೂಪಾಯಿಗಳಲ್ಲಿ ಸಮವಾಗಬೇಕಾಗುತ್ತದೆ. ಆದ್ದರಿಂದ ಡಾಲರ್‌ನ ಮೌಲ್ಯ ಅಪಮೌಲ್ಯ ಹೊಂದುತ್ತದೆ.

ಕೊಳ್ಳುವ ಶಕ್ತಿಯ ಸಮಾನತೆಯ ಸಿದ್ಧಾಂತದ ಪ್ರಕಾರ, ದೇಶೀಯ ಅತಿಪ್ರಸರಣ ಮತ್ತು ವಿದೇಶಿ ಅತಿಪ್ರಸರಣಕ್ಕಿರುವ ವ್ಯತ್ಯಾಸಗಳು ವಿನಿಮಯ ದರಗಳಲ್ಲಿನ ಹೊಂದಾಣಿಕೆಗೆ ಪ್ರಮುಖ ಕಾರಣವಾಗಿರುತ್ತದೆ. ಒಂದು ದೇಶವು ಇನ್ನೊಂದು ದೇಶಕ್ಕಿಂತ ಹೆಚ್ಚು ಅತಿಪ್ರಸರಣವನ್ನು ಹೊಂದಿದ್ದರೆ, ಅದರ ವಿನಿಮಯ ದರವು ಕಡಿಮೆಯಾಗಬೇಕಾಗುತ್ತದೆ.

ಆದಾಗ್ಯೂ, ಅಮೇರಿಕಾದ ಬೆಲೆಗಳು ಭಾರತೀಯ ಬೆಲೆಗಿಂತ ವೇಗವಾಗಿ ಹೆಚ್ಚಾದರೆ ಮತ್ತು ಅದೇ ಸಂದರ್ಭದಲ್ಲಿ, ಭಾರತೀಯ ಶರ್ಟಗಳನ್ನು (ಆದರೆ ಅಮೇರಿಕಾದ್ದಲ್ಲ) ಆಚೆ ಇಡುವುದಕ್ಕೆ ಸುಂಕ ತಡೆ

ಒಡ್ಡಿದರೆ, ಆಗ ಡಾಲರ್ ಅಪಮೌಲ್ಯಗೊಳ್ಳುವುದಿಲ್ಲವೆಂಬುದನ್ನು ಗಮನಿಸಬೇಕಾಗುತ್ತದೆ. ಇದಲ್ಲದೆ ವ್ಯಾಪಾರ ಮಾಡಲಾಗದ ಅನೇಕ ಸರಕುಗಳಿವೆ. ಅಂತಹವುಗಳಿಗೆ, ಬೇಲೆ ಏರಿಕೆಯ ಬಿಸಿ ತಟ್ಟುವುದಿಲ್ಲ. ಜೊತೆಗೆ ವಿವಿಧ ದೇಶಗಳು ಉತ್ಪಾದಿಸಿ ಮಾರಾಟ ಮಾಡುವ ಕೆಲವು ಸರಕುಗಳು ಏಕರೂಪವಾಗಿರುತ್ತವೆ. ಹೆಚ್ಚಿನ ಅರ್ಥಶಾಸ್ತ್ರಜ್ಞರ ಅಭಿಪ್ರಾಯವೆಂದರೆ ವಿನಿಮಯದರ ನಿರ್ಧಾರದಲ್ಲಿ ಅಲ್ಪಾವಧಿಯಲ್ಲಿ ಸಾಪೇಕ್ಷ ಬೆಲೆಗಳಿಗಿಂತ, ಇತರ ಅಂಶಗಳು ಹೆಚ್ಚು ಪ್ರಮುಖವಾಗಿವೆ. ಆದರೆ, ದೀರ್ಘಾವಧಿಯಲ್ಲಿ ಕೊಳ್ಳುವ ಶಕ್ತಿಯ ಸಾಮಾರ್ಥ್ಯವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

### 6.2.3 ಸ್ಥಿರ ವಿನಿಮಯ ದರಗಳು *Fixed Exchange Rates*

1970ರ ಆರಂಭದಲ್ಲಿ ಬ್ರಿಟನ್‌ವುಡ್ಸ್ ಪದ್ಧತಿಯ ಒಪ್ಪಂದ ಮುರಿದು ಬೀಳುವವರೆಗೆ ದೇಶಗಳು ಹೊಂದಾಣಿಕೆ ವಿನಿಮಯ ದರವನ್ನು ಹೊಂದಿದ್ದವು. ಅದಕ್ಕಿಂತ ಹಿಂದೆ ಸ್ಥಿರ ಅಥವಾ **ನಿಗದಿತ ವಿನಿಮಯ ದರ** (*pegged exchange rate*) ಪದ್ದತಿ ಎಂದು ಕರೆಯಲಾಗುವ ಒಂದು ನಿರ್ದಿಷ್ಟಮಟ್ಟದಲ್ಲಿ ನಿಗದಿಯಾದ ವಿನಿಮಯದರ ಪದ್ಧತಿಯನ್ನು ಬಹುತೇಕ ದೇಶಗಳು ಹೊಂದಿದ್ದವು. ಕೆಲವು ಸಂದರ್ಭಗಳಲ್ಲಿ, ಸ್ಥಿರ ಮತ್ತು ನಿಗದಿತ ವಿನಿಮಯ ದರಗಳ ನಡುವೆ ಒಂದು ಭಿನ್ನತೆ ಉಂಟಾಗುತ್ತದೆ. ಹಿಂದಿನ ದರವು ಸ್ಥಿರವಾಗಿದ್ದು ನಂತರದ ದರವನ್ನು ಹಣಕಾಸಿನ ಪ್ರಾಧಿಕಾರವು ನಿರ್ವಹಿಸುತ್ತಿರುವಾಗ, ವಿನಿಮಯದರವು ನಿಗದಿತವಾಗಿರುವ (ಸರಿಸಮಾನ ಮೌಲ್ಯ) ಅದರಲ್ಲಿನ ಮೌಲ್ಯವು ಒಂದು ಬದಲಾಯಿಸ–ಬಹುದಾದ ನೀತಿಯಾಗಿದೆ–ಇದು ಬದಲಾಗಲೂಬಹುದು ಎಂಬುದನ್ನು ವಾದಿಸಲಾಗಿದೆ. ಎರಡೂ ಪದ್ಧತಿಗಳ ನಡುವೆ ಒಂದು ಸಾಮಾನ್ಯ ಅಂಶವಿದೆ. ಚಿನ್ನದ ಪ್ರಮಿತಿಯಂತಹ ಸ್ಥಿರ ವಿನಿಮಯದರ ಪದ್ಧತಿಯಲ್ಲಿ *BOP*ಯಲ್ಲಿನ ಮಿಗುತೆ ಅಥವಾ ಕೊರತೆಗಳಿಗೆ ಹೊಂದಾಣಿಕೆಗಳು ಆರ್ಥಿಕ ಪದ್ಧತಿಯ ಕಾರ್ಯಚರಣೆಯಿಂದ ಸ್ವಯಂಚಾಲಿತವಾಗಿ (ಹ್ಯೂಮರ್‌ರವರು ವಿವರಿಸಿರುವ ಕಾರ್ಯ ಯಂತ್ರದ ಮೂಲಕ) ಬರಬೇಕಾಗುತ್ತದೆ ಅಥವಾ ಸರ್ಕಾರದಿಂದಾಗಲೀ ತರಬೇಕಾಗುತ್ತದೆ ವಿನಿಮಯ ದರವು ಎಲ್ಲಿಯವರೆಗೆ ಬದಲಾಗುವುದಿಲ್ಲವೋ ಮತ್ತು ಬದಲಾಗುವ ನಿರೀಕ್ಷೆಯಿರುವುದಿಲ್ಲವೋ ಅಲ್ಲಿಯವರೆಗೆ ನಿಗದಿತ ವಿನಿಮಯ ದರ ಪದ್ಧತಿಯು ಅದೇ ಲಕ್ಷಣವನ್ನು ಹೊರಸೂಸಬಹುದು. ಆದಾಗ್ಯೂ, ಇನ್ನೊಂದು ಆಯ್ಕೆಯು ಸರಕಾರದ ಮುಂದಿರುತ್ತದೆ–ಅದು ವಿನಿಮಯ ದರವನ್ನು ಬದಲಾಯಿಸಬಹುದು. ಒಂದು ನಿಗದಿತ ವಿನಿಮಯದರ ವ್ಯವಸ್ಥೆಯಲ್ಲಿ ಸಾಮಾಜಿಕ ಕ್ರಿಯೆಯಿಂದ ವಿನಿಮಯದರವು ಹೆಚ್ಚಾದಾಗ, ಅಪಮೌಲ್ಯೀಕರಣವು ಸಂಭವಿಸುತ್ತದೆ (ಅಪಮೌಲ್ಯೀಕರಣಕ್ಕೆ ವಿರುದ್ಧವಾಗಿರುವುದು ಪುನರ್ ಮೌಲ್ಯೀಕರಣ)ಅಥವಾ ಸರಕಾರವು ವಿನಿಮಯ ದರವನ್ನು ಬದಲಾಯಿಸದೆ ಹಾಗೇಯೆ ಇರಗೊಡಬಹುದು ಮತ್ತು ಹಣಕಾಸು ಹಾಗೂ ಕೋಶೀಯ ನೀತಿಗಳ ಬಳಕೆಯಿಂದ *BOP* ಸಮಸ್ಯೆಯನ್ನು ನಿರ್ವಹಿಸಬಹುದು. ಬಹುತೇಕ ಸರಕಾರಗಳು ವಿನಿಮಯದರದಲ್ಲಿ ಬದಲಾವಣೆ ಮಾಡುವುದು ಅತ್ಯಂತ ವಿರಳ. ನಮ್ಮ ವಿಶ್ಲೇಷಣೆಯಲ್ಲಿ ಸ್ಥಿರ ಮತ್ತು ನಿಗದಿತ ವಿನಿಮೆಯದರಗಳೆಂಬ ಪದಗಳನ್ನು ಅದಲು ಬದಲಾಗಿ, ಒಂದು ವಿನಿಮಯದರ ಆಳ್ವಿಕೆಯನ್ನು ಸೂಚಿಸಲು ಬಳಸುತ್ತೇವೆ. ಇಲ್ಲಿ ವಿನಿಮಯ ದರಗಳನ್ನು ಸರ್ಕಾರದ ತೀರ್ಮಾನಗಳಿಂದ ನಿಗದಿಪಡಿಸಲಾಗುತ್ತದೆ ಮತ್ತು ಸರ್ಕಾರದ ಕಾರ್ಯಗಳಿಂದ ನಿರ್ವಹಿಸಿಕೊಂಡು ಬರಲಾಗುತ್ತದೆ (ಸುಸ್ಥಿತಿಯಲ್ಲಿಡಲಾಗುತ್ತದೆ).



**ರೇಖಾಚಿತ್ರ 6.3** ಸ್ಥಿರ ವಿನಿಮಯ ದರದ ಜೊತೆಗೆ ವಿದೇಶೀ ವಿನಿಮಯ ಮಾರುಕಟ್ಟೆ

ಒಂದು ದೇಶವು, ಅದರ ವಿನಿಮಯದರದ ಮಟ್ಟವನ್ನು ನಿಗದಿಪಡಿಸುವ ಅಥವಾ ಸ್ಥಿರಗೊಳಿಸುವ ರೀತಿಯನ್ನು ನಾವೀಗ ಪರೀಶೀಲಿಸೋಣ. ಭಾರತೀಯ ರಿಜರ್ವ್ ಬ್ಯಾಂಕು (*RBI*) ಪ್ರತೀ ಡಾಲರ್‌ಗೆ 45ರೂಪಾಯಿಗಳ ಒಂದು ನಿಖರವಾದ ಸಮಾನ ಮೌಲ್ಯವನ್ನು ಸ್ಥಿರಗೊಳಿಸಲು ಇಚ್ಚಿಸುತ್ತದೆಂದು (ಚಿತ್ರ 6.3ರಲ್ಲಿನ $e_1$) ನಾವು ಊಹಿಸಿಕೊಳ್ಳೋಣ. ಈ ಅಧಿಕೃತ ವಿನಿಮಯ ದರವು ತೇಲುವ ವಿನಿಮಯ

ದರದಲ್ಲಿನ ಸಮತೋಲನ ವಿನಿಮಯ ದರದ ಕೆಳಗೆ (ಇಲ್ಲಿ $e^*$ = ರೂಪಾಯಿ 50) ಇರುತ್ತದೆ ಎಂದು ಕಲ್ಪಿಸಿಕೊಳ್ಳುವುದರಿಂದ ರೂಪಾಯಿಯ ಮೌಲ್ಯ ಅಧಿಕವಾಗುತ್ತದೆ ಮತ್ತು ಡಾಲರ್ ಮೌಲ್ಯ ಕುಸಿಯುತ್ತದೆ. ಇದರರ್ಥವೆಂದರೆ, ವಿನಿಮಯ ದರವು ಮಾರುಕಟ್ಟೆ ನಿರ್ಧರಿತವಾದರೆ ಮಾರುಕಟ್ಟೆಯನ್ನು ಸರಿದೂಗಿಸಲು ರೂಪಾಯಿಗಳಲ್ಲಿ ಡಾಲರ್‌ಗಳ ಬೆಲೆಯು ಹೆಚ್ಚಾಗಬೇಕಾಗುತ್ತದೆ. ಒಂದು ಡಾಲರ್‌ಗೆ 45 ರೂಪಾಯಿಗಳಿದ್ದಾಗ, ಡಾಲರ್‌ನ ರೂಪಾಯಿಯ ವೆಚ್ಚವು, ಒಂದು ಡಾಲರ್‌ಗೆ 50 ರೂಪಾಯಿಗಳಿದ್ದಾಗ ಇರುವುದಕ್ಕಿಂತ ಅಧಿಕ ವೆಚ್ಚವೆನಿಸುತ್ತದೆ (ಡಾಲರ್ – ರೂಪಾಯಿ ದರದಲ್ಲಿ ಯೋಚಿಸಿದರೆ ಈಗ ಪ್ರತೀ ರೂಪಾಯಿಯ ವೆಚ್ಚವು 2 ಸೆಂಟ್‌ಗಳಿಗೆ ಬದಲಾಗಿ 2.22 ಸೆಂಟ್‌ಗಳಾಗುತ್ತದೆ). ಈ ದರದಲ್ಲಿ ಡಾಲರ್‌ನ ಬೇಡಿಕೆಯು ಅದರ ಪೂರೈಕೆಗಿಂತ ಅಧಿಕವಾಗಿರುತ್ತದೆ. *BOP* ಲೆಕ್ಕಗಳಿಂದ (ಕೇವಲ ಸ್ವಾಯುತ್ತ ವ್ಯವಹಾರಗಳ ಮಾಪನ ಮಾಡಿದಾಗ) ಬೇಡಿಕೆ ಮತ್ತು ಪೂರೈಕೆ ಅನುಸೂಚಿಗಳು ರಚಿತವಾಗಿರುವುದರಿಂದ, ಈ ಅಧಿಕ ಬೇಡಿಕೆಯು *BOP*ಯಲ್ಲಿನ ಕೊರತೆಯನ್ನು ಸೂಚಿಸುತ್ತದೆ. ಈ ಕೊರತೆಯನ್ನು ಕೇಂದ್ರ ಬ್ಯಾಂಕ್ ಮಧ್ಯ ಪ್ರವೇಶಿಸಿ ಸರಿದೂಗಿಸುತ್ತದೆ. ಈ ಸಂದರ್ಭಲ್ಲಿ, ಅಧಿಕ ಬೇಡಿಕೆ *AB* ಯನ್ನು ಪೂರೈಸಲು *RBI* ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿಗಳಿಗಾಗಿ ಡಾಲರ್‌ಗಳನ್ನು ಮಾರಾಟ ಮಾಡಬೇಕಾಗುತ್ತದೆ ಹೀಗೆ, ಅದು ವಿನಿಮಯ ದರದ ಮೇಲಾಗುವ ಮೇಲ್ಮುಖ ಒತ್ತಡವನ್ನು ತಟಸ್ಥಗೊಳಿಸುತ್ತದೆ. ವಿನಿಮಯದರದ ಏರಿಕೆ (ಏಕೆಂದರೆ ಯಾರೊಬ್ಬರೂ ಅಧಿಕ ಬೆಲೆಯಲ್ಲಿ ಖರೀದಿಸುವುದಿಲ್ಲ) ಅಥವಾ ಇಳಿಕೆಯನ್ನು (ಏಕೆಂದರೆ ಯಾರೊಬ್ಬರೂ ಕಡಿಮೆ ಬೆಲೆಗೆ ಮಾರುವುದಿಲ್ಲ) ತಡೆಗಟ್ಟಲು *RBI* ಡಾಲರ್‌ಗಳನ್ನು ಕೊಳ್ಳಲು ಮತ್ತು ಮಾರಾಟ ಮಾಡಲು ಸಿದ್ಧವಾಗಿರುತ್ತದೆ.





*BOP*ಯಲ್ಲಿನ ಕೊರತೆಯ ಭಾಗವನ್ನು ತುಂಬಲು – ಈಗ *RBI* ವಿನಿಮಯದರವನ್ನು ಅಧಿಕ ಮಟ್ಟದಲ್ಲಿ ಪ್ರತಿ ಡಾಲರ್‌ಗೆ ರೂಪಾಯಿ 47ಕ್ಕೆ ನಿಗದಿಪಡಿಸಲು ನಿರ್ಧರಿಸಬಹುದು. ದೇಶೀಯ ಕರೆನ್ಸಿಯ ಈ ಅಪಮೌಲ್ಯೀಕರಣವು ಆಮದುಗಳನ್ನು ದುಬಾರಿಯಾಗಿಯೂ ಮತ್ತು ನಮ್ಮ ರಫ್ತುಗಳನ್ನು ಅಗ್ಗವಾಗಿಯೂ ಮಾಡುತ್ತದೆ. ಇದರಿಂದ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡುತ್ತದೆ. ಕೊರತೆಗಳಿಗೆ ಹಣಕಾಸನ್ನು ತುಂಬಲು ಮತ್ತು ವಿನಿಮಯದರವನ್ನು ಸ್ಥಿರವಾಗಿರಿಸಲು ಕೇಂದ್ರ ಬ್ಯಾಂಕು, ಪದೇ ಪದೇ ಮಧ್ಯಪ್ರವೇಶ ಮಾಡುವುದರಿಂದ ಅಂತಿಮವಾಗಿ, ಅಧಿಕೃತ ಮೀಸಲುಗಳು ಖಾಲಿಯಾಗುತ್ತದೆ ಎಂಬುದನ್ನು ಪ್ರಮುಖವಾಗಿ ಗಮನಿಸಬೇಕಾದ ಅಂಶವಾಗಿದೆ. ಇದು ಸ್ಥಿರ ವಿನಿಮಯ ಪದ್ದತಿಯ ಒಂದು ಪ್ರಮುಖ ನ್ಯೂನತೆಯಾಗಿದೆ. ಒಮ್ಮೆ ಸಟ್ಟಾ ವ್ಯಾಪಾರಿಗಳು ವಿನಿಮಯ ದರವು ದೀರ್ಘ ಕಾಲದವರೆಗೆ ಸ್ಥಿರವಾಗಿರಲು ಸಾಧ್ಯವಿಲ್ಲ ಎಂದು ನಂಬಿದರೆ, ಅವರು ಅತ್ಯಧಿಕ ಪ್ರಮಾಣದಲ್ಲಿ ವಿದೇಶಿ ವಿನಿಮಯ (ಡಾಲರ್‌ಗಳು)ವನ್ನು ಕೊಳ್ಳುವರು. ಡಾಲರ್‌ಗಳ ಬೇಡಿಕೆಯ ತೀವ್ರ ಹೆಚ್ಚಳವು *BOP*ಯ ಕೊರತೆಗೆ ಕಾರಣವಾಗುತ್ತದೆ. ಸಾಕಷ್ಟು ಮೀಸಲುಗಳು ಇಲ್ಲದೆ, ಕೇಂದ್ರಬ್ಯಾಂಕು, ವಿನಿಮಯದರವು ಸಮತೋಲನ ಹಂತವನ್ನು ತಲುಪಲು ಅವಕಾಶ ಮಾಡಿಕೊಡಬೇಕಾಗುತ್ತದೆ. ಇದು ದೇಶೀಯ ಕರೆನ್ಸಿಯ ಮೇಲೆ ಸಟ್ಟಾ ವ್ಯಾಪಾರದ ಆಕ್ರಮಣ ಪ್ರಾರಂಭವಾಗುವುದಕ್ಕಿಂತ ಪೂರ್ವದಲ್ಲಿ, ಅಗತ್ಯವಿದ್ದುದಕ್ಕಿಂತ ದೊಡ್ಡ ಪ್ರಮಾಣದ ಅಪೌಲ್ಯಕ್ಕೆ ಕಾರಣವಾಗಬಹುದು.

ಇದರಿಂದಾಗಿ ಹಲವು ದೇಶಗಳು ಸ್ಥಿರ ವಿನಿಮಯದರ ಪದ್ಧತಿಯನ್ನು ತಿರಸ್ಕರಿಸುವುದನ್ನು ಅಂತರರಾಷ್ಟ್ರೀಯ ಅನುಭವದಿಂದ ಕಾಣಬಹುದು. ಇಂತಹ ದಾಳಿಯ ಭಯವು ಅಮೇರಿಕವು ತನ್ನ ಕರೆನ್ಸಿಯನ್ನು 1971ರಲ್ಲಿ ತೇಲಲು ಬಿಡುವಂತೆ ಪ್ರೇರೇಪಿಸಿತು. ಇದು ಬ್ರಿಟನ್ ವುಡ್ಸ್ ಪದ್ಧತಿಯನ್ನು ತ್ವರಿತವಾಗಿ ಕೈಬಿಡಲು ಕಾರಣವಾಗಿರುವ ಪ್ರಮುಖ ಘಟನೆಗಳಲ್ಲಿ ಒಂದಾಗಿದೆ.

### 6.2.4 ನಿರ್ವಹಣಾ ಹೊಂದಾಣಿಕೆ *Managed Floating*

ಯಾವುದೇ ಔಪಚಾರಿಕ ಅಂತರರಾಷ್ಟ್ರೀಯ ಒಪ್ಪಂದವಿಲ್ಲದೇ, ವಿಶ್ವವು ತೇಲುವ (ಹೊಂದಾಣಿಕೆ) ವಿನಿಮಯ ದರದ ಕಡೆಗೆ ವಾಲುತ್ತಿದೆ. ಇದು ಬದಲಾಗುವ (ತೇಲುವ ಭಾಗ) ವಿನಿಮಯ ದರ ಪದ್ಧತಿ ಮತ್ತು ಸ್ಥಿರ ವಿನಿಮಯ ದರ ಪದ್ದತಿ (ನಿರ್ವಹಣಾ ಭಾಗ)ಯ ಮಿಶ್ರಣವಾಗಿದೆ. *Dirty floating* ಎಂದು ಕೂಡ ಕರೆಯಲಾಗುವ ಈ ಪದ್ಧತಿಯಲ್ಲಿ, ತಮಗೆ ಉಚಿತವೆನಿಸಿದಾಗಲೆಲ್ಲ ಕೇಂದ್ರೀಯ ಬ್ಯಾಂಕುಗಳು ವಿನಿಮಯದರಗಳ ಚಲನೆಯನ್ನು ಮಿತಗೊಳಿಸಲು ವಿದೇಶಿ ವಿನಿಮಯಗಳನ್ನು ಕೊಳ್ಳಲು ಮತ್ತು ಮಾರಲು ಮಧ್ಯಪ್ರವೇಶಿಸುತ್ತವೆ. ಆದ್ದರಿಂದ ಅಧಿಕೃತ ವ್ಯವಹಾರಗಳು ಶೂನ್ಯಕ್ಕೆ ಸಮವಾಗುವುದಿಲ್ಲ.

**ಪೆಟ್ಟಿಗೆ 6.1 ವಿನಿಮಯ ದರ ನಿರ್ವಹಣೆ : ಅಂತರರಾಷ್ಟ್ರೀಯ ಅನುಭವ**

**ಚಿನ್ನದ ಪ್ರಮಿತಿ (ಸುವರ್ಣ ಪ):** ಸುಮಾರು 1870 ರಿಂದ 1914 ರಲ್ಲಿ ಪ್ರಥಮ ಜಾಗತಿಕ ಯುದ್ಧ ಸ್ಫೋಟಗೊಳ್ಳುವವರೆಗೆ, ಸ್ಥಿರ ವಿನಿಮಯ ದರ ಪದ್ದತಿಯ ಸಾರವಾದಂತ ಚಿನ್ನದ ಪ್ರಮಿತಿಯು ಅಸ್ಥಿತ್ವದಲ್ಲಿತ್ತು. ಎಲ್ಲಾ ಕರೆನ್ಸಿಗಳನ್ನು ಚಿನ್ನದ ರೂಪದಲ್ಲಿ ವ್ಯಾಖ್ಯಾನಿಸಲಾಗುತ್ತಿತ್ತು; ವಾಸ್ತವವಾಗಿ ಕೆಲವು ಕರೆನ್ಸಿಗಳು ಚಿನ್ನದಿಂದಲೇ ರಚಿತವಾಗಿದ್ದವು. ಇದರರ್ಥವೆಂದರೆ, ದೇಶವಾಸಿಗಳು, ಅವರ ಮುಂದೆ ವಿಲೇವಾರಿಗಾಗಿ ದೇಶೀಯ ಕರೆನ್ಸಿಗಳನ್ನು ಹೊಂದಿದ್ದರು; ಈ ದೇಶೀಯ ಕರೆನ್ಸಿಗಳನ್ನು ಒಂದು ಸ್ಥಿರ (ನಿರ್ದಿಷ್ಟ) ಬೆಲೆಯಲ್ಲಿ, ಅಂತರರಾಷ್ಟ್ರೀಯ ಪಾವತಿಗಳಲ್ಲಿ ಒಪ್ಪಿಕೊಳ್ಳುವಂತಹ ಇನ್ನೊಂದು ಸ್ವತ್ತಾಗಿ (ಚಿನ್ನವಾಗಿ) ಮುಕ್ತವಾಗಿ ಪರಿವರ್ತಿಸಬಹುದಾಗಿತ್ತು. ಒಂದು ಸ್ಥಿರ ಬೆಲೆಯಲ್ಲಿ ಪ್ರತೀ ಕರೆನ್ಸಿಯನ್ನು ಇತರೆ ಎಲ್ಲಾ ಕರೆನ್ಸಿಗಳಿಗೆ ಪರಿವರ್ತಿಸಬಹುದಾದ ಸಾಧ್ಯತೆ ಕೂಡ ಇತ್ತು. ವಿನಿಮಯ ದರಗಳನ್ನು. ಚಿನ್ನದ ರೂಪದ ಅದರ ಮೌಲ್ಯದಿಂದ ನಿರ್ಧಸಲಾಗುತ್ತಿತ್ತು (ಯಾವ ಕರೆನ್ಸಿಯನ್ನು ಚಿನ್ನದಿಂದ ತಯಾರಿಸಲಾಗಿರುತ್ತದೋ ಅದರ ನಿಜವಾದ ಚಿನ್ನದ ಅಂಶವನ್ನು ಪರಿಗಣಿಸಲಾಗುತ್ತಿತ್ತು). ಉದಾಹರಣೆಗೆ, ಒಂದು ಘಟಕದಷ್ಟು '*A*' ಕರೆನ್ಸಿಯು 1ಗ್ರಾಂ ಚಿನ್ನದ ಮೌಲ್ಯವನ್ನು ಹೊಂದಿದೆ ಎಂದರೆ, '*B*' ಕರೆನ್ಸಿಯು 2 ಗ್ರಾಂ ಚಿನ್ನದ ಮೌಲ್ಯವನ್ನು ಹೊಂದಿದೆ ಎಂದರೆ, '*B*' ಕರೆನ್ಸಿಯು '*A*' ಕರೆನ್ಸಿಗಿಂತ ಎರಡು ಪಟ್ಟು ಬೆಲೆ ಬಾಳುತ್ತಿತ್ತು. ಮೊದಲು ಚಿನ್ನವನ್ನು ಖರೀದಿಸಿ ಮತ್ತು ನಂತರ ಮಾರುವುದನ್ನು ಮಾಡದೇ ಆರ್ಥಿಕ ಪ್ರತಿನಿಧಿಗಳು ಒಂದು ಘಟಕದಷ್ಟು '*B*' ಕರೆನ್ಸಿಗೆ ಎರಡು ಘಟಕದಷ್ಟು '*A*' ಕರೆನ್ಸಿಯನ್ನು ನೇರವಾಗಿ ಪರಿವರ್ತಿಸುತ್ತಿದ್ದರು. ದರಗಳು ಗರಿಷ್ಟ ಮತ್ತು ಕನಿಷ್ಟ ಮಿತಿಗಳ ನಡುವೆ ಏರುಪೇರಾಗುತ್ತಿದ್ದವು. ಈ ಮಿತಿಗಳು ಎರಡು ಕರೆನ್ಸಿಗಳ ನಡುವಿನ ಕರಗಿಸುವಿಕೆ, ಸಾರಿಗೆ ಮತ್ತು ಪುನರ್ ಟಂಕಿಸುವ ವೆಚ್ಚದಿಂದ ನಿಗದಿಪಡಿಸಲಾಗುತ್ತಿತ್ತು. ಅಧಿಕೃತ ಸಮಾನತೆಯನ್ನು ನಿರ್ವಹಿಸಲು ಪ್ರತೀ ದೇಶವು ಸಾಕಷ್ಟು ಚಿನ್ನದ ದಾಸ್ತಾನಿನ ಮೀಸಲನ್ನು ಹೊಂದುವ ಅಗತ್ಯತೆಯಿತ್ತು. ಚಿನ್ನದ ಪ್ರಮಿತಿಯಲ್ಲಿ ಎಲ್ಲಾ ದೇಶಗಳು ಸ್ಥಿರ ವಿನಿಮಯ ದರಗಳನ್ನು ಹೊಂದಿದ್ದವು.

ಒಂದು ದೇಶ ವಿಪರೀತ ಆಮದು ಮಾಡಿಕೊಂಡರೆ (ಮತ್ತು ಸಂದಾಯ ಬಾಕಿಯ ಕೊರತೆಯನ್ನು ಹೊಂದಿದ್ದರೆ) ಅದು ತನ್ನ ಎಲ್ಲಾ ಚಿನ್ನದ ದಾಸ್ತಾನನ್ನು ಕಳೆದುಕೊಳ್ಳುವುದೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ವಾಣಿಜ್ಯ ಪಂಥದವರ ವಿವರಣೆ ಎಂದರೆ – ರಫ್ತುಗಳ ಮೇಲಿನ ಸುಂಕಗಳು ಅಥವಾ ಕೋಟಾಗಳು ಅಥವಾ ಸಹಾಯ ಧನಗಳ ಮೂಲಕ ಸರ್ಕಾರ ಮಧ್ಯ ಪ್ರವೇಶಿಸದಿದ್ದರೆ, ಒಂದು ದೇಶ ತನ್ನ ಚಿನ್ನವನ್ನು ಕಳೆದುಕೊಳ್ಳುತ್ತಿತ್ತು ಮತ್ತು ಇದನ್ನು ಅತ್ಯಂತ ದಾರುಣ ಸ್ಥಿತಿಗಳಲ್ಲಿ ಒಂದು ಎಂದು ಪರಿಗಣಿಸಲಾಗಿತ್ತು. 1752 ರಲ್ಲಿ ಹೆಸರಾಂತ ತತ್ವಜ್ಞಾನಿಯಾದ ಡೇವಿಡ್ ಹ್ಯೂಮ್ ತನ್ನ ಬರಹದಲ್ಲಿ, ಒಂದು ವೇಳೆ ಚಿನ್ನದ ದಾಸ್ತಾನು ಕಡಿಮೆಯಾದರೆ ಅದಕ್ಕೆ ಅನುರೂಪವಾಗಿ ಎಲ್ಲಾ ಬೆಲೆಗಳು ಮತ್ತು ವೆಚ್ಚಗಳು ಕಡಿಮೆಯಾಗಿ ದೇಶದಲ್ಲಿನ ಯಾರೊಬ್ಬರೂ ದಾರುಣ ಸ್ಥಿತಿಯನ್ನು ತಲುಪಬೇಕಾಗುವುದಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ಇದರೊಂದಿಗೆ, ದೇಶದಲ್ಲಿನ ಅಗ್ಗದ ಬೆಲೆಗಳೊಂದಿಗೆ, ಆಮದುಗಳು ಕಡಿಮೆಯಾಗುತ್ತವೆ ಮತ್ತು ರಫ್ತುಗಳು ಹೆಚ್ಚಾಗುತ್ತವೆ (ಇದು ಪೈಪೋಟಿಯನ್ನು ನಿರ್ಧರಿಸುವಂತಹ ನೈಜ ವಿನಿಮಯ ದರವಾಗಿದೆ). ಯಾವ ದೇಶದಿಂದ ನಾವು ಆಮದು ಮಾಡಿಕೊಂಡು ಮತ್ತು ಚಿನ್ನದಲ್ಲಿ ಪಾವತಿಸುತ್ತಿದ್ದೇವೆಯೋ ಆ ದೇಶವು ಬೆಲೆಗಳು ಮತ್ತು ವೆಚ್ಚಗಳಲ್ಲಿ ಹೆಚ್ಚಳವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಅವರ ದುಬಾರಿ ರಫ್ತುಗಳು ಕಡಿಮೆಯಾಗುತ್ತವೆ ಮತ್ತು ಅವರು ಮೊದಲ ದೇಶದಿಂದ ಮಾಡಿಕೊಳ್ಳುವ ಆಮದುಗಳು ಆಗ ಅಗ್ಗವಾಗುತ್ತವೆ ಮತ್ತು ಅವುಗಳ ಆಮದುಗಳು ಹೇಚ್ಚಾಗುತ್ತವೆ. ಸಾಮಾನ್ಯವಾಗಿ ಈ ಬೆಲೆ–ನಾಣ್ಯ–ಹರಿವು ಕಾರ್ಯಯಂತ್ರದ ಪರಿಣಾಮವೆಂದರೆ, ಮತ್ತಷ್ಟು ನಿವ್ವಳ ಚಿನ್ನದ ಹರಿವಿಲ್ಲದಂತೆ, ಆಮದು ಮತ್ತು ರಫ್ತುಗಳನ್ನು ಸರಿದೂಗಿಸುವ ಸಾಪೇಕ್ಷ ಬೆಲೆಗಳಲ್ಲಿ ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಸಮತೋಲನ ವ್ಯಾಪಾರವನ್ನು ಮರುಸ್ಥಾಪಿಸುವವರೆಗೂ ಚಿನ್ನವನ್ನು ಕಳೆದುಕೊಳ್ಳುತ್ತಿರುವ ದೇಶದ *BOP*ಯನ್ನು ಸುಧಾರಿಸುತ್ತದೆ ಮತ್ತು ಅನುಕೂಲಕರ ಸಂದಾಯ ಬಾಕಿಯನ್ನು ಹೊಂದಿರುವ ದೇಶದ *BOP*ಯನ್ನು ಪ್ರತೀಕೂಲಗೊಳಿಸುತ್ತದೆ.

ಸಮತೋಲನವು ಸ್ಥಿರ ಮತ್ತು ಸ್ವಯಂಚಾಲಿತವಾಗಿ ಸರಿಹೊಂದುವುದರಿಂದ ಸಂಕುಗಳ ಮತ್ತು ಸರಕಾರದ ಹಸ್ತಕ್ಷೇಪದ ಅಗತ್ಯವಿರುವುದಿಲ್ಲ. ಆ ರೀತಿಯಲ್ಲಿ ಸ್ಥಿರ ವಿನಿಮಯ ದರಗಳು ಒಂದು ಸ್ವಯಂಚಾಲಿತ ಸಮತೋಲನ ಯಾಂತ್ರೀಕತೆಯಿಂದ ನಿರ್ವಹಿಸಲಾಗುತ್ತಿತ್ತು.

ನಿಗದಿತ ಕಾಲಾವಧಿಯಲ್ಲಿ ಹಲವು ಬಿಕ್ಕಟ್ಟುಗಳು ಚಿನ್ನದ ಪ್ರಮಿತಿಯು ಮುರಿದು ಬೀಳಲು ಕಾರಣವಾದವು. ಮೇಲಾಗಿ ಜಾಗತಿಕ ಬೆಲೆ ಮಟ್ಟಗಳು ಚಿನ್ನದ ಶೋಧನೆಯ ಮಟದಲ್ಲಿದ್ದವು. ಹಣದ ಕಚ್ಚಾ ಪರಿಮಾಣ ಸಿದ್ಧಾಂತದ ಮೂಲಕ ಇದನ್ನು ವಿವರಿಸಬಹುದು. $M = KPY$, ಇದರ ಪ್ರಕಾರ ಪ್ರತೀ ವರ್ಷ ಉತ್ಪನ್ನವು *(GNP)* ಶೇ. 4ರ ದರದಲ್ಲಿ ಹೆಚ್ಚಾದರೆ, ಬೆಲೆಗಳನ್ನು ಸ್ಥಿರವಾಗಿಡಲು ಚಿನ್ನದ ಪೂರೈಕೆಯನ್ನು ವಾರ್ಷಿವಾಗಿ ಶೇ. 4 ರಷ್ಟು ಹೆಚ್ಚಿಸಬೇಕಾಗುತ್ತಿತ್ತು. ಇಷ್ಟು ಪ್ರಮಾಣದ ಚಿನ್ನವನ್ನೂ ಗಣಿಗಳು ಉತ್ಪಾದಿಸದೇ ಇರುವದರ ಜೊತೆಗೆ ಹತ್ತೊಂಬತ್ತನೇ ಶತಮಾನದ ಕೊನೆಯ ವೇಳೆಗೆ ವಿಶ್ವದ್ಯಾಂತ ಬೆಲೆಯ ಮಟ್ಟದಲ್ಲಿ ಆದ ಪತನವು, ಸಾಮಾಜಿಕ ಅಶಾಂತಿಗೆ ಕಾರಣವಾಯಿತು. ಒಂದು ಅವಧಿಗೆ ಚಿನ್ನಕ್ಕೆ ಪೂರಕವಾಗಿ ಬೆಳ್ಳಿಯನ್ನು ಬಳಸಿ 'ದ್ವಿಲೋಹ ಪದ್ಧತಿಯನ್ನು ಪರಿಚಯಿಸಲಾಗಿತ್ತು. ಭಾಗಶಃ ಮೀಸಲು ಬ್ಯಾಂಕಿಂಗ್ ಕೂಡಾ ಚಿನ್ನದ ಮಿತವ್ಯಯಕ್ಕೆ ಸಹಾಯ ಮಾಡಿತು. ಕಾಗದದ ಹಣವು ಸಂಪೂರ್ಣವಾಗಿ ಚಿನ್ನದಿಂದ ಬೆಂಬಲಿತವಾಗಿರಲಿಲ್ಲ. ವಿಶೇಷವಾಗಿ ದೇಶಗಳು ತಮ್ಮ ಕಾಗದದ ಹಣಕ್ಕೆ ಪ್ರತಿಯಾಗಿ ನಾಲ್ಕನೇ ಒಂದು ಭಾಗದ ಚಿನ್ನವನ್ನು ಇಟ್ಟುಕೊಳ್ಳುತ್ತಿದ್ದವು. ಚಿನ್ನದ ಮಿತವ್ಯಯವನ್ನು ಸಾಧಿಸುವ ಇನ್ನೊಂದು ರೀತಿಯೆಂದರೆ, ಚಿನ್ನದ ವಿನಿಮಯ ಪ್ರಮಿತಿ. ಇದನ್ನು ಅನೇಕ ದೇಶಗಳು ಅನುಸರಿಸಿದವು ಮತ್ತು ತಮ್ಮ ಹಣವನ್ನು ಸ್ಥಿರ ಬೆಲೆಗಳಲ್ಲಿ ಚಿನ್ನಕ್ಕೆ ವಿನಿಮಯ ಮಾಡಿಕೊಳ್ಳುವಂತೆ ಮಾಡಿದ್ದವು. ಆದರೆ ಅವು ತಮ್ಮ ಬಳಿ ಚಿನ್ನವನ್ನು ಹೊಂದಿರುತ್ತಿರಲಿಲ್ಲ. ಚಿನ್ನಕ್ಕೆ ಬದಲಾಗಿ ಆ ರಾಷ್ಟ್ರಗಳು ಚಿನ್ನದ ಪ್ರಮಿತಿಯ ಮೇಲೆ ಇದ್ದ ಕೆಲವು ದೊಡ್ಡ ದೇಶಗಳ (ಅಮೇರಿಕಾ ಸಂಯುಕ್ತ ಸಂಸ್ಥಾನ ಅಥವಾ ಯುನೈಟೆಡ್ ಕಿಂಗ್‌ಡು) ಕರೆನ್ಸಿಯನ್ನು ಹೊಂದಿದ್ದವು. ಈ ಎಲ್ಲವುಗಳು ಮತ್ತು ದಕ್ಷಿಣ ಆಫ್ರಿಕಾ ಮತ್ತು ಕ್ಲೋಂಡಿಕೆಯಲ್ಲಿನ ಚಿನ್ನದ ಶೋಧನೆಯು 1929 ರವರೆಗೆ ಕೊಲ್ಲಿಯಲ್ಲಿ ಅನಪ್ರಸರಣವನ್ನು ಹೊರಗಿಡಲು ಸಹಾಯ ಮಾಡಿತು. ಈ ದ್ರವ್ಯತೆಯ ಕೊರತೆಯು ಮಹಾ ಆರ್ಥಿಕ ಮುಗ್ಗಟ್ಟಿಗೆ ಕಾರಣವಾಯಿತೆಂದು ಕೆಲವು ಆರ್ಥಿಕ ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. 1914–45ರ ಅವಧಿಯಲ್ಲಿ ಒಂದು ನಿರ್ವಹಿಸಲಾದ ಸಾರ್ವತ್ರಿಕ ವ್ಯವಸ್ಥೆಯಿರಲಿಲ್ಲ. ಆದರೆ ಈ ಕಾಲವಧಿಯು ಸಂಕ್ಷಿಪ್ತವಾಗಿ ಚಿನ್ನದ ಪ್ರಮಿತಿಗೆ ಮತ್ತು ನಮ್ಯ ವಿನಿಮಯದರಕ್ಕೆ ಹಿಂತಿರುಗಿದ್ದನ್ನು ಕಂಡಿತು.

**ಬ್ರಿಟನ್ ವುಡ್ಸ್ ಪದ್ಧತಿ :** 1944ರಲ್ಲಿ ನಡೆದ ಬ್ರಿಟನ್ ವುಡ್ಸ್ ಸಮ್ಮೇಳನವು, ಅಂತರರಾಷ್ಟ್ರೀಯ ಹಣಕಾಸು ನಿಧಿ *IMF* ಮತ್ತು ವಿಶ್ವ ಬ್ಯಾಂಕ್‌ನ್ನು ಸ್ಥಾಪಿಸಿತು ಮತ್ತು ಸ್ಥಿರ ವಿನಿಮಯಗಳ ದರದ ಪದ್ಧತಿಯನ್ನು ಪುನರ್ ಸ್ಥಾಪಿಸಿತು. ಇದು ರಾಷ್ಟ್ರೀಯ ಕರೆನ್ಸಿಗಳು ಪರಿವರ್ತಿತವಾಗುವ ಆಸ್ತಿಗಳ ಆಯ್ಕೆಯಲ್ಲಿ ಅಂತರರಾಷ್ಟ್ರೀಯ ಚಿನ್ನದ ಪ್ರಮಿತಿಗಿಂತ ಭಿನ್ನವಾಗಿತ್ತು. ಡಾಲರನ್ನು ಕೇಂದ್ರವಾಗಿಯುಳ್ಳ ದ್ವಿ–ಸ್ತರ ಪರಿವರ್ತನಾ ಪದ್ಧತಿ ಸ್ಥಾಪಿತವಾಯಿತು. ಅಮೇರಿಕಾದ ಹಣಕಾಸು ಪ್ರಾಧಿಕಾರವು ಪ್ರತಿ ಔನ್ಸ್ ಚಿನ್ನಕ್ಕೆ 35ಡಾಲರ್ ಸ್ಥಿರ ಬೆಲೆಯಲ್ಲಿ ಚಿನ್ನಕ್ಕೆ ಪರಿವರ್ತಿಸುವ ಖಾತ್ರಿಯನ್ನು ನೀಡಿತು. ಈ ಪದ್ಧತಿಯ ಎರಡನೇ ಸ್ತರದ ಬದ್ಧತೆಯೆಂದರೆ, ಈ ವ್ಯವಸ್ಥೆಯಲ್ಲಿ ಭಾಗಿಯಾಗುವ *IMF* ನ ಸದಸ್ಯ ದೇಶಗಳ ಹಣಕಾಸು ಪ್ರಾಧಿಕಾರಗಳು ಸ್ಥಿರ ಬೆಲೆಯಲ್ಲಿ ತಮ್ಮ ಹಣವನ್ನು ಡಾಲರಿಗೆ ಪರಿವರ್ತಿಸಬೇಕಾಗಿತ್ತು. ಇದನ್ನೇ ಅಧಿಕೃತ ವಿನಿಮಯ ದರ ಎಂದು ಕರೆಯಲಾಯಿತು. ಉದಾಹರಣೆಗೆ ಪ್ರತಿ ಡಾಲರಿಗೆ ಸುಮಾರಾಗಿ ಫ್ರಾನ್ಸಿನ 5 ಫ್ರಾಂಕುಗಳು ವಿನಿಮಯವಾಗುವುದಾದರೆ ಆಗ ಡಾಲರ್‌ಗಳು ಪ್ರತಿ ಔನ್ಸ್ ಚಿನ್ನಕ್ಕೆ 35ನಂತೆ ಪರಿವರ್ತನೆಯಾಗಬೇಕಾಗಿತ್ತು. ಇದು ಪ್ರತಿ ಔನ್ಸ್ ಚಿನ್ನಕ್ಕೆ 175 ಫ್ರಾಂಕ್‌ಗಳೆಂದು ನಿಗದಿಯಾಗಿತ್ತು. (ಪ್ರತಿ ಡಾಲರಿಗೆ 5 ಫ್ರಾಂಕುಗಳಂತೆ ಪ್ರತಿ ಔನ್ಸಿಗೆ 35 ಡಾಲರ್‌ಗಳಿರುತ್ತದೆ) ಒಂದು ರಾಷ್ಟದ ಸಂದಾಯ ಬಾಕಿಯಲ್ಲಿ ಮೂಲಭೂತ ಅಸಮತೋಲನದ ಸಂದರ್ಭದಲ್ಲಿ ಮಾತ್ರ ವಿನಿಮಯ ದರಗಳಲ್ಲಿನ ಬದಲಾವಣೆಯನ್ನು ಅನುಮತಿಸಲಾಗುತ್ತಿತ್ತು. ಸಂದಾಯ ಬಾಕಿಯ ದೀರ್ಘಕಾಲಿಕ ಕೊರತೆಯನ್ನು ಇದು ಸೂಚಿಸುತ್ತಿತ್ತು.

ಆ ರೀತಿಯ ಒಂದು ವಿಸ್ತಾರವಾದ ಪರಿವರ್ತನಾ ಪದ್ಧತಿಯು ಅವಶ್ಯವಾಗಿತ್ತು. ಏಕೆಂದರೆ ಚಿನ್ನದ ಮೀಸಲುಗಳ ಹಂಚಿಕೆಯು ರಾಷ್ಟ್ರಗಳು ನಡುವೆ ಅಸಮಾನವಾಗಿತ್ತು ಮತ್ತು ಜಾಗತಿಕ ಅಧಿಕೃತ ಚಿನ್ನದ ಮೀಸಲುಗಳಲ್ಲಿ ಶೇ.70 ರಷ್ಟನ್ನು ಅಮೇರಿಕಾವೇ ಹೊಂದಿತ್ತು. ಹೀಗಾಗಿ ಇತರೆ ಕರೆನ್ಸಿಗಳನ್ನು ಚಿನ್ನಕ್ಕೆ ವಿಶ್ವಾಸಾರ್ಹವಾಗಿ ಪರಿವರ್ತಿಸಲು ಚಿನ್ನದ ದಾಸ್ತಾನಿನ ಮರು ಹಂಚಿಕೆಯು ಅಗತ್ಯವಾಗಿತ್ತು. ಅಲ್ಲದೆ

ಅಂತರರಾಷ್ಟ್ರೀಯ ದ್ರವ್ಯತೆಗೆ ಏರುತ್ತಿರುವ ಬೇಡಿಕೆಯನ್ನು ಸುಸ್ಥಿರಗೊಳಿಸಲು ಅಸ್ತಿತ್ವದಲ್ಲಿರುವ ಚಿನ್ನದ ದಾಸ್ತಾನು ಸಾಕಷ್ಟು ಇರಲಿಲ್ಲ ಎಂದು ನಂಬಲಾಗಿತ್ತು. ಚಿನ್ನದ ಮೇಲಿನ ಉಳಿತಾಯದ ಒಂದು ಮಾರ್ಗವು ಆಗ ದ್ವಿಸ್ತರದ ಪರಿವರ್ತನಾ ಪದ್ಧತಿಯಾಗಿತ್ತು. ಅಂದರೆ ಪ್ರಮುಖ ಕರೆನ್ಸಿಯನ್ನ ಚಿನ್ನಕ್ಕೆ ಮತ್ತು ಇತರೆ ಕರೆನ್ಸಿಗಳನ್ನು ಪ್ರಮುಖ ಕರೆನ್ಸಿಗೆ ಪರಿವರ್ತಿಸಲಾಗುತ್ತಿತ್ತು.

ಎರಡನೇ ಮಹಾಯುದ್ಧದ ನಂತರದ ಸನ್ನಿವೇಶದಲ್ಲಿ ವಿಧ್ವಂಸಗೊಂಡಿದ್ದ ದೇಶಗಳನ್ನು ಪುನರ್ ನಿರ್ಮಿಸಲು ಅಗಾಧವಾದ ಸಂಪನ್ಮೂಲಗಳ ಅವಶ್ಯಕತೆಯಿತ್ತು. ಆಮದುಗಳು ಹೆಚ್ಚಾದವು ಮತ್ತು ಅವರ ಮೀಸಲುಗಳನ್ನು ಬಳಸಿಕೊಂಡು ಕೊರತೆಯ ಹಣಕಾಸನ್ನು ತುಂಬಲಾಯಿತು. ಆ ಸಮಯದಲ್ಲಿ ಜಗತ್ತಿನ ಇತರ ರಾಷ್ಟ್ರಗಳ ಕರೆನ್ಸಿ ಮೀಸಲುಗಳಲ್ಲಿ ಅಮೇರಿಕಾದ ಡಾಲರ್ ಪ್ರಮುಖ ಭಾಗವಾಗಿತ್ತು ಮತ್ತು ಅಮೇರಿಕಾವು ನಿರಂತರವಾಗಿ ಸಂದಾಯ ಬಾಕಿಯ ಕೊರತೆಯನ್ನು ಅನುಭವಿಸುತ್ತಿದ್ದರ ಪರಿಣಾಮವಾಗಿ ಅಂತಹ ಮಿಸಲುಗಳನ್ನು ವಿಸ್ತರಿಸಲಾಗುತ್ತಿತ್ತು (ಇತರೆ ದೇಶಗಳು ಅಂತಹ ಡಾಲರುಗಳನ್ನು ಮೀಸಲು ಆಸ್ತಿಯಾಗಿ ಇಟ್ಟುಕೊಳ್ಳಲು ಇಷ್ಟಪಟ್ಟವು. ಏಕೆಂದರೆ ಅವು ತಮ್ಮ ಕರೆನ್ಸಿಗಳು ಮತ್ತು ಡಾಲರ್‌ಗಳ ನಡುವಿನ ಪರಿವರ್ತನೀಯತೆಯನ್ನು ಕಾಯ್ದುಕೊಳ್ಳಲು ಬದ್ಧವಾಗಿದ್ದವು).

*US* ನ ಅಲ್ಪಾವಧಿಯ ಡಾಲರ್ ಹೊಣೆಗಾರಿಕೆಗಳು, ಅದು ಹೊಂದಿರುವ ಚಿನ್ನಕ್ಕೆ ಸಂಬಂಧಿಸಿದಂತೆ, ಹೆಚ್ಚುತ್ತಾ ಹೋದರೆ, *US* ಡಾಲರ್‌ಗಳನ್ನು ಸ್ಥಿರಬೆಲೆಗಳಲ್ಲಿ ಚಿನ್ನಕ್ಕೆ ಪರಿವರ್ತಿಸುವ ಅದರ ಬದ್ಧತೆಯ ಕುರಿತ ವಿಶ್ವಾಸವು ಕ್ರಮೇಣ ಕ್ಷೀಣಿಸುವ ಸಾಧ್ಯತೆಯೇ ಒಂದು ಸಮಸ್ಯೆಯಾಗಿತ್ತು. ಇದರಿಂದ ಈಗಾಗಲೇ ಹೊಂದಿರುವ ಡಾಲರ್ ಗಳನ್ನು ಚಿನ್ನಕ್ಕೆ ಪರಿವರ್ತಿಸಲು ಕೇಂದ್ರೀಯ ಬ್ಯಾಂಕ್‌ಗಳು ತಕ್ಷಣವೇ ಉತ್ತೇಜನಗೊಳುತ್ತಿದ್ದವು, ಪರಿಣಾಮವಾಗಿ *US* ತನ್ನ ಬದ್ಧತೆಯನ್ನು ಬಿಟ್ಟುಕೊಡಬೇಕಾಗುತ್ತಿತ್ತು. ಇದನ್ನು ಟ್ರಿಫಿನ್ ಸಂದಿಗ್ಧತೆ *(Triffin Dilemma)* ಎನ್ನುವರು. ಈ ಸಂದಿಗ್ಧತೆಯನ್ನು ಬ್ರಿಟನ್‌ವುಡ್ ವ್ಯವಸ್ಥೆಯ ಪ್ರಮುಖ ವಿಮರ್ಶಕರಾದ ರಾಬರ್ಟ್ ಟ್ರಿಫಿನ್‌ರವರು ತೋರಿಸಿಕೊಟ್ಟರು. ಕೇಂದ್ರೀಯ ಬ್ಯಾಂಕ್‌ಗಳಿಗೆ *IMF* ಒಂದು 'ಠೇವಣಿ ಬ್ಯಾಂಕ್' ಆಗಬೇಕೆಂದು ಮತ್ತು ಒಂದು ಹೊಸ 'ಮೀಸಲು ಸ್ವತ್ತನ್ನು' *IMF* ನ ನಿಯಂತ್ರಣದಲ್ಲಿ ಸೃಷ್ಟಿಸಬೇಕೆಂದು ಟ್ರಿಫಿನ್‌ರವರು ಸಲಹೆ ನೀಡಿದರು. 1967ರಲ್ಲಿ ಅಂತರರಾಷ್ಟ್ರೀಯ ಮೀಸಲುಗಳ ದಾಸ್ತಾನನ್ನು ಹೆಚ್ಚಿಸುವ ಉದ್ದೇಶದಿಂದ ಚಿನ್ನದ ಬದಲಾಗಿ ವಿಶೇಷ ಸ್ವೀಕಾರದ ಹಕ್ಕುಗಳನ್ನು (ವಿಶೇಷ ಹಣ ಪಡೆಯುವ ಹಕ್ಕನ್ನು) *(SDRs)* ಸೃಷ್ಟಿಸಲಾಯಿತು – ಇದನ್ನು 'ಕಾಗದದ ಚಿನ್ನ' ಎಂದೂ ಸಹ ಕರೆಯುವರು. ಆರಂಭದಲ್ಲಿ ಚಿನ್ನದ ರೂಪದಲ್ಲಿ 35 *SDR* ಗಳು ಒಂದು ಔನ್ಸ್ ಚಿನ್ನಕ್ಕೆ (ಬ್ರಿಟನ್‌ವುಡ್ ವ್ಯವಸ್ಥೆಯ ಡಾಲರ್ – ಚಿನ್ನದ ದರ) ಸಮವೆಂದು ವ್ಯಾಖ್ಯಾನಿಸಲಾಗಿತ್ತು, 1974ರಿಂದ ಇದು ಅನೇಕ ಬಾರಿ ಪುನರ್ ವ್ಯಾಖ್ಯಾನಕ್ಕೆ ಒಳಪಟ್ಟಿದೆ. ಪ್ರಸ್ತುತ ಇದನ್ನು ಐದು ದೇಶಗಳ (ಫ್ರಾನ್ಸ್, ಜರ್ಮನಿ, ಜಪಾನ್, ಯುಕೆ ಮತ್ತು ಯುಎಸ್) ನಾಲ್ಕು ಕರೆನ್ಸಿಗಳ (ಯುರೋ, ಯೆನ್, ಪೌಂಡ್ ಸ್ಟರ್ಲಿಂಗ್ & ಡಾಲರ್) ತೂಕಿತ ಮೊತ್ತದ ಡಾಲರ್‌ಗಳ ಮೌಲ್ಯಗಳಲ್ಲಿ ದೈನಂದಿನ ಲೆಕ್ಕಾಚಾರ ಮಾಡಲಾಗುತ್ತದೆ. ಮೀಸಲು ಕರೆನ್ಸಿಯಾಗಿ ಮತ್ತು ರಾಷ್ಟ್ರೀಯ ಕರೆನ್ಸಿಗಳ ವಿನಿಮಯದಲ್ಲಿ ಕೇಂದ್ರೀಯ ಬ್ಯಾಂಕ್‌ಗಳ ನಡುವೆ ಪಾವತಿಯ ಸಾಧನವಾಗಿ *IMF* ಸದಸ್ಯರು ಇದನ್ನು ಬಳಸಲು ಒಪ್ಪಿಕೊಂಡಿರುವುದರಿಂದ ಇದು *(SDR)* ಮಾನ್ಯತೆ ಪಡೆಯುತ್ತದೆ. ನಿಧಿಯಲ್ಲಿ *(IMF)* ಸದಸ್ಯ ರಾಷ್ಟ್ರಗಳ ಕೋಟಾದ (ಹಕ್ಕಿನ ಕಾಲು) ಪ್ರಕಾರದಂತೆ *SDR* ಗಳ ಆರಂಭದ ಕಂತುಗಳನ್ನು ಸದಸ್ಯ ರಾಷ್ಟ್ರಗಳಿಗೆ ಹಂಚಿಕೆ ಮಾಡಲಾಗುತ್ತಿತ್ತು. ಕೋಟಾವು ವಿಶಾಲವಾಗಿ ದೇಶದ ಆರ್ಥಿಕ ಮಹತ್ವಕ್ಕೆ ಸಂಬಂಧಿಸಿದಾಗಿದ್ದು ಇದನ್ನು ಆ ದೇಶದ ಅಂತರರಾಷ್ಟ್ರೀಯ ವ್ಯಾಪಾರದ ಮೌಲ್ಯಗಳಿಂದ ನಿರ್ಧರಿಸಲಾಗುತ್ತದೆ. ಬ್ರಿಟನ್‌ವುಡ್ಸ್ ವ್ಯವಸ್ಥೆಯ ವಿಫಲತೆಯು ಅನೇಕ ಘಟನೆಗಳಿಗೆ ನಾಂದಿಯಾಯಿತು ; ಅವುಗಳೆಂದರೆ, 1967ರ ಪೌಂಡ್‌ನ ಅಪಮೌಲ್ಯ ; 1968ರಲ್ಲಿ ಡಾಲರ್‌ನಿಂದ ಚಿನ್ನಕ್ಕೆ ಬದಲಾವಣೆಗೊಂಡಿದ್ದರಿಂದ, ದ್ವಿಸ್ತರದ (ಅಧಿಕೃತ ದರ ಪ್ರತಿ ಔನ್ಸಿಗೆ 35 ಡಾಲರ್ ಮತ್ತು ಮಾರುಕಟ್ಟೆ ನಿರ್ಧಾರಿತ ಖಾಸಗಿ ದರ) ಚಿನ್ನದ ಮಾರುಕಟ್ಟೆ ಅಸ್ತಿತ್ವಕ್ಕೆ ಬರಲು ಕಾರಣವಾಯಿತು; ಅಂತಿಮವಾಗಿ 1971ರ ಆಗಸ್ಟ್ ತಿಂಗಳಲ್ಲಿ ಬ್ರಿಟೀಷ್ ಸರ್ಕಾರವು ತಾನು ಹೊಂದಿರುವ ಡಾಲರ್ ಮೌಲ್ಯಗಳಿಗೆ ಚಿನ್ನದ ಖಾತರಿಯನ್ನು ನೀಡಲು ಆಗ್ರಹಿಸಿತು. ಈ ಎಲ್ಲಾ ಘಟನೆಗಳು *US* ನ್ನು ಡಾಲರ್ ಮತ್ತು ಚಿನ್ನದ ನಡುವೆ ಇದ್ದ ಕೊಂಡಿಯನ್ನು ಕಳಚಿಕೊಳ್ಳುವಂತೆ ಮಾಡಿತು.

1971ರ ಸ್ಮಿತ್‌ಸೋನಿಯನ್ ಒಪ್ಪಂದವು ದೇಶಗಳ ಕೊರತೆಯ *(BOP)* ಒತ್ತಡವನ್ನು ಕಡಿಮೆ ಮಾಡುವ ನಿರೀಕ್ಷೆಯಿಂದ ಕೇಂದ್ರೀಯ ದರಗಳಿಗಿಂತ ಶೇ 2.5ಕ್ಕಿಂತ ಹೆಚ್ಚು ಅಥವಾ ಕಡಿಮೆ ವಿನಿಮಯ ದರಗಳ ಚಲನೆಗಳನ್ನು ಅನುಮತಿಸಿತ್ತಾದರೂ, ಇದು ಕೇವಲ 14 ತಿಂಗಳುಗಳವರೆಗೆ ಮಾತ್ರ ಅಸ್ತಿತ್ವದಲ್ಲಿತ್ತು. 1970ರ ದಶಕದ ಪ್ರಾರಂಭದಲ್ಲಿ ಅಭಿವೃದ್ಧಿ ಹೊಂದಿದ ಮಾರುಕಟ್ಟೆ ಆರ್ಥಿಕತೆಗಳು ತೇಲುವ (ಬದಲಾಗುವ ಅಥವಾ ನಮ್ಯ) ವಿನಿಮಯ ದರಗಳನ್ನು ಅಂಗೀಕರಿಸಿದವು. 1976ರಲ್ಲಿ *IMF* ಪರಿಚ್ಛೇದಗಳ ಪರಿಷ್ಕರಣೆಯು ದೇಶಗಳಿಗೆ ಅವರ ಕರೆನ್ಸಿಗಳನ್ನು ತೇಲಿಸುವುದರ ಅಥವಾ ಸ್ಥಿರಗೊಳಿಸುವುದರ ನಡುವೆ ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ನೀಡಿತು (ಒಂದು ಕರೆನ್ಸಿಗೆ ಅಥವಾ ಕರೆನ್ಸಿಗಳ ಬುಟ್ಟಿಗೆ ಅಥವಾ *SDR* ಗೆ). ಸ್ಥಿರದರಗಳನ್ನು ನಿಯಂತ್ರಿಸುವ ಯಾವುದೇ ನಿಯಮಗಳಿರುವುದಿಲ್ಲ ಮತ್ತು ತೇಲುವ ವಿನಿಮಯದರದ ವಸ್ತುತಃ *(De facto)* ಮೇಲ್ವಿಚಾರಣೆ ಇರುವುದಿಲ್ಲ.

**ಪ್ರಚಲಿತ ವಿದ್ಯಮಾನ :** ಈಗ ಅನೇಕ ದೇಶಗಳು ಸ್ಥಿರ ವಿನಿಮಯ ದರಗಳನ್ನು ಹೊಂದಿವೆ. ಕೆಲವು ದೇಶಗಳು ತಮ್ಮ ಕರೆನ್ಸಿಯನ್ನು ಡಾಲರ್‌ಗೆ ಸ್ಥಿರಗೊಳಿಸುತ್ತವೆ. 1999ರ ಜನವರಿಯಲ್ಲಿ ಯುರೋಪಿಯನ್ ಹಣಕಾಸು ಒಕ್ಕೂಟವು ಅಸ್ತಿತ್ವಕ್ಕೆ ಬಂದ ಮೇಲೆ, ಅದು, ಯುರೋಪಿಯನ್ ಸೆಂಟ್ರಲ್ ಬ್ಯಾಂಕಿನ ನಿರ್ವಹಣೆಯಲ್ಲಿ ಒಕ್ಕೂಟದ ಸದಸ್ಯ ದೇಶಗಳ ಕರೆನ್ಸಿಗಳ ನಡುವೆ ಶಾಶ್ವತವಾಗಿ ವಿನಿಮಯ ದರಗಳನ್ನು ನಿಗದಿಗೊಳಿಸುವ ಮತ್ತು ಯುರೋ ಎಂಬ ಹೊಸ ಸಾಮಾನ್ಯ ಕರೆನ್ಸಿಯನ್ನು ಪರಿಚಯಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿತು. 2002 ಜನವರಿಯಿಂದ ನೋಟು ಮತ್ತು ನಾಣ್ಯಗಳನ್ನು ಪರಿಚಯಿಸಲಾಯಿತು. ಇದುವರೆಗೆ ಯೂರೋಪಿನ್ ಒಕ್ಕೂಟದ 25 ಸದಸ್ಯರಲ್ಲಿ 12 ಸದಸ್ಯ ರಾಷ್ಟ್ರಗಳು ಇದನ್ನು ಅನುಸರಿಸುತ್ತಿವೆ. ಕೆಲವು ರಾಷ್ಟ್ರಗಳು ಅವರ ಕರೆನ್ಸಿಯನ್ನು ಫ್ರೆಂಚ್ ದೇಶದ ಫ್ರಾಂಕಿಗೆ ಸ್ಥಿರಗೊಳಿಸಿಕೊಂಡವು. ಈ ದೇಶಗಳಲ್ಲಿ ಹೆಚ್ಚಿನವು ಆಫ್ರಿಕಾದಲ್ಲಿ ಹಿಂದಿನ ಫ್ರೆಂಚ್ ವಸಾಹತುಗಳಾಗಿದ್ದವು. ಇತರರು ಅವರ ಕರೆನ್ಸಿಗಳನ್ನು ಕರೆನ್ಸಿ ಬುಟ್ಟಿಗೆ ಸ್ಥಿರಗೊಳಿಸಿಕೊಂಡಿದ್ದಾರೆ. ಅದರ ತೂಕವು ಅವರ ವ್ಯಾಪಾರದ ಸಂರಚನೆಯನ್ನು ಬಿಂಬಿಸುತ್ತದೆ. ಹೆಚ್ಚಿನ ವೇಳೆ ಸಣ್ಣ ರಾಷ್ಟ್ರಗಳು ತಮ್ಮ ಒಬ್ಬ ಪ್ರಮುಖ ವ್ಯಾಪಾರಿ ಪಾಲುದಾರನಿಗೆ ಸಾಪೇಕ್ಷವಾಗಿ ತಮ್ಮ ವಿನಿಮಯದರವನ್ನು ನಿಗದಿಪಡಿಸಲು ನಿರ್ಧರಿಸುತ್ತಾರೆ. ಉದಾಹರಣೆಗೆ ಅರ್ಜೈಂಟೀನ 1991ರಲ್ಲಿ ಕರೆನ್ಸಿ ಮಂಡಲಿಯನ್ನು ಹೊಂದಿತ್ತು ಮತ್ತು ತನ್ನ ಕರೆನ್ಸಿಯ *(Peso)* ಮತ್ತು ಡಾಲರ್ ನಡುವಿನ ವಿನಿಮಯ ದರವನ್ನು ಕಾನೂನುನಿಂದ ನಿಗದಿಪಡಿಸಿ. ಕೇಂದ್ರೀಯ ಬ್ಯಾಂಕ್ ತನ್ನೆಲ್ಲಾ ದೇಶೀಯ ಕರೆನ್ಸಿಗಳನ್ನು ಬೆಂಬಲಿಸಲು ಸಾಕಷ್ಟು ವಿದೇಶಿ ಕರೆನ್ಸಿಗಳನ್ನು ಹೊಂದಿತ್ತು. ಇಂತಹ ವ್ಯವಸ್ಥೆಯಲ್ಲಿ ದೇಶವು ಹಣದ ಪೂರೈಕೆಯನ್ನು ಇಷ್ಟಾನುಸಾರ ವಿಸ್ತರಿಸಲಾಗುವುದಿಲ್ಲ. ಅದಲ್ಲದೆ ದೇಶೀಯ ಬ್ಯಾಂಕ್ ವ್ಯವಸ್ಥೆಯಲ್ಲಿ ಬಿಕ್ಕಟ್ಟು (ಬ್ಯಾಂಕ್‌ಗಳು ದೇಶೀಯ ಕರೆನ್ಸಿಯನ್ನು ಸಾಲಪಡೆಯುವ ಸಂದರ್ಭ ಬಂದಾಗ) ಸಂಭವಿಸಿದರೆ ಕೇಂದ್ರೀಯ ಬ್ಯಾಂಕ್ ಅಂತಿಮ ಋಣದಾತನಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಆದಾಗ್ಯೂ ಜನವರಿ 2002ರಲ್ಲಿ ಉಂಟಾದ ಬಿಕ್ಕಟ್ಟಿನಿಂದಾಗಿ ಅರ್ಜೈಂಟೈನಾ ಕರೆನ್ಸಿ ಮಂಡಲಿಯನ್ನು ರದ್ದುಗೊಳಿಸಿ ಅದರ ಕರೆನ್ಸಿಯನ್ನು ತೇಲಲು ಬಿಟ್ಟಿತ್ತು.

2000ದಲ್ಲಿ ಈಕ್ವೆಡಾರ್ ದೇಶವು ತಮ್ಮ ದೇಶೀಯ ಕರೆನ್ಸಿಯನ್ನು ರದ್ದುಪಡಿಸಿ ಅಮೆರಿಕಾದ ಡಾಲರನ್ನು ಅನುಸರಿಸಿದಾಗ ಡಾಲರೀಕರಣ ಎಂಬ ಇನ್ನೊಂದು ವ್ಯವಸ್ಥೆಯನ್ನು ಅಳವಡಿಸಿಕೊಂಡಿತು. ಎಲ್ಲಾ ಬೆಲೆಗಳನ್ನು ಡಾಲರಿನ ರೂಪದಲ್ಲಿ ನಮೂದಿಸಲಾಯಿತು ಮತ್ತು ಸ್ಥಳೀಯ ಕರೆನ್ಸಿಯನ್ನು ವ್ಯವಹಾರಗಳಲ್ಲಿ ಮುಂದೆಂದೂ ಬಳಸಲಿಲ್ಲ. ಅನಿಶ್ಚಿತತೆ ಮತ್ತು ಗಂಡಾಂತರಗಳನ್ನು ತಪ್ಪಿಸಿದ್ದಾಗಲೂ ಈಕ್ವೆಡಾರ್ ಹಣದ ಪೂರೈಕೆಯ ಮೇಲಿನ ತಮ್ಮ ನಿಯಂತ್ರಣವನ್ನು ಅಮೇರಿಕಾದ ಕೇಂದ್ರ ಬ್ಯಾಂಕಿಗೆ – ಫೆಡರಲ್ ರಿಸರ್ವ್ – ವಹಿಸಿತ್ತು. ಈಗ ಇದು ಅಮೇರಿಕಾದಲ್ಲಿನ ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆ ನಿಂತಿದೆ.

ಒಟ್ಟಾರೆಯಾಗಿ ಅಂತರರಾಷ್ಟ್ರೀಯ ವ್ಯವಸ್ಥೆಯು ಈಗ ಬಹು ಪಕ್ಷೀಯ ಆಡಳಿತದ ಲಕ್ಷಣವನ್ನು ಹೊಂದಿದೆ. ಬಹುತೇಕ ವಿನಿಮಯ ದರಗಳು ದೈನಂದಿನ ಆಧಾರದ ಮೇಲೆ ಅಲ್ಪಪ್ರಮಾಣದಲ್ಲಿ ಬದಲಾಗುತ್ತವೆ ಮತ್ತು ಸಾಮಾನ್ಯವಾಗಿ ಮಾರುಟಕಟ್ಟೆ ಶಕ್ತಿಗಳು ಮೂಲ ಪ್ರವೃತ್ತಿಯನ್ನು ನಿರ್ಧರಿಸುತ್ತವೆ. ವಿನಿಮಯದರದಲ್ಲಿ ಹೆಚ್ಚು ಸ್ಥಿರತೆಯನ್ನು ಪ್ರತಿಪಾದಿಸುವವರೂ ಕೂಡ ಸಾಮಾನ್ಯವಾಗಿ ದರಗಳನ್ನು ಒಂದು

ದರಕ್ಕೆ ಅಕ್ಷರಶಃ ನಿಗದಿಪಡಿಸುವ ಬದಲು ಸರ್ಕಾರವು ಅದನ್ನು ಕೆಲವು ಶ್ರೇಣಿಯೊಳಗೆ ಇಟ್ಟುಕೊಳ್ಳುವಂತೆ ಮಾಡಬೇಕೆಂದು ಸಲಹೆ ನೀಡಿದ್ದಾರೆ. ಈಗ ಚಿನ್ನದ ಪಾತ್ರವನ್ನು ವಾಸ್ತವಾವಾಗಿ ತೆಗೆದು ಹಾಕಲಾಗಿದೆ. ಬದಲಾಗಿ ಚಿನ್ನಕ್ಕೆ ಈಗ ಒಂದು ಮುಕ್ತ ಮಾರುಕಟ್ಟೆಯಿದೆ. ಇಲ್ಲಿ ಚಿನ್ನದ ಬೆಲೆಯನ್ನು ಅದರ ಬೇಡಿಕೆ ಮತ್ತು ಪೂರೈಕೆಗಳಿಂದ ನಿರ್ಧರಿಸಲಾಗುತ್ತದೆ. ಈ ಬೇಡಿಕೆ ಮತ್ತು ಪೂರೈಕೆಗಳು ಮುಖ್ಯವಾಗಿ ಆಭರಣ ವ್ಯಾಪಾರಿಗಳು, ಕೈಗಾರಿಕೆ ಬಳಕೆದಾರರು ದಂತವೈದ್ಯರು, ಸಟ್ಟಾ ವ್ಯಾಪಾರಿಗಳು, ಮತ್ತು ಚಿನ್ನವನ್ನು ಒಂದು ಉತ್ತಮ ಮೌಲ್ಯ ಸಂಗ್ರಹಣವೆಂದು ಪರಿಗಣಿಸುವ ಸಾಮಾನ್ಯ ಪ್ರಜೆಗಳಿಂದ ಬರುತ್ತವೆ.

## 6.3 ಮುಕ್ತ ಆರ್ಥಿಕತೆಯಲ್ಲಿ ಆದಾಯದ ನಿರ್ಧಾರ
## *The Determination of Income in an Open Economy*

ಅನುಭೋಗಿಗಳು ಮತ್ತು ಉದ್ಯಮ ಘಟಕಗಳು ದೇಶದಲ್ಲಿ ಮತ್ತು ವಿದೇಶದಲ್ಲಿ ಉತ್ಪಾದಿಸಲಾದ ಸರಕುಗಳನ್ನು ಖರೀದಿಸುವ ಆಯ್ಕೆಯನ್ನು ಹೊಂದಿರುವುದರಿಂದ, ನಾವು ಈಗ **ಸರಕುಗಳಿಗೆ ದೇಶೀಯ ಬೇಡಿಕೆ** ಮತ್ತು **ದೇಶೀಯ ಸರಕುಗಳಿಗೆ ಬೇಡಿಕೆ**ಗಳ ನಡುವಿನ ಭಿನ್ನತೆಯನ್ನು ಗುರುತಿಸುವ ಅಗತ್ಯತೆಯಿದೆ.

### 6.3.1 ಮುಕ್ತ ಆರ್ಥಿಕತೆಯೊಂದರ ರಾಷ್ಟ್ರೀಯ ಆದಾಯದ ಅನನ್ಯತೆ
### *National Income Identity for an Open Economy*

ಒಂದು ಮುಚ್ಚಿದ ಆರ್ಥಿಕತೆಯಲ್ಲಿ ದೇಶೀಯ ಸರಕುಗಳಿಗೆ ಮೂರು ಬೇಡಿಕೆಯ ಮೂಲಗಳಿವೆ – ಅನುಭೋಗ ($C$), ಸರಕಾರದ ವೆಚ್ಚ ($G$) ಮತ್ತು ದೇಶೀಯ ಹೂಡಿಕೆ ($I$). ಇದನ್ನು ಈ ಕೆಳಗಿನಂತ ಬರೆಯಬಹುದು.

$$Y = C + I + G \qquad (6.2)$$

ಒಂದು ಮುಕ್ತ ಆರ್ಥಿಕತೆಯಲ್ಲಿ ವಿದೇಶಗಳಿಂದ ಬರುವ ದೇಶೀಯ ಸರಕು ಮತ್ತು ಸೇವೆಗಳ ಬೇಡಿಕೆಯ ಹೆಚ್ಚುವರಿ ಮೂಲವನ್ನು ರಫ್ತುಗಳು ($X$) ಒಳಗೊಳ್ಳುತ್ತವೆ ಮತ್ತು ಅದರಿಂದ ಇದನ್ನು ಸಮಗ್ರ ಬೇಡಿಕೆಗೆ ಸೇರಿಸಬೇಕಾಗುತ್ತದೆ. ಆಮದುಗಳು, ದೇಶೀಯ ಮಾರುಕಟ್ಟೆಗಳ ಪೂರೈಕೆಗಳಿಗೆ ಪೂರಕವಾಗುತ್ತವೆ ಮತ್ತು ವಿದೇಶಿ ಸರಕು ಮತ್ತು ಸೇವೆಗಳ ಮೇಲೆ ಅವಲಂಬಿತವಾಗಿರುವ ದೇಶೀಯ ಬೇಡಿಕೆಯ ಭಾಗವನ್ನು ಒಳಗೊಂಡಿರುತ್ತದೆ. ಆದ್ದರಿಂದ ಮುಕ್ತ ಆರ್ಥಿಕತೆಯ ರಾಷ್ಟ್ರೀಯ ಆದಾಯದ ಅನನ್ಯತೆಯು ಈ ಕೆಳಗಿನಂತಿದೆ.

$$Y + M = C + I + G + X \qquad (6.3)$$

ಇದನ್ನು ಮರುಜೋಡಿಸಿದಾಗ ನಾವು ಈ ಕೆಳಗಿನವ ಸೂತ್ರವನ್ನು ಪಡೆಯುತ್ತೇವೆ.

$$Y = C + I + G + X - M \qquad (6.4)$$

**ಅಥವಾ**

$$Y = C + I + G + NX \qquad (6.5)$$

ಇಲ್ಲಿ $NX$ ಎಂಬುದು ನಿವ್ವಳ ರಫ್ತುಗಳು (ರಫ್ತುಗಳು – ಆಮದುಗಳು). ಒಂದು ಧನಾತ್ಮಕ $NX$ (ಆಮದುಗಳಿಗಿಂತ ರಫ್ತುಗಳು ಅಧಿಕವಾಗಿರುವುದು) ವ್ಯಾಪಾರ ಮಿಗುತೆ (ಉಳಿತಾಯ)ಯನ್ನು ಅರ್ಥೈಸುತ್ತದೆ ಮತ್ತು ಒಂದು ಋಣಾತ್ಮಕ $NX$ (ರಫ್ತುಗಳಿಗಿಂತ ಆಮದು ಅಧಿಕವಾಗಿರುವುದು) ವ್ಯಾಪಾರ ಕೊರತೆಯನ್ನು ಅರ್ಥೈಸುತ್ತದೆ.

ಒಂದು ಮುಕ್ತ ಆರ್ಥಿಕತೆಯಲ್ಲಿ ಆದಾಯದ ಸಮತೋಲನವನ್ನು ನಿರ್ಧರಿಸುವಲ್ಲಿ ಆಮದುಗಳು ಮತ್ತು ರಫ್ತುಗಳ ಪಾತ್ರವನ್ನು ಪರಿಶೀಲಿಸಲು, ಮುಚ್ಚಿದ ಆರ್ಥಿಕತೆಯ ವಿಷಯದಲ್ಲಿ ಅನುಸರಿಸಿದ ಕಾರ್ಯವಿಧಾನವನ್ನೇ ನಾವು ಇಲ್ಲಿ ಅನುಸರಿಸುತ್ತೇವೆ. ಹೂಡಿಕೆ ಮತ್ತು ಸರ್ಕಾರದ ವೆಚ್ಚವನ್ನು ಸ್ವಾಯತ್ತವೆಂದು ನಾವು ತೆಗೆದುಕೊಳ್ಳುತ್ತೇವೆ. ಇದರೊಂದಿಗೆ, ನಾವು ಆಮದುಗಳು ಮತ್ತು ರಫ್ತುಗಳ ನಿರ್ಧಾರಕಗಳನ್ನು ಸ್ಪಷ್ಟಪಡಿಸುವ ಅಗತ್ಯವಿದೆ. ಆಮದುಗಳ ಬೇಡಿಕೆಯು ದೇಶೀಯ ಆದಾಯ ($Y$) ಮತ್ತು ನೈಜ ವಿನಿಮಯ ದರ ($R$)ಗಳನ್ನು ಅವಲಂಬಿಸಿರುತ್ತದೆ. ಅಧಿಕ ಆದಾಯವು ಅಧಿಕ ಆಮದುಗಳಿಗೆ ಕಾರಣವಾಗುತ್ತದೆ. ದೇಶೀಯ ಸರಕುಗಳ

ರೂಪದಲ್ಲಿನ ವಿದೇಶೀ ಸರಕುಗಳ ಸಾಪೇಕ್ಷ ಬೆಲೆಯನ್ನು ನೈಜ ವಿನಿಮಯದರವೆಂದು ವ್ಯಾಖ್ಯಾನಿಸುವುದನ್ನು ನೆನಪಿಸಿಕೊಳ್ಳಲಾಗಿದೆ. ಅಧಿಕ ನೈಜ ವಿನಿಮಯ ದರ ($R$) ವಿದೇಶಿ ಸರಕುಗಳನ್ನು ಸಾಪೇಕ್ಷವಾಗಿ ಹೆಚ್ಚು ದುಬಾರಿ ಮಾಡುತ್ತದೆ. ಆ ಮೂಲಕ ಆಮದುಗಳ ಪ್ರಮಾಣದಲ್ಲಿ ಇಳಿಕೆಗೆ ಕಾರಣವಾಗುತ್ತದೆ. ಆದ್ದರಿಂದ ಆಮದುಗಳು $Y$ನ ಮೇಲೆ ಧನಾತ್ಮಕವಾಗಿ ಮತ್ತು '$R$'ನ ಮೇಲೆ ಋಣಾತ್ಮಕವಾಗಿ ಅವಲಂಬಿತವಾಗಿರುತ್ತವೆ. ಒಂದು ದೇಶದ ರಫ್ತನ್ನು ಇನ್ನೊಂದು ದೇಶದ ಆಮದು ಎಂದು ವ್ಯಾಖ್ಯಾನಿಸಲಾಗಿದೆ. ಆದ್ದರಿಂದ ನಮ್ಮ ರಫ್ತುಗಳು ವಿದೇಶಿಯರಿಗೆ ಆಮದುಗಳು ಎನಿಸುತ್ತದೆ ಇದು ವಿದೇಶಿ ಆದಾಯ ($Yf$) ಮತ್ತು ನೈಜ ವಿನಿಮಯ ($R$) ದ ಮೇಲೆ ಅವಲಂಬಿತವಾಗಿರುತ್ತದೆ. ವಿದೇಶಿ ಆದಾಯದಲ್ಲಿ ($Yf$) ನ ಹೆಚ್ಚಳವು ನಮ್ಮ ಸರಕುಗಳಿಗೆ ವಿದೇಶಿ ಬೇಡಿಕೆಯನ್ನು ಹೆಚ್ಚಿಸುವ ಮೂಲಕ ಅಧಿಕ ರಫ್ತುಗಳಿಗೆ ಕಾರಣವಾಗುತ್ತದೆ. $R$ ನಲ್ಲಿನ ಹೆಚ್ಚಳವು ದೇಶೀಯ ಸರಕುಗಳನ್ನು ಅಗ್ಗವಾಗಿಸಿ, ನಮ್ಮ ರಫ್ತುಗಳನ್ನು ಹೆಚ್ಚಿಸುತ್ತದೆ. ವಿದೇಶಿ ಆದಾಯ ($Yf$) ಮತ್ತು ನೈಜ ವಿನಿಮಯ ದರ ($R$) ದ ಮೇಲೆ ರಫ್ತುಗಳು ಧನಾತ್ಮಕಾವಾಗಿ ಅವಲಂಬಿತವಾಗಿವೆ. ಹೀಗಾಗಿ ದೇಶೀಯ ಆದಾಯದ ಮೇಲೆ ರಫ್ತುಗಳು ಮತ್ತು ಆಮದುಗಳು ಅವಲಂಬಿತವಾಗಿವೆ. ನಾವು ಬೆಲೆ ಮಟ್ಟಗಳು ಮತ್ತು ನಾಮ ರೂಪಿ ವಿನಿಮಯ ದರಗಳು ಸ್ಥಿರವಾಗಿವೆ ಎಂದು ಊಹಿಸಿಕೊಂಡಿದ್ದೇವೆ ಮತ್ತು ಹೀಗಾಗಿ $R$ ಸ್ಥಿರವಾಗಿರುತ್ತದೆ. ನಮ್ಮ ದೇಶದ ದೃಷ್ಟಿಕೋನದಿಂದ, ವಿದೇಶಿ ಆದಾಯ, ಹಾಗಾಗಿ ರಫ್ತುಗಳು ಬಹಿರ್ಜಾತವಾಗಿವೆ ಎಂದು ಪರಿಗಣಿಸಲಾಗಿದೆ $(X = \overline{X})$

ಹೀಗೆ ಆಮದುಗಳ ಬೇಡಿಕೆಯು, ಆದಾಯವನ್ನು ಅವಲಂಬಿಸಿರುತ್ತದೆ ಎಂದು ಊಹಿಸಿಕೊಳ್ಳಲಾಗಿದೆ ಮತ್ತು ಅದು ಒಂದು ಸ್ವಾಯತ್ತ ಅಂಶವನ್ನು ಹೊಂದಿದೆ ಎಂದು ಊಹಿಸಿಕೊಳ್ಳಲಾಗಿದೆ.



$M = M + mY$ ಇಲ್ಲಿ $\overline{M} > 0$ ಎಂಬುದು ಸ್ವಾಯತ್ತ ಭಾಗವಾಗಿದೆ $0 < m < 1$ (6.6)

ಇಲ್ಲಿ $m$ ಎಂಬುದು ಸೀಮಾಂತ ಆಮದು ಪ್ರವೃತ್ತಿ ಎಂದಾಗುತ್ತದೆ. ಆಮದುಗಳ ಮೇಲೆ ವೆಚ್ಚ ಮಾಡಿದ ಆದಾಯದ ಹೆಚ್ಚುವರಿ ರೂಪಾಯಿಯ ಒಂದು ಭಾಗವು ಸೀಮಾಂತ ಅನುಭೋಗದ ಪ್ರವೃತ್ತಿಗೆ ಸಮವಾಗುವ ಒಂದು ಪರಿಕಲ್ಪನೆಯಾಗಿದೆ

ಸಮತಲೋನ ಆದಾಯವು ಹೀಗಿರುತ್ತದೆ.

$$Y = \overline{C} + c(Y - T) + \overline{I} + \overline{G} + \overline{X} - \overline{M} - mY \tag{6.7}$$

ಸ್ವಾಯತ್ತತೆಯ ಎಲ್ಲಾ ಭಾಗಗಳನ್ನು ಒಟ್ಟಾಗಿ $\overline{A}$ ಎಂದು ತೆಗೆದುಕೊಂಡಾಗ ನಾವು $Y = \overline{A} + cY - mY$ ನ್ನು ಪಡೆಯುತ್ತೇವೆ (6.8)

ಅಥವಾ, $$(1 - c + m)Y = \overline{A} \tag{6.9}$$

ಅಥವಾ, $$Y^* = \frac{1}{1 - C + m}\overline{A} \tag{6.10}$$

ಮುಚ್ಚಿದ ಆರ್ಥಿಕತೆಯ ಮಾದರಿಯಲ್ಲಿ, ಆದಾಯ ಮತ್ತು ವೆಚ್ಚದ ಚೌಕಟ್ಟಿನಲ್ಲಿ ವಿದೇಶಿ ವ್ಯಾಪಾರಕ್ಕೆ ಅವಕಾಶ ಕೊಡುವುದರ ಪರಿಣಾಮಗಳನ್ನು ಪರಿಶೀಲಿಸಲು, ನಾವು ಸಮೀಕರಣ 6.10ನ್ನು ಅದಕ್ಕೆ ಸಮಾನವಾದ ಆದಾಯ ಸಮತೋಲನದ ಅಭಿವ್ಯಕ್ತಿಯೊಡನೆ ಹೋಲಿಕೆ ಮಾಡಬೇಕಾಗುತ್ತದೆ. ಈ ಎರಡೂ ಸಮೀಕರಣಗಳಲ್ಲಿ ಸ್ವಾಯತ್ತ ವೆಚ್ಚದ ಗುಣಕ ಮತ್ತು ಸ್ವಾಯತ್ತ ವೆಚ್ಚಗಳ ಮಟ್ಟದ ಗುಣಲಬ್ಧವನ್ನು ಸಮತೋಲನ ಆದಾಯವೆಂದು ವ್ಯಕ್ತಪಡಿಸಲಾಗಿದೆ. ಮುಕ್ತ ಆರ್ಥಿಕತೆಯ ಸನ್ನಿವೇಶದಲ್ಲಿ ಇವೆರಡು ಹೇಗೆ ಬದಲಾಗುತ್ತವೆ ಎಂಬುದನ್ನು ನಾವು ಪರಿಗಣಿಸುತ್ತೇವೆ.

$m$, ಸೀಮಾಂತ ಆಮದು ಪ್ರವೃತ್ತಿ, ಶೂನ್ಯಕ್ಕಿಂತ ಅಧಿಕವಾಗಿರುವುದರಿಂದ, ಮುಕ್ತ ಆರ್ಥಿಕತೆಯಲ್ಲಿ ನಾವು ಸಣ್ಣ ಗುಣಕವನ್ನು ಪಡೆಯುತ್ತೇವೆ. ಇದನ್ನು ಹೀಗೆ ಕೊಡಲಾಗಿದೆ.

ಮುಕ್ತ ಆರ್ಥಿಕತೆಯ ಗುಣಕ $$= \frac{\Delta Y}{\Delta A} = \frac{1}{1 - c + m} \tag{6.11}$$

**ಉದಾಹರಣೆ 6.3**

$C = 0.8$ ಮತ್ತು $m = 0.3$ ಆದರೆ ಮುಕ್ತ ಮತ್ತು ಮುಚ್ಚಿದ ಆರ್ಥಿಕತೆಯ ಗುಣಕಗಳನ್ನು ನಾವು ಕ್ರಮವಾಗಿ ಈ ಕೆಳಗಿನಂತೆ ಪಡೆಯುತ್ತೇವೆ.

$$\frac{1}{1-c} = \frac{1}{1-0.8} = \frac{1}{0.2} = 5 \qquad (6.12)$$

ಮತ್ತು

$$\frac{1}{1-c+\mathrm{m}} = \frac{1}{1-0.8+0.3} = \frac{1}{0.5} = 2 \qquad (6.13)$$

ದೇಶೀಯ ಸ್ವಾಯತ್ತ ಬೇಡಿಕೆಯು 100ರಷ್ಟು ಹೆಚ್ಚಾದರೆ ಮುಚ್ಚಿದ ಆರ್ಥಿಕತೆಯಲ್ಲಿ ಉತ್ಪನ್ನವು 500 ರಷ್ಟು ಹೆಚ್ಚಾಗುತ್ತದೆ. ಆದರೆ ಮುಕ್ತ ಆರ್ಥಿಕತೆಯಲ್ಲಿ ಇದು ಕೇವಲ 200 ರಷ್ಟು ಮಾತ್ರ ಹೆಚ್ಚಾಗುತ್ತದೆ.

ಆರ್ಥಿಕತೆಯನ್ನು ತೆರೆದಿಡುವುದರೊಂದಿಗೆ ಸ್ವಾಯುತ್ತ ವೆಚ್ಚದ ಗುಣಕದ ಮೌಲ್ಯ ಇಳಿಕೆಯನ್ನು ನಮ್ಮ ಹಿಂದಿನ ಗುಣಕ ಪ್ರಕ್ರಿಯೆಯ ಚರ್ಚೆಯ (ಅಧ್ಯಾಯ 4) ಉಲ್ಲೇಖದೊಂದಿಗೆ ವಿವರಿಸಬಹುದು. ಸ್ವಾಯತ್ತ ವೆಚ್ಚಗಳಲ್ಲಿನ ಬದಲಾವಣೆ, ಉದಾಹರಣೆಗೆ ಸರ್ಕಾರದ ವೆಚ್ಚದಲ್ಲಿನ ಬದಲಾವಣೆಯು ಆದಾಯದ ಮೇಲೆ ನೇರ ಪರಿಣಾಮ ಬೀರುತ್ತದೆ ಮತ್ತು ಅನುಭೋಗದ ಮೇಲೆ ಪ್ರೇರಿತ ಪರಿಣಾಮ ಬೀರುವುದರೊಂದಿಗೆ ಮುಂದಕ್ಕೂ ಆದಾಯದ ಮೇಲೆ ಪರಿಣಾಮ ಬೀರುತ್ತದೆ. ಶೂನ್ಯಕ್ಕಿಂತ ಹೆಚ್ಚಾಗಿರುವ *mpc* ಯೊಂದಿಗೆ, ಅನುಭೋಗದ ಮೇಲಿನ ಪ್ರೇರಿತ ಪರಿಣಾಮದ ಒಂದು ಭಾಗವು ವಿದೇಶಿ ಸರಕುಗಳಿಗೆ ಬೇಡಿಕೆಯಾಗಿರುತ್ತದೆ, ದೇಶಿಯ ಸರಕುಗಳಿಗಲ್ಲ ಆದ್ದರಿಂದ ದೇಶಿಯ ಸರಕುಗಳ ಬೇಡಿಕೆಯ ಮೇಲಿನ ಮತ್ತು ದೇಶಿಯ ಆದಾಯದ ಮೇಲಿನ ಪ್ರೇರಿತ ಪರಿಣಾಮವು ಚಿಕ್ಕದಾಗಿರುತ್ತದೆ. ಗುಣಕ ಪ್ರಕ್ರಿಯೆಯಲ್ಲಿನ ಪ್ರತಿ ಸುತ್ತಿನಲ್ಲಿ ದೇಶೀಯ ಆದಾಯದ ವೃತ್ತಾಕಾರದ ಪರಿಚಲನೆಯಿಂದ ಆದ ಹೆಚ್ಚುವರಿ ಸೋರಿಕೆಯನ್ನು ಆದಾಯದ ಪ್ರತಿ ಘಟಕಕ್ಕೆ ಆದ ಆಮದುಗಳಲ್ಲಿನ ಹೆಚ್ಚಳವು ಒಳಗೊಂಡಿದೆ ಮತ್ತು ಸ್ವಾಯತ್ತ ವೆಚ್ಚ ಗುಣಕದ ಮೌಲ್ಯವನ್ನು ಕಡಿಮೆ ಮಾಡುತ್ತದೆ.

ಮುಚ್ಚಿದ ಆರ್ಥಿಕತೆಯ ಅಂಶಗಳ ಜೊತೆಗೆ, ಮುಕ್ತ ಆರ್ಥಿಕತೆಯ ಸ್ವಾಯತ್ತ ವೆಚ್ಚವು ರಫ್ತುಗಳ ಮಟ್ಟ ಮತ್ತು ಆಮದುಗಳ ಸ್ವಾಯತ್ತಾ ಅಂಶಗಳನ್ನು ಒಳಗೊಂಡಿರುವುದನ್ನು ಸಮೀಕರಣ (6.10)ರ ಎರಡನೇ ಪದವು ತೋರಿಸುತ್ತದೆ. ಆದ್ದರಿಂದ ಅವುಗಳ ಮಟ್ಟದಲ್ಲಿನ ಬದಲಾವಣೆಗಳು ಹೆಚ್ಚುವರಿ ಆಘಾತಗಳಾಗಿದ್ದು ಅವು ಸಮತೋಲನ ಆದಾಯವನ್ನು ಬದಲಾಯಿಸುತ್ತವೆ. ಸಮೀಕರಣ (6.10)ರಿಂದ ನಾವು $\overline{X}$ ಮತ್ತು $\overline{M}$ ಗಳಲ್ಲಿನ ಬದಲಾವಣೆಯ ಗುಣಕ ಪರಿಣಾಮವನ್ನು ಲೆಕ್ಕ ಹಾಕಬಹುದು.

$$\frac{\Delta Y^*}{\Delta \overline{X}} = \frac{1}{1-c+m} \qquad (6.14)$$

$$\frac{\Delta Y^*}{\Delta \overline{M}} = \frac{-1}{1-c+m} \qquad (6.15)$$

ನಮ್ಮ ರಫ್ತುಗಳ ಬೇಡಿಕೆಯಲ್ಲಿನ ಒಂದು ಹೆಚ್ಚಳವು ದೇಶೀಯವಾಗಿ ಉತ್ಪಾದಿಸಿದ ಉತ್ಪನ್ನದ ಸಮಗ್ರ ಬೇಡಿಕೆಯಲ್ಲಿನ ಒಂದು ಹೆಚ್ಚಳವಾಗಿದೆ ಮತ್ತು ಸರ್ಕಾರದ ವೆಚ್ಚದಲ್ಲಿನ ಹೆಚ್ಚಳದಂತೆಯೇ ಅಥವಾ ಸ್ವಾಯತ್ತ ಹೂಡಿಕೆಯಲ್ಲಿನ ಹೆಚ್ಚಳದಂತೆಯೇ ಇದರ ಬೇಡಿಕೆಯನ್ನು ಹೆಚ್ಚಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಆಮದು ಬೇಡಿಕೆಯಲ್ಲಿನ ಸ್ವಾಯತ ಏರಿಕೆಯು ದೇಶೀಯ ಉತ್ಪನ್ನದ ಬೇಡಿಕೆಯಲ್ಲಿನ ಇಳಿತಕ್ಕೆ ಕಾರಣವಾಗುವುದನ್ನು ಕಾಣಬಹುದು ಮತ್ತು ಸಮತೋಲನದ ಆದಾಯದ ಇಳಿಕೆಗೆ ಕಾರಣವಾಗಬಹುದು.

### 6.3.2 ಸಮತೋಲನ ಉತ್ಪನ್ನ ಮತ್ತು ವ್ಯಾಪಾರ ಬಾಕಿ *Equilibrium output and Trade Balance*

ನಾವು ಮೇಲಿನ ಯಂತ್ರರಚನೆಯ ವಿಶ್ಲೇಷಣೆಯನ್ನು ಮತ್ತು ಇದರ ಜೊತೆಗೆ, ವ್ಯಾಪಾರ ಬಾಕಿಯ ಮೇಲಿನ ಅವುಗಳ ಪ್ರಭಾವವನ್ನು ರೇಖಾ ವಿವರಣೆಯೊಂದಿಗೆ ನೀಡಬಹುದು. ಈ ಹಿಂದೆ ನೋಡಿರುವಂತೆ, ನಿವ್ವಳ

ರಫ್ತುಗಳು – ($Nx = X - M$) –, *Y, Yf* ಮತ್ತು *R* ಅನ್ನು ಅವಲಂಬಿಸಿದೆ. '*Y*' ನ ಏರಿಕೆಯು ಆಮದು ವೆಚ್ಚವನ್ನು ಹೆಚ್ಚಿಸುತ್ತದೆ ಮತ್ತು ವ್ಯಾಪಾರ ಕೊರತೆಗೆ (ಪ್ರಾರಂಭಿಕ ವ್ಯಾಪಾರ ಬಾಕಿ $Nx = 0$ ಆಗಿದ್ದರೆ) ಕಾರಣವಾಗುತ್ತದೆ. ಇತರ ಸಂಗತಿಗಳು ಸಮನಾಗಿದ್ದು *Yf* ನಲ್ಲಿನ ಏರಿಕೆಯು, ನಮ್ಮ ರಫ್ತುಗಳನ್ನು ಹೆಚ್ಚಿಸುತ್ತದೆ, ವ್ಯಾಪಾರ ಮಿಗುತೆಯನ್ನು ಸೃಷ್ಟಿಸುತ್ತದೆ ಮತ್ತು ಸಮಗ್ರ ಆದಾಯವನ್ನು ಹೆಚ್ಚಿಸುತ್ತದೆ, ಒಂದು ನೈಜ ಸವಕಳಿಯು ರಫ್ತುಗಳನ್ನು ಹೆಚ್ಚಿಸಿ, ಆಮದುಗಳನ್ನು ಕಡಿಮೆ ಮಾಡುತ್ತದೆ. ಹೀಗಾಗಿ ನಮ್ಮ ನಿವ್ವಳ ರಫ್ತುಗಳು ಹೆಚ್ಚಾಗುತ್ತವೆ.

ರೇಖಾಚಿತ್ರ 6.4ರಲ್ಲಿನ ಮೇಲಿನ ಫಲಕದಲ್ಲಿರುವ (ಭಾಗದಲ್ಲಿರುವ) *AD* ರೇಖೆಯು ದೇಶೀಯ ಬೇಡಿಕೆಯನ್ನು ಪ್ರತಿನಿಧಿಸುತ್ತದೆ. *C+I+G* ಆದಾಯ ಬಿಂಬಕವನ್ನು ಪ್ರತಿನಿಧಿಸುತ್ತದೆ (ಮುಚ್ಚಿದ ಆರ್ಥಿಕತೆಯ ಅಧ್ಯಾಯಕ್ಕೆ 5 ಸಂಬಂಧಿಸಿದೆ). ನಮ್ಮ ಎಂದಿನ ಕಲ್ಪನೆಯ ಅಡಿಯಲ್ಲಿ ಇದರ ಇಳಿಜಾರು ಧನಾತ್ಮಕವಾಗಿದೆ ಆದರೆ ಒಂದಕ್ಕಿಂತ ಕಡಿಮೆಯಿದೆ. ದೇಶಿಯ ಸರಕುಗಳಿಗೆ ಬೇಡಿಕೆಯನ್ನು ಪಡೆಯಲು, *AA* ರೇಖೆಯನ್ನು ಪಡೆಯಲು ನಾವು ಮೊದಲು ಆಮದುಗಳನ್ನು ಕಳೆಯಬೇಕಾಗುತ್ತದೆ. *AA* ಮತ್ತು *AD*ಗಳ ಅಂತರವು ಆಮದುಗಳ ಮೌಲ್ಯ *M*ಗೆ ಸಮನಾಗಿದೆ. ಏಕೆಂದರೆ ಆದಾಯದ ಜೊತೆ ಆಮದುಗಳ ಪ್ರಮಾಣ ಹೆಚ್ಚಾಗುತ್ತದೆ, ಈ ಎರಡು ರೇಖೆಗಳ ನಡುವಿನ ಅಂತರವು ಆದಾಯದೊಂದಿಗೆ ಹೆಚ್ಚಾಗುತ್ತದೆ, *AA*ಯು *AD*ಗಿಂತ ಸಮತಲವಾಗಿರುತ್ತದೆ. ಏಕೆಂದರೆ ಆದಾಯ ಹೆಚ್ಚಾದಂತೆ ದೇಶೀಯ ಬೇಡಿಕೆಯ ಕೆಲವು ಭಾಗವು ವಿದೇಶಿ ಸರಕುಗಳ ಮೇಲೆ ವಾಲುತ್ತದೆ. ಹೀಗೆ ಆದಾಯದ ಹೆಚ್ಚಳದೊಂದಿಗೆ, ದೇಶೀಯ ಸರಕುಗಳ ದೇಶೀಯ ಬೇಡಿಕೆಯು, ಒಟ್ಟು ದೇಶೀಯ ಬೇಡಿಕೆಗಿಂತ ಕಡಿಮೆ ಪ್ರಮಾಣದಲ್ಲಿ ಹೆಚ್ಚಾಗುತ್ತದೆ. ಎರಡನೆಯದಾಗಿ ನಾವು ರಫ್ತುಗಳನ್ನು ಸೇರಿಸಿ *DD*ರೇಖೆಯನ್ನು ಪಡೆಯುತ್ತೇವೆ, ಇದು *AA*ರೇಖೆಯ ಮೇಲ್ಭಾಗದಲ್ಲಿರುತ್ತದೆ.




**ರೇಖಾಚಿತ್ರ 6.4:** ಮುಕ್ತ ಆರ್ಥಿಕತೆಯಲ್ಲಿ ಸಮಗ್ರ ಬೇಡಿಕೆ ಮತ್ತು ನಿವ್ವಳ ರಫ್ತು ಅನುಸೂಚಿ.

*DD* ಮತ್ತು *AA* ಗಳ ನಡುವಿನ ಅಂತರವು ರಫ್ತುಗಳಿಗೆ ಸಮವಾಗಿರುತ್ತದೆ ಮತ್ತು ಇದು ಸ್ಥಿರವಾಗಿರುತ್ತದೆ ಏಕೆಂದರೆ ರಫ್ತುಗಳು ದೇಶಿಯ ಆದಾಯವನ್ನು ಅವಲಂಬಿಸಿರುವುದಿಲ್ಲ (ಎರಡು ರೇಖೆಗಳು ಸಮನಾಂತರ ರೇಖೆಗಳಾಗಿವೆ). ಈ ಮುಕ್ತ ಆರ್ಥಿಕತೆಯ ಸಮಗ್ರ ಬೇಡಿಕೆಯ ರೇಖೆ, *DD*ಯು, ಮುಚ್ಚಿದ ಆರ್ಥಿಕತೆಗಿಂತಲೂ ಸಮತಲವಾಗಿದೆ. ಏಕೆಂದರೆ *AA* ಯು *AD* ಗಿಂತಲೂ ಸಮತಲವಾಗಿದೆ.

ನಿವ್ವಳ ರಫ್ತುಗಳ ವರ್ತನೆಯನ್ನು ರೇಖಾಚಿತ್ರ 6.4ರ ಕೆಳಭಾಗದ ಫಲಕದಲ್ಲಿ ನಾವು ಪರಿಶೀಲಿಸುತ್ತೇವೆ, *Nx* ಆದಾಯ ಬಿಂಬಕವಾಗಿದೆ. ಉದಾಹರಣೆ *Y* ನ ಆದಾಯ ಮಟ್ಟದಲ್ಲಿ ರಫ್ತುಗಳನ್ನು *AC* ಯ ಅಂತರದಲ್ಲಿ ನೀಡಲಾಗಿದೆ ಮತ್ತು ಆಮದುಗಳನ್ನು *AB* ಯ ಅಂತರದಲ್ಲಿ ನೀಡಲಾಗಿದೆ, ಹೀಗಾಗಿ ನಿವ್ವಳ ರಫ್ತುಗಳನ್ನು *BC*ಯ ಅಂತರದಲ್ಲಿ ನೀಡಲಾಗಿದೆ.

ನಿವ್ವಳ ರಫ್ತುಗಳು ದೇಶಿಯ ವರಮಾನದ ಇಳಿಕೆಯ ಬಿಂಬಕವಾಗಿದೆ. ಆದಾಯವು ಹೆಚ್ಚಾದಂತೆ ಆಮದುಗಳು ಹೆಚ್ಚಾಗುತ್ತವೆ ಮತ್ತು ರಫ್ತುಗಳು ಯಾವುದೇ ಪರಿಣಾಮಕ್ಕೆ ಒಳಗಾಗದೆ, ನಿವ್ವಳ ರಫ್ತುಗಳ ಇಳಿಕೆಗೆ ದಾರಿಯಾಗುತ್ತದೆ, ಕಡಿಮೆ ನಿವ್ವಳ ರಫ್ತುಗಳಿಗೆ ಕಾರಣವಾಗುತ್ತದೆ. *Ytb* ನಲ್ಲಿ (*tb* ಯು ವ್ಯಾಪಾರ ಬಾಕಿ) ಆದಾಯ ಮಟ್ಟದಲ್ಲಿನ ಆಮದುಗಳ ಮೌಲ್ಯವು ರಫ್ತುಗಳಿಗೆ ಸಮವಾಗಿರುತ್ತದೆ, ನಿವ್ವಳ ರಫ್ತುಗಳು ಶೂನ್ಯಕ್ಕೆ ಸಮನಾಗಿವೆ. *Ytb* ನ ಮೇಲಿನ ಆದಾಯಮಟ್ಟವು ಅಧಿಕ ಆಮದುಗಳಿಗೆ ಕಾರಣವಾಗುತ್ತದೆ

ಹೀಗಾಗಿ ವ್ಯಾಪಾರ ಕೊರತೆ ಉಂಟಾಗುತ್ತದೆ. *Ytb* ನ ಕೆಳಗಿರುವ ಆದಾಯದ ಮಟ್ಟವು ಕಡಿಮೆ ಆಮದುಗಳಿಗೆ ಕಾರಣವಾಗುತ್ತದೆ, ಹೀಗಾಗಿ ವ್ಯಾಪಾರ ಮಿಗುತೆ (ಉಳಿತಾಯ) ಉಂಟಾಗುತ್ತದೆ.

ದೇಶೀಯ ಉತ್ಪನ್ನದ ಪೂರೈಕೆಯು ದೇಶೀಯ ಉತ್ಪನ್ನದ ಬೇಡಿಕೆಗೆ ಸಮನಾಗಿದ್ದಾಗ ಸರಕುಗಳ ಮಾರುಕಟ್ಟೆಯು ಸಮತೋಲನದಲ್ಲಿರುತ್ತದೆ. ಇದನ್ನು ರೇಖಾಚಿತ್ರ 6.5ರಲ್ಲಿ, *DD* ರೇಖೆ ಮತ್ತು 45° ರೇಖೆಗಳು ಪರಸ್ಪರ ಛೇದಿಸಿರುವ '*E*' ಬಿಂದುವಿನಲ್ಲಿ ತೋರಿಸಲಾಗಿದೆ. ವ್ಯಾಪಾರವು ಸಮನಾಗಿರುವ ಉತ್ಪನ್ನ ಮಟ್ಟದ *Ytb* ಯಷ್ಟೇ ಸಮತೋಲನ ಉತ್ಪನ್ನಮಟ್ಟ *Y** ನಷ್ಟೇ ಇರಬೇಕೆಂಬುದಕ್ಕೆ ಕಾರಣಗಳೇನೂ ಇಲ್ಲ. ರೇಖಾಚಿತ್ರ 6.5ರಲ್ಲಿ ಸಮತೋಲನ ಉತ್ಪನ್ನವು *BC*ಗೆ ಸಮನಾದ ವ್ಯಾಪಾರ ಕೊರತೆಯನ್ನು ಹೊಂದಿದೆ.




**ರೇಖಾಚಿತ್ರ 6.5:** ಸಮತೋಲನ ಆದಾಯ ಮತ್ತು ನಿವ್ವಳ ರಫ್ತುಗಳು

ಸ್ವಾಯತ್ತ ವೆಚ್ಚದ (*G*) ಹೆಚ್ಚಳದ ಪರಿಣಾಮವನ್ನು ಪರಿಶೀಲಿಸಲು ಸಮತೋಲನ ಮಟ್ಟದ ಆದಾಯವಾದ *Y*ನಲ್ಲಿ ವ್ಯಾಪಾರವು ಸಮವಾಗಿದ್ದು, *Y* ಮತ್ತು $Y_{tb}$ಗಳು ಒಂದೇ ಆಗಿರುತ್ತವೆಂಬ ಒಂದು ಸನ್ನಿವೇಶವನ್ನು ಕಲ್ಪಿಸಿಕೊಳ್ಳೋಣ. ಸರ್ಕಾರವು ವೆಚ್ಚವನ್ನು ಅಧಿಕಗೊಳಿಸಿದರೆ, ರೇಖಾಚಿತ್ರ 6.6ರಲ್ಲಿ ತೋರಿಸಿರುವಂತೆ, ಸಮಗ್ರ ಬೇಡಿಕೆ *DD* ಯಿಂದ *DD'* ಗೆ ಮೇಲಕ್ಕೆ ಚಲಿಸುತ್ತದೆ ಮತ್ತು ಸಮತೋಲನವು *E* ಯಿಂದ *E'* ಗೆ ಮೇಲಕ್ಕೆ ಚಲಿಸುತ್ತದೆ ಹಾಗೂ ಆದಾಯವು *Y*ಯಿಂದ *Y'* ಗೆ ಏರುತ್ತದೆ. ಉತ್ಪನ್ನದ ಬಿಂಬಕವಾಗಿ *NX* ಅನುಸೂಚಿಯು ಪಲ್ಲಟಗೊಳ್ಳುವುದಿಲ್ಲ, ಏಕೆಂದರೆ *X* ಅಥವಾ *M*ಗೆ *G*ಯು ನೇರವಾಗಿ ಸಂಬಂಧಿಸಿಲ್ಲ, *G* ಯಲ್ಲಿನ ಹೆಚ್ಚಳಕ್ಕಿಂತ ಉತ್ಪನ್ನದಲ್ಲಿನ ಹೆಚ್ಚಳವು ಸ್ಪಷ್ಟವಾಗಿಯೇ ದೊಡ್ಡದಾಗಿದ್ದು, ಗುಣಕದ ಪರಿಣಾಮ (ಇರುತ್ತದೆ) ಕಂಡುಬರುತ್ತದೆ. ಇದು ಮುಚ್ಚಿದ ಆರ್ಥಿಕತೆಯ ತೆರನಾಗಿರುತ್ತದೆ, ಆದರೆ ಗುಣಕ ಮಾತ್ರ ಚಿಕ್ಕದಾಗಿರುತ್ತದೆ. *DD* ರೇಖೆಯು ಮುಚ್ಚಿದ ಆರ್ಥಿಕತೆಯ *AD* ರೇಖೆಗಿಂತ ಸಮತಲವಾಗಿರುತ್ತದೆ.




**ರೇಖಾಚಿತ್ರ 6.6:** ಅಧಿಕ ಸರ್ಕಾರಿ ವೆಚ್ಚದ ಪರಿಣಾಮ

ಆದಾಗ್ಯೂ *Y* ಯಿಂದ *Y'* ಗೆ ಉತ್ಪನ್ನದ ಹೆಚ್ಚಳವು *BC*ಗೆ ಸಮನಾದಷ್ಟು ವ್ಯಾಪಾರ ಕೊರತೆಗೆ ದಾರಿಯಾಗುತ್ತದೆ ವ್ಯಾಪಾರಕೊರತೆ ಮತ್ತು ಚಿಕ್ಕದಾದ ಗುಣಕ ಎರಡೂ ಒಂದೇ ಕಾರಣದಿಂದ ಉಂಟಾಗುತ್ತದೆ –ಈಗ ಬೇಡಿಕೆಯಲ್ಲಿನ ಹೆಚ್ಚಳವು ದೇಶೀಯ ಸರಕುಗಳ ಮೇಲಷ್ಟೇ ಅಲ್ಲದೆ ವಿದೇಶಿ ಸರಕುಗಳ ಮೇಲೆಯೂ ಬೀಳುತ್ತದೆ ಹಿಂದೆ ವಿವರಿಸಿರುವಂತೆ ಇದು ಚಿಕ್ಕಗುಣಕಕ್ಕೆ ಕಾರಣವಾಗುತ್ತದೆ ಮತ್ತು ಬೇಡಿಕೆಯ ಹೆಚ್ಚಳವು

ಆಮದುಗಳ ಮೇಲೆ ಬೀಳುತ್ತದೆ ಹಾಗೂ ರಫ್ತುಗಳು ಬದಲಾವಣೆಗೊಳ್ಳದೆ ಹಾಗೇ ಉಳಿಯುತ್ತದೆ. ಇದರ ಪರಿಣಾಮವೇ ವ್ಯಾಪಾರದ ಕೊರತೆ.

ಈ ಎರಡು ಸೂಚ್ಯಾರ್ಥಗಳು ಮಹತ್ವವಾಗಿವೆ, ಆರ್ಥಿಕತೆಯು ಹೆಚ್ಚು ಮುಕ್ತವಾದಷ್ಟು, ಆದಾಯದ ಮೇಲಿನ ಪರಿಣಾಮ ಕಡಿಮೆ ಇರುತ್ತದೆ ಮತ್ತು ವ್ಯಾಪಾರ ಬಾಕಿಯ ಮೇಲೆ ಪ್ರತಿಕೂಲ ಪರಿಣಾಮ ಹೆಚ್ಚಾಗಿರುತ್ತದೆ. ಉದಾಹರಣೆಗೆ, ಒಂದು ದೇಶವು *GDP*ಯ ಸುಮಾರು ಶೇಕಡ 70 ರಷ್ಟು ಆಮದುಗಳ ಅನುಪಾತವನ್ನು ಹೊಂದಿದೆ ಎಂದು ಕೊಳ್ಳೋಣ. ಬೇಡಿಕೆ ಹೆಚ್ಚಾದಾಗ ಶೇಕಡ 70ರಷ್ಟು ಈ ಬೇಡಿಕೆಯಲ್ಲಿನ ಹೆಚ್ಚಳವು ಅಧಿಕ ಆಮದುಗಳಿಗೆ ಹೋಗುತ್ತದೆ ಮತ್ತು ಕೇವಲ ಶೇಕಡ 30ರಷ್ಟು ಬೇಡಿಕೆಯಲ್ಲಿನ ಹೆಚ್ಚಳವು ದೇಶಿಯ ಸರಕುಗಳಿಗೆ ಹೋಗುತ್ತದೆಂಬುದನ್ನು ಇದು ಸೂಚಿಸುತ್ತದೆ. 'ಹೀಗಾಗಿ '*G* 'ಯಲ್ಲಿನ ಹೆಚ್ಚಳವು ದೇಶದ ವ್ಯಾಪಾರ ಕೊರತೆಯ ಅಧಿಕ ಹೆಚ್ಚಳಕ್ಕೆ ಮತ್ತು ಉತ್ಪನ್ನ ಮತ್ತು ಆದಾಯದಲ್ಲಿ ಸಣ್ಣ ಹೆಚ್ಚಳವನ್ನು ಉಂಟು ಮಾಡುತ್ತದೆ, ದೇಶೀಯ ಬೇಡಿಕೆಯ ವಿಸ್ತರಣೆ ದೇಶಕ್ಕೆ ಆಕರ್ಷಕವಲ್ಲದ ನೀತಿಯಾಗಿ ಮಾಡುತ್ತದೆ.

**ಪರಸ್ಪರಾವಲಂಬಿತ ಆದಾಯಗಳು – ವಿದೇಶಿ ಬೇಡಿಕೆಯಲ್ಲಿ ಹೆಚ್ಚಳ**

***Interedependent Incomes - Increase in Foreign Trade***

ಇಲ್ಲಿಯವರೆಗೆ ನಾವು ವಿದೇಶಿ ಆದಾಯ, ಬೆಲೆಗಳು ಮತ್ತು ವಿನಿಮಯ ದರಗಳು ಬದಲಾಗದೇ ಇರುತ್ತವೆ ಎಂದು ಕಲ್ಪಿಸಿಕೊಂಡಿದ್ದೇವೆ. ಬೆಲೆಗಳು ಮತ್ತು ವಿನಿಮಯದರನ್ನು ಸ್ಥಿರವಾಗಿಟ್ಟುಕೊಂಡು ಮೊದಲು ವಿದೇಶಿ ಆದಾಯ $Y_f$ ನಲ್ಲಿ ಹೆಚ್ಚಳವನ್ನು ಪರಿಗಣಿಸೋಣ ರೇಖಾಚಿತ್ರ 6.7ರಲ್ಲಿ ದೇಶೀಯ ಸರಕುಗಳ ಆರಂಭಿಕ ಬೇಡಿಕೆಯನ್ನು *DD* ರೇಖೆಯು ನೀಡಿದೆ. ಸಮತೋಲನ ಬಿಂದುವು *E* ಆಗಿದೆ, ಉತ್ಪನ್ನಮಟ್ಟ *Y* ಆಗಿದೆ. ಪ್ರಾರಂಭದಲ್ಲಿ, *Y* ಜೊತೆಗಿನ ನಿವ್ವಳ ರಫ್ತುಗಳು ಶೂನ್ಯಕ್ಕೆ ಸಮವಾಗಿರುವಂತೆ ವ್ಯಾಪಾರವು ಸಮವಾಗಿ ಇರುತ್ತದೆ.




**ರೇಖಾಚಿತ್ರ 6.7:** ಅಧಿಕ ವಿದೇಶೀ ಬೇಡಿಕೆಯ ಪರಿಣಾಮ.

ರೇಖಾಚಿತ್ರ 6.4ರಲ್ಲಿ ವಿವರಿಸಿರುವಂತೆ *AD* ರೇಖೆಯು *DD* ರೇಖೆಗಿಂತ ಕಡಿದಾಗಿ ಇರುತ್ತದೆ, ವ್ಯಾಪಾರವು '*E*'ನಲ್ಲಿ ಸಮಗೊಂಡರೆ ಈ ವ್ಯತ್ಯಾಸವು ನಿವ್ವಳ ರಫ್ತಿಗೆ ಸಮವಾಗಿರುತ್ತದೆ, *DD* ಯು *AD*ಯನ್ನು *E*ನಲ್ಲಿ ಛೇದಿಸುತ್ತದೆ. $Y_f$ನಲ್ಲಿ ಹೆಚ್ಚಳದ ನೇರ ಪರಿಣಾಮವು ರಫ್ತುಗಳನ್ನು ಹೆಚ್ಚಿಸುವುದಾಗಿದೆ. ಒಂದು ನೀಡಿದ ದೇಶೀಯ ಆದಾಯದ ಮಟ್ಟಕ್ಕೆ ಇದು ದೇಶೀಯ ಸರಕುಗಳ ಬೇಡಿಕೆಯನ್ನು ಹೆಚ್ಚಿಸುತ್ತದೆ, *DD*ಯ *DD*'ವರೆಗೆ ಪಲ್ಲಟಗೊಳ್ಳುತ್ತದೆ ಒಂದು ನೀಡಿದ ಆದಾಯದ ಮಟ್ಟದಲ್ಲಿ ರಫ್ತುಗಳು ಹೆಚ್ಚಿದಾಗ ನಿವ್ವಳ ರಫ್ತುಗಳ ರೇಖೆಯು ಸಹ *NX* 'ಗೆ ಹೆಚ್ಚಾಗುತ್ತದೆ. ಹೊಸ ಸಮತೋಲನವು *E* ' ಬಿಂದುವಿನಲ್ಲಿರುತ್ತದೆ, ನಿವ್ವಳ ಉತ್ಪನ್ನ ಮಟ್ಟ *Y* ' ಆಗಿರುತ್ತದೆ. $Y_f$ ನಲ್ಲಿನ ಹೆಚ್ಚಳವು ಗುಣಕದ ಮೂಲಕ ದೇಶೀಯ ಆದಾಯದ ಹೆಚ್ಚಳಕ್ಕೆ ಕಾರಣವಾಗುತ್ತದೆ.

ವ್ಯಾಪಾರ ಬಾಕಿಯು ಏನಾಗುತ್ತದೆ? *Y*ನಲ್ಲಿ ಹೆಚ್ಚಳವು ಆಮದುಗಳಲ್ಲಿನ ಭಾರೀ ಹೆಚ್ಚಳಕ್ಕೆ ಕಾರಣವಾದರೆ. ವ್ಯಾಪಾರ ಬಾಕಿಯು ಪ್ರತಿಕೂಲವಾಗಬಹುದು. ಆದರೆ ಇಲ್ಲಿ ಹಾಗಾಗುವುದಿಲ್ಲ ಹೊಸ ಆದಾಯದ ಮಟ್ಟದಲ್ಲಿ ದೇಶಿಯ ಬೇಡಿಕೆಯನ್ನು *DE* ಯಿಂದ ನೀಡಲಾಗಿದೆ. ನಿವ್ವಳ ರಫ್ತುಗಳು *CE*' ನಿಂದ ನೀಡಲಾಗಿದೆ. *AD* ರೇಖೆಯು *DD*' ಗಿಂತ ಕೆಳಗಿರುವುದರಿಂದ, *CE* ರೇಖೆಯು ಅಗತ್ಯವಾಗಿ ಧನಾತ್ಮಕವಾಗಿರುತ್ತದೆ. ಹೀಗಾಗಿ

ಆಮದುಗಳು ಹೆಚ್ಚಾದಾಗ ಅವು ರಫ್ತು ಹೆಚ್ಚಳಕ್ಕೆ ಅಡ್ಡಿಯುಂಟು ಮಾಡುವುದಿಲ್ಲ ಇದರಿಂದ ವ್ಯಾಪಾರ ಮಿಗುತೆ ಇರುತ್ತದೆ. ಇದಕ್ಕೆ ಪ್ರತಿಯಾಗಿ ವಿದೇಶದಲ್ಲಿನ ಹಿಂಜರಿತವು ದೇಶಿಯ ರಫ್ತುಗಳನ್ನು ಕಡಿಮೆ ಮಾಡುತ್ತದೆ ಮತ್ತು ವ್ಯಾಪಾರದ ಕೊರತೆಗೆ ಕಾರಣವಾಗುತ್ತದೆ. ಹೀಗಾಗಿ, ಒಂದು ದೇಶದಲ್ಲಿನ ಸಮೃದ್ಧಿ (ಬೆಲೆ ಏರಿಕೆ) ಮತ್ತು ಹಿಂಜರಿತಗಳು (ಬೆಲೆ ಇಳಿಕೆ) ಸರಕು ಮತ್ತು ಸೇವೆಗಳ ಅಂತರರಾಷ್ಟ್ರೀಯ ವ್ಯಾಪಾರದ ಮೂಲಕ ಇತರೆ ದೇಶಗಳಿಗೆ ಹರಡುತ್ತದೆ.

**ಬೆಲೆಗಳಲ್ಲಿನ ಬದಲಾವಣೆ** ***Change in Prices*:** ವಿನಿಮಯ ದರವು ಸ್ಥಿರವಾಗಿದೆಯೆಂಬ ಕಲ್ಪನೆಯ ಮೇಲೆ ಬೆಲೆಗಳಲ್ಲಿನ ಬದಲಾವಣೆಯ ಪರಿಣಾಮಗಳನ್ನು ನಾವು ಪರಿಗಣಿಸೋಣ. ವಿದೇಶಿ ಬೆಲೆಗಳು ಸ್ಥಿರವಾಗಿದ್ದಾಗ ದೇಶಿಯ ಉತ್ಪನ್ನಗಳ ಬೆಲೆಗಳು ಕಡಿಮೆಯಾದರೆ, ದೇಶಿಯ ರಫ್ತುಗಳು ಏರಿಕೆಯಾಗುತ್ತವೆ ಸಮಗ್ರ ಬೇಡಿಕೆಯನ್ನು ಹೆಚ್ಚಿಸುತ್ತವೆ. ಹೀಗಾಗಿ ನಮ್ಮ ಉತ್ಪನ್ನ ಮತ್ತು ಆದಾಯ ಹೆಚ್ಚಾಗುತ್ತದೆ ಇದಕ್ಕೆ ಸಾದೃಶ್ಯವಾಗಿ ಒಂದು ದೇಶದ ರಫ್ತುಗಳ ಬೆಲೆಗಳಲ್ಲಿನ ಏರಿಕೆಯು ಆ ದೇಶದ ನಿವ್ವಳ ರಫ್ತುಗಳ ಉತ್ಪನ್ನ ಮತ್ತು ಆದಾಯವನ್ನು ಕಡಿಮೆಮಾಡುತ್ತದೆ. ಅದೇ ರೀತಿಯಾಗಿ ವಿದೇಶಗಳಲ್ಲಿ ಬೆಲೆಯಲ್ಲಿನ ಹೆಚ್ಚಳವು ವಿದೇಶಿ ಉತ್ಪನ್ನಗಳನ್ನು ಬಾರೀ ದುಬಾರಿಯನ್ನಾಗಿಸುತ್ತದೆ, ಹೀಗಾಗಿ ಪುನಃ ನಿವ್ವಳ ರಫ್ತುಗಳು ಮತ್ತು ದೇಶಿಯ ಉತ್ಪನ್ನ ಹಾಗೂ ಆದಾಯಗಳು ಹೆಚ್ಚಾಗುತ್ತವೆ. ವಿದೇಶಗಳಲ್ಲಿ ಬೆಲೆಯಲ್ಲಿನ ಕಡಿತವು ಇದಕ್ಕೆ ವಿರುದ್ಧ ಪರಿಣಾಮಗಳನ್ನು ಬೀರುತ್ತದೆ.

**ವಿನಿಮಯ ದರದ ಬದಲಾವಣೆಗಳು** ***Exchange Rate Changes*:** ನಾಮಮಾತ್ರ ವಿನಿಮಯ ದರಗಳಲ್ಲಿನ ಬದಲಾವಣೆಗಳು ನೈಜ ವಿನಿಮಯ ದರಗಳಲ್ಲಿ ಬದಲಾವಣೆ ತರುತ್ತದೆ ಮತ್ತು ಇದರಿಂದ ಅಂತರಾಷ್ಟ್ರೀಯ ಸಾಪೇಕ್ಷ ಬೆಲೆಗಳು ಕೂಡ ಬದಲಾವಣೆಗೊಳ್ಳುತ್ತವೆ. ರೂಪಾಯಿಯ ಅಪಮೌಲ್ಯವು ವಿದೇಶಿ ಸರಕುಗಳ ಕೊಳ್ಳುವಿಕೆಯ ವೆಚ್ಚವನ್ನು ಹೆಚ್ಚಿಸುತ್ತದೆ ಮತ್ತು ದೇಶಿಯ ಸರಕುಗಳು ಕಡಿಮೆ ವೆಚ್ಚದಾಯಕವಾಗುತ್ತವೆ. ಇದು ನಿವ್ವಳ ರಫ್ತುಗಳನ್ನು ಹೆಚ್ಚಿಸುತ್ತದೆ, ಆದ್ದರಿಂದ ಸಮಗ್ರ ಬೇಡಿಕೆಯು ಹೆಚ್ಚಾಗುತ್ತದೆ. ಪ್ರತಿಯಾಗಿ, ರೂಪಾಯಿ ಮೌಲ್ಯವು ಹೆಚ್ಚಾದರೆ ನಿವ್ವಳ ರಫ್ತುಗಳು ಕಡಿಮೆಯಾಗುತ್ತವೆ ಮತ್ತು ಅದಾಗ್ಯೂ ಸಮಗ್ರ ಬೇಡಿಕೆಯನ್ನು ಕಡಿತಗೊಳಿಸುತ್ತದೆ. ಅಂತರಾಷ್ಟ್ರೀಯ ವ್ಯಾಪಾರಿ ನಮೂನೆಗಳು ವಿನಿಮಯ ದರಗಳಲ್ಲಿನ ಬದಲಾವಣೆಗಳಿಗೆ ಪ್ರತಿಕ್ರಿಯಿಸಲು ಸಮಯ ತೆಗೆದುಕೊಳ್ಳುತ್ತವೆ ಎಂಬುದನ್ನು ನಾವು ಗಮನಿಸಬೇಕು. ನಿವ್ವಳ ರಫ್ತುಗಳಲ್ಲಿನ ಯಾವುದೇ ಸುಧಾರಣೆ ಸ್ಪಷ್ಟವಾಗುವುದಕ್ಕಿಂತ ಮುಂಚಿತವಾಗಿ ಸಾಕಷ್ಟು ಸಮಯ ಕಳೆದುಹೋಗಬಹುದು.



## 6.4 ವ್ಯಾಪಾರದ ಕೊರತೆ, ಉಳಿತಾಯಗಳು ಮತ್ತು ಹೂಡಿಕೆ *Trade Deficits Savings and Investment*

ಮುಕ್ತ ವ್ಯಾಪಾರ ಕೊರತೆಗಳು ಎಚ್ಚರಿಕೆ ದನಿಯಾಗ ಬಹುದೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮುಚ್ಚಿದ ಆರ್ಥಿಕತೆ ಮತ್ತು ಮುಕ್ತ ಆರ್ಥಿಕತೆಯ ನಡುವಿನ ಮುಖ್ಯವಾದ ವ್ಯತ್ಯಾಸವೆಂದರೆ ಮುಚ್ಚಿದ ಆರ್ಥಿಕತೆಯಲ್ಲಿ ಉಳಿತಾಯ ಮತ್ತು ಹೂಡಿಕೆ ಯಾವಾಗಲೂ ಸಮನಾಗಿರಲೇಬೇಕು, ಮುಕ್ತ ಆರ್ಥಿಕತೆಯಲ್ಲಿ ಅವು ಭಿನ್ನವಾಗಿರಬಹುದು ಎಂಬುದು ಮುಚ್ಚಿದ ಆರ್ಥಿಕತೆ ಮತ್ತು ಮುಕ್ತ ಆರ್ಥಿಕತೆಯ ನಡುವಿನ ವ್ಯತ್ಯಾಸವಾಗಿದೆ ಎಂಬುದನ್ನು ನಾವು ಗಮನಿಸುತ್ತೇವೆ.

ಸಮೀಕರಣ 6.5 ರಿಂದ ನಾವು

$Y – C – G = I + NX$ ಅನ್ನು ಪಡೆಯುತ್ತೇವೆ. (6.16)

ಅಥವಾ $S = I + NX$ (6.17)

ನಾವು ಖಾಸಗಿ ಉಳಿತಾಯ $S^p$ (ವೆಚ್ಚ ಮಾಡಬಹುದಾದ ಆದಾಯದ ಅನುಭೋಗದ ಭಾಗಕ್ಕಿಂತ ಉಳಿತಾಯದ ಭಾಗ $Y – T – C$ ಆಗಿರುತ್ತದೆ.) ಮತ್ತು ಸರ್ಕಾರದ ಆದಾಯ $S^g$ (ಸರ್ಕಾರಗಳ 'ಆದಾಯ', ಅದರ ನಿವ್ವಳ ಆದಾಯ – ಅದರ ಅನುಭೋಗ ಸರ್ಕಾರಿ ಕೊಳ್ಳುವಿಕೆಗಳು $T–G$) ಒಟ್ಟಾಗಿ ಇವರೆಡೂ ರಾಷ್ಟ್ರೀಯ ಉಳಿತಾಯಕ್ಕೆ ಸೇರ್ಪಡೆಯಾಗುತ್ತದೆ.

$$S = Y – C – G = (Y – T – C) + (T – G) = S^p + S^g \quad (6.18)$$

ಹೀಗಾಗಿ (6.16) ಮತ್ತು (6.17)ರಿಂದ ನಾವು

$S = S^p + S^g = I + NX$ನ್ನು

ಅಥವಾ $NX = (S^p - I) + S^g = (S^p - I) + (T - G)$ ಅನ್ನು ಪಡೆಯುತ್ತೇವೆ. (6.19)

ಒಂದು ದೇಶವು ವ್ಯಾಪಾರ ಕೊರತೆ ಹೊಂದಿದ್ದಾಗ ಉಳಿತಾಯದ ಇಳಿಕೆ, ಹೂಡಿಕೆಯ ಹೆಚ್ಚಳ ಅಥವಾ ಮುಂಗಡ ಪತ್ರದ ಕೊರತೆಯ ಹೆಚ್ಚಳ ಇದೆಯೇ ಎಂದು ನೋಡಲು ಸಮೀಕರಣ (6.18)ರ ಬಲಭಾಗದ ಕಡೆ ನೋಡುವುದು ಮುಖ್ಯವಾಗಿದೆ. ವ್ಯಾಪಾರದ ಕೊರತೆಯು ಸಣ್ಣ ಪ್ರಮಾಣದ ಉಳಿತಾಯ ಅಥವಾ ಒಂದು ದೊಡ್ಡ ಪ್ರಮಾಣದ ಮುಂಗಡ ಪತ್ರದ ಕೊರತೆಯನ್ನು ಪ್ರತಿಬಿಂಬಿಸಿದರೆ ಒಂದು ದೇಶವು ತನ್ನ ಧೀರ್ಘಾವದಿಯ ನಿರೀಕ್ಷೆಗಳ ಬಗ್ಗೆ ಕಾಳಜಿವಹಿಸುವ ಅಗತ್ಯವಿದೆ (ಆರ್ಥಿಕತೆಯು ವ್ಯಾಪಾರ ಕೊರತೆ ಮತ್ತು ಮುಂಗಡ ಪತ್ರದ ಕೊರತೆಗಳೆರಡನ್ನು ಹೊಂದಿದ್ದಾಗ ಅವಳಿ ಕೊರತೆಗಳನ್ನು ಎದುರಿಸುತ್ತಿದೆ ಎಂದು ಹೇಳಲಾಗುತ್ತದೆ). ಕೊರತೆಯು ಅಧಿಕ ಖಾಸಗಿ ಅಥವಾ ಸರ್ಕಾರಿ ಅನುಭೋಗವನ್ನು ಬಿಂಬಿಸಬಹುದು. ಇಂತಹ ಸನ್ನಿವೇಶಗಳಲ್ಲಿ ಸಾಕಷ್ಟು ಬೆಳವಣಿಗೆಯನ್ನು ಉಂಟು ಮಾಡುವಷ್ಟು ದೇಶದ ಬಂಡವಾಳದ ದಾಸ್ತಾನು ವೇಗವಾಗಿ ಏರಿಕೆಯಾಗುವುದಿಲ್ಲ (ಬೆಳವಣಿಗೆಯ ಲಾಭಾಂಶ ಎಂದು ಕರೆಯುವ), ಅದು ಅದರ ಸಾಲವನ್ನು ಮರುಪಾವತಿ ಮಾಡುವ ಅವಶ್ಯಕತೆಯಿರುತ್ತದೆ. ವ್ಯಾಪಾರ ಕೊರತೆಯು ಹೆಚ್ಚು ತ್ವರಿತವಾಗಿ ಬಂಡವಾಳ ದಾಸ್ತಾನನ್ನು ನಿರ್ಮಾಣ ಮಾಡುವಂತಹ ಮತ್ತು ಭವಿಷ್ಯದ ಉತ್ಪನವನ್ನು ಹೆಚ್ಚಿಸುವಂತಹ ಹೂಡಿಕೆಯಲ್ಲಿನ ಹೆಚ್ಚಳವನ್ನು ಬಿಂಬಿಸಿದರೆ ಆಗ ಹೆಚ್ಚು ಚಿಂತಿಸುವ ಅಗತ್ಯವಿಲ್ಲ. ಆದಾಗ್ಯೂ, ಖಾಸಗಿ ಉಳಿತಾಯ, ಹೂಡಿಕೆ ಮತ್ತು ವ್ಯಾಪಾರ ಕೊರತೆಗಳು ಜೊತೆಯಾಗಿ ನಿರ್ಧಾರಿತವಾಗುವುದರಿಂದ ಇತರೆ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲೇ ಬೇಕಾಗುತ್ತದೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ.

* ಇಲ್ಲಿ ವಿಶ್ಲೇಷಣೆಯನ್ನು ಸರಳೀಕರಣಗೊಳಿಸಲು ವ್ಯಾಪಾರ ಬಾಕಿಯನ್ನು ಚಾಲ್ತಿ ಖಾತೆಗೆ ಪರ್ಯಾಯವಾಗಿ ತೆಗೆದುಕೊಳ್ಳುತ್ತೇವೆ, ಅಗೋಚರ ಮತ್ತು ವರ್ಗಾವಣೆ ಪಾವತಿಯನ್ನು ಅಲಕ್ಷಿಸಲಾಗುತ್ತದೆ. ವ್ಯಾಪಾರ ಕೊರತೆಯನ್ನು ಸರಿದೂಗಿಸಲು ಅಗೋಚರಗಳು ಒಂದು ಪ್ರಮುಖ ದಾರಿಯಾಗಿ ಸಹಾಯವಾಗುತ್ತವೆಂಬುದನ್ನು ಕೋಷ್ಟಕ 6.1 ತೋರಿಸುತ್ತದೆ.






## ಸಾರಾಂಶ *Summary*

- ಉತ್ಪನ್ನ ಮತ್ತು ಹಣಕಾಸಿನ ಮಾರುಕಟ್ಟೆಯಲ್ಲಿನ ಮುಕ್ತತೆಯು ದೇಶೀಯ ಮತ್ತು ವಿದೇಶಿ ಸರಕುಗಳ ನಡುವೆ ಮತ್ತು ದೇಶೀಯ ಮತ್ತು ವಿದೇಶೀ ಆಸ್ತಿಗಳ ನಡುವಿನ ಆಯ್ಕೆಯನ್ನು ಅನುಮತಿಸುತ್ತದೆ.
- *BOP*ಯು ಜಗತ್ತಿನ ಇತರೆ ದೇಶಗಳೊಂದಿನ ದೇಶದ ವ್ಯವಹಾರವನ್ನು ದಾಖಲಿಸುತ್ತದೆ.
- ಚಾಲ್ತಿ ಖಾತೆ ಬಾಕಿಯು, ಸರಕು ವ್ಯಾಪಾರ, ಸೇವೆಗಳು ಮತ್ತು ಜಗತ್ತಿನ ಇತರೆ ದೇಶಗಳಿಂದ ಸ್ವೀಕರಿಸಿದ ನಿವ್ವಳ ವರ್ಗಾವಣೆಗಳ ಒಟ್ಟು ಮೊತ್ತವಾಗಿದೆ. ಬಂಡವಾಳ ಖಾತೆ ಬಾಕಿಯು ಜಗತ್ತಿನ ಇತರೆ ದೇಶಗಳಿಗೆ ಕಳುಹಿಸಿದ ಬಂಡವಾಳದ ಹರಿವನ್ನು ಕಳೆದು ಬಂಡವಾಳದ ಹರಿವಿಗೆ ಸಮನಾಗಿರುತ್ತದೆ.
- ಒಂದು ಚಾಲ್ತಿ ಖಾತೆ ಕೊರತೆಗೆ ಜಗತ್ತಿನ ಇತರೆ ದೇಶಗಳಿಂದ ಬಂದ ನಿವ್ವಳ ಬಂಡವಾಳ ಹರಿವಿನಿಂದ ಹಣಕಾಸನ್ನು ಭರಿಸಲಾಗುತ್ತದೆ. ಹೀಗಾಗಿ ಇದನ್ನು ಬಂಡವಾಳ ಖಾತೆ ಮಿಗುತೆಯಿಂದ ಭರಿಸಲಾಗುತ್ತದೆ ಎಂದು ಹೇಳಲಾಗುತ್ತದೆ.
- ನಾಮಮಾತ್ರ ವಿನಿಮಯದರವು ದೇಶೀಯ ಕರೆನ್ಸಿಯ ರೂಪದಲ್ಲಿನ ವಿದೇಶೀ ಕರೆನ್ಸಿಯ ಒಂದು ಘಟಕದ ಬೆಲೆ ಎಂದಾಗುತ್ತದೆ.
- ನೈಜ ವಿನಿಮಯ ದರವು, ದೇಶೀಯ ಸರಕುಗಳ ರೂಪದಲ್ಲಿ ವಿದೇಶಿ ಸರಕುಗಳ ಸಾಪೇಕ್ಷ ಬೆಲೆ ಎಂಬ ಅರ್ಥ ನೀಡುತ್ತದೆ. ಇದು ದೇಶೀಯ ಬೆಲೆ ಮಟ್ಟದಿಂದ ಭಾಗಿಸಲ್ಪಟ್ಟ ವಿದೇಶಿ

ಬೆಲೆ ಮಟ್ಟದ ನಾಮ ಮಾತ್ರ ವಿನಿಮಯ ದರಕ್ಕೆ ಸಮನಾಗಿದೆ. ಇದು ಅಂತರರಾಷ್ಟ್ರಿಯ ವ್ಯಾಪಾರದಲ್ಲಿನ ಒಂದು ದೇಶದ ಅಂತರರಾಷ್ಟ್ರೀಯ ಸ್ಪರ್ಧಾ ಸಾಮರ್ಥ್ಯವನ್ನು ಮಾಪನ ಮಾಡುತ್ತದೆ ನೈಜ ವಿನಿಮಯ ದರವು ಒಂದಕ್ಕೆ ಸಮನಾಗಿದ್ದಾಗ, ಎರಡು ದೇಶಗಳು ಕೊಳ್ಳುವ ಶಕ್ತಿಯ ಸಮಾನತೆಯಲ್ಲಿವೆ ಎಂದು ಹೇಳಲಾಗುತ್ತದೆ.

- ಸ್ಥಿರ ವಿನಿಮಯ ಪದ್ಧತಿಯು ಪ್ರತಿಯೊಂದು ಭಾಗವಹಿಸಿದ ದೇಶಗಳು ಒಂದು ಸ್ಥಿರಬೆಲೆಯಲ್ಲಿ ತನ್ನ ಕರೆನ್ಸಿಯನ್ನು ತಾನಾಗಿಯೇ ಸುಲಭವಾಗಿ ಚಿನ್ನಕ್ಕೆ ಪರಿವರ್ತಿಸುವ ಚಿನ್ನದ ಪ್ರಮಿತಿಯ ಸಾರವಾಗಿತ್ತು. ನಿಗದಿತ ವಿನಿಮಯ ದರವು ಒಂದು ನೀತಿಯ ಚಲಕವಾಗಿದೆ ಮತ್ತು ಅಧಿಕೃತ ಕ್ರಿಯೆಯ ಮೂಲಕ ಇದು ಬದಲಾಗಬಹುದು (ಅಪಮೌಲ್ಯ).
- ಪರಿಶುದ್ಧ (ಸ್ಪಷ್ಟ) ತೇಲುವಿಕೆ (ಬದಲಾಗುವಿಕೆ) ಯಡಿಯಲ್ಲಿ, ಕೇಂದ್ರಬ್ಯಾಂಕಿನ ಯಾವುದೇ ಮದ್ಯಪ್ರವೇಶವಿಲ್ಲದೆ ವಿನಿಮಯದರವು ಮಾರುಕಟ್ಟೆಯಿಂದ ನಿರ್ಧಾರವಾಗುತ್ತದೆ. ನಿರ್ವಹಣಾ ತೇಲುವಿಕೆಯ ಸನ್ನಿವೇಶದಲ್ಲಿ, ವಿನಿಮಯದರದಲ್ಲಿ ಏರಿಳಿತಗಳನ್ನು ಕಡಿಮೆ ಮಾಡಲು ಕೇಂದ್ರ ಬ್ಯಾಂಕು ಮಧ್ಯಪ್ರವೇಶ ಮಾಡುತ್ತದೆ.
- ಮುಕ್ತ ಆರ್ಥಿಕತೆಯಲ್ಲಿ ದೇಶೀಯ ಸರಕುಗಳ ಬೇಡಿಕೆ = ಸರಕುಗಳಿಗೆ ದೇಶೀಯ ಬೇಡಿಕೆ (ಅನುಭೋಗ, ಹೂಡಿಕೆ ಮತುತ ಸರ್ಕಾರದ ವೆಚ್ಚ) + ರಫ್ತುಗಳು – ಆಮದುಗಳು.
- ಮುಕ್ತ ಆರ್ಥಿಕತೆಯ ಗುಣಕವು ಮುಚ್ಚಿದ ಆರ್ಥಿಕಯಲ್ಲಿನ ಗುಣಕಕ್ಕಿಂತ ಸಣ್ಣ (ಕಡಿಮೆ ಪ್ರಮಾಣ) ದಾಗಿರುತ್ತದೆ, ಏಕೆಂದರೆ ದೇಶೀಯ ಬೇಡಿಕೆಯಲ್ಲಿನ ಒಂದು ಭಾಗವು ವಿದೇಶಿ ಸರಕುಗಳ ಮೇಲಾಗುತ್ತದೆ. ಆದ್ದರಿಂದ ಸ್ವಾಯತ್ತ ಬೇಡಿಕೆಯಲ್ಲಿನ ಹೆಚ್ಚಳವು, ಮುಚ್ಚಿದ ಆರ್ಥಿಕತೆಗೆ ಹೋಲಿಸಿದರೆ, ಉತ್ಪನ್ನದಲ್ಲಿ ಒಂದು ಸಣ್ಣ ಪ್ರಮಾಣದ ಹೆಚ್ಚಳಕ್ಕೆ ಕಾರಣವಾಗುತ್ತದೆ. ಇದು ಪ್ರತಿಕೂಲ ವ್ಯಾಪಾರ ಬಾಕಿಗೆ ಕಾರಣವಾಗುತ್ತದೆ.
- ವಿದೇಶೀ ಆದಾಯದಲ್ಲಿನ ಹೆಚ್ಚಳವು (ಅಧಿಕ) ಹೆಚ್ಚಾದ ರಪ್ತಿಗೆ ಕಾರಣವಾಗುತ್ತದೆ ಮತ್ತು ಇದು ದೇಶೀಯ ಉತ್ಪನ್ನವನ್ನು ಹೆಚ್ಚಿಸುತ್ತದೆ ಇದು ವ್ಯಾಪಾರ ಬಾಕಿಯನ್ನೂ ಸುಧಾರಿಸುತ್ತದೆ.
- ಒಂದು ದೇಶ ಪಡೆದ ಸಾಲದ ನಿಧಿಗಳನ್ನು ಹೂಡಿಕೆ ಮಾಡಿದರೆ ಅದರಿಂದ ಉತ್ಪತ್ತಿಯಾದ ಬೆಳವಣಿಗೆಯ ದರವು ಬಡ್ಡಿದರಕ್ಕಿಂತ ಹೆಚ್ಚಾದಾಗ, ವ್ಯಾಪಾರ ಕೊರತೆಗಳನ್ನು ಎಚ್ಚರಿಕೆಯ ಗಂಟೆ ಎಂದು ಹೇಳುವ ಅಗತ್ಯವಿರುವುದಿಲ್ಲ.

ಪ್ರಮುಖ ಪರಿಭಾಷೆಗಳು
*Key Concepts*

| | |
|---|---|
| ಮುಕ್ತ ಆರ್ಥಿಕತೆ | ಸಂದಾಯಬಾಕಿ |
| ಚಾಲ್ತಿ ಖಾತೆ ಕೊರತೆ | ಅಧಿಕೃತ ನಿಧಿಯ ವ್ಯವಹಾರಗಳು |
| ಸ್ವಾಯತ್ತ ಮತ್ತು ಸರಿಪಡಿಸಿದ ವ್ಯವಹಾರಗಳು | ನಾಮಮಾತ್ರ ಮತ್ತು ನೈಜ ವಿನಿಮಯದರ |
| ಕೊಳ್ಳುವ ಶಕ್ತಿಯ ಸಮಾನತೆ | ಬದಲಾಗುವ ವಿನಿಮಯ ದರ |
| ಸವಕಳಿ | ಬಡ್ಡಿದರ ವ್ಯತ್ಯಾಸ |
| ಸ್ಥಿರ ವಿನಿಮಯ ದರ | ಅಪಮೌಲ್ಯೀಕರಣ |
| ನಿರ್ವಹಣಾ ತೇಲುವಿಕೆ | ನಿವ್ವ ರಫ್ತುಗಳು |
| ಸೀಮಾಂತ ಆಮದು ಪ್ರವೃತ್ತಿ | |
| ಮುಕ್ತ ಆರ್ಥಿಕತೆಯ ಗುಣಕ | |

## ಪೆಟ್ಟಿಗೆ – 6.2 ವಿನಿಮಯದರ ನಿರ್ವಹಣೆ : ಭಾರತದ ಅನುಭವ

ಅಂತರರಾಷ್ಟ್ರೀಯ ಮತ್ತು ದೇಶಿಯ ಅಭಿವೃದ್ಧಿಗಳ ಜೊತೆಗೆ ಭಾರತದ ವಿನಿಮಯ ನೀತಿಯು ವಿಕಸನಗೊಂಡಿದೆ. ಭಾರತವು ಬ್ರಿಟನ್ ಜೊತೆ ಹೊಂದಿದ್ದ ಐತಿಹಾಸಿಕ ಸಂಬಂಧದ ಕಾರಣ ಸ್ವಾತಂತ್ರ್ಯಾನಂತರ ಭಾರತದ ರೂಪಾಯಿಯನ್ನು ಪೌಂಡ್ ಸ್ಟರ್ಲಿಂಗ್‌ಗೆ ನಿಗದಿಪಡಿಸಲಾಗಿತ್ತು – ಬ್ರಿಟನ್‌ವುಡ್ಸ್ ಪದ್ಧತಿ ಆಗ ಅಸ್ಥಿತ್ವದಲ್ಲಿತ್ತು. ಒಂದು ಪ್ರಮುಖ ಬೆಳವಣಿಗೆಯೆಂದರೆ, 1966 ಜೂನ್‌ನಲ್ಲಿ ಭಾರತದ ರೂಪಾಯಿಯನ್ನು ಶೇಕಡ 36.5 ರಷ್ಟನ್ನು ಅಪಮೌಲ್ಯಗೊಳಿಸಿದ್ದುದು. ಬ್ರಿಟನ್ ವುಡ್ಸ್ ಪದ್ಧತಿಯು ಪಥನಗೊಂಡಿದ್ದರಿಂದ ಹಾಗೂ ಭಾರತದ ವ್ಯಾಪರದಲ್ಲಿ *UK* ನ ಪಾಲು ಕಡಿಮೆಯಾಗುತ್ತಿದ್ದುದರಿಂದ, ರೂಪಾಯಿಯನ್ನು 1975 ಸೆಪ್ಟೆಂಬರ್‌ನಲ್ಲಿ ಪೌಂಡ್ ಸ್ಟರ್ಲಿಂಗ್ ನಿಂದ ಬೇರ್ಪಡಿಸಲಾಯಿತು. 1975ರಿಂದ 1992 ರ ನಡುವಿನ ಅವಧಿಯಲ್ಲಿ ಭಾರತದ ಪ್ರಮುಖ ವ್ಯಾಪಾರಿ ಪಾಲುದಾರರ ಕರೆನ್ಸಿಗಳ ತೂಕಿತ ಬುಟ್ಟಿಯ ಹೆಚ್ಚು ಕಡಿಮೆ ಶೇಕಡ 5 ಕ್ಕೆ ನಾಮಮಾತ್ರ ಕಟ್ಟಿನೊಳಗೆ ರೂಪಾಯಿಯ ವಿನಿಮಯ ದರವು ಅಧಿಕೃತವಾಗಿ *RBI* ನಿಂದ ನಿರ್ಧರಿಸಲಾಗುತ್ತಿತ್ತು. ದಿನವಹಿ ಆಧಾರದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮಧ್ಯಪ್ರವೇಶ ಮಾಡಿದ್ದರ ಫಲವಾಗಿ ಮೀಸಲಿನ ಗಾತ್ರದಲ್ಲಿ ಭಾರಿ ಬದಲಾವಣೆಗಳಾದವು. ಈ ವಿನಿಮಯದರ ಆಡಳಿತವನ್ನು ಒಂದು ಪಟ್ಟಿಯೊಂದಿಗೆ (ಗುಂಪು) ಹೊಂದಾಣಿಕೆ ಮಾಡಬಹುದಾದ ನಾಮಮಾತ್ರ ವಿನಿಮಯ ದರ ನಿಗದಿ ಎಂದು ವರ್ಣಿಸಬಹುದಾಗಿದೆ.

1990ರ ಆರಂಭವು ತೈಲ ಬೆಲೆಗಳಲ್ಲಿನ ಗಣನೀಯ ಏರಿಕೆ ಮತ್ತು ಕೊಲ್ಲಿ ಪ್ರದೇಶದ ಕೊಲ್ಲಿ ಬಿಕ್ಕಟ್ಟಿನ ಉಗಮದಿಂದ ಆದ ಹಣದ ರವಾನೆಯ ಅಮಾನತ್ತನ್ನು ಕಂಡಿತು. ಇದು ಮತ್ತು ಇತರೆ ದೇಶಿಯ ಹಾಗೂ ಅಂತರರಾಷ್ಟ್ರೀಯ ವಿದ್ಯಮಾನಗಳು ಭಾರತದಲ್ಲಿನ ಪಾವತಿ ಶಿಲ್ಕಿನ ಗಂಭೀರ ಸಮಸ್ಯೆಗಳಿಗೆ ಕಾರಣವಾದವು. ವಾಣಿಜ್ಯ ಬ್ಯಾಂಕುಗಳ ಮಾರ್ಗ ಹಾಗೂ ಅಲ್ಪಾವಧಿ ಸಾಲಗಳ ದಾರಿ ಮುಚ್ಚಿಹೋದ ಕಾರಣ ಚಾಲ್ತಿ ಖಾತೆಯ ಕೊರತೆಗೆ ಹಣಕಾಸನ್ನು ಒದಗಿಸುವುದು ಕಠಿಣವಾಯಿತು. ಆಗಸ್ಟ್‌ನಲ್ಲಿ 3.1 ಬಿಲಿಯನ್ *US* ಡಾಲರ್‌ರಷ್ಟಿದ್ದ ಭಾರತದ ವಿದೇಶಿ ವಿನಿಮಯ ಮೀಸಲುಗಳು ಜುಲೈ 12/1991ರಲ್ಲಿ *US* ಡಾಲರ್‌ನಲ್ಲಿ 975ದಶಲಕ್ಷ ಡಾಲರ್‌ಗಳಿಗೆ ಇಳಿಯಿತು. (ಜನವರಿ 27,2006ರಲ್ಲಿ ಭಾರತದ ವಿದೇಶಿ ವಿನಿಮಯ ಮೀಸಲು *US* ಡಾಲರ್‌ನ 139.2 ಬಿಲಿಯನ್ ಗಳಷ್ಟಿತ್ತೆಂಬುದನ್ನು ಇಲ್ಲಿ ಗುರುತಿಸಬಹುದು.) ವಿದೇಶಕ್ಕೆ ಚಿನ್ನವನ್ನು ಕಳುಹಿಸುವುದು, ಅನಗತ್ಯ ಆಮದುಗಳ ಕಡಿತ, *IMF* ನ್ನು ಹಾಗೂ ಬಹುಪಕ್ಷೀಯ ಮತ್ತು ದ್ವಿಪಕ್ಷೀಯು ಮೂಲಗಳನ್ನು ಸಮೀಪಿಸುವುದು, ಸ್ಥಿರಾತ್ಮಕ ಮತ್ತು ರಚನಾತ್ಮಕ ಸುಧಾರಣೆಗಳನ್ನು ಪರಿಚಯಿಸುವುದಲ್ಲದೆ 1991ರ ಜುಲೈ 1 ಮತ್ತು 3ರಂದು ಎರಡು ಹಂತಗಳಲ್ಲಿ ರೂಪಾಯಿಯ ಮೌಲ್ಯವನ್ನು ಶೇ 18–19ರಷ್ಟು ಅಪಮೌಲ್ಯಗೊಳಿಸಲಾಯಿತು. ಇತ್ಯಾದಿ ಕ್ರಮಗಳನ್ನು ಜಾರಿಗೆ ತರಲಾಯಿತು. 1992ರ ಮಾರ್ಚ್‌ನಲ್ಲಿ ದ್ವಿ ವಿನಿಮಯ ದರಗಳನ್ನು ಒಳಗೊಂಡ ಉದಾರೀಕೃತ ವಿನಿಯಮದ ನಿರ್ವಹಣಾ ಪದ್ಧತಿಯನ್ನು (*LERMS*) ಜಾರಿಗೆ ತರಲಾಯಿತು. ಈ ಪದ್ಧತಿಯಲ್ಲಿ ರಿಸರ್ವ್‌ಬ್ಯಾಂಕ್ ನಿಗದಿಪಡಿಸುವ ಅಧಿಕೃತ ದರದಲ್ಲಿ ಶೇಕಡ 40ರಷ್ಟು ವಿದೇಶಿ ವಿನಿಮಯವನ್ನು ಒಪ್ಪಿಸಬೇಕಾಗಿತ್ತು ಮತ್ತು ಶೇಕಡ 60ರಷ್ಟನ್ನು ಮರುಕಟ್ಟೆ ನಿರ್ಧಾರಿತ ದರಗಳಿಗೆ ಪರಿವರ್ತಿಸಿಕೊಳ್ಳ ಬಹುದಾಗಿತ್ತು. (ಈ ದ್ವಿ–ದರಗಳನ್ನು ಒಂದೇ ದರವಾಗಿ ಮಾರ್ಚ 1, 1993ರಲ್ಲಿ ವಿಲೀನಗೊಳಿಸಲಾಯಿತು) ಇದು ಚಾಲ್ತಿಖಾತೆ ಪರಿವರ್ತನೆಯ ಕಡೆಗಿನ ಪ್ರಮುಖ ಹೆಜ್ಜೆಯಾಗಿತ್ತು ಇದನ್ನು *IMF* ಒಪ್ಪಂದದ *VIII* ಪರಿಚ್ಛೇದಗಳಲ್ಲಿ ಒಪ್ಪಿಕೊಂಡ ಪ್ರಯುಕ್ತ, 1994ರ ಆಗಸ್ಟ್‌ನಲ್ಲಿ ಅಂತಿಮವಾಗಿ ಸಾಧಿಸಲಾಯಿತು. ಹೀಗೆ ರಿಸರ್ವ್ ಬ್ಯಾಂಕ್ ವಿದೇಶಿ ವಿನಿಮಯ ಮಾರುಕಟ್ಟೆಯ ಸ್ಥಿತಿಗತಿಗಳಲ್ಲಿ ತನ್ನ ಮಾರಾಟಗಳ ಮತ್ತು ಖರೀದಿಗಳ ಮೂಲಕ ಕ್ರಮಬದ್ಧತೆಯನ್ನು ತರುವ ಭರವಸೆ ಮೂಲಕ ರೂಪಾಯಿಯ ವಿನಿಮಯ ದರವು ಮಾರುಕಟ್ಟೆಯಿಂದ ನಿರ್ಧಾರವಾಗುವಂತಾಯಿತು.

1. ವ್ಯಾಪಾರ ಬಾಕಿ ಮತ್ತು ಚಾಲ್ತಿ ಖಾತೆ ಬಾಕಿಯ ನಡುವಿನ ವ್ಯತ್ಯಾಸವನ್ನು ತಿಳಿಸಿ.
2. ಅಧಿಕೃತ ಮೀಸಲು ವ್ಯವಹಾರಗಳಾವುವು? ಸಂದಾಯ ಬಾಕಿಯಲ್ಲಿ ಅವುಗಳ ಪ್ರಾಮುಖ್ಯತೆಯನ್ನು ವಿವರಿಸಿ.
3. ನಾಮ ಮಾತ್ರ ವಿನಿಮಯದರ ಮತ್ತು ನೈಜ ವಿನಿಮಯದರದ ನಡುವಿನ ಭಿನ್ನತೆಯನ್ನು ಗುರುತಿಸಿ. ದೇಶೀಯ ಸರಕುಗಳು ಇಲ್ಲವೇ ವಿದೇಶೀ ಸರಕುಗಳನ್ನು ಕೊಳ್ಳಲು ನೀವು ನಿರ್ಧರಿಸಿದ್ದರೆ, ಯಾವ ದರವು ಹೆಚ್ಚು ಸೂಕ್ತ? ವಿವರಿಸಿ.
4. ಒಂದು ವೇಳೆ ಒಂದು ರೂಪಾಯಿಯನ್ನು ಕೊಳ್ಳಲು 1.25 ಯೆನ್‌ಗಳ ಬೇಕಾಗುತ್ತವೆ ಮತ್ತು ಜಪಾನಿನಲ್ಲಿ ಬೆಲೆ ಮಟ್ಟ 3 ಮತ್ತು ಭಾರತದಲ್ಲಿ ಬೆಲೆ ಮಟ್ಟ 1.2 ಎಂದಾದರೆ ಭಾರತ ಮತ್ತು ಜಪಾನಿನ ನಡುವಿನ ನೈಜ ವಿನಿಮಯದರಗಳನ್ನು ಲೆಕ್ಕಹಾಕಿ ಭಾರತದ ಸರಕುಗಳ ರೂಪದಲ್ಲಿ ಜಪಾನಿನ ಸರಕುಗಳ ಬೆಲೆ (ಸುಳಿವು: ರೂಪಾಯಿಯಲ್ಲಿನ ಯೆನ್‌ನ ಬೆಲೆಯಾದ ನಾಮ ಮಾತ್ರ ವಿನಿಮಯದರವನ್ನು ಮೊದಲು ಕಂಡುಹಿಡಿಯಿರಿ)
5. ಚಿನ್ನದ ಪ್ರಮಿತಿಯಲ್ಲಿ *BOP* ಸಮತೋಲನವನ್ನು ಸಾಧಿಸಿದಂತಹ ಸ್ವಾಯತ್ತ ಯಾಂತ್ರಿಕತೆಯನ್ನು ವಿವರಿಸಿ.
6. ಬದಲಾಗುವ ವಿನಿಮಯ ದರದ ಆಡಳಿತದಡಿಯಲ್ಲಿ ವಿನಿಮಯ ದರವು ಹೇಗೆ ನಿರ್ಧರಿಸಲ್ಪಡುತ್ತದೆ.
7. ಅಪಮೌಲ್ಯೀಕರಣ ಮತ್ತು ಸವಕಳಿ ನಡುವಿನ ವ್ಯತ್ಯಾಸ ತಿಳಿಸಿ.
8. ನಿರ್ವಹಣಾ ತೇಲುವ ಪದ್ದತಿಯಲ್ಲಿ ಕೇಂದ್ರ ಬ್ಯಾಂಕು ಮಧ್ಯಪ್ರವೇಶಿಸುವ ಅಗತ್ಯತೆಯಿದೆಯೇ? ಏಕೆ? ವಿವರಿಸಿ.
9. ದೇಶೀಯ ಸರಕುಗಳಿಗೆ ಬೇಡಿಕೆ ಮತ್ತು ಸರಕುಗಳಿಗೆ ದೇಶೀಯ ಬೇಡಿಕೆ ಎಂಬ ಪರಿಕಲ್ಪನೆಗಳು ಒಂದೇ ಆಗಿವೆಯೇ?
10. $M = 60 + 0.06Y$ ಆದಾಗ ಸೀಮಾಂತ ಆಮದು ಪ್ರವೃತ್ತಿ ಯಾವುದು?
11. ಮುಕ್ತ ಆರ್ಥಿಕತೆಯ ಸ್ವಾಯತ್ತ ವೆಚ್ಚದ ಗುಣಕವು ಮುಚ್ಚಿದ ಆರ್ಥಿಕತೆಗಿಂತ ಸಣ್ಣ ಪ್ರಮಾಣದಲ್ಲಿರುತ್ತದೆ ಏಕೆ?
12. ಪಠ್ಯದಲ್ಲಿ ಊಹಿಸಿದಂತೆ ಒಟ್ಟು ಮೊತ್ತದ ತೆರಿಗೆಗಳ ಬದಲಾಗಿ ಪ್ರಮಾಣಾನುಗುಣ ತೆರಿಗೆಗೆ ಮುಕ್ತ ಆರ್ಥಿಕತೆಯ ಗುಣಕವನ್ನು ಲೆಕ್ಕಹಾಕಿ?
13. $C = 40 + 0.8\ YD$, $T = 50$, $I = 60$, $G = 40$, $X = 90$, $M = 50 + 0.05\ Y$ ಆದರೆ (*a*) ಸಮತೋಲನ ಆದಾಯವನ್ನು ಕಂಡು ಹಿಡಿಯಿರಿ (*C*) ಸರ್ಕಾರದ ಖರೀದಿಗಳು 40 ಮತ್ತು 50ರಿಂದ ಹೆಚ್ಚಳವಾದಾಗ, ಸಮತೋಲನ ಆದಾಯ ಮತ್ತು ನಿವ್ವಳ ರಫ್ತು ಬಾಕಿಗೆ ಏನು ಸಂಭವಿಸುತ್ತದೆ?

    (*b*) ಸಮತೋಲನ ಆದಾಯದಲ್ಲಿ ನಿವ್ವಳ ರಫ್ತು ಬಾಕಿಯನ್ನು ಕಂಡುಹಿಡಿಯಿರಿ.
14. ಮೇಲಿನ ಉದಾಹರಣೆಯಲ್ಲಿ, ರಫ್ತುಗಳು $X = 100$ಕ್ಕೆ ಬದಲಾವಣೆಯಾದಾಗ, ಸಮತೋಲನ ಆದಾಯ ಮತ್ತು ನಿವ್ವಳ ರಫ್ತು ಬಾಕಿಯಲ್ಲಿನ ಬದಲಾವಣೆಯನ್ನು ಕಂಡುಹಿಡಿಯಿರಿ.
15. $G – T = (Sg – F) – (X – M)$ ಏಕೆ ಎಂದು ವಿವರಿಸಿ.
16. '*B*' ದೇಶಕ್ಕಿಂತ '*A*' ದೇಶದ ಹಣದುಬ್ಬರವು ಅಧಿಕವಾಗಿದ್ದು ಮತ್ತು ಎರಡು ದೇಶಗಳ ನಡುವಿನ ವಿನಿಮಯ ದರವು ನಿಗದಿತವಾಗಿದ್ದರೆ, ಎರಡು ದೇಶಗಳ ನಡುವಿನ ವ್ಯಾಪಾರ ಬಾಕಿಗೆ ಏನು ಸಂಭವಿಸುವ ಸಾಧ್ಯತೆಯಿರುತ್ತದೆ?
17. ಒಂದು ಚಾಲ್ತಿ ಖಾತೆ ಕೊರತೆಯು ಎಚ್ಚರಿಕೆ ಪರಿಸ್ಥಿತಿಗೆ ಕಾರಣವಾಗುವುದೇ? ವಿವರಿಸಿ.

18. ಒಂದು ವೇಳೆ $C = 100 + 0.75\,YD$, $I = 500$, $G = 750$, ತೆರಿಗೆಗಳು ಆದಾಯದಲ್ಲಿ ಶೇಕಡ 20 ಆಗಿದ್ದು $X = 150$, $M = 100 + 0.2y$ ಆದರೆ, ಸಮತೋಲನ ಆದಾಯ, ಮುಂಗಡ ಪತ್ರದ ಕೊರತೆ ಅಥವಾ ಮಿಗುತೆ ಮತ್ತು ವ್ಯಾಪಾರ ಕೊರತೆ ಅಥವಾ ಮಿಗುತೆಯನ್ನು ಲೆಕ್ಕಹಾಕಿ.
19. ದೇಶಗಳು, ಅವುಗಳ ಬಾಹ್ಯಖಾತೆಗಳಲ್ಲಿ ಸ್ಥಿರತೆಯನ್ನು ತರುವಂತಹ ಕೆಲವು ವಿನಿಮಯದರ ಏರ್ಪಾಟುಗಳನ್ನು ಚರ್ಚಿಸಿ.

### ಸೂಚಿತ ಅಧ್ಯಯನಗಳು *Suggested Readings*


1. *Dornbusch, R. and S. Fischer, 1994. Macroeconomics, sixth edition, McGraw-Hill, Paris.*
2. *Economic Survey, Government of India, 2006-07.*
3. *Krugman, P.R. and M. Obstfeld, 2000. International Economics, Theory and Policy, fifth edition, Pearson Education.? Exercises Exercises Exercises Exercises Exercises?*


**Table 6.1: Balance of Payments : Summary # (in US $ million)**

| | | 2014-15 |
|---|---|---|
| 1. | ರಫ್ತುಗಳು | 316.5 |
| 2. | ಆಮದುಗಳು | 461.4 |
| 3. | ವ್ಯಾಪಾರ ಬಾಕಿ (2–1) | –144.9 |
| 4. | ಅಗೋಚರ (ನಿವ್ವಳ) | 118.1 |
| | ಎ. ಸ್ವೀಕೃತಿಗಳು | 241.2 |
| | ಬಿ. ಪಾವತಿಗಳು | 123.1 |
| 5. | ಚಾಲ್ತಿ ಖಾತೆ ಬಾಕಿ (3 +4) | –26.8 |
| 6. | ವಿದೇಶೀ ಹೂಡಿಕೆ (ನಿವ್ವಳ) | 73.4 |
| | ಎ. ವಿದೇಶೀ ನೇರ ಹೂಡಿಕೆ (ನಿವ್ವಳ) | 31.2 |
| | ಬಿ. ಬಂಡವಾಳ | 42.2 |
| 7. | ಬಾಹ್ಯ ನೆರವು (ನಿವ್ವಳ) | 1.7 |
| 8. | ವಾಣಿಜ್ಯ ಸಾಲಗಳು (ನಿವ್ವಳ) | 1.4 |
| 9. | ಬ್ಯಾಂಕಿಂಗ್ (ನಿವ್ವಳ) | 11.6 |
| 10. | ಇತರೆ ಹರಿವುಗಳು (ನಿವ್ವಳ) | 1.1 |
| 11. | ಲೋಪ ಮತ್ತು ದೋಷಗಳು (ನಿವ್ವಳ) | –1.0 |
| 12. | ಒಟ್ಟು ಬಂಡವಾಳ ಖಾತೆ (ಲೋಪಗಳು ಮತ್ತು ದೋಷಗಳು ಒಳಗೊಂಡು) (6+7+8+9+10+11) | 88.2 |
| 13. | ಸಂದಾಯ ಬಾಕಿಗಳು (5+12) | 61.4 |
| 14. | ನಿಧಿ ಬಳಕೆ (– ಹೆಚ್ಚಳ) | –61.4 |

*Source: Economic Survey, 2005-06.*

❖ ❖ ❖ ❖

# ಶಬ್ಧಕೋಶ

* **ಆಡಂಸ್ಮಿತ್** (1723–1790)ರವರು ಆಧುನಿಕ ಅರ್ಥಶಾಸ್ತ್ರದ ಪಿತಾಮಹ ಎಂದು ಪರಿಗಣಿಸಲ್ಪಟ್ಟಿದ್ದಾರೆ. 'ರಾಷ್ಟ್ರಗಳ ಸಂಪತ್ತು' ಗ್ರಂಥದ ಲೇಖಕರು.
* **ಸಮಗ್ರ ಹಣಕಾಸಿನ ಮೂಲಗಳು** ಅಂಚೆಕಛೇರಿಯ ಉಳಿತಾಯ ಸಂಘಟನೆಯ ಅವಧಿ ಠೇವಣಿ ರಹಿತವಾದ ವಿಶಾಲ ಹಣ ($M_3$)ವಾಗಿವೆ.
* **ಸ್ವಯಂಚಾಲಿತ ಸ್ಥಿರಕಾರಕಗಳು** ಆರ್ಥಿಕ ಸ್ಥಿತಿಯು ಹದಗೆಟ್ಟಾಗ, ನಿರ್ದಿಷ್ಟ ವೆಚ್ಚ ಮತ್ತು ತೆರಿಗೆ ಶಾಸನಗಳಡಿಯಲ್ಲಿ ವೆಚ್ಚವು ಸ್ವಯಂಚಾಲಿತವಾಗಿ ಹೆಚ್ಚಾಗುತ್ತದೆ ಅಥವಾ ತೆರಿಗೆಗಳು ಸ್ವಯಂಚಾಲಿತವಾಗಿ ಕಡಿಮೆಯಾಗುತ್ತದೆ, ಆದ್ದರಿಂದ ಇದು ಆರ್ಥಿಕತೆಯನ್ನು ಸ್ವಯಂಚಾಲಿತವಾಗಿ ಸ್ಥಿರವಾಗಿರುತ್ತದೆ.
* **ಸ್ವಾಯತ್ತ ಬದಲಾವಣೆ** ಒಂದು ಬಹಿರ್ಜಾತ ಕಾರಣದಿಂದಾಗಿ, ಸಮಗ್ರ ಆರ್ಥಿಕ ಮಾದರಿಯ ಚಲಕಗಳ ಮೌಲ್ಯದಲ್ಲಿನ ಒಂದು ಬದಲಾವಣೆ.
* **ಸ್ವಾಯತ್ತ ವೆಚ್ಚದ ಗುಣಕ** ಸಮಗ್ರ ಉತ್ಪನ್ನದಲ್ಲಿನ ಹೆಚ್ಚಳದ ಅಥವಾ ಕಡಿಮೆ ಅನುಪಾತ ಅಥವಾ ಸ್ವಾಯತ್ತ ವೆಚ್ಚದಲ್ಲಿನ ಆದಾಯದ ಹೆಚ್ಚಳದ (ಅಥವಾ ಕಡಿಮೆ) ಅನುಪಾತ.
* **ಸಂದಾಯ ಬಾಕಿ (ಪಾವತಿ ಶಿಲ್ಕು)** ಜಗತ್ತಿನ ಇತರೆ ದೇಶಗಳೊಂದಿಗೆ ಒಂದು ದೇಶದ ವ್ಯವಹಾರವನ್ನು ಸಂಕ್ಷಿಪ್ತಗೊಳಿಸುವ ಖಾತೆಗಳ ಒಂದು ಗಣ.
* **ಸಮತೋಲನ ಮುಂಗಡ ಪತ್ರ** ತೆರಿಗೆಗಳು ಸರಕಾರದ ವೆಚ್ಚಕ್ಕೆ ಸಮನಾಗಿರುವ ಒಂದು ಮುಂಗಡ ಪತ್ರ.
* **ಸಮತೋಲನ ಮುಂಗಡ ಪತ್ರದ ಗುಣಕ,** ಸಮತೋಲನ ಉತ್ಪನ್ನದ ಬದಲಾವಣೆಯು ತೆರಿಗೆ ಮತ್ತು ಸರ್ಕಾರದ ವೆಚ್ಚಗಳೆರಡರಲ್ಲೂ ಒಂದು ಘಟಕದಷ್ಟು ಹೆಚ್ಚಳಕ್ಕೆ ಅಥವಾ ಇಳಿಕೆಗೆ ಕಾರಣವಾಗುತ್ತದೆ.
* **ಬ್ಯಾಂಕುದರ** ಮೀಸಲುಗಳು ಕೊರತೆಯಲ್ಲಿರುವ ಸನ್ನಿವೇಶದಲ್ಲಿ ವಾಣಿಜ್ಯಬ್ಯಾಂಕುಗಳು RBI ನಿಂದ ಸಾಲ ಪಡೆದಾಗ, ಆ ಸಾಲಕ್ಕೆ ನೀಡುವ ಬಡ್ಡಿದರ.
* **ಸಾಟಿ ವಿನಿಯಮಯ** ಹಣದ ಮಧ್ಯಸ್ಥಿಕೆಯಿಲ್ಲದೇ ಸರಕುಗಳ ವಿನಿಯಮ.
* **ಆಧಾರ ವರ್ಷ** ನೈಜ GDP ಯನ್ನು ಲೆಕ್ಕಹಾಕಲು ಯಾವ ವರ್ಷದ ಬೆಲೆಗಳನ್ನು ಪರಿಗಣಿಸುವರೋ ಆ ವರ್ಷ ಆಧಾರ ವರ್ಷವಾಗಿದೆ.
* **ಬಾಂಡುಗಳು (ಕರಾರುಪತ್ರ)** ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ, ಭವಿಷ್ಯತ್ತಿನಲ್ಲಿ ಹಣಕಾಸಿನ ಮರುಪಾವತಿಯ ವಚನವನ್ನು ಹೊಂದಿರುವ ಒಂದು ಕಾಗದ. ಇದನ್ನು ಸಾರ್ವಜನಿಕರಿಂದ ಸಾಲ ಪಡೆಯಲು ಉದ್ಯಮ ಘಟಕಗಳು ಅಥವಾ ಸರಕಾರವು ಹೊರಡಿಸುತ್ತದೆ.
* **ವಿಶಾಲ ಹಣ** ಸಂಕುಚಿತ ಹಣ+ವಾಣಿಜ್ಯ ಬ್ಯಾಂಕುಗಳು ಮತ್ತು ಅಂಚೆ ಕಛೇರಿಗಳ ಅವಧಿ ಠೇವಣಿಗಳೂ.
* **ಬಂಡವಾಳ** ಉತ್ಪದನಾ ಪ್ರಕ್ರಿಯೆಯಲ್ಲಿ ಸಾಮಾನ್ಯವಾಗಿ ಸಂಪೂರ್ಣವಾಗಿ ಬಳಕೆಯಾಗದೆ ಇರುವ ಮತ್ತು ಉತ್ಪಾದಿತ ಉತ್ಪಾದನಾಂಗ.

* **ಬಂಡವಾಳ ಲಾಭ/ನಷ್ಟ** ಬಾಂಡುಗಳ ಮಾರುಕಟ್ಟೆಯಲ್ಲಿ ಬಾಂಡುಗಳ ಬೆಲೆಯಲ್ಲಿ ಸಮೃದ್ಧಿ ಅಥವಾ ಹಿಂಜರಿತದ ಕಾರಣದಿಂದಾಗಿ, ಬಾಂಡುಗಳನ್ನು ಹೊಂದಿರುವವರ ಸಂಪತ್ತಿನ ಮೌಲ್ಯದಲ್ಲಿ ಉಂಟಾಗುವ ಹೆಚ್ಚಳ ಅಥವ ಕಡಿತ.
* **ಬಂಡವಾಳಶಾಹಿ ದೇಶ ಅಥವಾ ಆರ್ಥಿಕತೆ** ಬಹುತೇಕ ಉತ್ಪನ್ನವು ಬಂಡವಾಳಶಾಹಿ ಉದ್ಯಮಘಟಕಗಳಿಂದ ನಡೆಯುವ ಒಂದು ದೇಶ.
* **ಬಂಡವಾಳಶಾಹಿ ಉದ್ಯಮ ಘಟಕಗಳು** ಈ ಕೆಳಗಿನ ಲಕ್ಷಣಗಳನ್ನು ಹೊಂದಿರುವ ಉದ್ಯಮ ಘಟಕಗಳಾಗಿವೆ (a) ಉತ್ಪಾದನಾ ಸಾಧನಗಳ ಮೇಲಿನ ಖಾಸಗಿ ಒಡೆತನ (b) ಮಾರುಕಟ್ಟೆಗಾಗಿ ಉತ್ಪಾದನೆ (c) ಕೂಲಿದರ ಎಂದು ಕರೆಯುಲ್ಪಡುವ ಒಂದು ಬೆಲೆಯಲ್ಲಿ ಶ್ರಮದ ಮಾರಾಟ ಮತ್ತು ಖರೀದಿ (d) ನಿರಂತರ ಬಂಡವಾಳ ಸಂಚಯನ.
* **ನಗದು ಮೀಸಲು ಅನುಪಾತ (CRR)** RBI ನಲ್ಲಿಡುವ ವಾಣಿಜ್ಯ ಬ್ಯಾಂಕುಗಳ ಠೇವಣಿಗಳಲ್ಲಿನ ಒಂದು ಭಾಗ.
* **ಆದಾಯದ ವೃತ್ತಾಕಾರದ ಹರಿವು** ಒಂದು ಆರ್ಥಿಕತೆಯಲ್ಲಿ ಉತ್ಪಾದನೆಯಾಗುವ ಸರಕುಗಳ ಸೇವೆಗಳ ಮೌಲ್ಯವು ಉತ್ಪಾದನಾಂಗಗಳ ಪಾವತಿಗಳಾಗಿ, ಇಲ್ಲವೇ ಸರಕು ಮತ್ತು ಸೇವೆಗಳ ವೆಚ್ಚಗಳಾಗಿ ಅಥವಾ ಸಮಗ್ರ ಉತ್ಪಾದನೆಯ ಮೌಲ್ಯವಾಗಿ ವೃತ್ತಾಕಾರದಲ್ಲಿ ಚಲಿಸುವ ಒಂದು ಪರಿಭಾವನೆ.
* **ಅನುಬೋಗಿ ಬಾಳಿಕೆಗಳು** ತಕ್ಷಣವೇ ನಾಶವಾಗದ, ಆದರೆ ಕಾಲಾವಧಿಯಲ್ಲಿ ಅನುಬೋಗಿ ಬಳಸಿದ ನಂತರ ನಾಶವಾಗುವ ಸರಕುಗಳು ಅನುಬೋಗಿ ಬಾಳಿಕೆಗಳಾಗಿವೆ.
* **ಗ್ರಾಹಕ ಬೆಲೆ ಸೂಚ್ಯಂಕ (CPI)** ತೂಕಿತ ಸರಾಸರಿ ಬೆಲೆ ಮಟ್ಟದಲ್ಲಿನ ಶೇಕಡವಾರು ಬದಲಾವಣೆ ನೀಡಲಾದ ಬ್ಯಾಸ್ಕೆಟ್‌ನಲ್ಲಿನ ಅನುಬೋಗಿ ಸರಕುಗಳ ಬೆಲೆಗಳನ್ನು ನಾವು ತೆಗೆದುಕೊಳ್ಳುತ್ತೇವೆ.
* **ಅನುಬೋಗಿ ಸರಕುಗಳು** ಅಂತಿಮ ಅನುಬೋಗಿಗಳು ಬಳಸುವ ಸರಕುಗಳು ಅಥವಾ ಅನುಬೋಗಿಯ ತಕ್ಷಣದ ಅಗತ್ಯವನ್ನು ಈಡೇರಿಸುವ ಸರಕುಗಳನ್ನು ಅನುಬೋಗಿ ಸರಕುಗಳೆನ್ನುತ್ತಾರೆ. ಇದು ಹಾಗೆಯೇ ಸೇವೆಗಳನ್ನೂ ಹೊಂದಿರಬಹುದು.
* **ಕಾರ್ಪೋರೇಟ್ ತೆರಿಗೆ** ಕಾರ್ಪೋರೇಶನ್(ನಿಗಮ)ಗಳಿಂದ ಗಳಿಸುವ ಆದಾಯದ ಮೇಲೆ ವಿಧಿಸಲಾದ ತೆರಿಗೆಗಳು.
* **ಕರೆನ್ಸಿ ಠೇವಣಿ ಅನುಪಾತ** ಸಾರ್ವಜನಿಕರು ಹೊಂದಿರುವ ಕರೆನ್ಸಿ ಮತ್ತು ವಾಣಿಜ್ಯ ಬ್ಯಾಂಕುಗಳಲ್ಲಿಟ್ಟಿರುವ ಠೇವಣಿಗಳ ನಡುವಿನ ಅನುಪಾತ.
* **ಕೇಂದ್ರ ಬ್ಯಾಂಕಿನ ಸಾಲದ ಮೂಲಕ ಕೊರತೆ ಹಣಕಾಸಿನ ಪೂರೈಕೆ** ಕೇಂದ್ರ ಬ್ಯಾಂಕಿನಿಂದ ಸಾಲ ಪಡೆಯುವ ಮೂಲಕ ಸರ್ಕಾರ ಮುಂಗಡ ಪತ್ರದ ಕೊರತೆಗೆ ಹಣಕಾಸನ್ನು ಪೂರೈಸುವುದು. ಇದು ಹಣದ ಪೂರೈಕೆಯ ಹೆಚ್ಚಳಕ್ಕೆ ಹಾಗೂ ಬೆಲೆ ಏರಿಕೆಗೆ ಕಾರಣವಾಗಬಹುದು.
* **ಅಪಮೌಲ್ಯ** ಬದಲಾಗುವ (ತೇಲುವ) ವಿನಿಯಮ ದರಗಳ ಅಡಿಯಲ್ಲಿ, ವಿದೇಶೀ ಕರೆನ್ಸಿಯ ರೂಪದಲ್ಲಿ ದೇಶೀಯ ಕರೆನ್ಸಿಯ ಬೆಲೆಯ ಇಳಿಕೆ.
* **ಸವಕಳಿ** ಒಂದು ಕಾಲಾವಧಿಯಲ್ಲಿ ಬಂಡವಾಳ ದಾಸ್ತಾನಿನಲ್ಲಿ ಆದ ಸವಕಲು ಮತ್ತು ಹರಕಲನ್ನು ಸವಕಳಿ ಎನ್ನುತ್ತೇವೆ.
* **ಅಪಮೌಲ್ಯೀಕರಣ** ಅಧಿಕೃತ ಕ್ರಮಗಳ ಮೂಲಕ ಸ್ಥಿರ ವಿನಿಮಯ ದರಗಳಡಿಯಲ್ಲಿ ದೇಶೀಯ ಕರೆನ್ಸಿಯ ಬೆಲೆಗಳಲ್ಲಿನ ಇಳಿಕೆ.
* **ಬಯಕೆಗಳ ದ್ವಿಮುಖ ಹೊಂದಾಣಿಕೆ** ಎರಡು ಆರ್ಥಿಕ ಪ್ರತಿನಿಧಿಗಳು ತಮ್ಮ ಮಿಗುತೆ ಉತ್ಪಾದನೆಯಲ್ಲಿ ಹೊಂದಿರುವ ಪರಸ್ಪರ ಪೂರಕ ಬೇಡಿಕೆಯ ಒಂದು ಸನ್ನಿವೇಶ.

* **ಆರ್ಥಿಕ ಪ್ರತಿನಿದಿಗಳು ಅಥವಾ ಘಟಕಗಳು** ಆರ್ಥಿಕ ಘಟಕಗಳು ಅಥವಾ ಆರ್ಥಿಕ ಪ್ರತಿ ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳುವ ವ್ಯಕ್ತಿಗಳು ಅಥವಾ ಸಂಸ್ಥೆಗಳಾಗಿವೆ.
* **ಪರಿಣಾಮಕಾರಿ ಬೇಡಿಕೆಯ ತತ್ವ** ಅಲ್ಪಾವಧಿಯಲ್ಲಿ ಸ್ಥಿರ ಬೆಲೆಯಲ್ಲಿ, ಅಂತಿಮ ಸರಕುಗಳ ಪೂರೈಕೆಯ ಸ್ಥಿತಿಸ್ಥಾಪಕತ್ವವು ಅನಂತವಾಗಿರುತ್ತದೆಂದಾದರೆ ಭಾವಿಸಿದರೆ, ಸಮಗ್ರ ಉತ್ಪನ್ನವು ಕೇವಲ ಸಮಗ್ರ ಬೇಡಿಕೆಯ ಮೌಲ್ಯದಿಂದ ನಿರ್ಧಾರವಾಗುತ್ತದೆ. ಇದನ್ನು ಪರಿಣಾಮಕಾರಿ ಬೇಡಿಕೆಯ ತತ್ವ ಎನ್ನುವರು.
* **ಉದ್ಯಶೀಲತೆ** ಉತ್ಪಾದನೆಯ ಕಾರ್ಯದಲ್ಲಿ ಸಂಘಟನೆ, ಸಮನ್ವಯತೆ ಮತ್ತು ಅಪಾಯವನ್ನು ಎದುರಿಸುವ ಕೆಲಸ.
* **ಯೋಜಿತ ಅನುಬೋಗ** ಯೋಜಿತ ಅನುಬೋಗದ ಮೌಲ್ಯ (ಮೊತ್ತ)
* **ಯೋಜಿತ ಹೂಡಿಕೆ** ಯೋಜಿತ ಹೂಡಿಕೆಯ ಮೌಲ್ಯ (ಮೊತ್ತ)
* **ಯೋಜಿತ** ನೈಜ ಮೌಲ್ಯದ ವಿರುದ್ದವಾಗಿ ಒಂದು ಚಲಕದ ಯೋಜಿತ ಮೌಲ್ಯ.
* **ಯೋಜನಾರಹಿತ** ಯೋಜನಾ ಮೌಲ್ಯದ ವಿರುದ್ದವಾಗಿ, ಒಂದು ಚಲಕದ ನೈಜಮೌಲ್ಯ ಅಥವಾ ಮನವರಿಕೆಯಾದ ಮೌಲ್ಯ.
* **ವೆಚ್ಚದ ವಿದಾನದಲ್ಲಿ ರಾಷ್ಟ್ರೀಯ ವರಮಾನದ ಲೆಕ್ಕಾಚಾರ** ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಒಂದು ಆರ್ಥಿಕತೆಯಲ್ಲಿ ಉತ್ಪಾದಿಸಿದ ಸರಕು ಸೇವೆಗಳ ಮೇಲಿನ ಅಂತಿಮ ವೆಚ್ಚದ ಸಮಗ್ರ ಮೌಲ್ಯದಿಂದ ಅಳೆಯಲಾದ ರಾಷ್ಟ್ರೀಯ ವರಮಾನದ ಲೆಕ್ಕಾಚಾರದ ವಿಧಾನ.
* **ರಫ್ತುಗಳು** ಒಂದು ದೇಶವು ಜಗತ್ತಿನ ಇತರೆ ದೇಶಗಳಿಗೆ ಮಾರಾಟಮಾಡುವ ಸರಕು ಮತ್ತು ಸೇವೆಗಳು.
* **ಬಾಹ್ಯವಲಯ** ಒಂದು ದೇಶ ಜಗತ್ತಿನ ಇತರೆ ದೇಶಗಳೊಂದಿಗೆ ನಡೆಸುವ ಆರ್ಥಿಕ ವ್ಯವಹಾರವೆಂದು ವ್ಯಾಖ್ಯಾನಿಸಲಾಗುತ್ತದೆ.
* **ಬಾಹತ್ಯೆಗಳು** ಉದ್ಯಮ ಘಟಕಗಳು ಅಥವಾ ಯಾವುದೇ ಇತರ ಘಟಕಗಳು ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಕೊಂಡ ಕಾರಣದಿಂದ ಇತರೆ ವ್ಯಕ್ತಿಗಳು, ಉದ್ಯಮಘಟಕಗಳು ಅಥವಾ ಯಾವುದೇ ಇತರ ಘಟಕಗಳ ಮೇಲೆ ಸಂಭವಿಸುವ ಲಾಭಗಳು ಅಥವಾ ನಷ್ಟಳು ಕೆಲವು ವ್ಯಕ್ತಿಗಳು ಇತರೆ ವ್ಯಕ್ತಿಗಳ ಮೇಲೆ ಹಾನಿ ಅಥವಾ ಕೆಟ್ಟ ಪರಿಣಾಮವನ್ನು ಉಂಟುಮಾಡಿದರೆ, ಅವರು ಈ ಪರಿಣಾಮಕ್ಕೆ ಯಾವುದೇ ಪರಿಹಾರ ನೀಡುವುದಿಲ್ಲ.
* **ಅಧಿಕೃತ ಹಣ** ಆಂತರಿಕ ಮೌಲ್ಯವಿಲ್ಲದ ಹಣ.
* **ಅಂತಿಮ ಸರಕುಗಳು** ಉತ್ಪಾದನಾ ಪ್ರಕ್ರಿಯೆಯಲ್ಲಿ ಮುಂದಿನ ಯಾವುದೇ ರೂಪಾಂತರಕ್ಕೆ ಒಳಗಾಗದೇ ಇರುವಂತಹ ಸರಕುಗಳು.
* **ಉದ್ಯಮ ಘಟಕಗಳು** ಸರಕುಗಳು ಮತ್ತು ಸೇವೆಗಳ ಉತ್ಪಾದನೆಯನ್ನು ಮಾಡುವ ಮತ್ತು ಉತ್ಪಾದನಾಂಗಗಳನ್ನು ನೇಮಕ ಮಾಡಿಕೊಳ್ಳುವ ಆರ್ಥಿಕ ಘಟಕಗಳು.
* **ಕೋಶೀಯ ನೀತಿ** ಸರ್ಕಾರದ ವೆಚ್ಚ ಮತ್ತು ವರ್ಗಾವಣೆಗಳು ಹಾಗೂ ತೆರಿಗೆ ರಚನೆಯ ಮಟ್ಟದ ಬಗೆಗಿನ ಸರ್ಕಾರದ ನೀತಿ.
* **ಸ್ಥಿರ ವಿನಿಮಯದರ** ಎರಡು ಅಥವಾ ಅಧಿಕ ದೇಶಗಳ ಕರೆನ್ಸಿಗಳ ನಡುವೆ ಒಂದು ಮಟ್ಟದಲ್ಲಿ ನಿಗದಿತವಾದ ವಿನಿಮಯ ದರ ಮತ್ತು ಇದು ವಿರಳವಾಗಿ ಮಾತ್ರ ಹೊಂದಾಣಿಕೆಯಾಗುತ್ತದೆ ಒಂದು ವಿನಿಮನುದರ.
* **ಬದಲಾಗುವ / ತೇಲುವ ವಿನಿಮಯದರ** ಕೇಂದ್ರ ಬ್ಯಾಂಕಿನ ಮಧ್ಯಪ್ರವೇಶವಿಲ್ಲದೇ ವಿದೇಶೀ ಮಾರುಕಟ್ಟೆಯಲ್ಲಿನ ಬೇಡಿಕೆ ಮತ್ತು ಪೂರೈಕೆ ಶಕ್ತಿಗಳಿಂದ ನಿರ್ಧಾರವಾಗುವ ಒಂದು ವಿನಿಮಯದರ.
* **ಹರಿವುಗಳು** ಒಂದು ಕಾಲಾವಧಿಯಲ್ಲಿ ವ್ಯಾಖ್ಯಾನಿಸಲಾಗುವ ಚಲಕಗಳು.

* **ವಿದೇಶಿ ವಿನಿಮಯ** ವಿದೇಶಿ ಕರೆನ್ಸಿ ಒಂದು ನಿರ್ದಿಷ್ಟ ದೇಶದ, ದೇಶೀಯ ಕರೆನ್ಸಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಕರೆನ್ಸಿಗಳು.
* **ವಿದೇಶಿ ವಿನಿಮಯ ಮೀಸಲುಗಳು** ದೇಶದ ಕೇಂದ್ರಬ್ಯಾಂಕು ಇಟ್ಟುಕೊಂಡಿರುವ ವಿದೇಶಿ ಆಸ್ತಿಗಳು.
* **ನಾಲ್ಕು ಉತ್ಪಾದನಾಂಗಗಳು** ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆ (ಉದ್ಯಮಶೀಲತೆ), ಇವುಗಳು ಒಟ್ಟಾಗಿ ಸೇರಿ ಸರಕು ಮತ್ತು ಸೇವೆಗಳ ಉತ್ಪಾದನೆಗೆ ಸಹಾಯ ಮಾಡುತ್ತವೆ.
* **GDP ಅನಪ್ರಸರಣಕ** ನಾಮ ಮಾತ್ರ ಮತ್ತು ನೈಜ GDP ನಡುವಿನ ಅನುಪಾತ
* **ಸರ್ಕಾರದ ವೆಚ್ಚದ ಗುಣಕ** ಸರ್ಕಾರದ ವೆಚ್ಚದಲ್ಲಿನ ಪ್ರತೀ ಘಟಕದ ಹೆಚ್ಚಳದ ಕಾರಣದಿಂದ ಉತ್ಪನ್ನದಲ್ಲಿನ ಹೆಚ್ಚಳದ ಗಾತ್ರವನ್ನು ತೋರಿಸುವ ಅಂಶದ ಸಹ ಗುಣಕ.
* **ಸರ್ಕಾರ** ನಾಗರೀಕರ ಆರ್ಥಿಕ ಯೋಗ ಕ್ಷೇಮಕ್ಕಾಗಿ ದೇಶದಲ್ಲಿನ ಕಾನೂನು ಸುವ್ಯವಸ್ಥೆಯನ್ನು ನಿರ್ವಹಿಸುವ, ತೆರಿಗೆ ಮತ್ತು ದಂಡಗಳನ್ನು ವಿದಿಸುವ, ಕಾನೂನು ಮಾಡುವ ಮತ್ತು ನಾಗರೀಕರ ಆರ್ಥಿಕ ಒಳಿತನ್ನು ಪ್ರೋತ್ಸಾಹಿಸುವ ಒಂದು ರಾಜ್ಯ (ಪ್ರಾದಿಕಾರ).
* **ಮಹಾ ಆರ್ಥಿಕ ಮುಗ್ಗಟ್ಟು** ಅಭಿವೃದ್ಧಿ ದೇಶಗಳಲ್ಲಿನ ಉತ್ಪನ್ನದಲ್ಲಿನ ಇಳಿಕೆ ಮತ್ತು ಬೃಹತ್ ಗಾತ್ರದ ನಿರುದ್ಯೋಗದ ಹೆಚ್ಚಾಳವನ್ನು ನೋಡಿದಂತಹ 1930ರ ಒಂದು ಕಾಲಾವಧಿ (1929 ನ್ಯೂಯರ್ಕ್‌ನಲ್ಲಿ ಸ್ಟಾಕ್ ಮಾರುಕಟ್ಟೆಯ ಕುಸಿತದಿಂದ ಪ್ರಾರಂಭವಾಯಿತು).
* **ಒಟ್ಟು ದೇಶೀಯ ಉತ್ಪನ್ನ (GDP)** ಒಂದು ದೇಶದ ಭೂಪ್ರದೇಶದೊಳಗೆ ಉತ್ಪಾದಿಸಲ್ಪಟ್ಟ ಸರಕುಗಳು ಮತ್ತು ಸೇವೆಗಳ ಸಮಗ್ರ ಮೌಲ್ಯ ಇದು ಬಂಡವಾಳ ದಾಸ್ತಾನಿನ ಸವಕಳಿಯನ್ನು ತುಂಬಿದ ಹೂಡಿಕೆಯನ್ನು ಒಳಗೊಂಡಿರುತ್ತದೆ.
* **ಒಟ್ಟು ಕೋಶೀಯ ಕೊರತೆ ಕಂದಾಯ** ಸ್ವೀಕೃತಿ ಮತ್ತು ಸಾಲ ಸೃಷ್ಟಿಸದ ಕಂದಾಯ ಸ್ವೀಕೃತಿ ಮತ್ತು ಬಂಡವಾಳ ಸ್ವೀಕೃತಿಗಳಿಗಿಂತ ಅಧಿಕವಾದ ಸರ್ಕಾರದ ಒಟ್ಟು ವೆಚ್ಚ.
* **ಒಟ್ಟು ಹೂಡಿಕೆ** ಇದು ಬಂಡವಾಳ ದಾಸ್ತಾನು ಅನುಭವಿಸುವ ಸವಕಲು ಹರಕಲಿಗೆ ಬದಲಿಯ ಮೇಲಿನ ಹೂಡಿಕೆಯನ್ನು ಒಳಗೊಂಡಿರುತ್ತದೆ. ಇದು ಬಂಡವಾಳ ದಾಸ್ತಾನಿಗೆ ಸೇರಪಡೆಯಾಗುತ್ತದೆ.
* **ಒಟ್ಟು ರಾಷ್ಟ್ರೀಯ ಉತ್ಪನ್ನ (GNP)** GDP + ವಿದೇಶಗಳಿಂದ ಬಂದ ನಿವ್ವಳ ಘಟಕದ ಆದಾಯ ಇನ್ನೊಂದು ರೀತಿಯಲ್ಲಿ, ದೇಶದ ಎಲ್ಲಾ ನಾಗರೀಕರು ಗಳಿಸುವ ಸಮಗ್ರ ಆದಾಯವನ್ನು GNP ಒಳಗೊಳ್ಳುತ್ತದೆ. ಆದರೆ GDPಯು ಆಂತರಿಕ ಆರ್ಥಿಕತೆಯ ಒಳಗೆ ವಿದೇಶೀಯರು ಗಳಿಸುವ ಆದಾಯವನ್ನು ಒಳಗೊಳ್ಳುತ್ತದೆ ಮತ್ತು ನಾಗರೀಕರು ವಿದೇಶೀ ಆರ್ಥಿಕತೆಯಲ್ಲಿ ಗಳಿಸಿದ ಆದಾಯವನ್ನು ಒಳಗೊಳ್ಳುವುದಿಲ್ಲ.
* **ಒಟ್ಟು ಪ್ರಾಥಮಿಕ ಕೊರತೆ** ಕೋಶೀಯ ಕೊರತೆ – ಬಡ್ಡಿ ಪಾವತಿಗಳು.
* **ಅಧಿಕ ಶಕ್ತಿಯ ಹಣ,** ಆರ್ಥಿಕತೆಯಲ್ಲಿ ಹಣಕಾಸಿನ ಪ್ರಾಧಿಕಾರವು ಒಳಸೇರಿಸುವ ಹಣ, ಮುಖ್ಯವಾಗಿ ಕರೆನ್ಸಿಯನ್ನು ಒಳಗೊಂಡಿರುತ್ತದೆ.
* **ಕುಟುಂಬಗಳು** ಉದ್ಯಮ ಘಟಕಗಳಿಗೆ ಉತ್ಪಾದನಾಂಗಗಳನ್ನು ಪೂರೈಸುವ ಮತ್ತು ಉದ್ಯಮ ಘಟಕಗಳಿಂದ ಸರಕುಗಳು ಮತ್ತು ಸೇವೆಗಳನ್ನು ಖರೀದಿಸುವ ಕುಟುಂಬ ಅಥವಾ ವ್ಯಕ್ತಿಗಳು.
* **ಆಮದುಗಳು** ಜಗತ್ತಿನ ಇತರೆ ದೇಶಗಳಿಂದ ಒಂದು ದೇಶವು ಸರಕು ಮತ್ತು ಸೇವೆಗಳನ್ನು ಖರೀದಿಸುವುದು.
* **ರಾಷ್ಟ್ರೀಯ ವರಮಾನದ ಆದಾಯದ ಲೆಕ್ಕಾಚಾರ ವಿಧಾನ** ಒಂದು ಕಾಲಾವಧಿಯಲ್ಲಿ ಒಂದು ಆರ್ಥಿಕತೆಯಲ್ಲಿ ಮಾಡಲಾದ ಅಂತಿಮ ಘಟಕ ಪಾವತಿಗಳ ಸಮಗ್ರ ಮೌಲ್ಯದಿಂದ ರಾಷ್ಟ್ರೀಯ ವರಮಾನವನ್ನು ಲೆಕ್ಕಾಚಾರಮಾಡುವ ವಿಧಾನ.
* **ಬಡ್ಡಿ** ಬಂಡವಾಳವು ನೀಡುವ ಸೇವೆಗಳಿಗೆ ಮಾಡಲಾದ ಪಾವತಿ.

* **ಮಧ್ಯಂತರ ಸರಕುಗಳು** ಇತರೆ ಸರಕುಗಳ ಉತ್ಪಾದನಾ ಪ್ರಕ್ರಿಯೆಯಲ್ಲಿ ಉಪಯೋಗವಾಗುವ ಸರಕುಗಳು.
* **ತಪಶೀಲುಪಟ್ಟಿಗಳು** ಒಂದು ಉದ್ಯಮಘಟಕವು ಒಂದು ವರ್ಷದಿಂದ ಮುಂದಿನ ವರ್ಷಕ್ಕೆ ಮುಂದುವರೆಸುವ ಮಾರಾಟವಾಗದ ಸರಕುಗಳು, ಬಳಕೆಯಾಗದ ಕಚ್ಚಾಸಾಮಗ್ರಿಗಳು ಅಥವಾ ಅರೆ-ಅಂತಿಮ ಸರಕುಗಳು.
* **ಜಾನ್ ಮೇನಾರ್ಡ್ ಕೇನ್ಸ್** (1883–1946) ಸಮಗ್ರ ಅರ್ಥಶಾಸ್ತ್ರದ ಪ್ರತ್ಯೇಕ ಅಧ್ಯಯನದ ಸಂಸ್ಥಾಪಕ.
* **ಶ್ರಮ** ಉತ್ಪಾದನೆಯಲ್ಲಿ ಬಳಸಲಾಗುವ ಮಾನವನ ಬೌತಿಕ ಪ್ರಯತ್ನ.
* **ಭೂಮಿ** ಉತ್ಪಾದನೆಯಲ್ಲಿ ಬಳಸುವ ನೈಸರ್ಗಿಕ ಸಂಪನ್ಮೂಲ, ಇದು ಸ್ಥಿರವಾಗಿರಬಹುದು ಅಥವಾ ಬಳಕೆಯಾಗಿರಬಹುದು.
* **ಕಾನೂನು ಬದ್ಧ ಹಣ** ಯಾರಿಂದಲೂ ತಿರಸ್ಕರಿಸಲಾಗದ, ಹಣಕಾಸಿನ ಪ್ರಾಧಿಕಾರ ಅಥವಾ ಸರ್ಕಾರ ಪೂರೈಸುವ ಹಣ.
* **ಅಂತಿಮ ಋಣದಾತ** ದ್ರವ್ಯತೆಯ ಬಿಕ್ಕಟ್ಟು ಅಥವಾ ದಿವಾಳಿ ಸನ್ನಿವೇಶದಲ್ಲಿ ವಾಣಿಜ್ಯ ಬ್ಯಾಂಕುಗಳಿಗೆ ಪರಿಹಾರದ ಖಾತರಿ ನೀಡುವ ಒಂದು ದೇಶದಲ್ಲಿನ ಹಣಕಾಸಿನ ಪ್ರಾಧಿಕಾರದ ಕಾರ್ಯ.
* **ದ್ರವ್ಯತೆಯ ಬಲೆ** ಇದು ಆರ್ಥಿಕತೆಯಲ್ಲಿ ಅತಿ ಕಡಿಮೆ ಬಡ್ಡಿದರವಿರುವ ಒಂದು ಸನ್ನಿವೇಶವಾಗಿದೆ. ಇಲ್ಲಿ ಪ್ರತಿಯೊಬ್ಬ ಆರ್ಥಿಕ ಏಜೆಂಟ್‌ಗಳು ಭವಿಷ್ಯದಲ್ಲಿ ಬಡ್ಡಿದರ ಹೆಚ್ಚಳವಾಗಬಹುದೆಂಬ ಮತ್ತು ಆ ಪರಿಣಾಮವಾಗಿ ಬಾಂಡುಗಳ ಬೆಲೆ ಇಳಿಯಬಹುದೆಂಬ, ಬಂಡವಾಳ ನಷ್ಟ ಉಂಟು ಮಾಡಬಹುದೆಂಬ ನಿರೀಕ್ಷೆಯಲ್ಲಿರುತ್ತಾರೆ. ಪ್ರತಿಯೊಬ್ಬರೂ ತಮ್ಮ ಸಂಪತ್ತನ್ನು ಹಣದ ರೂಪದಲ್ಲಿ ಇಟ್ಟು ಕೊಂಡಿರುತ್ತಾರೆ ಮತ್ತು ಹಣದ ಸಟ್ಟಾ ಬೇಡಿಕೆಯು ಅನಂತವಾಗಿರುತ್ತದೆ.
* **ಸಮಗ್ರ ಆರ್ಥಿಕ ಮಾದರಿ** ವಿಶ್ಲೇಷಣಾತ್ಮಕ ಪ್ರತಿಪಾದನೆ ಅಥವಾ ಗಣಿತಾತ್ಮಕ ಅಥವಾ ನಕ್ಷಾ ನಿರೂಪಣೆ ಮೂಲಕ ಒಂದು ಸಮಗ್ರ ಆರ್ಥಿಕತೆಯ ಸರಳೀಕೃತ ಅವತರಣಿಕೆಯ ಕಾರ್ಯವಿಧಾನವನ್ನು ನಿರೂಪಿಸುವುದು.
* **ನಿರ್ವಹಣಾ ಹೊಂದಾಣಿಕೆ** ಕೇಂದ್ರ ಬ್ಯಾಂಕು, ಮಾರುಕಟ್ಟೆ ಶಕ್ತಿಗಳಿಂದ ವಿನಿಮಯದರವು ನಿರ್ಧಾರವಾಗಲು ಅನುಮತಿಸುವ, ಆದರೆ ಕೆಲವೊಮ್ಮೆ ವಿನಿಮಯದರವನ್ನು ಪ್ರಭಾವಿಸಲು ಮಧ್ಯಪ್ರವೇಶ ಮಾಡುವ ವ್ಯವಸ್ಥೆಯಾಗಿದೆ.
* **ಸೀಮಾಂತ ಅನುಭೋಗ ಪ್ರವೃತ್ತಿ** ಹೆಚ್ಚುವರಿ ಆದಾಯಕ್ಕೆ ಹೆಚ್ಚುವರಿ ಅನುಭೋಗದ ಅನುಪಾತ.
* **ವಿನಿಮಯ ಮಾಧ್ಯಮ** ಸರಕುಗಳ ವಿನಿಮಯಕ್ಕೆ ಅವಕಾಶ ಮಾಡಿಕೊಡುವ ಹಣದ ಪ್ರಾಥಮಿಕ ಕಾರ್ಯ.
* **ಹಣದ ಗುಣಕ** ಒಂದು ಆರ್ಥಿಕತೆಯಲ್ಲಿ ಅಧಿಕ ಶಕ್ತಿಯ ಹಣದ ದಾಸ್ತಾನಿಗೆ ಒಟ್ಟು ಹಣದ ಪೂರೈಕೆಯ ಅನುಪಾತ.
* **ಸಂಕುಚಿತ ಹಣ** ಕರೆನ್ಸಿ ನೋಟುಗಳು ನಾಣ್ಯಗಳು ಮತ್ತು ವಾಣಿಜ್ಯ ಬ್ಯಾಂಕುಗಳಲ್ಲಿ ಸಾರ್ವಜನಿಕರು ಹೊಂದಿರುವ ಬೇಡಿಕೆ ಠೇವಣಿಗಳು.
* **ರಾಷ್ಟ್ರೀಯ ವೆಚ್ಚ ಮಾಡಬಹುದಾದ ಆದಾಯ** ಮಾರುಕಟ್ಟೆ ಬೆಲೆಯಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನ + ಜಗತ್ತಿನ ಇತರೆ ದೇಶಗಳಿಂದ ಬಂದ ಇತರೆ ಚಾಲ್ತಿ ವರ್ಗಾವಣೆಗಳು.
* **ನಿವ್ವಳ ದೇಶೀಯ ಉತ್ಪನ್ನ (NDP)** ಬಂಡವಾಳ ದಾಸ್ತಾನಿನ ಸವಕಳಿಯನ್ನು ಒಳಗೊಳ್ಳದ ದೇಶದೊಳಗೆ ಉತ್ಪಾದಿಸಲ್ಪಟ್ಟ ಸರಕು ಸೇವೆಗಳ ಸಮಗ್ರ ಮೌಲ್ಯ.
* **ಕುಟುಂಬಗಳು ಮಾಡಿದ ನಿವ್ವಳ ಬಡ್ಡಿ ಪಾವತಿಗಳು** ಉದ್ಯಮ ಘಟಕಗಳಿಗೆ ಕುಟುಂಬಗಳು ಮಾಡಿದ ಬಡ್ಡಿ ಪಾವತಿಗಳು – ಕುಟುಂಬಗಳು ಸ್ವೀಕರಿಸಿದ ಬಡ್ಡಿ ಪಾವತಿಗಳು.



* **ನಿವ್ವಳ ಹೂಡಿಕೆ** ಬಂಡವಾಳ ದಾಸ್ತಾನಿಗೆ ಸೇರ್ಪಡೆ ಒಟ್ಟು ಹೂಡಿಕೆಯಂತಲ್ಲದೆ, ಖಾಲಿಯಾದ ಬಂಡವಾಳ ದಾಸ್ತಾನಿನ ಬದಲಿಕೆಗಳನ್ನು ಇದು ಒಳಗೊಳ್ಳುವುದಿಲ್ಲ.
* **ನಿವ್ವಳ ರಾಷ್ಟ್ರೀಯ ಉತ್ಪನ್ನ (NNP)** (ಮಾರುಕಟ್ಟೆ ಬೆಲೆಯಲ್ಲಿ) GNP– ಸವಕಳಿ.
* **NNP (ಉತ್ಪಾದನಾಂಗಗಳ ವೆಚ್ಚದಲ್ಲಿ) ಅಥವಾ ರಾಷ್ಟ್ರಿಯ ವರಮಾನ (NI)** ಮಾರುಕಟ್ಟೆ ಬೆಲೆಯಲ್ಲಿ NNP – (ಪರೋಕ್ಷ ತೆರಿಗೆಗಳು – ಸಹಾಯಧನ).
* **ನಾಮಮಾತ್ರ ವಿನಿಮಯ ದರ** ಒಬ್ಬ ವ್ಯಕ್ತಿಯು ವಿದೇಶಿ ಕರೆನ್ಸಿಯ ಒಂದು ಘಟಕಕ್ಕೆ ನೀಡಲೇಬೇಕಾದ ದೇಶೀಯ ಕರೆನ್ಸಿಯ ಘಟಕಗಳ ಸಂಖ್ಯೆ; ದೇಶೀಯ ಕರೆನ್ಸಿಯ ರೂಪದಲ್ಲಿ ವಿದೇಶಿ ಕರೆನ್ಸಿಯ ಬೆಲೆ.
* **ನಾಮಮಾತ್ರ (GDP)** ಪ್ರಸ್ತುತ ಮಾರುಕಟ್ಟೆ ಬೆಲೆಗಳಲ್ಲಿ ಮೌಲ್ಯೀಕರಿಸಿದ GDP.
* **ತೆರಿಗೆಯೇತರ ಪಾವತಿಗಳು** ಸರ್ಕಾರಕ್ಕೆ ಕುಟುಂಬಗಳು ಅಥವಾ ಉದ್ಯಮ ಘಟಕಗಳು ಮಾಡುವ ದಂಡಗಳಂತಹ ತೆರಿಗೆಯೇತರ ಭಾದ್ಯತೆಗಳು
* **ಮುಕ್ತ ಮಾರುಕಟ್ಟೆ ಕಾರ್ಯಾಚರಣೆ** ಇಂದಿನ ಸರ್ಕಾರದ ಸಾಲಗಳು ಭವಿಷ್ಯದಲ್ಲಿ ಆ ಸಾಲವನ್ನು ತೀರಿಸಲು ಅದು ವಿಧಿಸುವ ತೆರಿಗೆಯಾಗುತ್ತದೆ ಎಂದು ನಿರೀಕ್ಷಿಸುತ್ತಿರುವ ಅನುಭೋಗಿಗಳು ತಮ್ಮ ಅನುಭೋಗವನ್ನು ಯಾವ ರೀತಿ ಹೊಂದಿಸಿಕೊಳ್ಳುತ್ತಾರೆಂದರೆ ಇಂದಿನ ತೆರಿಗೆಯ ಹೆಚ್ಚಳವು ಆರ್ಗಿಕತೆಯ ಮೇಲೆ ಬೀರುವ ಪರಿಣಾಮದಂತೆಯೇ ಹೊಂದಿಸಕೊಳ್ಳುತ್ತಾರೆಂದು ಈ ಸಿದ್ಧಾಂತವು ತಿಳಿಸುತ್ತದೆ.
* **ಮಿತವ್ಯಯದ ವಿರೋಧಾಭಾಸ** ಜನರು ಹೆಚ್ಚು ಮಿತವ್ಯಯಿಗಳಾದಂತೆ, ಸಮಗ್ರವಾಗಿ ಕಡಿಮೆ ಅಥವಾ ಹಿಂದಿನಷ್ಟೇ ಉಳಿತಾಯ ಮಾಡುತ್ತಾರೆ.
* **ನಿಯತಾಂಕ ಪಲ್ಲಟ** ಮಾನದಂಡದ ಮೌಲ್ಯದಲ್ಲಿನ ಬದಲಾವಣೆಯಿಂದಾಗಿ ರೇಖಾನಕ್ಷೆಯಲ್ಲಿನ ಪಲ್ಲಟ.
* **ವೈಯಕ್ತಿಕ ವೆಚ್ಚ ಮಾಡಬಹುದಾದ ಆದಾಯ (PDI)** ವೈಯಕ್ತಿಕ ವರಮಾನ PI – ವೈಯಕ್ತಿಕ ತೆರಿಗೆ ಪಾವತಿಗಳು – ತೆರಿಗೆಯೇತರ ಪಾವತಿಗಳು.
* **ವೈಯಕ್ತಿಕ ವರಮಾನ (PI)** ರಾಷ್ಟ್ರೀಯ ವರಮಾನ (NI) – ಹಂಚಿಕೆಯಾಗದ ಲಾಭಗಳು – ಕುಟುಂಬಗಳು ಮಾಡಿದ ನಿವ್ವಳ ಬಡ್ಡಿ ಪಾವತಿಗಳು – ಕಾರ್ಪೋರೇಟ್ ತೆರಿಗೆ + ಸರ್ಕಾರ ಮತ್ತು ಉದ್ಯಮ ಘಟಕಗಳಿಂದ ಕುಟುಂಬಗಳಿಗೆ ಮೊದಲಾದ ವರ್ಗಾವಣೆ ಪಾವತಿಗಳು.
* **ವೈಯಕ್ತಿಕ ತೆರಿಗೆ ಪಾವತಿಗಳು** ವ್ಯಕ್ತಿಗಳ ಮೇಲೆ ವಿಧಿಸುವ ತೆರಿಗೆಗಳು – ಆದಾಯ ತೆರಿಗೆ.
* **ತಪಶೀಲುಪಟ್ಟಿಗಳಲ್ಲಿನ ಯೋಜಿತ ಬದಲಾವಣೆ** ಯೋಜಿತ ಮಾರ್ಗದಲ್ಲಿ ಮಾಡಿದ ತಪಶೀಲುಗಳ ದಾಸ್ತಾನಿನಲ್ಲಿನ ಬದಲಾವಣೆ.
* **ಪ್ರಸಕ್ತ ಮೌಲ್ಯ** (ಒಂದು ಬಾಂಡಿನ) ಇಂದು, ಬಡ್ಡಿ ಗಳಿಕೆಯ ಒಂದು ಯೋಜನೆಯಲ್ಲಿ ಒಂದು ಮೊತ್ತದ ಹಣವನ್ನು ಇಟ್ಟರೆ ಆ ಹಣವು ಸೃಷ್ಟಿಸುವ ಹಣದ ಮೊತ್ತವು, ಒಂದು ಬಾಂಡು ತನ್ನ ಜೀವಿತಾವಧಿಯಲ್ಲಿ ಭರವಸೆ ನೀಡುವ ಮೊತ್ತಕ್ಕೆ ಸಮಾನಾಗಿರುವುದಕ್ಕೆ ಪ್ರಸಕ್ತ ಮೌಲ್ಯ ಎಂದು ಕರೆಯಲಾಗುತ್ತದೆ.
* **ಖಾಸಗಿ ಆದಾಯ** ನಿವ್ವಳ ದೇಶೀಯ ಉತ್ಪನ್ನದಿಂದ ಖಾಸಗಿ ವಲಯಕ್ಕೆ ಮಾಡಲಾಗುವ ಉತ್ಪಾದನಾಂಗ ಆದಾಯ + ರಾಷ್ಟ್ರೀಯ ಸಾಲದ ಬಡ್ಡಿ + ವಿದೇಶಗಳ ನಿವ್ವಳ ಉತ್ಪಾದನಾಂಗ ಆದಾಯ + ಸರ್ಕಾರದಿಂದ ಆದ ಚಾಲ್ತಿ ವರ್ಗಾವಣೆಗಳು + ಜಗತ್ತಿನ ಇತರೆ ದೇಶಗಳಿಂದ ಆದ ಇತರೆ ನಿವ್ವಳ ವರ್ಗಾವಣೆಗಳು.
* **ರಾಷ್ಟ್ರೀಯ ವರಮಾನ ಲೆಕ್ಕಾಚಾರದ ಉತ್ಪನ್ನದ ವಿಧಾನ** ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಒಂದು ಆರ್ಥಿಕತೆಯಲ್ಲಿ ಉತ್ಪಾದಿಸಲಾದ ಉತ್ಪಾದನೆಯ ಸಮಗ್ರ ಮೌಲ್ಯದಿಂದ ಅಳೆಯಲಾದ ರಾಷ್ಟ್ರೀಯ ವರಮಾನದ ಲೆಕ್ಕಾಚಾರ.
* **ಲಾಭ** ಉದ್ಯಮಗಳು ಒದಗಿಸುವ ಸೇವೆಗಳಿಗೆ ಮಾಡುವ ಪಾವತಿಗಳು

* **ಸಾರ್ವಜನಿಕ ಸರಕು** ಸಾಮೂಹಿಕವಾಗಿ ಬಳಸಲಾಗುವ ಸರಕು ಅಥವಾ ಸೇವೆಗಳು; ಇವುಗಳ ಬಳಕೆಯ ಆನಂದದಿಂದ ಯಾರನ್ನೂ ಹೊರಗಿಡುವ ಸಾಧ್ಯತೆಯಿರುವುದಿಲ್ಲ ಮತ್ತು ಒಬ್ಬ ವ್ಯಕ್ತಿಯ ಅನುಭೋಗವು ಇತರರಿಗೆ ಲಭ್ಯವಾಗುವುದನ್ನು ಕಡಿಮೆ ಮಾಡುವುದಿಲ್ಲ.
* **ಕೊಳ್ಳುವ ಶಕ್ತಿಯ ಸಮಾನತೆ** ವಿವಿಧ ದೇಶಗಳಲ್ಲಿ ಒಂದೇ ರೀತಿಯ ಸರಕುಗಳ ಬೆಲೆಯು ಸಮನಾಗಿರುವುದನ್ನು ಪ್ರತಿಪಾದಿಸುವ ಒಂದು ಅಂತರರಾಷ್ಟ್ರೀಯ ವಿನಿಮಯ ಸಿದ್ಧಾಂತ.
* **ನೈಜ ವಿನಿಮಯ ದರ** ದೇಶೀಯ ಸರಕುಗಳ ರೂಪದಲ್ಲಿ ವಿದೇಶಿ ಸರಕುಗಳ ಸಾಪೇಕ್ಷ ಬೆಲೆ.
* **ನೈಜ GDP** ಸ್ಥಿರ ಬೆಲೆಗಳ ಒಂದು ಗಣದಲ್ಲಿ ಮೌಲ್ಯಮಾಪನ ಮಾಡಲಾದ GDP.
* **ಗೇಣಿ** ಭೂಮಿ (ನೈಸರ್ಗಿಕ ಸಂಪನ್ಮೂಲ)ಯಿಂದ ಪಡೆಯಲಾದ ಸೇವೆಗೆ ಮಾಡುವ ಪಾವತಿ.
* **ಮೀಸಲು ಠೇವಣಿ ಅನುಪಾತ** ವಾಣಿಜ್ಯ ಬ್ಯಾಂಕುಗಳು ಮೀಸಲಾಗಿಡುವ ಅವುಗಳ ಒಟ್ಟು ಠೇವಣಿಗಳಲ್ಲಿನ ಒಂದು ಭಾಗ.
* **ಪುನರ್ ಮೌಲ್ಯಮಾಪನ** ದೇಶೀಯ ಕರೆನ್ಸಿಗಳ ರೂಪದಲ್ಲಿ. ವಿದೇಶಿ ಕರೆನ್ಸಿಗಳನ್ನು ಅಗ್ಗವಾಗಿಸುವ ಸ್ಥಿರ ವಿನಿಮಯ ದರ ಪದ್ಧತಿಯ ವಿನಿಮಯ ದರದಲ್ಲಿ ಒಂದು ಕಡಿತ.
* **ಕಂದಾಯ ಕೊರತೆ** ಕಂದಾಯ ಸ್ವೀಕೃತಿಗಿಂತ ಅಧಿಕವಾದ ಕಂದಾಯ ವೆಚ್ಚ.
* **ರಿಕಾರ್ಡೋನ ಸಮಾನತೆ** ಇಂದಿನ ಸರ್ಕಾರದ ಸಾಲಗಳು ಭವಿಷ್ಯದಲ್ಲಿ ಆ ಸಾಲವನ್ನು ತೀರಿಸಲು ಸರ್ಕಾರವು ವಿಧಿಸುವ ತೆರಿಗೆಯಾಗುತ್ತದೆ ಎಂದು ನಿರೀಕ್ಷಿಸುತ್ತಿರುವ ಅನುಭೋಗಿಗಳು ತಮ್ಮ ಅನುಭೋಗವನ್ನು ಯಾವ ರೀತಿ ಹೊಂದಿಸಿಕೊಳ್ಳುತ್ತಾರೆಂದರೆ ಇಂದಿನ ತೆರಿಗೆಯ ಹೆಚ್ಚಳವು ಆರ್ಥಿಕತೆಯ ಮೇಲೆ ಬೀರುವ ಪರಿಣಾಮದಂತೆಯೇ ಹೊಂದಿಸಿಕೊಳ್ಳುತ್ತಾರೆ ಎಂದು ಈ ಸಿದ್ಧಾಂತವು ತಿಳಿಸುತ್ತದೆ.
* **ಸಟ್ಟಾ ವ್ಯಾಪಾರದ ಬೇಡಿಕೆ** ಸಂಪತ್ತಿನ ಸಂಗ್ರಹಣವಾಗಿ ಹಣಕ್ಕೆ ಇರುವ ಬೇಡಿಕೆ.
* **ಶಾಸನಬದ್ಧ ದ್ರವ್ಯಾತಾನುಪಾತ (SLR),** ವಾಣಿಜ್ಯ ಬ್ಯಾಂಕುಗಳು ತಮ್ಮ ಒಟ್ಟು ಬೇಡಿಕೆ ಮತ್ತು ಸ್ಥಿರ ಠೇವಣಿಗಳ ಒಂದು ಭಾಗವನ್ನು RBI ನಿಗದಿಪಡಿಸುವ ದ್ರವ್ಯತಾ ಆಸ್ತಿಗಳ ಮೇಲೆ ಹೂಡಿಕೆ ಮಾಡ ಬೇಕಾಗುತ್ತದೆ.
* **ಸ್ಥಿರೀಕರಣ** ವಿದೇಶಿ ವಿನಿಮಯದ ಒಳಹರಿವಿನ ಹೆಚ್ಚಳದಂತಹ ಬಹಿರ್ಜಾತ ಅಥವಾ ಬಾಹ್ಯ ತಲ್ಲಣಗಳ ವಿರುದ್ಧ ಹಣದ ಪೂರೈಕೆಯನ್ನು ಸ್ಥಿರವಾಗಿ ಇಟ್ಟುಕೊಳ್ಳಲು ದೇಶದ ಹಣಕಾಸು ಪ್ರಾಧಿಕಾರವು ಹಣದ ಮಾರುಕಟ್ಟೆಯಲ್ಲಿ ಮಧ್ಯ ಪ್ರವೇಶಿಸುವುದು.
* **ದಾಸ್ತಾನುಗಳು** ಒಂದು ನಿರ್ದಿಷ್ಟ ಸಮಯದಲ್ಲಿ ವ್ಯಾಖ್ಯಾನಿಸಲಾದ ಚಲಕಗಳು.
* **ಮೌಲ್ಯ ಸಂಗ್ರಹಣೆ** ಭವಿಷ್ಯತ್ತಿನ ಬಳಕೆಗಾಗಿ ಹಣದ ರೂಪದಲ್ಲಿ ಸಂಪತ್ತನ್ನು ದಾಸ್ತಾನು ಮಾಡಬಹುದಾದ ಸಂಪತ್ತು. ಹಣದ ಈ ಕಾರ್ಯವನ್ನು ಮೌಲ್ಯ ಸಂಗ್ರಹಣೆ ಎಂದು ಉಲ್ಲೇಖಿಸಲಾಗುತ್ತದೆ.
* **ವ್ಯವಹಾರದ ಬೇಡಿಕೆ** ವ್ಯವಹಾರಗಳನ್ನು ನಡೆಸಲು ಮಾಡುವ ಹಣದ ಬೇಡಿಕೆ.
* **ಸರ್ಕಾರ ಮತ್ತು ಉದ್ಯಮ ಘಟಕಗಳಿಂದ ಕುಟುಂಬಗಳಿಗೆ ಮಾಡಲಾದ ವರ್ಗಾವಣಾ ಪಾವತಿಗಳು** ಪಾವತಿಸುವವನಿಂದ ಸ್ವೀಕರಿಸಲಾದ ಯಾವುದೇ ಸೇವೆಗಳ ಪ್ರತಿರೂಪವಿಲ್ಲದೇ ಮಾಡಲಾದ ಪಾವತಿಗಳು. ಉದಾಹರಣೆ: ಉಡುಗೊರೆಗಳು, ವಿದ್ಯಾರ್ಥಿವೇತನಗಳು, ಪಿಂಚಣಿಗಳು.
* **ಹಂಚಿಕೆಯಾಗದ ಲಾಭಗಳು** ಉತ್ಪಾದನಾಂಗಗಳ ಮೇಲೆ ಹಂಚಿಕೆಯಾಗದೇ ಇರುವ ಖಾಸಗಿ ಮತ್ತು ಸರ್ಕಾರಿ ಒಡೆತನದ ಉದ್ಯಮ ಘಟಕಗಳಿಂದ ಗಳಿಸಲಾದ ಲಾಭಗಳ ಭಾಗ.
* **ನಿರುದ್ಯೋಗ ದರ** ಒಂದು ಕೆಲಸವನ್ನು ಹುಡುಕಲು ವಿಫಲವಾಗಿರುವ ಜನರು (ಅವರು ಕೆಲಸಕ್ಕಾಗಿ ಎದುರು ನೋಡುತ್ತಿರುವುದು), ಕೆಲಸವನ್ನು ಹುಡುಕುತ್ತಿರುವ ಒಟ್ಟು ಸಂಖ್ಯೆಯ ಜನರ ಅನುಪಾತ.

* **ಲೆಕ್ಕದ ಘಟಕ** ವಿವಿಧ ಸರಕುಗಳ ಮೌಲ್ಯವನ್ನು ಮಾಪನ ಮಾಡುವ ಮತ್ತು ಹೋಲಿಸುವ ಒಂದು ಮಾನದಂಡವಾಗಿ ಹಣದ ಪಾತ್ರ.
* **ತಪಶೀಲುಪಟ್ಟಿಯಲ್ಲಿರುವ ಯೋಜನಾರಹಿತ ಬದಲಾವಣೆ** ಒಂದು ಅನಿರೀಕ್ಷಿತ ಮಾರ್ಗದಲ್ಲಿ ಸಂಭವಿಸಿದ ತಪಶೀಲುಪಟ್ಟಿಯಲ್ಲಿನ ದಾಸ್ತಾನಿನಲ್ಲಿ ಬದಲಾವಣೆ.
* **ಮೌಲ್ಯವರ್ಧಿನೆ** ಉತ್ಪಾದನಾ ಪ್ರಕ್ರಿಯೆಯಲ್ಲಿ ಉದ್ಯಮ ಘಟಕಗಳು ಮಾಡಿದ ನಿವ್ವಳ ಕೊಡುಗೆಗಳು. ಉತ್ಪಾದನೆಯ ಮೌಲ್ಯ ಬಳಸಲಾದ ಮಧ್ಯಂತರ ಸರಳಗಳ ಮೌಲ್ಯ.
* **ಕೂಲಿ** ಶ್ರಮವು ನೀಡಿದ ಸೇವೆಗೆ ಮಾಡುವ ಪಾವತಿ.
* **ಸಗಟು ಬೆಲೆ ಸೂಚ್ಯಂಕ** (WPI) ತೂಕಿತ ಸರಾಸರಿ ಬೆಲೆಮಟ್ಟದಲ್ಲಿನ ಶೇಕಡವಾರು ಬದಲಾವಣೆ, ಭಾರೀ ಪ್ರಮಾಣದಲ್ಲಿ ವ್ಯಾಪಾರವಾಗುವ ಒಂದು ಬುಟ್ಟಿಯಲ್ಲಿನ ಸರಕುಗಳ ಬೆಲೆಯನ್ನು ನಾವು ತೆಗೆದುಕೊಳ್ಳುತ್ತೇವೆ.